# 2016–17 ನೇ ವರ್ಷದ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ಆಕ್ಷೇಪಣೆಗಳು ಹಾಗೂ ವಸೂಲಾತಿಗಳ ವಿವರ

| ಕ್ರ.ಸಂ | ಕಂಡಿಕೆ ಸಂಖ್ಯೆ | ವಿವರ | | |
|---|---|---|---|---|
| **ಭಾಗ – 1** | | | | |
| 1 | 1 | ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿಯ ಬಗ್ಗೆ | | |
| 2 | 2 | ವಿಶ್ವವಿದ್ಯಾಲಯದ ವಿವಿಧ ಅಂಗ ಸಂಸ್ಥೆಗಳ ಆಕ್ಷೇಪಣೆ ಮತ್ತು ವಸೂಲಾತಿ ವಿವರದ ಬಗ್ಗೆ | | |
| **ಭಾಗ – 2** | | | **ಆಕ್ಷೇಪಣೆಗೆ ಸೂಚಿಸಿದ ಮೊತ್ತ (ರೂ.ಗಳಲ್ಲಿ)** | **ವಸೂಲಾತಿಗೆ ಸೂಚಿಸಿದ ಮೊತ್ತ (ರೂ.ಗಳಲ್ಲಿ)** |
| **ವಿಶ್ವವಿದ್ಯಾನಿಲಯದ ಆಡಳಿತ ನಿರ್ವಹಣೆ** | | | | |
| 3 | 3 | ವಾರ್ಷಿಕ ಲೆಕ್ಕಪರಿಶೋಧನಾ ವರದಿ ಜಾರಿಗೊಳಿಸಿರುವುದು | – | – |
| 4 | 4 | ವಾರ್ಷಿಕ ಲೆಕ್ಕಪತ್ರವು ಅನುಮೋದನೆಯಾಗಿರುವ ಬಗ್ಗೆ | – | – |
| 5 | 5 | ವಿಶ್ವವಿದ್ಯಾನಿಲಯದ ನಿಧಿ | – | – |
| 6 | 6 | ಮೈಸೂರು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು ಹೊಂದಿರುವ ಆರ್ಥಿಕ ಪ್ರತ್ಯಾಧಿಕಾರ (Delegation of Financial/Technical powers) ಆದೇಶ ಒದಗಿಸಿಲ್ಲದಿರುವುದು (**ಹಣಕಾಸು ವಿಭಾಗ**) | – | – |
| **ಆಯವ್ಯಯ ಅಂದಾಜು** | | | | |
| 7 | 7 | 2016–17ನೇ ವರ್ಷದ ಮೂಲ ಆಯವ್ಯಯ ಅಂದಾಜಿನ ಋಣಾತ್ಮಕ ಅಂತಿಮ ಶಿಲ್ಕು ಕುರಿತು | – | – |
| 8 | 8 | ಆಯವ್ಯಯದಲ್ಲಿ ನಿಗದಿಪಡಿಸಿರುವ ಅಂದಾಜು ಮೊತ್ತಕ್ಕಿಂತ ಹೆಚ್ಚುವರಿ ವೆಚ್ಚ ಮಾಡಿರುವುದು | 81,12,110 | – |
| 9 | 9 | ಆಯವ್ಯಯದಲ್ಲಿ ಸೇರಿಸದೆ ವಾರ್ಷಿಕ ಲೆಕ್ಕಪತ್ರದಲ್ಲಿ ಜಮಾ ಖರ್ಚು ತೆಗೆದುಕೊಂಡಿರುವುದು | – | – |
| 10 | 10 | ಆಯವ್ಯಯ ಅಂದಾಜಿಗಿಂತ ಹೆಚ್ಚುವರಿ ವೆಚ್ಚ ಭರಿಸಿರುವುದು. (**ಇಂಜಿನಿಯರಿಂಗ್ ವಿಭಾಗ**) | – | – |
| 11 | 11 | 2016–17ನೇ ಸಾಲಿಗೆ ಮಂಜೂರಾದ ವಾರ್ಷಿಕ ಕ್ರಿಯಾ ಯೋಜನೆ (Action Plan) ಮುಂದುವರಿದ ಹೊಸ ಕಾಮಗಾರಿಗಳ ವಿವರ ಆಯವ್ಯಯ ಅಂದಾಜು ಅನುಮೋದನೆ ಪ್ರಕ್ರಿಯೆಗಳನ್ನು ಒದಗಿಸದಿರುವುದು (**ಇಂಜಿನಿಯರಿಂಗ್ ವಿಭಾಗ**) | – | – |

| | | | | |
|---|---|---|---|---|
| **ಯುವರಾಜ ಕಾಲೇಜು ಆಯವ್ಯಯ (Budget)** | | | | |
| 12 | 12 | ಆಯ ವ್ಯಯ ಅಂದಾಜುಗಳನ್ನು ಯುವರಾಜ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಎರಡೂ ಕಡೆಯಲ್ಲಿ ತಯಾರಿಸುತ್ತಿರುವ ಕುರಿತು **(ಯುವರಾಜ ಕಾಲೇಜು)** | – | – |
| **ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರ** | | | | |
| 13 | 13 | 2016–17ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ಆರ್ಥಿಕ ಪರಿಸ್ಥಿತಿಯ ದೋಷಗಳ ಬಗ್ಗೆ | – | – |
| 14 | 14 | ವಿವಿಧ ಬ್ಯಾಂಕ್ ಖಾತೆಗಳಿಂದ ಆಂತರಿಕ ನಿಧಿ ವರ್ಗಾವಣೆ ಮಾಡಿರುವುದರ ಬಗ್ಗೆ | – | – |
| 15 | 15 | ವಿವಿಧ ಬ್ಯಾಂಕ್ ಖಾತೆ ತೆರೆದಿರುವ ಹಣಕಾಸು ವಿಭಾಗದಲ್ಲಿ ಭಾಗಶಃ ಹಾಜರುಪಡಿಸಿರುವುದು ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿ ಬ್ಯಾಂಕ್ ಖಾತೆಗಳ ಜಮಾ ಖರ್ಚುಗಳನ್ನು ತೆಗೆದುಕೊಳ್ಳದೆ ಇರುವುದು | – | – |
| 16 | 16 | 2016–17ನೇ ಸಾಲಿನ ಜಿ.ಆರ್.ಎ ನಗದು ಪುಸ್ತಕದ ಒಟ್ಟು ಸ್ವೀಕೃತಿ ಹಾಗೂ ವಾರ್ಷಿಕ ಲೆಕ್ಕಪತ್ರದ ಒಟ್ಟು ಸ್ವೀಕೃತಿಗೂ ವ್ಯತ್ಯಾಸ ಕಂಡುಬಂದಿರುವ ಬಗ್ಗೆ | – | – |
| 17 | 17 | 2016–17ನೇ ವರ್ಷದ ಹಣಕಾಸು ವಿಭಾಗದಲ್ಲಿನ ಮಾಸಿಕ ಜಮಾ ಖರ್ಚುಗಳ ಲೆಕ್ಕಪತ್ರಗಳನ್ನು ನಿರ್ವಹಿಸದೆ ಇರುವುದು ಹಾಗೂ ಬ್ಯಾಂಕ್ ಖಾತೆ ಜಮಾ ಖರ್ಚು ಪ್ರತ್ಯೇಕ ಲೆಕ್ಕಪತ್ರಗಳನ್ನು ನಿರ್ವಹಿಸದೆ ಹಾಗೂ ಹೆಚ್ಚುವರಿ ಬ್ಯಾಂಕ್ ಖಾತೆಗಳನ್ನು ತೆರೆದಿರುವುದರ ವಿವರ ಹಾಜರುಪಡಿಸದೆ ಇರುವುದು | – | – |
| 18 | 18 | ಹಣಕಾಸು ವಿಭಾಗದ ವಿವಿಧ ಬ್ಯಾಂಕ್ ಖಾತೆಗಳ ನಡುವೆ ಆದ ಜಮಾ ಖರ್ಚು (Inter A/C Transfer) ಸರಿಯಾಗಿ ಸಮನ್ವಯಗೊಳಿಸದೆ ಇರುವುದು | – | – |
| 19 | 19 | ವಿವಿಧ ಬ್ಯಾಂಕ್ ಖಾತೆಗಳ ನಗದು ಪುಸ್ತಕದಲ್ಲಿ ಋಣಾತ್ಮಕ ಅಂತಿಮ ಶಿಲ್ಕು ಉಳಿದಿದ್ದು, ಧನಾದೇಶವನ್ನು ಹೆಚ್ಚುವರಿ ನೀಡಿರುವುದು | 2,67,14,017 | – |
| 20 | 20 | 2016–17ನೇ ಸಾಲಿನ ವಿವಿಧ ಬ್ಯಾಂಕ್ ಖಾತೆಗಳ ಮುಕ್ತಾಯವಾಗಿರುವ ಹಾಗೂ ಹೊಸದಾಗಿ ಸೇರ್ಪಡೆಯಾಗಿರುವ, ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗಳ ವಿವರ ಪಟ್ಟಿಯನ್ನು ದೃಢೀಕರಿಸಿ ಹಾಜರುಪಡಿಸದೆ ಇರುವುದು | – | – |
| 21 | 21 | ನಗದಾಗದೆ ಇರುವ ಧನಾದೇಶಗಳು ದಿನಾಂಕ:31.03.2017ಕ್ಕೆ ಬಾಕಿ ಉಳಿದಿರುವುದು | – | – |
| 22 | 22 | ಪ್ರಾಯೋಜಿತ ಕಾರ್ಯಕ್ರಮ/ಯೋಜನೆಗಳಲ್ಲಿ ಭರಿಸಲಾದ ವೆಚ್ಚಗಳಿಗೆ ಮಾಹಿತಿ ನೀಡದಿರುವ ಬಗ್ಗೆ | 6,31,49,042 | – |
| 23 | 23 | ಸ್ವಂತಕ್ಕೆ ಹಣ ಡ್ರಾ ಮಾಡಿ ವೆಚ್ಚ ಭರಿಸಿರುವುದಕ್ಕೆ ನಗದಿನ ಮುಖಾಂತರ ಪಾವತಿಸಿರುವುದು **(ಯುವರಾಜ ಕಾಲೇಜು)** | 92,200 | – |
| 24 | 24 | ವಿಶ್ವವಿದ್ಯಾನಿಲಯದ ನಗದು ಪುಸ್ತಕ ಪ್ರಕಾರ ಆರ್ಥಿಕ ಪರಿಸ್ಥಿತಿಯ ವಿವರ | – | – |
| **ವಿಶ್ವವಿದ್ಯಾನಿಲಯದ ಹೂಡಿಕೆಗಳು** | | | | |
| 25 | 25 | ನಿಶ್ಚಿತ ಠೇವಣಿ ಹೂಡಿಕೆ ವಹಿ ಕರ್ನಾಟಕ ಆರ್ಥಿಕ ಸಂಹಿತೆ ಪ್ರಕಾರ 14 ಲೆಕ್ಕಶೀರ್ಷಿಕೆಗಳ ಠೇವಣಿ ವಹಿ | – | – |

| | | | | |
|---|---|---|---|---|
| | | ನಿರ್ವಹಿಸದೆ ಹಾಗೂ ದಿನಾಂಕ:31.03.2017ರ ಅಂತ್ಯಕ್ಕೆ Bank confirmation letter ಪಡೆದು ಹಾಜರುಪಡಿದೆ ಇರುವುದು | | |
| 26 | 26 | ನಿಶ್ಚಿತ ಠೇವಣಿ ನಿರ್ವಹಣೆಯಲ್ಲಿ ನಷ್ಟವಾಗಿರುವುದು | – | 7,66,013 |
| 27 | 27 | ಬ್ಯಾಂಕ್ ಖಾತೆಯಲ್ಲಿ ಬಂದಿರುವ ಬಡ್ಡಿ ಮರು ಜಮೆ ಮಾಡದೆ ಇರುವುದು | – | 8,06,420 |
| 28 | 28 | ಇಂಜಿನಿಯರಿಂಗ್ ವಿಭಾಗದ ಕಛೇರಿ ನಗದು ಪುಸ್ತಕವನ್ನು ಪ್ರತ್ಯೇಕ ವಿಭಾಗಗಳಾಗಿ ನಿರ್ವಹಿಸಿರುವ ಬ್ಯಾಂಕ್ ಖಾತೆ, ಧನಾದೇಶದೊಂದಿಗೆ ಸಮನ್ವಯಗೊಳಿಸದೆ ಇರುವುದು | – | – |
| **ಭಾಗ–3** | | | | |
| **ಕ್ರ. ಸಂ** | **ಕಂಡಿಕೆ ಸಂಖ್ಯೆ** | **ವಿವರ** | **ಆಕ್ಷೇಪಣೆಗೆ ಸೂಚಿಸಿದ ಮೊತ್ತ (ರೂಗಳಲ್ಲಿ)** | **ವಸೂಲಾತಿಗೆ ಸೂಚಿಸಿದ ಮೊತ್ತ (ರೂಗಳಲ್ಲಿ)** |
| **ಶೈಕ್ಷಣಿಕ ವಿಭಾಗ** | | | | |
| 29 | 29 | 2016–17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಅತಿಥಿ ಗೃಹಗಳಿಂದ ಬಂದ ಆದಾಯ (ಬಾಡಿಗೆ) ಮೊತ್ತವನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಕಡಿಮೆ ತೆಗೆದುಕೊಂಡಿರುವ ಮೊತ್ತ ರೂ.28,240/– **(ಹಣಕಾಸು ವಿಭಾಗ)** | – | – |
| 30 | 30 | ಮೈದಾನಗಳ, ಕಟ್ಟಡಗಳ, ಸಭಾಂಗಣಗಳನ್ನು ಬಾಡಿಗೆಗೆ ನೀಡುವಾಗ ವಾಣಿಜ್ಯ ಸಂಘ ಸಂಸ್ಥೆಗಳಿಗೂ ರಿಯಾಯಿತಿ ನೀಡಿರುವುದು **(ಆಡಳಿತ ವಿಭಾಗ)** | – | – |
| 31 | 31 | 2016–17ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರಾದ ವಿದ್ಯಾರ್ಥಿ ವೇತನ ಪೂರ್ಣವಾಗಿ ಬಟವಾಡೆಯಾಗದಿರುವ ಕುರಿತು **(ಆಡಳಿತಾಧಿಕಾರಿಗಳ ಕಛೇರಿ)** | 5,47,766 | – |
| 32 | 32 | 2016–17ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ವಿದ್ಯಾರ್ಥಿಗಳು ಸಲ್ಲಿಸಿರುವ ಶುಲ್ಕ, ವಿನಾಯಿತಿ, ಬೇಡಿಕೆ ಮೊತ್ತವನ್ನು ಹಾಗೂ ಮಂಜೂರಾಗಬೇಕಿರುವ ಬಾಕಿಯ ವಿವರ **(ಆಡಳಿತಾಧಿಕಾರಿಗಳ ಕಛೇರಿ)** | 46,32,859 | – |
| 33 | 33 | ಎಸ್.ಸಿ/ಎಸ್.ಟಿ ವಿದ್ಯಾರ್ಥಿ ವೇತನ ಖಾತೆಯಲ್ಲಿ ಜಮೆಯಾಗಿರುವ ಬ್ಯಾಂಕ್ ಬಡ್ಡಿಯನ್ನು ಸಂಬಂಧಪಟ್ಟ ಇಲಾಖೆ ಖಾತೆಗೆ ಹಿಂದಿರುಗಿಸುವ ಬಗ್ಗೆ **(ಆಡಳಿತಾಧಿಕಾರಿಗಳ ಕಛೇರಿ)** | 6,42,813 | – |
| 34 | 34 | 2016–17ನೇ ಸಾಲಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಪೂರ್ಣವಾಗಿ ಬಟವಾಡೆಯಾಗದಿರುವ ಕುರಿತು **(ಆಡಳಿತಾಧಿಕಾರಿಗಳ ಕಛೇರಿ)** | 14,96,069 | – |
| 35 | 35 | 2016–17ನೇ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದ ಡಿ.ಸಿ.ಬಿ ವಹಿ ಪರಿಶೀಲನೆ **(ಆಡಳಿತಾಧಿಕಾರಿಗಳ ಕಛೇರಿ)** | 4,62,516 | – |
| 36 | 36 | ಪ್ರವೇಶಾತಿ ವಿವರಗಳನ್ನು ಪರಿಶೀಲಿಸಿರುವುದು **(ಯುವರಾಜ ಕಾಲೇಜು)** | – | – |
| 37 | 37 | ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ವಿದ್ಯಾರ್ಥಿವೇತನವನ್ನು ಸಂಪೂರ್ಣವಾಗಿ ಬಟವಾಡೆ ವಿತರಿಸದೆ ಇರುವುದು **(ಯುವರಾಜ ಕಾಲೇಜು)** | – | – |

| | | | | |
|---|---|---|---|---|
| 38 | 38 | SC/ST ವಿದ್ಯಾರ್ಥಿ ವೇತನ ಖಾತೆಯಲ್ಲಿ ಜಮೆಯಾಗಿರುವ ಬ್ಯಾಂಕ್ ಬಡ್ಡಿಯನ್ನು ಸಂಬಂಧಪಟ್ಟ ಇಲಾಖೆ ಖಾತೆಗೆ ಹಿಂದಿರುಗಿಸದಿರುವುದು **(ಯುವರಾಜ ಕಾಲೇಜು)** | 3,25,555 | – |
| 39 | 39 | ವಿತರಿಸದೆ ಬಾಕಿ ಉಳಿದಿರುವ OBC ವಿದ್ಯಾರ್ಥಿ ವೇತನವನ್ನು ಸಂಬಂಧಪಟ್ಟ ಇಲಾಖೆ ಖಾತೆಗೆ ಹಿಂದಿರುಗಿಸದಿರುವುದು **(ಯುವರಾಜ ಕಾಲೇಜು)** | 25,094 | – |
| 40 | 40 | ಸಂಯೋಜನಾ ಮುಂದುವರಿಕೆ ಮಂಜೂರಾತಿಗೆ ಸಂಬಂಧಿಸಿದಂತೆ ಪ್ರವೇಶಾತಿ ಸಂಖ್ಯೆಗೆ ಅನುಗುಣವಾಗಿ ಪಡೆದಿರುವ ಸಂಯೋಜನಾ ಶುಲ್ಕಗಳಿಗೆ ಪೂರಕ ಮಂಜೂರಾತಿ ಆದೇಶ ಪ್ರತಿಗಳನ್ನು ಹಾಜರುಪಡಿಸದೇ ಇರುವುದು **(ಕಾಲೇಜು ಅಭಿವೃದ್ಧಿ ಮಂಡಳಿ)** | 38,650 | – |
| 41 | 41 | 2016–17ನೇ ಸಾಲಿನ ಕಾಲೇಜು ಅಭಿವೃದ್ಧಿ ಮಂಡಳಿಯ ವಿವಿಧ ಶುಲ್ಕಗಳು ಹಾಗೂ ಸಂಯೋಜನಾ ಶುಲ್ಕ ವಸೂಲಾತಿಗೆ ಸಂಬಂಧಿಸಿದ ಡಿ.ಸಿ.ಬಿ ವಹಿ ನಿರ್ವಹಿಸದಿರುವುದು **(ಕಾಲೇಜು ಅಭಿವೃದ್ಧಿ ಮಂಡಳಿ)** | – | – |
| 42 | 42 | ಸಂಯೋಜನಾ/ ಮುಂದುವರಿಕೆ ಶುಲ್ಕಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಮೊತ್ತಕ್ಕಿಂತ ಕಡಿಮೆ ಮೊತ್ತ ಸ್ವೀಕೃತಿ ಆಗಿರುವುದು **(ಕಾಲೇಜು ಅಭಿವೃದ್ಧಿ ಮಂಡಳಿ)** | – | 32,755 |
| 43 | 43 | ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ವಿನಾಯಿತಿಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾಗುವ ವಿದ್ಯಾರ್ಥಿವೇತನದೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸದಿರುವುದರ ಕುರಿತು **(ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ)** | 1,94,850 | – |
| 44 | 44 | 2016–17 ನೇ ಸಾಲಿನಲ್ಲಿ ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಗೆ ಮಂಜೂರಾದ ಹುದ್ದೆಗಳು, ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ತಾತ್ಕಾಲಿಕ ಹುದ್ದೆಗಳ ವಿವರಗಳು **(ಮಾನಸ ಗಂಗೋತ್ರಿ ಶಿಕ್ಷಣ ಸಂಸ್ಥೆ)** | – | – |
| 45 | 45 | ಶ್ರೀಮತಿ ಕುಮಾರಿ ಎಸ್. ಸಹಶಿಕ್ಷಕಿ ಶಿಶುವಿಹಾರ ವಿಭಾಗ ಇವರನ್ನು ಖಾಯಂಗೊಳಿಸಿರುವ ಬಗ್ಗೆ **(ಮಾನಸ ಗಂಗೋತ್ರಿ ಶಿಕ್ಷಣ ಸಂಸ್ಥೆ)** | – | – |
| 46 | 46 | ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪ್ರವೇಶ ಶುಲ್ಕದ ವಸೂಲಾತಿ ವಿವರಗಳ ಪರಿಶೀಲನೆ. **(ಬಹದ್ದೂರ್ ಇನ್‌ಸ್ಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್)** | 18,93,000 | – |
| 47 | 47 | ಬಾಕಿ ಉಳಿದಿರುವ ಪರೀಕ್ಷಾ/ಮರುಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಕುರಿತು. **(ಬಹದ್ದೂರ್ ಇನ್‌ಸ್ಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್)** | 5,17,745 | – |
| 48 | 48 | ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿನ ವಾಣಿಜ್ಯ ಸಂಕೀರ್ಣಗಳು, ಎಸ್.ಟಿ.ಡಿ ಬೂತ್‌ಗಳು ಮತ್ತು ಕ್ಯಾಂಟೀನ್‌ಗಳಿಂದ ಬಾಕಿಯಿರುವ ಶುಲ್ಕ ವಸೂಲಾತಿ ಬಗ್ಗೆ. **(ಇಂಜಿನಿಯರಿಂಗ್ ವಿಭಾಗ)** | – | 4,15,649 |
| 49 | 49 | ಸ್ನಾತಕೋತ್ತರ ಕೇಂದ್ರಗಳ ಆಡಳಿತ ಚಟುವಟಿಕೆಗಳು ಮತ್ತು ಅವುಗಳ ಕಾರ್ಯನಿರ್ವಹಣೆ ಮತ್ತು ವೆಚ್ಚಗಳು **(ಸ್ನಾತಕೋತ್ತರ ಕೇಂದ್ರಗಳು)** | – | – |

| ಸಿಬ್ಬಂದಿ ವಿಭಾಗ (Establishment) | | | | |
|---|---|---|---|---|
| 50 | 50 | ಪರೀಕ್ಷಾ ಖಾತೆಯ ಬ್ಯಾಂಕ್ ಖಾತೆಯ ಸಂಖ್ಯೆ:54007591200 ರಲ್ಲಿ ವೆಚ್ಚ ಮಾಡಿರುವುದಕ್ಕೆ ಸಂಬಂಧಿಸಿದ ಬೋಧಕೇತರ ಸಿಬ್ಬಂದಿಗಳ ಸಂಭಾವನೆ ಹಾಗೂ ಮೌಲ್ಯಮಾಪನ ಭತ್ಯೆ ಪಾವತಿಸಿರುವುದು_**(ಹಣಕಾಸು ವಿಭಾಗ)** | 1,19,42,751 | – |
| 51 | 51 | ಈಜು ತರಬೇತಿ ಶಿಬಿರದಲ್ಲಿ ಭಾಗವಹಿಸಿದ ನೌಕರರಿಗೆ ಹೆಚ್ಚುವರಿ ಕೆಲಸ ಎಂದು ಸಂಭಾವನೆ ಪಾವತಿಸಿರುವುದು **(ಹಣಕಾಸು ವಿಭಾಗ)** | 3,95,325 | – |
| 52 | 52 | ವಯೋ ನಿವೃತ್ತಿ ಹೊಂದಿರುವ ಡಾ॥ ಕೆ.ವಿ.ಅಯ್ಯಣ್ಣ, ನಿವೃತ್ತ ಪ್ರಾಧ್ಯಾಪಕರು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು<br>**(ಹಣಕಾಸು ವಿಭಾಗ)** | 55,644 | – |
| 53 | 53 | ನಿವೃತ್ತಿ ಪ್ರಾಧ್ಯಾಪಕರಾದ ಡಾ॥TBBSV ರಮಣಯ್ಯ ಹಾಗೂ ಇತರೆ ಸಿಬ್ಬಂದಿಗಳು ಬೋಧನಾ ಕಾರ್ಯ ನಿರ್ವಹಿಸಲು ಸಂದರ್ಶಕ ಪ್ರಾಧ್ಯಾಪಕರಾಗಿ ವೇತನ ನಿಗದಿಪಡಿಸಿ ವೇತನ ಪಾವತಿಸಿರುವುದು **(ಹಣಕಾಸು ವಿಭಾಗ)** | 4,40,014 | – |
| 54 | 54 | 2016–17ನೇ ಸಾಲಿನ ಎಸ್.ಪಿ.ಎ ಖಾತೆ ಸಂಖ್ಯೆ:64098950735 ರಲ್ಲಿ ತಾತ್ಕಾಲಿಕ ಬೋಧಕೇತರ ಉದ್ಯೋಗಿಗಳನ್ನು ಮರುನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು **(ಹಣಕಾಸು ವಿಭಾಗ)** | 10,20,231 | – |
| 55 | 55 | School of planning and architecture ವಿಭಾಗದಲ್ಲಿ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ ವೇತನ ಪಾವತಿಸಿರುವ ವಿಚಾರ ಕುರಿತು **(ಹಣಕಾಸು ವಿಭಾಗ)** | 50,64,862 | – |
| 56 | 56 | 2006ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಬೋಧಕವರ್ಗದವರಿಗೆ ಯು.ಜಿ.ಸಿ ಹಿಂಬಾಕಿಯಲ್ಲಿ ಪಡೆದಿರುವ ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳನ್ನು ಪಾವತಿಸಿರುವುದು | – | – |
| 57 | 57 | ಭದ್ರತಾ ಠೇವಣಿ ಪಡೆಯದೆ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡಿರುವುದು **(ಆಡಳಿತ ವಿಭಾಗ)** | – | – |
| 58 | 58 | ಹಿರಿಯ ಸಹಾಯಕರುಗಳ ಮಂಜೂರಾತಿ ಹುದ್ದೆಗಳಿಗಿಂತ ಹೆಚ್ಚುವರಿ ಹುದ್ದೆಗಳನ್ನು ಸೃಷ್ಠಿಸಿ ಸ್ವತಂತ್ರ ಪ್ರಭಾರದ ಮೇಲೆ ನೇಮಕ ಮಾಡಿಕೊಂಡು ಪ್ರಭಾರ ಭತ್ಯೆ ನೀಡಿರುವುದು **(ಆಡಳಿತ ವಿಭಾಗ)** | 2,50,072 | – |
| 59 | 59 | ಉಪಕುಲಸಚಿವರುಗಳ ಹುದ್ದೆಗಳಿಗೆ ಪರಿನಿಯಮಕ್ಕೆ (STATUTES) ವಿರುದ್ಧವಾಗಿ ಸ್ವತಂತ್ರ ಪ್ರಭಾರದ ಮೇಲೆ ಬಡ್ತಿ ನೀಡಿ ಪ್ರಭಾರ ಭತ್ಯೆಯನ್ನು ಪಾವತಿಸಿರುವುದು **(ಆಡಳಿತ ವಿಭಾಗ)** | 1,77,872 | – |
| 60 | 60 | ಪ್ರೊ॥ ಶಿವಬಸವಯ್ಯ ರವರಿಗೆ ಹೆಚ್ಚುವರಿ ಮನೆ ಬಾಡಿಗೆ ಭತ್ಯೆಯ ಪಾವತಿಸಿರುವ ಬಗ್ಗೆ **(ಆಡಳಿತ ವಿಭಾಗ)** | 2,08,647 | – |
| 61 | 61 | ಸ್ನಾತಕೋತ್ತರ ಪ್ರಾದೇಶಿಕ ಕೇಂದ್ರದ ನಿರ್ದೇಶಕರುಗಳಿಗೆ ಸಂಭಾವನೆ ಪಾವತಿಸಿರುವುದು **(ಆಡಳಿತ ವಿಭಾಗ)** | 70,000 | – |
| 62 | 62 | ಪರೀಕ್ಷಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಖಾಯಂ ನೌಕರರನ್ನು ಜಾಗೃತದಳದ ಸದಸ್ಯರನ್ನಾಗಿ ನೇಮಕ ಮಾಡಿಕೊಂಡು ನಿಯಮಬಾಹಿರವಾಗಿ ಸಂಭಾವನೆಯನ್ನು ಪಾವತಿ ಮಾಡಿರುವುದು **(ಪರೀಕ್ಷಾ ವಿಭಾಗ)** | 29,400 | – |
| 63 | 63 | ಪರೀಕ್ಷಾ ಕಾರ್ಯಗಳಿಗೆ ಹಾಜರಾದ ಪ್ರಾಧ್ಯಾಪಕರುಗಳಿಗೆ/ಅಧಿಕಾರಿಗಳಿಗೆ ದಿನಭತ್ಯೆ/ಪ್ರಯಾಣ ಭತ್ಯೆಗಳ ಜೊತೆಗೆ ಹೆಚ್ಚುವರಿ ಸಂಭಾವನೆಯನ್ನು ಪಾವತಿಸಿರುವುದು **(ಪರೀಕ್ಷಾ ವಿಭಾಗ)** | 1,94,200 | – |
| 64 | 64 | ಉತ್ತರ ಪತ್ರಿಕೆಗಳ ಕೇಂದ್ರ ಮೌಲ್ಯಮಾಪನ ಕಾರ್ಯಕ್ಕಾಗಿ ಸಂಯೋಜಕರಿಗೆ ಸ್ಥಳೀಯ ಭತ್ಯೆ ಮತ್ತು ಹೆಚ್ಚುವರಿ | 26,382 | – |

| | | | | |
|---|---|---|---|---|
| | | ಸಂಭಾವನೆಯನ್ನು ಪಾವತಿ ಮಾಡಿರುವುದು **(ಪರೀಕ್ಷಾ ವಿಭಾಗ)** | | |
| 65 | 65 | ಗ್ರಂಥಾಲಯ ಯೋಜನಾ ಸಹಾಯಕರು ಹಾಗೂ ತಾತ್ಕಾಲಿಕ ಗ್ರಂಥಾಲಯ ಸಹಾಯಕರುಗಳನ್ನು ನಿಯಮಬಾಹಿರವಾಗಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವ ವಿಚಾರ ಕುರಿತು **(ಸ್ನಾತಕ ಗ್ರಂಥಾಲಯ ಮಹಾರಾಜ ಕಾಲೇಜು ಆವರಣ)** | 10,29,452 | – |
| 66 | 66 | ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ಬೋಧಕೇತರ ನೌಕರರ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು. **(ಆಡಳಿತ ವಿಭಾಗ)** | 7,83,99,943 | – |
| 67 | 67 | ಅತಿಥಿ ಉಪನ್ಯಾಸಕರುಗಳ ನೇಮಕಾತಿ ಕಡತಗಳನ್ನು ಹಾಜರುಪಡಿಸದಿರುವುದು. **(ಆಡಳಿತ ವಿಭಾಗ)** | 9,95,81,981 | – |
| 68 | 68 | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಹುದ್ದೆಗಳಲ್ಲಿ ದೂರ ಶಿಕ್ಷಣ ವಿಭಾಗ ವಿಂಗಡಣೆಯಾದಾಗ ವಿವಿಧ ಶ್ರೇಣಿಯ ಹುದ್ದೆಗಳ ಹಂಚಿಕೆ ವಿವರಗಳನ್ನು ಹಾಜರುಪಡಿಸದಿರುವುದು. **(ಆಡಳಿತ ವಿಭಾಗ)** | – | – |
| 69 | 69 | ಬೋಧಕೇತರ ನೌಕರರುಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಪರಿನಿಯಮಗಳ ಅನ್ವಯ ಪದೋನ್ನತಿ ನೀಡಿರುವ ಕಡತಗಳನ್ನು ಹಾಜರುಪಡಿಸದಿರುವುದು. **(ಆಡಳಿತ ವಿಭಾಗ)** | – | – |
| 70 | 70 | ಮೈಸೂರು ವಿಶ್ವವಿದ್ಯಾನಿಲಯದ ಬೋಧಕ/ಬೋಧಕೇತರ ನೌಕರರುಗಳಿಗೆ ವಸತಿಗೃಹಗಳನ್ನು ಹಂಚಿಕೆ ಮಾಡಿ ಮನೆ ಬಾಡಿಗೆ ಭತ್ಯೆ ಕಟಾಯಿಸಿರುವ ಕಡತಗಳನ್ನು ಹಾಜರುಪಡಿಸದಿರುವುದು. **(ಆಡಳಿತ ವಿಭಾಗ)** | – | – |
| 71 | 71 | ವೇತನ ಶ್ರೇಣಿ ವಹಿಯನ್ನು ಹಾಜರುಪಡಿದಿರುವುದು **(ಆಡಳಿತ ವಿಭಾಗ)** | – | – |
| 72 | 72 | ಶ್ರೀಮತಿ/ಕುಮಾರಿ ನಗೀನ್ ತಾಜ್ ಗ್ರೂಪ್ ಹೆಡ್ ಇವರಿಗೆ ನಿಯಮ ಉಲ್ಲಂಘಿಸಿ ಹೊಸ ಪಿಂಚಣಿ ಯೋಜನೆ ಬದಲಾಗಿ ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸಿರುವುದು **(ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ)** | – | 1,05,708 |
| 73 | 73 | ಕಂಪೋಜೀಟರ್ ಮತ್ತು ಬೈಂಡರ್ ಹುದ್ದೆಗಳ ವಿಶ್ವವಿದ್ಯಾನಿಲಯದ ಪರಿನಿಯಮ (Statutes)ಗಳನ್ನು ಹಾಜರುಪಡಿಸದಿರುವುದು **(ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ)** | – | – |
| 74 | 74 | ಇ.ಎಂ.ಎಂ.ಆರ್.ಸಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಮಕ್ಕಳಿಗೆ ಶೈಕ್ಷಣಿಕ ಭತ್ಯೆಯನ್ನು ಪಾವತಿಸಿರುವುದು. **(ಶೈಕ್ಷಣಿಕ ಬಹುಮಾದ್ಯಮ ಸಂಸ್ಥೆ)** | 3,06,000 | – |
| 75 | 75 | ನಿಲಯದ ಸಹಾಯಕರು ಹಾಗೂ ಆಫೀಸ್ ಸ್ಟಾಫ್‌ಗಳ ನೇಮಕಾತಿ ಮಾಡಿಕೊಂಡು ವೇತನ ಪಾವತಿ. **(ವಿದ್ಯಾರ್ಥಿ ಕ್ಷೇಮಪಾಲನ)** | 14,46,893 | – |
| 76 | 76 | ಸಿಬ್ಬಂದಿ/ಹೌಸ್ ಕೀಪಿಂಗ್ ನೌಕರರ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು. **(ವಿದ್ಯಾರ್ಥಿ ಕ್ಷೇಮಪಾಲನ)** | 57,16,015 | – |
| 77 | 77 | ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕಾತಿ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು **(ಯುವರಾಜ ಕಾಲೇಜು)** | 50,56,885 | – |

| | | | | |
|---|---|---|---|---|
| 78 | 78 | ಆಯ್ಕೆ ಸಮಿತಿ ಸದಸ್ಯರುಗಳ ಹಾಗೂ ಶೈಕ್ಷಣಿಕ ಮತ್ತು ಆಡಳಿತ ಮಂಡಳಿಗಳ ಸಭೆಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸಭಾ ಭತ್ಯೆಯನ್ನು ಪವತಿಸಿರುವುದು **(ಯುವರಾಜ ಕಾಲೇಜು)** | 4,32,468 | – |
| 79 | 79 | 2016–17ನೇ ಸಾಲಿನ ಬಿ.ಓ.ಎ.ಇ ಸಭೆಗಳಿಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರು ಯುವರಾಜ ಕಾಲೇಜಿನ ಬೋಧಕ ವರ್ಗದವರಿಗೆ ಸಭಾ ಭತ್ಯೆಯನ್ನು ಪಾವತಿಸಿರುವುದು **(ಯುವರಾಜ ಕಾಲೇಜು)** | 16,500 | – |
| 80 | 80 | ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸ್ಥಳೀಯ ಭತ್ಯೆ, ದಿನಭತ್ಯೆ, ಪ್ರಯಾಣ ಭತ್ಯೆ ಹಾಗೂ ಪ್ರಾಯೋಗಿಕ ಪರೀಕ್ಷೆ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನಾ ಕಾರ್ಯಕ್ಕೆ ಪ್ರಶ್ನೆಪತ್ರಿಕೆಗಳನ್ನು ಸಿದ್ದಪಡಿಸಿದ ಕಾರ್ಯಕ್ಕೆ ಸಂಭಾವನೆಯನ್ನು ಪಾವತಿಸಿರುವುದು **(ಯುವರಾಜ ಕಾಲೇಜು)** | 8,14,700 | – |
| 81 | 81 | ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಖಾಯಂ ಬೋಧಕೇತರ ನೌಕರರುಗಳಿಗೆ ಸಂಭಾವನೆಯನ್ನು ಪಾವತಿಸಿರುವುದು **(ಯುವರಾಜ ಕಾಲೇಜು)** | 56,395 | – |
| 82 | 82 | ಸಂಚಿತ/ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳ ನೇಮಕ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು **(ಯುವರಾಜ ಕಾಲೇಜು)** | 1,69,22,889 | – |
| 83 | 83 | ತಾತ್ಕಾಲಿಕ / ಸಂಚಿತ ನೌಕರರ ನೇಮಕದ ಬಗ್ಗೆ **(ಸ್ನಾತಕೋತ್ತರ ಗ್ರಂಥಾಲಯ)** | 81,9,736 | – |
| 84 | 84 | ವಿಶ್ವ ವಿದ್ಯಾನಿಲಯದ ವ್ಯಾಪ್ತಿಗೆ ಬರುವ ವಸತಿ ಗೃಹಗಳ ಬಾಡಿಗೆಯ ಬೇಡಿಕೆ ವಸೂಲಾತಿ ಮತ್ತು ಬಾಕಿ ಕುರಿತು ಡಿ.ಸಿ.ಬಿ.ವಹಿಯಲ್ಲಿ 2016–17ನೇ ಸಾಲಿಗೆ ನಮೂದಿಸದೆ ಇರುವ ಬಗ್ಗೆ. **(ಇಂಜಿನಿಯರಿಂಗ್ ವಿಭಾಗ)** | – | – |
| 85 | 85 | ವಸತಿ ಗೃಹ ಹಂಚಿಕೆಯಾಗಿರುವ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ವೇತನದಲ್ಲಿ ವೇತನ ಭತ್ಯೆಯನ್ನು ಡ್ರಾ ಮಾಡದೆ ಇರುವುದು ಮತ್ತು ವಸತಿ ಗೃಹ ಬಾಡಿಗೆ ಬಾಬ್ತು ವೇತನದಲ್ಲಿ ಕಡಿತಗೊಳಿಸದೆ ಕೈಬಿಟ್ಟಿರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| 86 | 86 | ಕಾಮಗಾರಿ ನಗದು ಪುಸ್ತಕದ ಪರಿಶೀಲನೆ ಬಗ್ಗೆ. **(ಇಂಜಿನಿಯರಿಂಗ್ ವಿಭಾಗ)** | – | – |
| **ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕ ಕಾಯ್ದೆ (K.T.P.P) ಉಲ್ಲಂಘಿಸಿರುವ ಪ್ರಕರಣಗಳು** | | | | |
| 87 | 87 | ಇ–ಪ್ರಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ದಿ ಮೈಸೂರು ಪೇಪರ್ ಮಿಲ್ಸ್ ಲಿ. ರವರಿಂದ ಖರೀದಿಸಿರುವುದು **(ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ)** | 31,11,789 | – |
| 88 | 88 | ಟೆಂಡರ್ ಕರೆಯದೆ ಮೆಸ್ ಗುತ್ತಿಗೆ ನೀಡಿರುವುದು **(ವಿದ್ಯಾರ್ಥಿ ಕ್ಷೇಮಾ ಪಾಲನಾ)** | 3,13,38,896 | – |
| 89 | 89 | Providing temporary steel/ Aluminium trussed roofing with seating chairs & stage arrangements with sound system & allied works at amphi theatre for the valedictor function of Centenary celebration at open Air theatre at Manasa Gangothri **(ಹಣಕಾಸು ವಿಭಾಗ)** | – | – |
| 90 | 90 | ಕ್ರೀಡಾಭಿವೃದ್ಧಿ ನಿಧಿಯಡಿಯಲ್ಲಿ Construction of building ಗೆ ಸಂಬಂಧಿಸಿದ ಮೂಲ ಕಡತವನ್ನು ಹಾಜರುಪಡಿಸದೆ ಇರುವುದು **(ಇಂಜಿನಿಯರಿಂಗ್ ವಿಭಾಗ)** | 7,99,247 | – |

| | | | | |
|---|---|---|---|---|
| 91 | 91 | ಟೆಂಡರ್ ಕರೆಯದೆ ಹಾಗೂ ದಾಸ್ತಾನು ವಿತರಣೆ ವಹಿ ಹಾಜರುಪಡಿಸದೆ ಇರುವುದು **(ಹಣಕಾಸು ವಿಭಾಗ)** | 1,56,89,664 | – |
| 92 | 92<br>(ಎ)<br>(ಬಿ)<br>(ಸಿ) | ಪಾವತಿಸಿರುವ ಬಿಲ್ಲು ಒಂದುಲಕ್ಷಕ್ಕಿಂತ ಹೆಚ್ಚಾಗಿ ಪಾವತಿ ಬಿಲ್ಲು ಟೆಂಡರ್ ಕರೆಯದೆ ಬಿಲ್ಲು ಪಾವತಿ (261443 + 135000 + 361875 + 959451 = 1717769) **(ಹಣಕಾಸು ವಿಭಾಗ)** | 17,17,769 | – |
| 93 | 93 | 2016–17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 263ರಲ್ಲಿ "ಭದ್ರತಾ ಸೇವೆ" ಒದಗಿಸದ ಬಾಬ್ತು ಪಾವತಿ ರೂ.11795771/– ಟೆಂಡರ್ ಕಡತ/ದಾಖಲಾತಿ ಒದಗಿಸಿಲ್ಲದಿರುವುದು **(ಹಣಕಾಸು ವಿಭಾಗ)** | 1,17,95,771 | – |
| 94 | 94 | ಲೆಕ್ಕಶೀರ್ಷಿಕೆ 262 ಬೆರಳಚ್ಚು/ಸ್ವಚ್ಛತಾ ಸಿಬ್ಬಂದಿಗಳಿಗೆ ಮೊತ್ತ ಪಾವತಿ ರೂ.13215562/– ನ್ಯೂನ್ಯತೆ/ದಾಖಲಾತಿಗಳಾದ ಟೆಂಡರ್ ಪ್ರಕ್ರಿಯೆ ಕಡತ ಹಾಜರುಪಡಿಸಿಲ್ಲದಿರುವುದು **(ಹಣಕಾಸು ವಿಭಾಗ)** | 1,32,15,562 | – |
| 95 | 95 | Information Infrastructure development ಖಾತೆಯ ವೆಚ್ಚದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸದಿರುವುದು **(ಹಣಕಾಸು ವಿಭಾಗ)** | 2,42,62,200 | – |
| 96 | 96 | Educational multimedia research center ದಾಖಲೆಗಳನ್ನು ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | 9,29,903 | – |
| 97 | 97 | ಏಪ್ರಿಲ್–2016 ಹಾಗೂ ಮೇ–2016 ಮಾಹೆಯಲ್ಲಿ ಕಾವೇರಿ ಟೂರ್ಸ್ & ಟ್ರಾವೆಲ್ಸ್ ಬಾಡಿಗೆ ಆಧಾರದ ಮೇಲೆ ಬಿಡಿ ಬಿಡಿ ಬಿಲ್ಲುಗಳನ್ನು ಪಾವತಿಸಿರುವುದು **(ಹಣಕಾಸು ವಿಭಾಗ)** | 19,16,947 | 1,07,349 |
| 98 | 98 | ಗಣಕ ಯಂತ್ರಗಳ ವಾರ್ಷಿಕ ನಿರ್ವಹಣೆಗಾಗಿ ಭರಿಸಿರುವ ವೆಚ್ಚದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | 10,56,611 | – |
| 99 | 99 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಪ್ರವೇಶಾತಿ ವಿವರಗಳು ಮೆಸ್‌ಬಿಲ್ಲು ಮತ್ತು ವಿದ್ಯಾರ್ಥಿವೇತನ ಬಿಡುಗಡೆ ಮಾಡಿರುವ ವಿವರ **(ಹಣಕಾಸು ವಿಭಾಗ)** | – | – |
| 100 | 100 | M/S Dreams Interiors Mysore, ರವರಲ್ಲಿ ಉಪಕರಣಗಳ ಖರೀದಿ ಮಾಡಿರುವುದು **(ಹಣಕಾಸು ವಿಭಾಗ)** | 15,26,400 | 35,107 |
| 101 | 101 | ಕೆ.ಟಿ.ಪಿ.ಪಿ ಕಾಯ್ದೆ 1999–2000 ರ ನಿಯಮ ಉಲ್ಲಂಘಿಸಿ ವೆಚ್ಚ ಭರಿಸಿರುವುದು **(ಯುವರಾಜ ಕಾಲೇಜು)** | 6,72,000 | – |
| 102 | 102 | ಕೆ.ಟಿ.ಪಿ.ಪಿ ಕಾಯಿದೆ ಉಲ್ಲಂಘಿಸಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ದರಪಟ್ಟಿಗಳಲ್ಲಿ ಖರೀದಿಸಿರುವುದು **(ಯುವರಾಜ ಕಾಲೇಜು)** | 19,67,358 | – |
| 103 | 103 | ಟೆಂಡರ್ ಕರೆಯದೆ ಲೇಖನ ಸಾಮಾಗ್ರಿಗಳನ್ನು ಖರೀದಿ ಮಾಡಿರುವುದು **(ಪರೀಕ್ಷಾ ವಿಭಾಗ)** | 3,92,177 | – |
| 104 | 104 | ಚಿನ್ನದ ಪದಕ ಖರೀದಿ ನ್ಯೂನತೆಗಳು **(ಪರೀಕ್ಷಾ ವಿಭಾಗ)** | – | – |
| 105 | 105 | ಅಂಕಪಟ್ಟಿ, ಪದವಿ ಪ್ರಮಾಣ ಪತ್ರಗಳ ಮುದ್ರಣ ಬಾಬ್ತು **(ಪರೀಕ್ಷಾ ವಿಭಾಗ)** | 98,99,900 | – |

| | | | | |
|---|---|---|---|---|
| 106 | 106 | M/s Informaties Publishing Ltd. ರವರಿಂದ ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ E-Journals and e-books ಆಧಾರಿತ ವಿದ್ಯುನ್ಮಾನ ಸಂಪನ್ಮೂಲಗಳ Remote Access to web basedlicensed content ತಂತ್ರಾಂಶವನ್ನು ಕೋಟೆಶನ್ ಪ್ರಕ್ರಿಯೆ ಕೈಗೊಳ್ಳದೆ ಖರೀದಿಸಿರುವುದು **(ಸ್ನಾತಕೋತ್ತರ ಗ್ರಂಥಾಲಯ)** | 73,280 | – |
| 107 | 107 | M/s Data Net India Pvt Ltd NewDelhi ರವರಿಂದ Indiastat database and archives of Inportant news papers. ತಂತ್ರಾಂಶವನ್ನು ಕೊಟೇಶನ್ ಪ್ರಕ್ರಿಯೆ ಕೈಗೊಳ್ಳದೆ ಖರೀದಿಸಿರುವುದು **(ಸ್ನಾತಕೋತ್ತರ ಗ್ರಂಥಾಲಯ)** | 53,305 | – |
| 108 | 108 | ಕಾಮಗಾರಿ ವೋಚರ್‌ಗಳಿಗೆ ಸಂಬಂಧಿಸಿದಂತೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು **(ಹಣಕಾಸು ವಿಭಾಗ)** | 40,65,159 | – |
| **ಖರೀದಿ ವಿಭಾಗ (Purchases)** | | | | |
| 109 | 109 | ವಿದ್ಯುತ್ ಉಪಕರಣಗಳು ಹಾಗೂ ಪ್ಲಾಸ್ಟಿಕ್ ಆರ್ಟಿಕಲ್ಸ್ ಸಾಮಾಗ್ರಿಗಳ ದಾಸ್ತಾನು ಲೆಕ್ಕದಲ್ಲಿ ವಿತರಣೆಯನ್ನು ಸಮರ್ಪಕವಾಗಿ ನಿರ್ವಹಿಸದೆ ಇರುವುದರ ವಿಚಾರ ಕುರಿತು. **(ವಿದ್ಯಾರ್ಥಿ ಕ್ಷೇಮಪಾಲನಾ)** | 78,180 | – |
| 110 | 110 | 2016–17ನೇ ಸಾಲಿನಲ್ಲಿ ಖರೀದಿಸಲಾದ ಹಾಸ್ಟೆಲ್ ಪಾತ್ರೆ ಹಾಗೂ ಸಲಕರಣೆ ಇತರೆ ಐಟಂಗಳನ್ನು ವಾರ್ಷಿಕ ದಾಸ್ತಾನು ಲೆಕ್ಕದ ಭೌತಿಕ ತಪಾಸಣೆಯ ವರದಿಯಲ್ಲಿ ತೆಗೆದುಕೊಳ್ಳದೆ ಇರುವುದು. **(ವಿದ್ಯಾರ್ಥಿ ಕ್ಷೇಮಪಾಲನಾ)** | 4,47,676 | – |
| **ಸಿವಿಲ್ ಕಾಮಗಾರಿಗಳ ವಿಭಾಗ (Civil Works)** | | | | |
| 111 | 111 | ಇದುವರೆವಿಗೆ ಅಂತಿಮ ಬಿಲ್ಲು ಪಾಸಾಗದಿರುವುದು. ವಿಳಂಬಿತ ಅವಧಿಗೆ ದಂಡ ವಸೂಲಾತಿ ಹಾಗೂ ಪೀಠೋಪಕರಣ ಗುಣಮಟ್ಟ ಪ್ರಮಾಣಪತ್ರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು. **(ಇಂಜಿನಿಯರಿಂಗ್ ವಿಭಾಗ)** | 21,00,709 | – |
| 112 | 112 | Providing & fixing of Furniture for Library & Computer Lap at P.G Center Hema gangothri, Hassan. ಕಾಮಗಾರಿ ವಿಳಂಬದ ಅವದಿಗೆ ದಂಡ ವಸೂಲಾತಿ ಪೀಠೋಪಕರಣಗಳ ಗುಣಮಟ್ಟದ ಬಗ್ಗೆ ಪ್ರಮಾಣ ಪತ್ರ ಹಾಜರುಪಡಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | 30,79,572 | 30,796 |
| 113 | 113 | ಕಾಮಗಾರಿಗಳ ಗುತ್ತಿಗೆ ಕರಾರು ಪತ್ರ ಇ–ಟೆಂಡರ್ ಪ್ರಕಟಣೆ ಹಾಗೂ ಗುಣಮಟ್ಟ ಪತ್ರಗಳನ್ನು ಹಾಜರುಪಡಿಸದಿರುವ ಬಗ್ಗೆ **(ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)** | 29,00,219 | – |
| 114 | 114 | ಕಾರ್ಯಪಾಲಕ ಅಭಿಯಂತರರ ಅಳತೆ ಪರಿಶೀಲನೆ ಸಹಿ ಮತ್ತು ಪಾವತಿ ಆದೇಶ ಇಲ್ಲದೆ ಬಿಲ್ಲು ಪಾವತಿ ಮಾಡಿರುವ ಬಗ್ಗೆ. **(ಇಂಜಿನಿಯರಿಂಗ್ ವಿಭಾಗ)** | 1,80,000 | – |
| 115 | 115 | ಮಾನಸ ಗಂಗೋತ್ರಿ ಆವರಣದಲ್ಲಿ ಎರಡು ಕೊಳವೆ ಬಾವಿಗಳನ್ನು ಕೊರೆದಿರುವುದು. **(ಇಂಜಿನಿಯರಿಂಗ್ ವಿಭಾಗ)** | 1,85,770 | – |
| 116 | 116 | ಸಹೊಧ್ಯಮ ಕೋರ್ಸ್ ಶೀರ್ಷಿಕೆಯಡಿಯಲ್ಲಿ ಅನುಷ್ಠಾನಗೊಳಿಸಿರುವ ಕಾಮಗಾರಿ ಕೆಲಸದಲ್ಲಿ ವಿಳಂಬವಾಗಿ | – | 17,968 |

| | | | | |
|---|---|---|---|---|
| | | ನಿರ್ವಹಿಸಿರುವುದಕ್ಕೆ ದಂಡ ಪ್ರಸ್ಥಾವನೆ ಬಗ್ಗೆ. **(ಇಂಜಿನಿಯರಿಂಗ್ ವಿಭಾಗ)** | | |
| 117 | 117 | ಕಂಚಿನ ಪ್ರತಿಮೆ ಖರೀದಿಸಿ ಅಳವಡಿಸಿದ್ದು ಇದರ ಗುಣಮಟ್ಟದ ಬಗ್ಗೆ ತಾಂತ್ರಿಕ ಪರಿಶೀಲನಾ ಪ್ರಮಾಣ ಪತ್ರವನ್ನು ಹಾಜರುಪಡಿಸದೆ ಇರುವುದು. **(ಇಂಜಿನಿಯರಿಂಗ್ ವಿಭಾಗ)** | – | – |
| 118 | 118 | ಕಾಮಗಾರಿ ವಿಳಂಬಿತ ಅವಧಿಗೆ ದಂಡ ವಸೂಲಾತಿ ಮಾಡಿಲ್ಲದೆ ಇರುವುದರ ಬಗ್ಗೆ. **(ಇಂಜಿನಿಯರಿಂಗ್ ವಿಭಾಗ)** | – | 51,184 |
| 119 | 119 | ಗುತ್ತಿಗೆದಾರರಿಗೆ ಹೆಚ್ಚುವರಿ ಪಾವತಿಸಿರುವುದು ಹಾಗೂ ವಿಸ್ತರಣಾ ಅವಧಿ ಅನುಮೋದನೆ ಆಗದಿರುವುದು. **(ಇಂಜಿನಿಯರಿಂಗ್ ವಿಭಾಗ)** | – | 5,70,16 |
| 120 | 120 | ಆರ್ಥಿಕ ಪ್ರತ್ಯಾಧಿಕಾರದ ಮಿತಿ ಮೀರಿ ತಾಂತ್ರಿಕ ಅನುಮೋದನೆ ನೀಡಿರುವುದು. **(ಇಂಜಿನಿಯರಿಂಗ್ ವಿಭಾಗ)** | – | – |
| 121 | 121 | ಕಾಲ ಅವಧಿ ವಿಸ್ತರಣೆ ಅನುಮೋದನೆ ಪಡೆಯದೆ ಇರುವ ಬಗ್ಗೆ ವಿಳಂಬಿತ ಅವದಿಗೆ ದಂಡ ವಸೂಲಿ ಮಾಡದೆ ಇರುವ ಬಗ್ಗೆ. **(ಇಂಜಿನಿಯರಿಂಗ್ ವಿಭಾಗ)** | – | 11,804 |
| 122 | 122 | ಹೆಚ್ಚುವರಿ ಭದ್ರತಾ ಠೇವಣಿಯನ್ನು(Additional Security Deposit) ವಿ.ವಿ.ನಿಗೆ ಜಮಾ ಮಾಡದೆ ಇರುವುದು, **(ಇಂಜಿನಿಯರಿಂಗ್ ವಿಭಾಗ)** | 1,58,90,100 | – |
| 123 | 123 | IEM ಸಂಸ್ಥೆಗೆ ಪಾವತಿ ಮುಂಗಡ ಕಟಾಯಿಸದಿರುವುದು**(ಪರೀಕ್ಷಾಂಗ ವಿಭಾಗ)** | 2,44,61,738 | 13,00,000 |
| 124 | 124 | ಒಂದೇ ತರನಾದ ಕಾಮಗಾರಿಗೆ ಒಟ್ಟು ಮೊತ್ತದಲ್ಲಿ ಎರಡುಲಕ್ಷ/ಐದುಲಕ್ಷ ಮಿತಿಯೊಳಗೆ ವಿಭಾಗಿಸಿ ಇ-ಟೆಂಡರ್ ಕರೆಯದೆ ನಿಯಮ ಬಾಹಿರವಾಗಿ ಟೆಂಡರ್ ಕರೆದು ಕ್ರಮವಹಿಸಿರುವುದರ ಬಗ್ಗೆ. **(ಇಂಜಿನಿಯರಿಂಗ್ ವಿಭಾಗ)** | 8,59,24,150 | – |
| 125 | 125 | ಸಣ್ಣ ಕಾಮಗಾರಿಗಳ ಆಧಾರದ ಮೇಲೆ ಪಾವತಿಸಿರುವ ಕಾಮಗಾರಿ ಬಿಲ್ಲುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಯಾಕೇಜ್ ಸಿಸ್ಟಂನಲ್ಲಿ ಟೆಂಡರ್ ಕರೆಯದೇ ಬಿಡಿ ಬಿಡಿ ಬಿಲ್ಲುಗಳಲ್ಲಿ ಪಾವತಿಸಿರುವುದು **(ಇಂಜಿನಿಯರಿಂಗ್ ವಿಭಾಗ)** | 35,69,071 | – |
| | | **ಪ್ಯಾಕೇಜ್ – 1** | | |
| 126 | 126 | ಪರೀಕ್ಷಾ ಖಾತೆಯ ಸಂಖ್ಯೆ:54007591200 ರಲ್ಲಿ ವಹಿವಾಟು ಸಂಖ್ಯೆ:122 ಹಾಗೂ 155 ರಲ್ಲಿ ವಾರ್ಷಿಕ ಲೆಕ್ಕಪತ್ರದಂತೆ ಮಾಡಿರುವ ವೆಚ್ಚಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಹಾಜರುಪಡಿಸದೆ ಇರುವುದು **(ಇಂಜಿನಿಯರಿಂಗ್ ವಿಭಾಗ)** | 25,85,366 | – |
| 127 | 127 | ನಿಗದಿತ ಕಾಲಾವಧಿ ಪೂರ್ಣಗೊಂಡ ನಂತರದಲ್ಲಿ ಸಾಧಿಸಿರುವ ಪ್ರಗತಿಗೆ ದಂಡ ಪ್ರಸ್ತಾಪನೆಯ ಬಗ್ಗೆ | – | 7,99,421 |
| 128 | 128 | ಮೌಲ್ಯಭವನ ಕಟ್ಟಡ | 42,00,044 | – |
| 129 | 129 | ಮೌಲ್ಯಭವನ ಕಟ್ಟಡದ ಕೆಲಸಕ್ಕೆ ಅಳವಡಿಸಿರುವ ಮರದ ಗುಣಮಟ್ಟದ ಪ್ರಮಾಣ ಪತ್ರವನ್ನು ಹಾಜರುಪಡಿಸದಿರುವುದು | 4,24,39,779 | – |
| 130 | 130 | ಲೆಕ್ಕಪರಿಶೋಧನೆಗೆ Original EMB ಯನ್ನು ಹಾಜರುಪಡಿಸದೇ ಇರುವುದು. | 5,62,45,866 | – |

| | | | | |
|---|---|---|---|---|
| 131 | 131 | ರಾಜಸ್ವ ತೆರಿಗೆಯ ಬಾಬ್ತು ಕಡಿಮೆ ಕಟಾಯಿಸಿರುವುದು | – | 26,539 |
| 132 | 132 | ಹೊಸ ಮಣ್ಣನ್ನು ಸಂಗ್ರಹಿಸಿರುವ ಬಾಬ್ತು ರಾಜಸ್ವ ತೆರಿಗೆಯನ್ನು ಕಟಾಯಿಸದಿರುವುದು | – | 11,667 |
| 133 | 133 | ಮಣ್ಣಿನ ಕೆಲಸವನ್ನು ನಿರ್ವಹಿಸಿರುವುದರಲ್ಲಿ ಕುಗ್ಗುವಿಕೆ (Shrinkage)ಯನ್ನು ಅಳತೆಯಲ್ಲಿ ಕಳೆಯದೆ ಇರುವುದು | – | 15,933 |
| 134 | 134 | EMB ಯಲ್ಲಿ ಅಳತೆಯನ್ನು ದಾಖಲಿಸದೇ ಹಣ ಪಾವತಿ ಮಾಡಿರುವುದು | – | 68,794 |
| **ಪ್ಯಾಕೇಜ್ – 2** | | | | |
| 135 | 135 | ನಿಗದಿತ ಕಾಲಾವಧಿ ಪೂರ್ಣಗೊಂಡ ನಂತರದಲ್ಲಿ ಸಾಧಿಸಿರುವ ಪ್ರಗತಿಗೆ ದಂಡ ಪ್ರಸ್ತಾಪನೆಯ ಬಗ್ಗೆ | – | 12,58,903 |
| 136 | 136 | ಮೊಬೈಲೈಜೇಷನ್ ಮುಂಗಡವನ್ನು ವಸೂಲಿಸಿರುವ ಬಗ್ಗೆ | – | – |
| 137 | 137 | ಚಾಮರಾಜನಗರ ಪಿ.ಜಿ ಸೆಂಟರ್ ಕಟ್ಟಡ ಕೆಲಸಕ್ಕೆ ಅಳವಡಿಸಿರುವ ಮರದ ಗುಣಮಟ್ಟದ ಪ್ರಮಾಣ ಪತ್ರವನ್ನು ಹಾಜರುಪಡಿಸದಿರುವುದು | 4,48,680 | – |
| 138 | 138 | ಲೆಕ್ಕಪರಿಶೋಧನೆಗೆ EMBಯನ್ನು ಹಾಜರುಪಡಿಸದೆ ಇರುವುದು | 8,61,17,562 | – |
| 139 | 139 | ರಾಜಸ್ವ ತೆರಿಗೆಯನ್ನು ಕಡಿಮೆ ಕಟಾಯಿಸಿರುವುದು | – | 2,15,634 |
| 140 | 140 | ಹೊಸ ಮಣ್ಣನ್ನು ಸಂಗ್ರಹಿಸಿರುವ ಬಾಬ್ತು ರಾಜಸ್ವ ತೆರಿಗೆಯನ್ನು ಕಟಾಯಿಸಿರುವುದು | – | 54,883 |
| 141 | 141 | ಮಣ್ಣಿನ ಕೆಲಸವನ್ನು ನಿರ್ವಹಿಸಿರುವುದರಲ್ಲಿ ಕುಗ್ಗುವಿಕೆ (Shrinkage)ಯನ್ನು ಅಳತೆ ಪುಸ್ತಕದಲ್ಲಿ ಕಳೆಯದೆ ಇರುವುದು (ಶೇ 15) | – | 1,35,369 |
| 142 | 142 | ಜಂಗಲ್ ಕ್ಲಿಯರಿಂಗ್‌ನಲ್ಲಿ ವೈಯ್ಡ್ ಕಳೆಯದಿರುವುದು | – | 5,854 |
| 143 | 143 | EMB ಯಲ್ಲಿ ಅಳತೆಯನ್ನು ದಾಖಲಿಸದೆ ಹಣ ಪಾವತಿ ಮಾಡಿರುವುದು | – | 43,500 |
| 144 | 144 | ಕಬ್ಬಿಣವನ್ನು ಒಂದನೇ ಅಂತಸ್ಥಿಗೆ ಎತ್ತುವಳಿ ಮಾಡಿರುವುದಕ್ಕೆ ಹೆಚ್ಚುವರಿಯಾಗಿ ಪಾವತಿಸುವ ಬಗ್ಗೆ | – | 8,545 |
| **ಪ್ಯಾಕೇಜ್–3** | | | | |
| 145 | 145 | ನಿಗದಿತ ಕಾಲಾವಧಿಯಲ್ಲಿ ನಿಶ್ಚಿತ ಪ್ರಗತಿಯನ್ನು ಸಾಧಿಸುವಲ್ಲಿ ವಿಫಲವಾಗಿರುವ ಬಗ್ಗೆ | – | – |
| 146 | 146 | ಲೆಕ್ಕಪರಿಶೋಧನೆಗೆ ಎಲೆಕ್ಟ್ರಾನಿಕ್ ಅಳತೆ ಪುಸ್ತಕವನ್ನು ಹಾಜರುಪಡಿಸದಿರುವುದು | 2,12,94,445 | – |
| 147 | 147 | ರಾಜಸ್ವ ತೆರಿಗೆಯನ್ನು ಬಾಬ್ತು ಕಡಿಮೆ ಕಟಾಯಿಸಿರುವುದು | – | 56,017 |
| 148 | 148 | ಹೊಸ ಮಣ್ಣನ್ನು ಸಂಗ್ರಹಿಸಿರುವ ಬಾಬ್ತು ರಾಜಸ್ವ ತೆರಿಗೆಯನ್ನು ಕಟಾಯಿಸದಿರುವುದು | – | 3,539 |
| 149 | 149 | ಮಣ್ಣಿನ ಕೆಲಸವನ್ನು ನಿರ್ವಹಿಸಿರುವುದರಲ್ಲಿ ಕುಗ್ಗುವಿಕೆ (Shrinkage)ಯನ್ನು ಅಳತೆಯಲ್ಲಿ ಕಳೆಯದೆ ಇರುವುದು | – | 7,965 |
| 150 | 150 | ಜಂಗಲ್ ಕ್ಲಿಯರಿಂಗ್‌ನಲ್ಲಿ ವಾಯ್ಡ್ ಕಳೆಯದಿರುವುದು | – | 3,776 |
| **ಪ್ಯಾಕೇಜ್–4** | | | | |
| 151 | 151 | ಬ್ಯಾಂಕ್ ಗ್ಯಾರಂಟಿಯನ್ನು ಪಡೆದುಕೊಂಡು ಮೊಬೈಲೈಜೇಷನ್ ಮುಂಗಡವನ್ನು ಪಾವತಿಸಿರುವುದು ಮತ್ತು ವಸೂಲಿಸಿರುವುದು | – | – |

| | | | | |
|---|---|---|---|---|
| 152 | 152 | ಲೆಕ್ಕಪರಿಶೋಧನೆಗೆ ಎಲೆಕ್ಟ್ರಾನಿಕ್ ಅಳತೆ ಪುಸ್ತಕವನ್ನು ಹಾಜರುಪಡಿಸದಿರುವುದು | 6,24,14,802 | – |
| 153 | 153 | ರಾಜಸ್ವ ತೆರಿಗೆಯ ಬಾಬ್ತು ಕಡಿಮೆ ಕಟಾಯಿಸಿರುವುದು | – | 48,655 |
| 154 | 154 | ಹೊಸ ಮಣ್ಣನ್ನು ಸಂಗ್ರಹಿಸಿರುವ ಬಾಬ್ತು ರಾಜಸ್ವ ತೆರಿಗಯನ್ನು ಕಟಾಯಸದಿರುವುದು | – | 45,214 |
| 155 | 155 | ಮಣ್ಣಿನ ಕೆಲಸವನ್ನು ನಿರ್ವಹಿಸಿರುವುದರಲ್ಲಿ ಕುಗ್ಗುವಿಕೆ (Shrinkage)ಯನ್ನು ಅಳತೆ ಪುಸ್ತಕದಲ್ಲಿ ಕಳೆಯದೇ\ ಇರುವುದು | – | 2,17,946 |
| 156 | 156 | ಜಂಗಲ್ ಕ್ಲಿಯರಿಂಗ್‌ನಲ್ಲಿ ವಾಯ್ಡ್ ಕಳೆಯದಿರುವುದು | – | 422 |
| | | **ಆದಾಯ ತೆರಿಗೆ/ಮಾರಾಟ ತೆರಿಗೆ/ಆಸ್ತಿ ತೆರಿಗೆ/ಆಸ್ತಿ ವಹಿ (Income Tax/VAT/Asset Tax/Asset register)** | | |
| 157 | 157 | ಆಸ್ತಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| 158 | 158 | 2016–17ನೇ ಸಾಲಿನಲ್ಲಿ RUSA ಅನುದಾನದಲ್ಲಿ ಉಪಕರಣ Laptop, Computers, Printers, UPS, ಇತ್ಯಾದಿ ಖರೀದಿಸಿರುವ ಸಾಮಾಗ್ರಿಗಳ ವಿವರ ಹಾಗೂ ಕಾಮಗಾರಿಗೆ ಸಂಬಂಧಿಸಿದ ಮೂಲ ಕಡತ ಮತ್ತು ಅಳತೆ ಪುಸ್ತಕವನ್ನು ಹಾಜರುಪಡಿಸದೆ ಇರುವುದು **(ಹಣಕಾಸು ವಿಭಾಗ)** | 19,89,511 | – |
| 159 | 159 | 2016–17ನೇ ಸಾಲಿನಲ್ಲಿ RUSA ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿದ ಆದಾಯ ತೆರಿಗೆ ಮಾರಾಟ ತೆರಿಗೆ ರಾಜಧನ ಕಟಾಯಿಸಿ ಲೆಕ್ಕಶೀರ್ಷಿಕೆ ಜಮೆ ಮಾಡಿರುವ ವಿವರ ಹಾಜರುಪಡಿಸದೆ ಇರುವುದು **(ಹಣಕಾಸು ವಿಭಾಗ)** | 21,63,674 | – |
| 160 | 160 | 2016–17ನೇ ವರ್ಷದಲ್ಲಿ RUSA ಯೋಜನೆಯಲ್ಲಿ ಖರೀದಿಸಿರುವ ಸಾಮಾಗ್ರಿ ಬಿಲ್ಲುಗಳನ್ನು ಆದಾಯ ತೆರಿಗೆ ಹಾಗೂ ಮೌಲ್ಯದ ಆಧಾರಿತ ತೆರಿಗೆ ಕಟಾಯಿಸಿ ಲೆಕ್ಕಶೀರ್ಷಿಕೆ ಜಮೆ ಮಾಡಿರುವ ಖರ್ಚು ಸ್ವೀಕೃತಿ ದಾಖಲಾತಿಯನ್ನು ಹಾಜರುಪಡಿಸದೆ ಇರುವುದು **(ಹಣಕಾಸು ವಿಭಾಗ)** | – | 15,95,675 |
| 161 | 161 | ರಾಜಧನ ಕಟಾಯಿಸಿಲ್ಲದೆ/ಕಡಿಮೆಕಟಾಯಿಸಿರುವುದರ ಬಗ್ಗೆ **(ಇಂಜಿನಿಯರಿಂಗ್ ವಿಭಾಗ)** | – | 71,566 |
| 162 | 162 | ಮೈಸೂರು ವಿ.ವಿ.ಇಂಜಿನಿಯರಿಂಗ್ ವಿಭಾಗದ 2016–17ನೇ ಸಾಲಿನ ವಿವಿಧಲೆಕ್ಕಶೀರ್ಷಿಕೆಗಳಲ್ಲಿನ ಕಾಮಗಾರಿಗಳ ವೆಚ್ಚಗಳನ್ನು ಮೈಸೂರು ವಿ.ವಿ.2016–17 ವಾರ್ಷಿಕ ಲೆಕ್ಕದಲ್ಲಿನ ಲೆಕ್ಕಶೀರ್ಷಿಕೆಗಳಲ್ಲಿನ ಕಾಮಗಾರಿ ಖರ್ಚುಗಳ ಲೆಕ್ಕ ತಾಳೆಯಾಗದಿರುವುದು **(ಇಂಜಿನಿಯರಿಂಗ್ ವಿಭಾಗ)** | – | – |
| | | **ಎ.ಸಿ/ಎನ್.ಡಿ.ಸಿ/ಡಿ.ಸಿ ಬಿಲ್ಲು (A.C/N.D.C/D.C Bill)** | | |
| 163 | 163 | 2016–17ನೇ ಸಾಲಿನಲ್ಲಿ ಆಡಳಿತ ವಿಭಾಗದಿಂದ ನಿರ್ವಹಿಸಲಾದ ಎ.ಸಿ, ಎನ್.ಡಿ.ಸಿ, ಡಿ.ಸಿ ಹಾಗೂ ವೇತನ ಸಂಭಾವನೆ ಮತ್ತಿತರ ಬಿಲ್ಲುಗಳನ್ನು ಹಾಜುರಪಡಿಸದಿರುವುದು **(ಆಡಳಿತ ವಿಭಾಗ)** | 84,13,469 | – |
| 164 | 164 | ಎ.ಸಿ ಬಿಲ್ಲು ಮುಖಾಂತರ ಮುಂಗಡ ಪಾವತಿಸಿರುವ ಎನ್.ಡಿ.ಸಿ ಬಿಲ್ಲುಗಳಲ್ಲಿ ಬಿಡಿ–ಬಿಡಿಯಾಗಿ ಕಾವೇರಿ ಟೂರ್ಸ್ & ಟ್ರಾವೆಲ್ಸ್ ಟ್ರಿಪ್‌ಶೀಟ್ ಆಧಾರದ ಮೇಲೆ ಪಾವತಿಸಿರುವ ಕುರಿತು **(ಕಾಲೇಜು ಅಭಿವೃದ್ಧಿ ಮಂಡಳಿ)** | 2,59,101 | – |
| 165 | 165 | ಎ.ಸಿ ಬಿಲ್ಲಿನ ಮುಂಗಡ ಪಾವತಿ ರೂ.2 ಲಕ್ಷಕ್ಕಿಂತ ಹೆಚ್ಚಾಗಿ ಪಾವತಿಸಲು ಬರುವುದಿಲ್ಲ. ಸುತ್ತೋಲೆಯ ನಿಯಮ | 12,00,000 | – |

| | | | | |
|---|---|---|---|---|
| | | ಉಲ್ಲಂಘನೆಯಾಗಿರುವ ವಿಚಾರ ಕುರಿತು **(ಕಾಲೇಜು ಅಭಿವೃದ್ಧಿ ಮಂಡಳಿ)** | | |
| 166 | 166 | ಎ.ಸಿ. ಬಿಲ್ಲು ಹಾಗೂ ಎನ್.ಡಿ.ಸಿ ಬಿಲ್ಲುಗಳ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೆ ಇರುವುದು **(ಇಂಜಿನಿಯರಿಂಗ್ ವಿಭಾಗ)** | 8,14,493 | – |
| **ಭಾಗ–04** **ಲೆಕ್ಕಪರಿಶೋಧನೆಗೆ ಓಚರ್‌ಗಳನ್ನು ಹಾಜರುಪಡಿಸದಿರುವ ವಿವರ** | | | | |
| 167 | 167 | ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನದ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಬಿಡುಗಡೆಯ ಮೊತ್ತಕ್ಕೆ ಕೆಲವು ವೆಚ್ಚದ ವಿವರಗಳನ್ನು ಹಾಜರುಪಡಿಸದಿರುವುದು **(ಆಡಳಿತ ವಿಭಾಗ)** | 8,18,659 | – |
| 168 | 168 | ಮೈಸೂರು ವಿಶ್ವವಿದ್ಯಾನಿಲಯದ ಅಧಿನಕ್ಕೊಳಪಡುವ ಚರ ಮತ್ತು ಸ್ಥಿರ ವಿವರಗಳನ್ನೊಳಗೊಂಡ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು | – | – |
| 169 | 169 | ಭಾರತ ಸರ್ಕಾರದ ಅಂಗಸಂಸ್ಥೆಗಳು/ಕನಾಟಕ ಸರ್ಕಾರದ ಅಂಗ ಸಂಸ್ಥೆಗಳಿಂದ ಪ್ರಾಯೋಜಿತ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಹಾಜರುಪಡಿಸದಿರುವುದು **(ಆಡಳಿತ ವಿಭಾಗ)** | – | – |
| 170 | 170 | ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಳ್ಳಲಾದ ತೀರ್ಮಾನಗಳನ್ನು ಸರ್ಕಾರದಿಂದ ಅನುಮೋದನೆ ಪಡೆದಿರುವ ವಿವರಗಳನ್ನು ಹಾಜರುಪಡಿಸದಿರುವುದು **(ಆಡಳಿತ ವಿಭಾಗ)** | – | – |
| 171 | 171 | ವಾರ್ಷಿಕ ದಾಸ್ತಾನು ಪರಿಶೀಲನೆಯ ಕಡತಗಳನ್ನು ತಪಾಸಣೆಗೆ ಹಾಜರುಪಡಿಸದಿರುವುದು **(ಆಡಳಿತ ವಿಭಾಗ)** | – | – |
| 172 | 172 | ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು **(ಜೈನಾಲಜಿ ಮತ್ತು ಪ್ರಾಕೃತ್ ಸ್ನಾತಕೋತ್ತರ ಅಧ್ಯಯನ ವಿಭಾಗ)** | 83,205 | – |
| 173 | 173 | ಆದಾಯ ತೆರಿಗೆ ಬಿಲ್ಲಿನಲ್ಲಿ ಕಟಾಯಿಸಿ ಲೆಕ್ಕಶೀರ್ಷಿಕೆಗೆ ಜಮಾ ಮಾಡಿರುವ ವಿವರ ಹಾಜರುಪಡಿಸದೆ ಇರುವುದು **(ಪುರಷ ವಿದ್ಯಾರ್ಥಿನಿಲಯ ಬ್ಲಾಕ್–2)** | 39,555 | – |
| 174 | 174 | ಬಿ–ಆರ್ ರಿಜಿಸ್ಟರ್ ದಾಖಲು ಇರುವಂತೆ ಬಿಲ್ಲುಗಳನ್ನು ಹಾಜರುಪಡಿಸದೆ ಇರುವುದು **(ವಿದ್ಯಾರ್ಥಿ ಕ್ಷೇಮಪಾಲನಾ)** | 9,75,623 | – |
| 175 | 175 | ಬಿ.ಆರ್ ವಹಿಯಲ್ಲಿ ದಾಖಲಿಸಿರುವಂತೆ ಸಂಬಂಧಪಟ್ಟ ವೋಚರ್ಸ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು **(ಪರೀಕ್ಷಾ ವಿಭಾಗ)** | 82,65,831 | – |
| 176 | 176 | ಪಿ.ಎಸ್.ಎಫ್.ಎಸ್ (PSFS) ಯೋಜನೆಯಡಿ ಭರಿಸಲಾಗಿರುವ ವೆಚ್ಚದ ವಿವರ ಸಲ್ಲಿಸದಿರುವ ಬಗ್ಗೆ **(ಹಣಕಾಸು ವಿಭಾಗ)** | 9,01,29,152 | – |
| 177 | 177 | ವಾಹನಗಳ ಲಾಗ್ ಪುಸ್ತಕಗಳನ್ನು ಒದಗಿಸದಿರುವ ಬಗ್ಗೆ **(ಹಣಕಾಸು ವಿಭಾಗ)** | 37,95,091 | – |
| 178 | 178 | ಪ್ರಶ್ನೆಪತ್ರಿಕೆ ಮುದ್ರಣ/ಸ್ಟೇಷನರಿ ವಸ್ತುಗಳ ಬಿಲ್ಲುಗಳನ್ನು ಹಾಜರುಪಡಿಸದಿರುವ ಬಗ್ಗೆ **(ಹಣಕಾಸು ವಿಭಾಗ)** | 7,57,68,339 | – |
| 179 | 179 | ವಿಶ್ವವಿದ್ಯಾನಿಲಯದ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದ ಕಡತಗಳನ್ನು ಹಾಜರುಪಡಿಸದೆ ಇರುವುದು **(ಹಣಕಾಸು ವಿಭಾಗ)** | 30,84,652 | |
| 180 | 180 | ವಿವಿಧ ಬಗೆಯ ಸಾಮಗ್ರಿಗಳ ಖರೀದಿಗಳಿಗೆ ಸಂಬಂಧಿಸಿದಂತೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು | 51,83,627 | |

| | | | | |
|---|---|---|---|---|
| | | **(ಹಣಕಾಸು ವಿಭಾಗ)** | | |
| 181 | 181 | ಬ್ಯಾಂಕ್ ಖಾತೆಯ ಸಂಖ್ಯೆ:64095498688 potencial for excellence 56 UGC projects/ schemes ಮೇಲೆ ಹೂಡಿಕೆ ಬಡ್ಡಿ ವಿವರ ಹಾಗೂ ಪಾವತಿಸಿರುವ ಬಿಲ್ಲುಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದು **(ಹಣಕಾಸು ವಿಭಾಗ)** | 1,49,87,968 | – |
| 182 | 182 | ಬ್ಯಾಂಕ್ ಖಾತೆ ಸಂಖ್ಯೆ:64098950735 school of planning and architecture ಬ್ಯಾಂಕ್ ಖಾತೆಯಲ್ಲಿ ವೆಚ್ಚ ಮಾಡಿರುವುದಕ್ಕೆ ಸಂಬಂಧಿಸಿದಂತೆ ಪಾವತಿ ವೋಚರ್‌ಗಳನ್ನು (ಬಿಲ್ಲುಗಳನ್ನು) ಪರಿಶೀಲನೆಗೆ ಹಾಜರುಪಡಿಸದೆ ಇರುವುದು **(ಹಣಕಾಸು ವಿಭಾಗ)** | 71,93,577 | – |
| 183 | 183 | ಧನಾದೇಶಗಳನ್ನು ವಿವಿಧ ಸಂಸ್ಥೆಗಳಿಗೆ ಪಾವತಿಸಲಾಗಿರುವ ಹುಂಡಿಗಳಿಗೆ ಪೂರಕ ಲೆಕ್ಕಪತ್ರಗಳನ್ನು ಹಾಜರುಪಡಿಸದೆ ಇರುವುದು **(ಯುವರಾಜ ಕಾಲೇಜು)** | 75,74,859 | – |
| 184 | 184 | University Co-Operative Society ಖಾತೆಗೆ ಸಂಬಂಧಿಸಿದ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಭಾಗಶಃ ಹಾಜರುಪಡಿಸದಿರುವುದು **(ಯುವರಾಜ ಕಾಲೇಜು)** | 3,05,000 | – |
| 185 | 185 | ವೈದ್ಯಕೀಯ ವೆಚ್ಚ ಮರುಭರಿಕೆ ಹುಂಡಿಗೆ ಸಂಬಂಧಿಸಿದ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು **(ಯುವರಾಜ ಕಾಲೇಜು)** | 3,05,754 | – |
| 186 | 186 | CSF ಖಾತೆಗೆ ಸಂಬಂಧಿಸಿದ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು **(ಯುವರಾಜ ಕಾಲೇಜು)** | 2,93,800 | – |
| 187 | 187 | 2016–17ನೇ ಸಾಲಿನ ವಿದ್ಯಾರ್ಥಿಗಳಿಗೆ ವಿತರಿಸಲಾದ ಅಂಕಪಟ್ಟಿ ದಾಸ್ತಾನು ಉಳಿಕೆ ವಿವರ ಹಾಜರುಪಡಿಸದಿರುವುದು **(ಯುವರಾಜ ಕಾಲೇಜು)** | – | – |
| 188 | 188 | ಪಿ.ಹೆಚ್.ಡಿ ವಿಭಾಗದಿಂದ ಅಂಕಪಟ್ಟಿ/ಪದವಿ ಪ್ರಮಾಣಪತ್ರ/ಹಾಲೋಗ್ರಾಂ/Migration certificate/ ಘಟಿಕೋತ್ಸವ ಪ್ರಮಾಣಪತ್ರಗಳನ್ನು ಸ್ವೀಕರಿಸಿದ್ದು, ವಿದ್ಯಾರ್ಥಿಗಳಿಗೆ ವಿತರಿಸಿರುವ ವಿವರ ಹಾಜರುಪಡಿಸದಿರುವುದು **(ಪರೀಕ್ಷಾ ವಿಭಾಗ)** | – | – |
| 189 | 189 | 2016–17ನೇ ಸಾಲಿನ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ವರ್ಕ್ ರಿಜಿಸ್ಟರ್ ಎ.ಬಿ.ಮತ್ತು ಸಿ ರಿಜಿಸ್ಟರ್‌ಗಳನ್ನು ಸಂಪೂರ್ಣ ನಮೂದು ಮಾಡಿ ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರ ಬಗ್ಗೆ **(ಇಂಜನಿಯರಿಂಗ್ ವಿಭಾಗ)** | – | – |
| 190 | 190 | ಶತಮಾನೋತ್ಸವ ಲೆಕ್ಕಶೀರ್ಷಿಕೆಗಳ ಅಡಿ ವೆಚ್ಚದ ಮೊಬಲಗುಗಳಿಗೆ ದಾಖಲಾತಿ/ವೋಚರ್ಸ್ ಹಾಜರುಪಡಿಸದಿರುವುದು (ಹಣಕಾಸು ವಿಭಾಗ) | 26,21,665 | – |
| | | **ಒಟ್ಟು** | **111,46,33,815** | **84,33,586** |

**ಅಪರ ನಿರ್ದೇಶಕರು**
**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ**
**ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು**

**2016–17ನೇ ವರ್ಷದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿರುವ ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿಯ ವಿವರಗಳು.**

| ಕ್ರ.ಸಂ | ಪದನಾಮ ಮತ್ತು ಹೆಸರು | ಸೇವಾ ಅವಧಿ |
|---|---|---|
| 1 | ಕುಲಪತಿಗಳು | ಪ್ರೊ॥ ರಂಗಪ್ಪ.ಕೆ.ಎಸ್<br>ದಿನಾಂಕ:01.04.2016 ರಿಂದ 10.01.2017<br>ಪ್ರೊ॥ ಯಶವಂತ್ ಡೋಂಗ್ರೆ (ವಾಣಿಜ್ಯ ವಿಭಾಗ)<br>ದಿನಾಂಕ:11.01.2017 ರಿಂದ 17.02.2017<br>ಪ್ರೊ॥ ದಯಾನಂದ್ ಮಾನೆ<br>ದಿನಾಂಕ:18.02.2017 ರಿಂದ 31.03.2017 |
| 2 | ಕುಲಸಚಿವರು (ಆಡಳಿತ) | ಪ್ರೊ॥ ಆರ್. ರಾಜಣ್ಣ<br>ದಿನಾಂಕ:01.04.2016 ರಿಂದ 11.06.2016<br>ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್<br>ದಿನಾಂಕ:12.06.2016 ರಿಂದ 31.03.2017 |
| 3 | ಕುಲಸಚಿವರು (ಮೌಲ್ಯಮಾಪನ) | ಪ್ರೊ॥ ಆರ್. ರಾಜಣ್ಣ<br>01.04.2016 ರಿಂದ 31.03.2017 ರವರೆಗೆ<br>ಪ್ರೊ॥ ಸೋಮಶೇಖರ್<br>05.01.2017 ರಿಂದ 31.03.2017 ರವರೆಗೆ |
| 4 | ಹಣಕಾಸು ಅಧಿಕಾರಿಗಳು | ಪ್ರೊ॥ ಮಹದೇವಪ್ಪ<br>01.04.2016 ರಿಂದ 31.03.2017 |
| 9 | ಲೆಕ್ಕಪರಿಶೋಧನಾ ಅವಧಿ | 2016–17 (01.04.2016 ರಿಂದ 31.03.2017) |
| 10 | ಲೆಕ್ಕಪರಿಶೋಧನೆ ಆರಂಭದ ದಿನಾಂಕ | 03.07.2018 |
| 11 | ಲೆಕ್ಕಪರಿಶೋಧನೆ ಮುಕ್ತಾಯದ ದಿನಾಂಕ | 19.01.2019 |
| 12 | ಲೆಕ್ಕ ಪರಿಶೋಧನಾ ತಂಡ | **ಶ್ರೀ/ಶ್ರೀಮತಿ**<br>ಎಂ.ಲೋಕೇಶ್, ಲೆಕ್ಕ ಪರಿಶೋಧನಾಧಿಕಾರಿಗಳು<br>ಸಿ. ನಾಗಯ್ಯ, ಲೆಕ್ಕ ಪರಿಶೋಧನಾಧಿಕಾರಿಗಳು<br>ಬಿ.ಎನ್. ಸುಮಿತ್ರ, ಲೆಕ್ಕ ಪರಿಶೋಧನಾಧಿಕಾರಿಗಳು<br>ಬಸವರಾಜ.ಜಿ.ಎಂ, ಲೆಕ್ಕ ಪರಿಶೋಧನಾಧಿಕಾರಿಗಳು |

| | | |
|---|---|---|
| | | ಎನ್.ಹೆಚ್.ನಾಗೇಶ್, ಲೆಕ್ಕ ಪರಿಶೋಧನಾಧಿಕಾರಿಗಳು<br>ರಮೇಶ, ಲೆಕ್ಕಾಧೀಕ್ಷಕರು<br>ಸಿ. ನಿರ್ಮಲಕುಮಾರಿ, ಲೆಕ್ಕಾಧೀಕ್ಷಕರು<br>ಸುಧಾಕರ್.ಎನ್.ಬಿ, ಲೆಕ್ಕಾಧೀಕ್ಷಕರು<br>ಆರ್.ಮಂಜುನಾಥ್, ಲೆಕ್ಕಾಧೀಕ್ಷಕರು<br>ಶಿವಕುಮಾರ್.ಎಸ್.ಎಸ್. ಪರೀಕ್ಷತಾ ಸಹಾಯಕನಿಯಂತ್ರಕರು<br>ನಂದಿನಿ.ಎನ್.ಡಿ, ಪರೀಕ್ಷತಾ ಸಹಾಯಕನಿಯಂತ್ರಕರು<br>ವಿದ್ಯಾ.ಹೆಚ್, ಪರೀಕ್ಷತಾ ಸಹಾಯಕನಿಯಂತ್ರಕರು<br>ಭರತ್.ಕೆ.ಎ, ಪರೀಕ್ಷತಾ ಸಹಾಯಕನಿಯಂತ್ರಕರು<br>ಆನಂದ್.ಕೆ, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಭಗತ್‌ಬಾಪಟ್, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಲೋಕೇಶ್ವರಿ.ಕೆ.ಎಸ್, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಪ್ರತಿಭಾ.ಎಂ.ಎಸ್, ಪರೀಕ್ಷತಾ ಲೆಕ್ಕಪರಿಶೋಧನಾಧಿಕಾರಿ<br>ಕೃಷ್ಣ. ಆರ್, ಲೆಕ್ಕ ಸಹಾಯಕರು<br>ಪ್ರಕಾಶ್.ಎಂ, ಲೆಕ್ಕ ಸಹಾಯಕರು<br>ಹರೀಶ, ಲೆಕ್ಕ ಸಹಾಯಕರು<br>ಬಾಲರಾಜ, ಲೆಕ್ಕ ಸಹಾಯಕರು<br>ಅಭಿಲಾಷ್, ಲೆಕ್ಕ ಸಹಾಯಕರು<br>ನಾಗೇಂದ್ರ.ಹೆಚ್.ಕೆ, ಲೆಕ್ಕ ಸಹಾಯಕರು<br>ಸರ್ವಮಂಗಳಮ್ಮ.ಎನ್, ಲೆಕ್ಕ ಸಹಾಯಕರು<br>ದಿವ್ಯ.ಎನ್, ಲೆಕ್ಕ ಸಹಾಯಕರು<br>ಸೌಮ್ಯ.ಹೆಚ್.ಎಸ್, ಲೆಕ್ಕ ಸಹಾಯಕರು |
| 13 | ಅಪರ ನಿರ್ದೇಶಕರು | ಶ್ರೀಮತಿ ಬಿ.ಜಿ.ಇಂದಿರಮ್ಮ, ಕೆ.ಎಸ್.ಎ.ಎಸ್. |
| 14 | ಲೆಕ್ಕ ಪರಿಶೋಧನಾ ವರದಿಯ ಪುನರ್ ಪರಿಶೀಲನಾಧಿಕಾರಿಗಳು | ಶ್ರೀಮತಿ ಬಿ.ಜಿ.ಇಂದಿರಮ್ಮ, ಕೆ.ಎಸ್.ಎ.ಎಸ್.<br>ಅಪರ ನಿರ್ದೇಶಕರು |
| 15 | ಲೆಕ್ಕ ಪರಿಶೋಧನಾ ವರದಿಯ ಪುನರ್ ಪರಿಶೀಲನಾ ದಿನಾಂಕ | 21.01.2019 |

| ಕ್ರ.ಸಂ | ಕಂಡಿಕೆವಾರು ಆಕ್ಷೇಪಣೆ | ಉತ್ತರ |
|---|---|---|
| 1 | **ಹಿಂದಿನ ವರ್ಷದ ಲೆಕ್ಕ ತಪಾಸಣಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿಯ ಬಗ್ಗೆ :–**<br><br>1988–89 ರಿಂದ 2015–2016ನೇ ವರ್ಷಗಳವರೆಗೆ ಕಂಡುಬಂದ ಆಕ್ಷೇಪಣೆ ಮತ್ತು ವಸೂಲಾತಿಗಳ ತೀರುವಳಿ ಹಾಗೂ ಬಾಕಿ ಉಳಿದಿರುವ ಮೊತ್ತದ ವರ್ಷವಾರು ವಿವರವನ್ನು **ಅನುಬಂಧ–1, 1(ಎ), 1(ಬಿ)**ಗಳಲ್ಲಿ ನೀಡಲಾಗಿದೆ. ಸದರಿ ಅನುಬಂಧದ ರೀತ್ಯಾ **ಆಕ್ಷೇಪಣೆ ಮೊತ್ತ ರೂ.340,28,21,208.85/–ಗಳು** ಹಾಗೂ **ವಸೂಲಾತಿ ಮೊತ್ತ ರೂ.46,50,72,471.48/–ಗಳಾಗಿರುತ್ತದೆ.** ಬಾಕಿ ಇರುವ ವಸೂಲಾತಿ ಹಾಗೂ ಆಕ್ಷೇಪಣೆ ಕಂಡಿಕೆಗಳ ತ್ವರಿತ ಇತ್ಯರ್ಥದ ಬಗ್ಗೆ ಕ್ರಮಜರುಗಿಸಿ ಅನುಪಾಲನಾ ವರದಿ ಸಲ್ಲಿಸುವುದು. ಕಂಡಿಕೆಗಳು ತೀರುವಳಿಯಾಗದಿದ್ದಲ್ಲಿ ವರ್ಷದಿಂದ ವರ್ಷಕ್ಕೆ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತವು ಅಧಿಕವಾಗುತ್ತಿದ್ದು, ಇದು ವಿಶ್ವವಿದ್ಯಾನಿಲಯದ ಘನತೆಗೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ಆದ್ದರಿಂದ ಈ ಬಗ್ಗೆ ಕ್ರಮ ಅತ್ಯಗತ್ಯವಾಗಿದೆ. | ಹಿಂದಿನ ಸಾಲುಗಳಿಂದ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ಬಗ್ಗೆ ಕಂಡಿಕೆವಾರು ಉತ್ತರ ಸಲ್ಲಿಸುವ ಮುಲಕ ಅವುಗಳ ತೀರುವಳಿಗಾಗಿ ಅಗತ್ಯ ಕ್ರಮವಹಿಸಲಾಗಿದೆ. |

| | | |
|---|---|---|
| **2** | <u>**ವಿಶ್ವವಿದ್ಯಾಲಯದ ವಿವಿಧ ಅಂಗ ಸಂಸ್ಥೆಗಳ ಆಕ್ಷೇಪಣೆ ಮತ್ತು ವಸೂಲಾತಿ ವಿವರದ ಬಗ್ಗೆ :–**</u><br><br>2016–17ನೇ ಆರ್ಥಿಕ ವರ್ಷದಲ್ಲಿ ವಿಶ್ವವಿದ್ಯಾಲಯದ ವಿವಿಧ ಅಂಗ ಸಂಸ್ಥೆಗಳ ಲೆಕ್ಕ ತಪಾಸಣಾ ಕಾರ್ಯವನ್ನು ಕೈಗೊಳ್ಳಲಾಗಿದ್ದು, <u>**ಅನುಬಂಧ–2ರಲ್ಲಿ**</u> ಸೂಚಿಸಲಾದ **ಆಕ್ಷೇಪಣೆ ಮೊತ್ತ ರೂ.1,89,22,28,467/–ಗಳು ಮತ್ತು ವಸೂಲಾತಿ ಮೊತ್ತ ರೂ.1,01,96,316.78/–ಗಳ** ವಿವರಗಳನ್ನು ನೀಡಲಾಗಿದೆ. ಬಾಕಿ ಇರುವ ವಸೂಲಾತಿ ಹಾಗೂ ಆಕ್ಷೇಪಣೆ ಕಂಡಿಕೆಗಳ ತ್ವರಿತ ಇತ್ಯರ್ಥದ ಬಗ್ಗೆ ಕ್ರಮಜರುಗಿಸಿ ಅನುಪಾಲನಾ ವರದಿ ಸಲ್ಲಿಸುವುದು. | ವಿಶ್ವವಿದ್ಯಾನಿಲಯ ವಿವಿಧ ಅಂಗ ಸಂಸ್ಥೆಗಳಲ್ಲಿ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿಗಳ ಬಗ್ಗೆ ಇರುವ ಆಕ್ಷೇಪಣೆ ಮತ್ತು ವಸೂಲಾತಿಗಳ ಬಗ್ಗೆ ಜರೂರು ಕ್ರಮ ವಹಿಸಿ ಕಂಡಿಕೆವಾರು ಉತ್ತರ ಸಲ್ಲಿಸುವುದರೊಂದಿಗೆ ಅವುಗಳ ತೀರುವಳಿಗಾಗಿ ಅಗತ್ಯ ಕ್ರಮವಹಿಸುವಂತೆ ಎಲ್ಲಾ ಅಂಗ ಸಂಸ್ಥೆಗಳಿಗೂ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. |

| ಭಾಗ-2<br>**ವಿಶ್ವವಿದ್ಯಾನಿಲಯದ ಆಡಳಿತ ನಿರ್ವಹಣೆ** | | |
| --- | --- | --- |
| 3 | **ವಾರ್ಷಿಕ ಲೆಕ್ಕ ತಪಾಸಣಾ ವರದಿ ಜಾರಿಗೊಳಿಸಿರುವುದು :–**<br><br>ಕರ್ನಾಟಕ ವಿಶ್ವವಿದ್ಯಾಲಯದ ಕಾಯಿದೆ 2000ರ ಅಧಿನಿಯಮ 47 (3)ರಂತೆ ಮೈಸೂರು ವಿಶ್ವವಿದ್ಯಾಲಯದ 2016–17ನೇ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಜಾರಿಗೊಳಿಸಿದೆ.<br>2016–17ನೇ ವಾರ್ಷಿಕ ಲೆಕ್ಕತನಿಖಾ ವರದಿಯನ್ನು ವಿಶ್ವವಿದ್ಯಾಲಯದ ಸ್ಟ್ಯಾಚ್ಯೂಟ್, ಆರ್ಡಿನೆನ್ಸ್‌ಗಳು, ರೆಗ್ಯುಲೇಷನ್ಸ್ ಹಾಗೂ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ, ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ ಮತ್ತು ಆರ್ಥಿಕ ಸಂಹಿತೆ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ನಿಯಮಗಳು 2000ರಲ್ಲಿ ಅಡಕವಾಗಿರುವ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಈ ವರದಿಯನ್ನು ಸಿದ್ಧಪಡಿಸಲಾಗಿದೆ.<br><br>ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಲಾಗಿರುವ ಅಂಶಗಳಿಗೆ ವಿಶ್ವವಿದ್ಯಾಲಯದ ಕಾಯಿದೆ 2000ರ ಅಧಿನಿಯಮ 47 (4) ರ ಪ್ರಕಾರ ಕ್ರಮಕೈಗೊಳ್ಳಲಾಗಿದೆ. | ಪ್ರಸಕ್ತ ಸಾಲಿನ ವರದಿಯಲ್ಲಿ ಸೂಚಿಸಲಾಗಿರುವ ಅಂಶಗಳಿಗೆ ವಿಶ್ವವಿದ್ಯಾನಿಲಯದ ಕಾಯಿದೆ 2000ರ ಅಧಿನಿಯಮ 47(4) ರ ಪ್ರಕಾರ ಅಗತ್ಯ ಕ್ರಮವಹಿಸಿಲಾಗಿದೆ. |

| | | |
|---|---|---|
| **4** | **<u>ವಾರ್ಷಿಕ ಲೆಕ್ಕಪತ್ರವು ಅನುಮೋದನೆಯಾಗಿರುವ ಬಗ್ಗೆ :–</u>**<br><br>ಕರ್ನಾಟಕ ವಿಶ್ವವಿದ್ಯಾನಿಲಯ ಕಾಯಿದೆ 2000ರ ಪ್ರಕರಣ 47 3) ರಂತೆ ಸಿಂಡಿಕೇಟ್‌ನಿಂದ ಅಂಗೀಕೃತಗೊಂಡ 2016–17ನೇ ವರ್ಷದ ವಾರ್ಷಿಕ ಲೆಕ್ಕಪತ್ರದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿದೆ. ವರದಿಯನ್ನು **<u>ಅನುಬಂಧ–3 ರಲ್ಲಿ</u>** ಲಗತ್ತಿಸಿದೆ.<br><br>ವಾರ್ಷಿಕ ಲೆಕ್ಕ ಪತ್ರವು ದಿನಾಂಕ:17.07.2017 ರಂದು ಹಣಕಾಸು ಸಮಿತಿಯಿಂದ, ದಿನಾಂಕ:17.07.2017 ರಂದು ವಿದ್ಯಾವಿಷಯಕ ಪರಿಷತ್‌ನಿಂದ ಹಾಗೂ ದಿನಾಂಕ:03.08.2017 ರಂದು ಸಿಂಡಿಕೇಟ್ ಸಮಿತಿಯಿಂದ ಅನುಮೋದನೆಯಾಗಿರುತ್ತದೆ. ಅನುಮೋದಿತ ಪ್ರತಿಗಳನ್ನು ಲಗತ್ತಿಸಿದೆ. | ಕಂಡಿಕೆ 4 ರಲ್ಲಿ ಆಕ್ಷೇಪಿಸಿ ಸೂಚಿಸಿರುವಂತೆ ನಿರ್ವಹಿಸಲು ಕ್ರಮವಹಿಸಿದ್ದು ಮಾಹಿತಿ ಮತ್ತು ದಾಖಲಾತಿಗಳನ್ನು ಮುಂದಿನ ಲೆಕ್ಕ ತನಿಖೆಗೆ ಹಾಜರು ಪಡಿಸಲಾಗುವುದೆಂದು ನಿವೇದಿಸಲಾಗಿದೆ. |

| | | |
|---|---|---|
| **5** | **<u>ವಿಶ್ವವಿದ್ಯಾನಿಲಯದ ನಿಧಿ :-</u>**<br><br>ಕರ್ನಾಟಕ ವಿಶ್ವವಿದ್ಯಾನಿಲಯ ಕಾಯಿದೆ 2000ರ ಅಧಿನಿಯಮ 46ರ ಪ್ರಕಾರ ತನ್ನದೇ ಆದ ನಿಧಿಯನ್ನು ಹೊಂದಿದ್ದು, ಈ ನಿಧಿಗೆ ಸಂಬಂಧಿಸಿದ ಬ್ಯಾಂಕ್ ಖಾತಾ ವಿವರ, ರಾಜ್ಯ ಸರ್ಕಾರದಿಂದ ಬಂದಿರುವ ಅನುದಾನ, ಯು.ಜಿ.ಸಿ ಅಭಿವೃದ್ಧಿ ಶುಲ್ಕಗಳು ಮತ್ತು ಇತರೆ ಅನುದಾನಗಳ ಬಗ್ಗೆ ಬ್ಯಾಂಕಿನಲ್ಲಿ 34 ಯೋಜನೆಗಳ ಸ್ವೀಕೃತಿ ಮತ್ತು ಪಾವತಿ ವಿವರಗಳನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಸಲ್ಲಿಸಬೇಕಾಗಿರುತ್ತದೆ. ಕರ್ನಾಟಕ ವಿಶ್ವವಿದ್ಯಾನಿಲಯದ ಕಾಯ್ದೆ ಅಧಿ ನಿಯಮ-2000ರಲ್ಲಿ ಅಧ್ಯಾಯ-VI ನಿಯಮ-46 ರಂತೆ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗುವ ಕೇಂದ್ರ ಸರ್ಕಾರದ ಅನುದಾನ/ರಾಜ್ಯ ಸರ್ಕಾರದ ಅನುದಾನ/ಕೊಡುಗೆಗಳು/ದತ್ತಿನಿಧಿ/ವಿವಿಧ ಶುಲ್ಕ/ವಿದೇಶಿ ಸರ್ಕಾರ/ಸಂಸ್ಥೆಗಳಿಂದ ಸ್ವೀಕೃತ ಅನುದಾನಗಳು ದೇಣಿಗೆ/ಇತರೆ ಸಂಪನ್ಮೂಲಗಳ ಮೊಬಲಗು ವಿಶ್ವವಿದ್ಯಾನಿಲಯದ ನಿಧಿಯಾಗಿದ್ದು, ವಿಶ್ವವಿದ್ಯಾನಿಲಯದಲ್ಲಿ ವಿವಿಧ ಯೋಜನೆ/ಪೀಠಗಳು ಹಾಗೂ ಯೋಜನಾ ಕಾರ್ಯಕ್ರಮಗಳನ್ನೊಳಗೊಂಡಂತೆ, ಸಮಗ್ರ ನಿಧಿಗಳನ್ನು ಮಾಡಿ ಈ ನಿಧಿಯನ್ನು Sheduled Bank ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತೊಡಗಿಸಬೇಕಾಗಿರುತ್ತದೆ. | ವಿಶ್ವವಿದ್ಯಾನಿಲಯದ ಸೂಚನೆಗಳನ್ವಯ ಅಗತ್ಯ ಕ್ರಮವಹಿಸಲಾಗಿದೆ. |

| | | |
|---|---|---|
| 6 | **<u>ಮೈಸೂರು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು ಹೊಂದಿರುವ ಆರ್ಥಿಕ ಪ್ರತ್ಯಾಧಿಕಾರ (Delegation of Financial/Technical powers) ಆದೇಶ ಒದಗಿಸಿಲ್ಲದಿರುವುದು:– (ಹಣಕಾಸು ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು/ಇಲಾಖಾ ಮುಖ್ಯಸ್ಥರುಗಳು/ಡ್ರಾಯಿಂಗ್ ಅಧಿಕಾರಿಗಳು/ಸ್ನಾತಕೋತ್ತರ ವಿಭಾಗ/ ಕೇಂದ್ರದ/ವಿಭಾಗದ ಮುಖ್ಯಸ್ಥರುಗಳು ಇತರೆ ಅಧಿಕಾರಿಗಳು ಹೊಂದಿರುವ ಆರ್ಥಿಕ ಪ್ರತ್ಯಾಧಿಕಾರದ ಅನುಮೋದನೆ ಪ್ರತಿಯನ್ನು (Delegation of Financial powers) ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಯಾವ ಯಾವ ಅಧಿಕಾರಿಗಳು ತಮ್ಮ ಅಧಿಕಾರದ ಮಿತಿಯಲ್ಲಿ ಅಥವಾ ಅಧಿಕಾರ ಮಿತಿ ಮೀರಿ ವೆಚ್ಚ ಮಾಡಿದ್ದಾರೆ ಎಂಬುದನ್ನು ವರದಿಯಲ್ಲಿ ದಾಖಲಿಸಲು ಸಾಧ್ಯವಾಗಿರುವುದಿಲ್ಲ. | ವಿಶ್ವವಿದ್ಯಾನಿಲಯವು ಕರ್ನಾಟಕ ವಿಶ್ವವಿದ್ಯಾನಿಲಯಗಳ ಖಾಯ್ದೆ 2000ರಲ್ಲಿನ ನಿಯಮಗಳಂತೆ ಕಾರ್ಯನಿರ್ವಹಿಸುತ್ತಿದ್ದು ಕುಲಸಚಿವರು, ಕುಲಸಚಿವರು (ಪರೀಕ್ಷಾಂಗ) ಹಾಗೂ ಹಣಕಾಸು ಅಧಿಕಾರಿಗಳು ಸ್ಟಾಚುಟರಿ ಅಧಿಕಾಗಳಾಗಿರುತ್ತಾರೆ. ಇದರನ್ವಯ ಕುಲಸಚಿವರು ಆಡಳಿತವ್ಯವಹಾರಗಳನ್ನು: ಕುಲಸಚಿವರು (ಪರೀಕ್ಷಾಂಗ) ರವರು ವಿಶ್ವವಿದ್ಯಾನಿಲಯದ ಎಲ್ಲಾ ಪರೀಕ್ಷಾ ಚಟುವಟಿಕೆಗಳು; ಹಾಗೂ ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾನಿಲಯದ ಡ್ರಾಯಿಂಗ್ ಅಧಿಕಾರಿಯಾಗಿರುತ್ತದೆ.<br>ಕೆಲವೊಂದು ಯು.ಜಿ.ಸಿ ಅನಿದಾನದಡಿ ಕಾರ್ಯನಿರ್ವಹಿಸುತ್ತರುವ ಪ್ರಾಧಿಕಾರಗಳನ್ನು ಹೊರತುಪಡಿಸಿ ಉಳಿದೆಲ್ಲಾ ಹಣಕಾಸು ವ್ಯಾವಹಾರಗಳಿಗೂ ಹಣಕಾಸು ಅಧಿಕಾರಿಗಳೇ ಮುಖ್ಯಸ್ಥರಾಗಿರುತ್ತಾರೆ.<br>ಸರ್ಕಾರದ ಇಲಾಖೆಗಳಲ್ಲಿರುವಂತೆ ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ; ವಿಭಾಗ ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳಾಗಿ ವಿಶ್ವವಿದ್ಯಾನಿಲಯದಲ್ಲಿ ವಿಂಗಡಣೆಗಳಿರುವುದಿಲ್ಲ ಎಂಬ ಮಾಹಿತಿಯನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.<br>ತಾಂತ್ರಿಕ ಮಂಜೂರಾತಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದಲ್ಲಿ ಕಟ್ಟಡ ಸಮಿತಿ, ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಗಳ ನಿರ್ಣಯಗಳನ್ನನುಸರಿಸಿ ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ. ಕಟ್ಟಡ ಸಮಿತಿಯಲ್ಲಿ ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರರು; ವಿದ್ಯುಚ್ಛಕ್ತಿ ನಗಮದ ಅಧೀಕ್ಷಕ ಅಭಿಯಂತರರು ಸದಸ್ಯರಾಗಿದ್ದು; ತಾಂತ್ರಿಕ ವಿಷಯಗಳಲ್ಲಿ ಸಲಹೆ, ಸೂಚನೆಗಳನ್ನು ನೀಡುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿನ ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತರರು, ಮುಖ್ಯ ಇಂಜಿನಿಯರ್ ರವರು ಹಾಗೂ ಸರ್ಕಾರಕ್ಕೆ ಇರುವ ಅಧಿಕಾರವ್ಯಾಪ್ತಿಯನ್ನು ವಿಶ್ವವಿದ್ಯಾನಿಲಯದ |

| | | |
|---|---|---|
| | | ಕಾರ್ಯಪಾಲಕ ಅಭಿಯಂತರರು, ಹಣಕಾಸು ಸಮಿತಿ, ಕಟ್ಟಡ ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ವ್ಯಾಪ್ತಿಗೆ ಬರುತ್ತದೆ. ವಿಶ್ವವಿದ್ಯಾನಿಲಯದ ದಿನಾಂಕ:30.09.1977ರ ಅದೇಶದ ಪ್ರತಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ. |

| 7 | **ಆಯವ್ಯಯ ಅಂದಾಜು** | |
|---|---|---|

## ಆಯವ್ಯಯ ಅಂದಾಜು

**2016–17ನೇ ವರ್ಷದ ಮೂಲ ಆಯವ್ಯಯ ಅಂದಾಜಿನ ಋಣಾತ್ಮಕ ಅಂತಿಮ ಶಿಲ್ಕು ಕುರಿತು**

2016–17ನೇ ವರ್ಷದ ಮೈಸೂರು ವಿಶ್ವವಿದ್ಯಾನಿಲಯದ ಮೂಲ ಆಯವ್ಯಯ ಹಾಜರುಪಡಿಸಿರುವ ಪ್ರತಿಯ ಆಧಾರದ ಮೇಲೆ ಈ ಕೆಳಕಂಡ ವಿವರದಂತೆ ಆರ್ಥಿಕ ಪರಿಸ್ಥಿತಿಯನ್ನು ನೀಡಲಾಗಿದೆ.

| Iಆಯವ್ಯಯ ತಯಾರಿಕೆ | | | II ಪರಿಷ್ಕೃತ ಆಯವ್ಯಯ | |
|---|---|---|---|---|
| 1 | 2015–16ರ ಪ್ರಕಾರ ಆಯವ್ಯಯ ಅಂದಾಜಿನ ಪ್ರಕಾರ ಅಂತಿಮ ಶಿಲ್ಕು | (–) 405769602 | 01.04.2016ಕ್ಕೆ ಪ್ರಾರಂಭಿಕ ಶಿಲ್ಕು | 24,15,15,078 |
| 2 | 2016–17ನೇ ವರ್ಷದ ಆಯವ್ಯಯ ಅಂದಾಜು ಆರಂಭ ಶಿಲ್ಕು | (–) 217966342 | 2016–17ನೇ ಸಾಲಿನ ಜಮೆ | 246,43,12,000 |
| 3 | 2016–17ನೇ ವರ್ಷದ ನಿರೀಕ್ಷಿತ ಸ್ವೀಕೃತಿ ಮೊಬಲಗು | 1886346568 | **ಒಟ್ಟು** | **270,58,27,078** |
| 4 | 2016–17ನೇ ವರ್ಷದ ವೆಚ್ಚ | 2342600000 | 2016–17ನೇ ಸಾಲಿನ ವೆಚ್ಚ | 233,425,000 |
| 5 | 2016–17ನೇ ವರ್ಷದ ಅಂತ್ಯಕ್ಕೆ ಅಂತಿಮ ಶಿಲ್ಕು | (–) 456254342 | 31.03.2017ಕ್ಕೆ ಅಂತಿಮ ಶಿಲ್ಕು | 37,14,02,078 |

I) ವಿವರದಲ್ಲಿ ತಿಳಿಸಿರುವಂತೆ 2016–17ನೇ ವರ್ಷದ ಅಯ–ವ್ಯಯವನ್ನು ಪರಿಶೀಲಿಸಿದಾಗ 2015–16ನೇ ಸಾಲಿನ ಅಂತಿಮ ಶಿಲ್ಕು ರೂ.45,62,54,342 ಆಗಿದ್ದು, 2016–17ನೇ ಸಾಲಿಗೆ ಪ್ರಾರಂಭ ಶಿಲ್ಕಿಗೆ ರೂ.21,79,66,342/–ಗಳನ್ನು ತೆಗೆದುಕೊಳ್ಳಲಾಗಿದೆ. ವ್ಯತ್ಯಾಸ ರೂ.23,82,88,000/–ಗಳನ್ನು ಯಾವ ಕಾರಣಕ್ಕಾಗಿ ಆರಂಭ ಶಿಲ್ಕಿನಲ್ಲಿ ತೋರಿಸಲಾಗಿರುವುದಿಲ್ಲ. ಹಾಗೂ ಈ ಋಣಾತ್ಮಾಕ ಶಿಲ್ಕುಗಳನ್ನು ಯಾವ ಅಂಶದ ಮೇಲೆ ತೆಗೆದುಕೊಳ್ಳಲಾಗಿದೆ ಎಂಬ ಬಗೆಗಿನ ವಿವರಣೆ ನೀಡಲು ತಿಳಿಸಲಾಗಿದೆ.

ವಿಶ್ವವಿದ್ಯಾನಿಲಯದಲ್ಲಿ ಯೋಜನೇತರ ಶೀರ್ಷಿಯಡಿ ಮಂಜೂರಾತಿಯಾದ ಹುದ್ದೆಗಳಿಗೆದುರಾಗಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಬಳ.ಭತ್ಯೆ ಇತ್ಯಾಧಿ ಗಳಿಗೆ ಪೂರ್ಣ ಪ್ರಮಾಣದಲ್ಲಿ ಅನುದಾನವನ್ನು ನಿರೀಕ್ಷಿಸಿ ಅಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳಲಾಗುತ್ತಿದೆ. ಆದರೆ ಸರ್ಕಾರದಿಂದ ನಿರೀಕ್ಷಿತ ಮೊತ್ತ ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಆಗುವುದಲ್ಲ ಅಲ್ಲದೆ ತಾತ್ಕಾಲಿಕ ಭೋಧಕೇತರ ನೌಕರರು ಮತ್ತು ಅತಥಿ ಉಪನ್ಯಾಸಕರ ಸಂಭಾವನೆಗಳಿಗೆ ಸರ್ಕಾರದಿಂದ ಅನುದಾನಗಳನ್ನು ಕೋರಲಾಗುತ್ತಿಲ್ಲ. ವಿಶ್ವವಿದ್ಯಾನಿಲಯದ ಅಂತರಿಕ ಸಂಪನ್ಮೂಲದಿಂದಲೇ ಭರಿಸಲಾಗುತ್ತಿದೆ ಇವೆಲ್ಲವನ್ನೂ ಒಟ್ಟಿಗೆ ಸೇರಿಸಿ ಅಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳ ಬೇಕಾಗಿರುವದರಿಂದ ಅಂದಾಜಿನಲ್ಲಿ ಋಣಾತ್ಮಕ ಅಂತಿಮ ಶಿಲ್ಕು ಸಂಭವಿಸುವುದು ಸಹಜವಾಗಿರುತ್ತದೆ ಈ ಋಣಾತ್ಮಕ ಅಂತಿಮ ಶಿಲ್ಕು ಅನ್ನು ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯದ ಬೇರೆ ಬೇರೆ ಶಿರ್ಷಿಕೆಗಳಲ್ಲಿ ಖರ್ಚಾಗದೇ ಉಳಿದಿರುವ ಮೊತ್ತಗಳನ್ನು ಸಂಬಳ ಶೀರ್ಷಿಕೆಗೆ ವರ್ಗಾಯಿಸಿಕೊಳ್ಳುವ ಮೂಲಕ ಋಣಾತ್ಮಕವನ್ನು ಸರಿಪಡಿಸಿಕೊಳ್ಳಲಾಗುತ್ತಿದೆ.

ಆದಾಗ್ಯೂ ಆಯಾ ಸಾಲಿನ ಒಟ್ಟಾರೆ ಅಯವ್ಯಯದಲ್ಲಿ ಮಾಡಿಕೊಳ್ಳಲಾದ ಅವಕಾಶಗಳಿಗೆ ಮಾಡದಂತೆ ಖರ್ಚುಗಳನ್ನು ಭರಿಸಲಾಗುತ್ತಿದೆ ಎಂಬ ವಿಚಾರವನ್ನು ನಿವೇಧಿಸಿದೆ.

| | | |
|---|---|---|
| | **ವಾರ್ಷಿಕ ಲೆಕ್ಕದ ಪ್ರಕಾರ ಆರಂಭ ಶಿಲ್ಕು ರೂ.2,64,31,00,959/–ಗಳು ಆ ವರ್ಷದ ಸ್ವೀಕೃತಿ ರೂ.8,30,85,57,853/–ಆಗಿದ್ದು ಒಟ್ಟು ರೂ.10,95,16,58,812/– ಸ್ವೀಕೃತಿಗಳಿದ್ದು, ಇದರಲ್ಲಿ ವೆಚ್ಚ 8,01,17,52,002/–ತೋರಿಸಲಾಗಿದೆ.** ಆದರೆ ವಾಸ್ತವಿಕವಾಗಿ ವಾರ್ಷಿಕ ಲೆಕ್ಕ ಹಾಗೂ ಆಯವ್ಯಯದ ಅಂಕಿ ಅಂಶಗಳಿಗೆ ಅಗಾಧವಾದ ವ್ಯತ್ಯಾಸವಿದ್ದು, ನಿಖರವಾದ ಅಂಕಿ ಆಂಶಗಳನ್ನು ಆಯವ್ಯಯ ಮತ್ತು ವಾರ್ಷಿಕ ಲೆಕ್ಕದಲ್ಲಿ ತೋರಿಸದೆ ಇರುವುದು ಕಂಡುಬಂದಿರುತ್ತದೆ. ಇದು ಆರ್ಥಿಕ ಅಶಿಸ್ತಿನ ಪರಿಣಾಮ ಎಂಬುದು ಗಮನಾರ್ಹವಾಗುತ್ತದೆ.<br><br>ಅಯವ್ಯಯದ ಲೆಕ್ಕಶೀರ್ಷಿಕೆಗಳಿಗೂ ಮತ್ತು ವಾರ್ಷಿಕ ಲೆಕ್ಕದಲ್ಲಿನ ಲೆಕ್ಕ ಶೀರ್ಷಿಕೆ ಸ್ವೀಕೃತಿ ಮತ್ತು ವೆಚ್ಚಗಳಿಗೆ ಸಂಬಂಧಿಸಿದ ಆಯವ್ಯಯದಲ್ಲಿ ತೋರಿಸಿರುವ ಲೆಕ್ಕಶೀರ್ಷಿಕೆಗಳನ್ನು ವಾರ್ಷಿಕ ಲೆಕ್ಕಶೀರ್ಷಿಕೆಗಳನ್ನು ತೋರಿಸಿ ಋಣಾತ್ಮಕ ಶಿಲ್ಕು ಇರುವುದರ ಬಗ್ಗೆ ವೆಚ್ಚ ಮಾಡಿರುವುದರ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದಿರುವ ವಿವರ ಒದಗಿಸಲು ವಿಚಾರಣೆ ಸಂಖ್ಯೆ:21/2018–19 ದಿನಾಂಕ:12.07.2018 ಹಾಗೂ ಪತ್ರ ಸಂಖ್ಯೆ:ಅನಿ/ಪ್ರಾಕಮ್ಯೆ/ಲೆತವ/ಜ್ಞಾಪನ/2018–19/2017–18 ಪತ್ರ ಬರೆಯಲಾಗಿದ್ದು, ಇದುವರೆವಿಗೂ ಯಾವುದೇ ರೀತಿಯ ದಾಖಲಾತಿ ಒದಗಿಸದೆ ವಿವರಣೆ ನೀಡದೆ ಮಾಡಿರುವ ಋಣಾತ್ಮಕ ಮೊತ್ತದ ವೆಚ್ಚವು ಅನಧಿಕೃತ ವೆಚ್ಚವೆಂದು ಲೆಕ್ಕಪರಿಶೋಧನೆ ಅಭಿಪ್ರಾಯಿಸಿದೆ.<br><br>ಆಂತರಿಕ ವರ್ಗಾವಣೆ (Contra entry) ಗಳನ್ನು ಪ್ರತಿ ಸ್ವೀಕೃತಿ ಹಾಗೂ ಪ್ರತಿ ವೆಚ್ಚಗಳಲ್ಲಿ ತೆಗೆದುಕೊಂಡು ವಾಸ್ತವ ಸ್ವೀಕೃತಿ ಹಾಗೂ ವೆಚ್ಚಕ್ಕಿಂತ ಹೆಚ್ಚಿನ ಮೊಬಲಗನ್ನು ತೋರಿಸಿರುವುದು ಕಂಡುಬಂದಿರುತ್ತದೆ. ಇದರಿಂದಾಗಿ ವಾರ್ಷಿಕ ಲೆಕ್ಕವನ್ನು ಪರಿಶೀಲಿಸಿ ದೃಢೀಕರಿಸುವುದು ಸಾಧ್ಯವಾಗಿರುವುದಿಲ್ಲ.<br><br>ಆಯ ವ್ಯಯದಲ್ಲಿ ಕೇವಲ ವೇತನ ಮತ್ತು ಭತ್ಯೆಗಳಿಗೆ ಮಾತ್ರ ಸಂಬಂಧಿಸಿದಂತೆ ಯೋಜನೇತರ ಮೊತ್ತ ತೋರಿಸಲಾಗುತ್ತಿದ್ದು, ಯೋಜನೆ ಲೆಕ್ಕಶೀರ್ಷಿಕೆಗಳ ಮತ್ತು ಯೋಜನೆ ಕಾರ್ಯಕ್ರಮಗಳ ಮತ್ತು ಪೀಠಗಳಿಗೆ ಸಂಬಂಧಿಸಿದ ಸ್ವೀಕೃತಿ ಮತ್ತು ವೆಚ್ಚಗಳನ್ನು ಆಯವ್ಯಯದಲ್ಲಿ ತೋರಿಸಿರುವುದಿಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯ ಕಾಯಿದೆ | |

ಅನ್ವಯ ಯಾವುದೇ ಮೂಲಗಳಿಂದ ಸಂಗ್ರಹವಾದ ಮೊಬಲಗು ವಿಶ್ವವಿದ್ಯಾನಿಲಯದ ಲೆಕ್ಕಕ್ಕೆ ತೆಗೆದುಕೊಂಡು ನಂತರ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ವೆಚ್ಚ ಮಾಡಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದ ಸಮಗ್ರ ಆಯವ್ಯಯ ನಿರೀಕ್ಷಿತ ಸ್ವೀಕೃತಿ ಮತ್ತು ನಿರೀಕ್ಷಿತ ವೆಚ್ಚವನ್ನು ಸಿದ್ದಪಡಿಸಿ ಅಸಾಧಾರಣ ಸ್ವೀಕೃತಿ ಮತ್ತು ವೆಚ್ಚಗಳು ಸಾಲ ಮತ್ತು ಠೇವಣಿ ಒಳಗೊಂಡಂತೆ ಆಯವ್ಯಯ ಸಿದ್ದಪಡಿಸಬೇಕಿದ್ದು, ಸಮರ್ಪಕವಾಗಿ ನಿಖರವಾದ ಆಯವ್ಯಯ ಸಿದ್ದಪಡಿಸದೆ ಇರುವುದರ ವಿಚಾರದಲ್ಲಿ ಸೂಕ್ತ ವಿವರಣೆ ನೀಡಬೇಕಾಗಿ ಸೂಚಿಸಿದೆ.

ಖಖ) ಆಯ ವ್ಯಯ ಪಟ್ಟಿ ವಿವಿಧ ಲೆಕ್ಕಶೀರ್ಷಿಕೆಯಡಿ ಜಮಾ ಖರ್ಚುಗಳನ್ನು ತೆಗೆದುಕೊಂಡು 2016–17ನೇ ಸಾಲಿನ ಪರಿಷ್ಕೃತ ಆಯವ್ಯಯ ಪಟ್ಟಿ ಪ್ರಕಾರ ಒಟ್ಟು ಅನುಮೋದಿತ ಅಂದಾಜು ಸ್ವೀಕೃತಿ ಹಾಗೂ ವೆಚ್ಚವು ವಾರ್ಷಿಕ ಲೆಕ್ಕಪತ್ರ ಮತ್ತು ಪರಿಷ್ಕೃತ ಆಯವ್ಯಯ ಅಂದಾಜು ವ್ಯತ್ಯಾಸ ಕಂಡುಬಂದಿರುವುದು. ವಿವರ ಈ ರೀತಿ ಇದೆ.

| | **ಸ್ವೀಕೃತಿ** | **ಖರ್ಚು** |
|---|---|---|
| ವಾರ್ಷಿಕ ಲೆಕ್ಕಪತ್ರದಂತೆ (Part I) | 524,75,42,009 | 629,45,74,124 |
| ಪರಿಷ್ಕೃತ ಆಯವ್ಯಯ ಪಟ್ಟಿಯಂತೆ (Revised Budget) | 246,43,12,000 | 23,34,41,25,000 |
| **ವ್ಯತ್ಯಾಸ** | **278,32,30,009** | **396,01,49,124** |

ಪರಿಷ್ಕೃತ ಅಂದಾಜು ಆಯವ್ಯಯ ಹಾಗೂ ವಾರ್ಷಿಕ ಲೆಕ್ಕಪತ್ರಗಳ ಸ್ವೀಕೃತಿ ಹಾಗೂ ವೆಚ್ಚದಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಈ ವ್ಯತ್ಯಾಸ ಕುರಿತು ವಿಚಾರಣಾ ಸಂಖ್ಯೆ:93/2018–19 ದಿನಾಂಕ:21.07.2018ರಂದು ವಿಚಾರಣೆ ನೀಡಲಾಗಿದ್ದು, ಯಾವುದೇ ವಿವರಣೆ ನೀಡದೆ ಹಾಗೂ ಯಾವುದೇ ರೀತಿಯ ಪರಿಷ್ಕೃತ ಮಂಜೂರಾತಿ ಆದೇಶದ ಪ್ರತಿ ಹಾಜರುಪಡಿಸದೆ ಕೇವಲ ಜಿ.ಆರ್.ಎ ಮತ್ತು ಎಫ್&ಆರ್ ಖಾತೆ ಸ್ವೀಕೃತಿ ಮತ್ತು ವೆಚ್ಚದ ಮೊಬಲಗು ಅನುಮೋದನೆ ಪಡೆದು ವಾರ್ಷಿಕ ಲೆಕ್ಕಪತ್ರದ ಉಳಿದ 38 ಖಾತೆಗಳ ಒಟ್ಟು ಜಮಾ ಖರ್ಚನ್ನು ಆಯವ್ಯಯದಲ್ಲಿ ಸೇರಿಸಿ ಅನುಮೋದನೆ ಪಡೆಯಬೇಕಾಗಿದ್ದು,

| | | |
|---|---|---|
| | ಅನುಮೋದನೆ ಪಡೆಯದೆ ಹೆಚ್ಚುವರಿ ವ್ಯತ್ಯಾಸ ಕಂಡುಬಂದಿರುತ್ತದೆ. ಈ ವ್ಯತ್ಯಾಸಕ್ಕಾಗಿ ವಿಚಾರಣೆ ನೀಡಲಾಗಿದ್ದು, ಯಾವ ಯಾವ ಲೆಕ್ಕಶೀರ್ಷಿಕೆಯಲ್ಲಿ ಬ್ಯಾಂಕ್ ಖಾತೆಯಲ್ಲಿ ಹೆಚ್ಚುವರಿ ಖರ್ಚು ಮಾಡಲಾಗಿದೆ ಎಂಬುದರ ವಿವರವನ್ನು ಆಡಿಟ್‌ಗೆ ಒದಗಿಸದೆ ಇರುವುದರಿಂದ ಲೆಕ್ಕಪರಿಶೋಧನಾ ಅವಧಿಯಲ್ಲಿ ಪರಿಶೀಲಿಸಲು ಸಾಧ್ಯವಾಗಿಲ್ಲದ ಕಾರಣ ಹಾಗೂ ಸಂಬಂಧಪಟ್ಟ ಹಣಕಾಸು ಅಧಿಕಾರಿಯವರಿಗೆ ಸೂಚಿಸಿದರೂ ಯಾವುದೇ ರೀತಿಯ ವಿವರಣೆ ನೀಡದೆ ಇರುವುದರಿಂದ ಕರ್ತವ್ಯ ಲೋಪವಾಗಿ ನಿಯಮ ಉಲ್ಲಂಘನೆಯಾಗಿದೆ. ಈ ಬಗ್ಗೆ ಆಡಳಿತಾತ್ಮಕ ಕ್ರಮಕೈಗೊಳ್ಳಲು ಸೂಚಿಸಿದೆ.<br><br>ಕರ್ನಾಟಕ ವಿಶ್ವವಿದ್ಯಾನಿಲಯ ಕಾಯ್ದೆ 2000ರನ್ವಯ ನಿಯಮ 46, 47, 48 ರ ರೀತ್ಯ ಸಿದ್ಧಪಡಿಸಿದ ಆಯವ್ಯಯವನ್ನು ಸಿಂಡಿಕೇಟ್ ಅಕಾಡೆಮಿಕ್ ಫೈನಾನ್ಸ್ ಕಮಿಟಿಗಳ ಪರಿಶೀಲನೆ ಹಾಗೂ ಶಿಫಾರಸ್ಸಿನ ನಂತರ ಸರ್ಕಾರದ ಅನುಮೋದನೆ ಪಡೆಯಬೇಕಿರುತ್ತದೆ. ಆದರೆ ಸದರಿ ಆಯವ್ಯಯಕ್ಕೆ ಸರ್ಕಾರ ಅನುಮೋದನೆ ನೀಡಿರುವ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. | |

| | | |
|---|---|---|
| **8** | <u>**ಅಯವ್ಯಯದಲ್ಲಿ ನಿಗದಿಪಡಿಸಿರುವ ಅಂದಾಜು ಮೊತ್ತಕ್ಕಿಂತ ರೂ.81,12,110/–ನ್ನು ಹೆಚ್ಚುವರಿ ವೆಚ್ಚ ಮಾಡಿರುವುದು (ಸಾಮಾನ್ಯ ನಿಧಿ ಹಾಗೂ ಎಫ್&ಆರ್ ಖಾತೆಯ ಉಪ ಶೀರ್ಷಿಕೆವಾರು):–**</u><br><br>ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2016–17ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯ ಅಂದಾಜು ಪರಿಷ್ಕೃತ ಮತ್ತು ಅನುಮೋದನೆಗೊಂಡಿರುವ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲನೆಗೆ ಹಾಜರುಪಡಿಸುವಂತೆ ಪರಿಷ್ಕೃತ ಆಯವ್ಯಯ ಅಂದಾಜಿನ ವಿವಿಧ ವಹಿವಾಟು ಸಂಖ್ಯಾಸೂಚಕಗಳಿಗೆ ಅನುದಾನ ನಿಗದಿಪಡಿಸಲಾಗಿದ್ದು, ಹಂಚಿಕೆ ಮಾಡಲಾದ ಅನುದಾನ ಮೊತ್ತಕ್ಕಿಂತ ಹೆಚ್ಚಾಗಿ ವೆಚ್ಚ ಭರಿಸಿರುವುದು ವಾರ್ಷಿಕ ಲೆಕ್ಕಪತ್ರದಲ್ಲಿ ಕಂಡುಬಂದಿರುತ್ತದೆ. ವಿವರವನ್ನು <u>**ಅನುಬಂಧ–4ರಲ್ಲಿ ನೀಡಲಾಗಿದೆ.**</u> ಅನುಬಂಧದಲ್ಲಿರುವಂತೆ ಪರಿಷ್ಕೃತ ಆಚುವ್ಯಯದಲ್ಲಿ ಕಲ್ಪಿಸಿರುವ ಅವಕಾಶಕ್ಕಿಂತ ರೂ.4,32,79,324/–ಗಳ ಅಧಿಕ ವೆಚ್ಚವನ್ನು ಮಾಡಿರುವುದು ಕರ್ನಾಟಕ ಬಜೆಟ್ ಕೈಪಿಡಿ ನಿಯಮ 246 ರಂತೆ ಮಂಜೂರಾದ ಅನುದಾನಕ್ಕೆ ಮಿರದಂತೆ ಮುಂದಿನ ವೆಚ್ಚ ಭರಿಸಲು ಕ್ರಮಕೈಗೊಳ್ಳಲು ತಿಳಿಸುತ್ತಾ ಹೆಚ್ಚುವರಿ ವೆಚ್ಚಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 308 ರಂತೆ ಸಿಂಡಿಕೇಟ್ ಮತ್ತು ಸರ್ಕಾರ ಅನುಮೋದನೆಯೊಂದಿಗೆ ಮತ್ತು ಹಣಕಾಸು ಸಮಿತಿ ಸಭೆಯ ಒಪ್ಪಿಗೆ ಪಡೆದ ಪ್ರತಿಗಳನ್ನು ಹಾಜರುಪಡಿಸುವಂತೆ ವಿಚ್ಛರಣೆ ಸಂಖ್ಯೆ:12/2018–19 ದಿನಾಂಕ:11.07.2018ರಂದು ವಿಚ್ಛರಣೆ ನೀಡಲಾಗಿತ್ತು. ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಜಿ.ಆರ್.ಎ ಬ್ಯಾಂಕ್ ಖಾತೆಯ ಸಂಖ್ಯೆ:54007591471 ವಿವರ ಅನುಬಂಧದ ವಾರ್ಷಿಕ ಲೆಕ್ಕಪತ್ರದಲ್ಲಿ ವಿವರ ಇರುವಂತೆ ಲೆಕ್ಕ ಪುನರ್ ವಿನಿಯೋಗ ಮಾಡದೆ ಸರ್ಕಾರದ ಅನುಮೋದನೆ ಪಡೆಯದೆ ಹಾಗೂ ಆಚುವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತಕ್ಕಿಂತ ವಾರ್ಷಿಕ ಲೆಕ್ಕಪತ್ರದಲ್ಲಿ ಹೆಚ್ಚುವರಿ ವೆಚ್ಚ ಮಾಡಿರುವುದರ ವಿಚಾರದಲ್ಲಿ ಸೂಕ್ತ ವಿವರಣೆಯನ್ನು ಪೂರಕ ದಾಖಲೆಯೊಂದಿಗೆ ಒದಗಿಸುವವರೆಗೆ ಮೊಬಲಗು **ರೂ. 81,12,110/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ದಿನಾಂಕ:30.03.2017 ರಂದು ಅಕಾಡೆಮಿಕ್ ಕೌನ್ಸಿಲ್ ಹಾಗೂ 25.03.2017 ರಂದು ಸಿಂಡಿಕೇಟ್ ಅನುಮೋದನೆ ಮತ್ತು 18.03.2017 ರಂದು ಹಣಕಾಸು ಸಮಿತಿಯ ನಡವಳಿ ಪ್ರಕಾರ ಪರಿಷ್ಕೃತ | 2016–17 ನೇ ಸಾಲಿನ ಅಯವಯ್ಯದಲ್ಲಿ ತಾತ್ಕಾಲಿಕ ಅಧ್ಯಾಪಕರ ವೇತನ ಶೀರ್ಷಿಕೆ ರೂ.8,00,00,000/–ಗಳನ್ನು ಮತ್ತು ಶೀರ್ಷಿಕೆ 228ಕ್ಕೆ ರೂ.9,00,00,000/– ಒಟ್ಟು ಮೊತ್ತ ರೂ.17,00,00,000/–ಗಳನ್ನು ನಿಗಧಿಗೊಳಿಸಲಾಗಿದ್ದು, ಇದಕ್ಕೆದುರಾಗಿ ರೂ.17,79,81,924/–ಗಳ ವೆಚ್ಚಗಳನ್ನು ಭರಿಸಲಾಗಿದೆ. ರೂ.81,12,110/–ಗಳ ಹೆಚ್ಚುವರಿ ವೆಚ್ಚುವು ಲೆಕ್ಕ ಶೀರ್ಷಿಕೆ228ಕ್ಕೆ ಸಂಬಂಧಿಸಿದಾಗಿದ್ದು ರೂ.95,81,981/–ಗಳಲ್ಲಿ ಸೇರಿರುತ್ತದೆ.<br><br>ಈ ಎರಡು 8 ಶೀರ್ಷಿಕೆಗಳಲ್ಲಿನ ಅಯವ್ಯಯದಲ್ಲಿನ ಅಂದಾಜು ಮೊತ್ತ ಒಟ್ಟಾರೆಯಾಗಿ ಖರ್ಚು ಭರಿಸಿರುವ ಮೊತ್ತ ಹಾಗೂ ಹೆಚ್ಚುವರಿ ವೆಚ್ಚಗಳಿಗೆ ಮರು ಹೊಂದಾಣಿಕೆ ಮಾಡಿಕೊಂಡು ದಿನಾಂಕ:21.12.2019 ರಲ್ಲಿ ನಡೆದ ಮೂರನೇ ತ್ರೈಮಾಸಿಕ ಹಣಕಾಸು ಸಮಿತಿಯಲ್ಲಿ ಮಂಡಿಸಿ ಅನುಮೋಧನೆ ಪಡೆಯಲಾಗಿರುತ್ತದೆ. ಹಣಕಾಸು ಸಮಿತಿಯ ನಡುವಳಿ ಪ್ರತಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ. ರೂ.81,12,110/–ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಿದೆ. |

ಆಯಾವ್ಯಯ ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚುವರಿ ಪಾವತಿಸಿರುವುದಕ್ಕೆ ಅನುಮೋದನೆ ಪಡೆದಿರುವ ವಿವರ ಕೆಳಗಿನಚಿತಿದೆ.

| ಕ್ರ. ಸಂ | ವಹಿವಾಟು ಸಂಖ್ಯೆ | ಲೆಕ್ಕ ಶೀರ್ಷಿಕೆಗಳು | ಆಯವ್ಯಯ | ವೆಚ್ಚ | ವ್ಯತ್ಯಾಸ |
|---|---|---|---|---|---|
| 1 | 101 | Salary for Teaching | 865016000 | 892540888 | 27524888 |
| 2 | 198 | Honororium | 1000000 | 1022822 | 22822 |
| 3 | 228 | Temporary/Partime Lecturer Salary | 90000000 | 99581981 | 9581981 |
| 4 | 122 | Postal Expenses | 600000 | 707502 | 107502 |
| 5 | 257 | CDC Activities | 2000000 | 2933588 | 933588 |
| 6 | 260 | Activities of Centre Dr. B.R.Ambedkar | 5880000 | 6230596 | 350596 |
| 7 | 148 | Saminar & Conference | 1200000 | 1797092 | 597092 |
| 8 | 173 | Central Animal House Facilities | 210000 | 246259 | 36259 |
| 9 | 259 | Partially Self Finance Scheme & Self finance Expenditure | 10000000 | 11665539 | 1665539 |
| 10 | 163 | Scholarship to outstanding Sprots person | 200000 | 210600 | 10600 |
| 11 | 164 | University Fellowship | 300000 | 367000 | 67000 |
| 12 | 234 | Reparis & Replacements of Electrical Materials | 400000 | 400045 | 45 |
| 13 | 105 | annual Maintenance of Computers | 856000 | 908738 | 52738 |
| 14 | 116 | Cost of Medicine, X-Rays etc | 3200000 | 3205255 | 5255 |
| 15 | 136 | Civil work & Maintain of Building | 30000000 | 31844856 | 1844856 |
| 16 | 125 | Sumptuary allowance | 25000 | 332238 | 307238 |
| 17 | 155 | Consruction of Building 25000 | | 171325 | 171325 |
| Total | | | **1010887000** | **1054166324** | **43279324** |

| | |
|---|---|
| ಶೀರ್ಷಿಕೆ 125 –ಗ್ಷರವ ಸಂಭಾವನೆ ವೆಚ್ಚ ರೂ (–) | **307238** |
| ಉಳಿಕೆ ಹೆಚ್ಚುವರಿ ವೆಚ್ಚದ ಮೊತ್ತ | **42972086** |
| ಮರು ಹೊಂದಾಣಿಕೆ ಮೊತ್ತ ರೂ.(–) | **34859976** |
| ಶೀರ್ಷಿಕೆ 228 ರ ಹೆಚ್ಚುವರಿ ವೆಚ್ಚ ರೂ. | **8112110** |

ಒಟ್ಟು ಆಯವ್ಯಯಕ್ಕಿಂತ ಹೆಚ್ಚುವರಿ ವೆಚ್ಚ ಮಾಡಿರುವ ವಿಚಾರದಲ್ಲಿ ಸಿಂಡಿಕೇಟ್ ಅನುಮೋದನೆ ಪಡೆದು ಘಟನೋತ್ತರ ಹಾಗೂ ಮಂಜೂರಾತಿ ಪಡೆದು ಹಾಜರುಪಡಿಸುವವರೆಗೆ ಕಂಡಿಕೆಯನ್ನು ಮುಂದುವರೆಸುತ್ತ ಕಂಡಿಕೆಗೆ ಅನುಪಾಲನಾ ವರದಿ ನೀಡಲು ತಿಳಿಸಿದೆ.

9 **<u>ಆಯವ್ಯಯದಲ್ಲಿ ಸೇರಿಸದೆ ವಾರ್ಷಿಕ ಲೆಕ್ಕಪತ್ರದಲ್ಲಿ ಜಮಾ ಖರ್ಚು ತೆಗೆದುಕೊಂಡಿರುವುದು :-</u>**

2016-17ನೇ ಸಾಲಿನಲ್ಲಿ ಹಾಜರುಪಡಿಸಿರುವ ಬ್ಯಾಂಕ್ ಪಾಸ್ ಪುಸ್ತಕಗಳನ್ನು ಪರಿಶೀಲಿಸಿದಾಗ ಬ್ಯಾಂಕ್ ಖಾತೆಯ ಸಂಖ್ಯೆ:54007592781ರಲ್ಲಿ ಜಮಾ ಖರ್ಚಿನ ಪ್ರಕಾರ ಆಯವ್ಯಯದಲ್ಲಿ ಸೇರಿಸದೆ ನಿಯಮಾನುಸಾರ ಅನುಮೋದನೆ ಪಡೆಯದೆ ವೆಚ್ಚ ಮಾಡಿರುವ ವಿಚಾರದಲ್ಲಿ ಸೂಕ್ತ ವಿವರಣೆಯೊಂದಿಗೆ ಲೆಕ್ಕಹೊಂದಾಣಿಕೆ ಮಾಡಿಕೊಂಡು ವಾರ್ಷಿಕ ಆಯವ್ಯಯದಲ್ಲಿ ಹಾಗೂ ವಾರ್ಷಿಕ ಲೆಕ್ಕಪತ್ರಗಳಲ್ಲಿ ಸರಿದೂಗಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ.

| | |
|---|---|
| ಪ್ರಾರಂಭ ಶಿಲ್ಕು | 4502322.73 |
| 2016-17ನೇ ಜಮಾ | 14970577.00 |
| **ಒಟ್ಟು** | **19472899.73** |
| 2016-17ನೇ ಸಾಲಿನ ವೆಚ್ಚ | 19456386.00 |
| ಅಂತಿಮ ಶಿಲ್ಕು | 16513.73 |

ಮೈಸೂರು ವಿಶ್ವವಿದ್ಯಾನಿಲಯದ ಪ್ಲಾಟನಮ್ ಜೂಬಲಿ ಖಾತೆಯ ನಂ.5400759278 ರಲ್ಲಿನ ಸ್ವಿರಾತಿಗಳು ಮತ್ತು ಖರ್ಚಿನ ವಿವರಗಳು ಆಯಾವ್ಯಯದಲ್ಲಿ ಸೇರ್ಪಡೆಯಾಗದೇ ಇದ್ದರೂ ಸಹ ವಾರ್ಷಿಕ ಲೆಕ್ಕಾ ಪತ್ರದಲ್ಲಿ ಸದರಿ ಖಾತೆಯಲ್ಲಿ ಜಮಾ ಮತ್ತು ಖರ್ಚಿನ ವಿವರಗಳು ಉಲ್ಲೇಖಿತವಾಗಿರುವ ಬಗ್ಗೆ ಪ್ರಸ್ತಾಪಿಸಿದೆ.

ಸದರಿ ಖಾತೆಯಲ್ಲಿ ಭರಿಸಲಾದ ಮಟ್ಟಕ್ಕೆ ಸಂಬಂಧಿಸದ ಎಲ್ಲಾ ವಿವರಣ ಸಕ್ಷಯ ಅಧಿಕಾರಗಳಿಂದ ಅನುಮೊಧಿತವಾಗಿದೆ ನಿಯಮಬದ್ದವಾಗಿದೆ ಮತ್ತು ಕ್ರಮಬದ್ದವಾಗಿದೆ ಆದರೆ ಆಯಾವ್ಯಯ ತಯಾರಿಕೆ ಹಂತದಲ್ಲಿ ಕೈ ತಪ್ಪಿನಿಂದ ಆಯಾವ್ಯಯದ ಸೇರ್ಪಡೆಯಾಗು ಎಂಬ ಅಂಶವನ್ನು ಆಡಿಟ್ ಅವಗಾಹನೆಗೆ ತರುತ್ತಾ ಈ ರೀತಿಯ ತಪ್ಪು ಪುನಾರ್ವರ್ತನೆಯಾಗದಂತೆ ಕ್ರಮವಹಿಸಲಾಗುವುದು ಎಂಬ ಅಂಶ ಆಡಿಟ್ ಅವಗಾಹನೆಗೆ ತರಲಾಗಿದೆ ಈ ಹಿನ್ನೆಲೆಯಲ್ಲಿ ಸದರಿ ಕಂಡಿಕೆ ಕೈ ಬಿಡಲು ಕೋರಲಾಗಿದೆ.

| 10 | **ಆಯವ್ಯಯ ಅಂದಾಜಿಗಿಂತ ಹೆಚ್ಚುವರಿ ವೆಚ್ಚ ಭರಿಸಿರುವುದು :–(ಇಂಜಿನಿಯರಿಂಗ್ ವಿಭಾಗ)** | |
|---|---|---|

ಮೈಸೂರು ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ಆಯವ್ಯಯ ಅಂದಾಜುಗಳು ಪರಿಶೀಲಿಸಿದಾಗ ಇಂಜಿನಿಯರಿಂಗ್ ವಿಭಾಗಕ್ಕೆ ಯೋಜನೇತರ ವೆಚ್ಚಗಳಿಗಾಗಿ ಕೆಳಕಂಡ ಲೆಕ್ಕಶೀರ್ಷಿಕೆಯಡಿ ಅನುದಾನದ ಅವಕಾಶ ಕಲ್ಪಿಸಲಾಗಿದೆ.

**As per Budget (2016–17)**

| ಕ್ರ.ಸಂ | ವಿವರ ಲೆಕ್ಕಶೀರ್ಷಿಕೆ | ಕಾಯ್ದಿರಿಸಿದ ಮೊತ್ತ |
|---|---|---|
| 1 | 005–102– ಅಧ್ಯಾಪಕೇತರ ವೇತನ ಬಾಬ್ತು | 1,91,27,000 |
| 2 | 005–115– ಸಾದಿಲ್ವಾರು ವೆಚ್ಚ | 1,00,000 |
| 3 | 005–135– ಸಣ್ಣ ಕಾಮಗಾರಿಗಳು | 3,00,00,000 |
| 4 | 005–136– ಕಟ್ಟಡಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ | 3,00,00,000 |
| 5 | 150–128– ಅತಿಥಿ ಗೃಹ ನಿರ್ವಹಣೆ | 2,00,000 |
| 6 | 150–263– ಭದ್ರತಾ ಸೇವೆ | 2,00,00,000 |
| 7 | 150–291– ವಿ.ವಿ ಶತಮಾನೋತ್ಸವ ಸಮಾರಂಭ | 8,00,00,000 |
| 8 | 150–233– ಕುಲಪತಿಗಳ ವಿವೇಚನ ಅವಕಾಶ | 2,00,000 |
| **ಒಟ್ಟು** | | **17,96,27,000** |

ವೆಚ್ಚ As per Cash book, Work Cash book, DC bill Register

| ಕ್ರ.ಸಂ | ಉಪ ಲೆಕ್ಕ ಶೀರ್ಷಿಕೆ | ವಹಿವಾಟು ಶೀರ್ಷಿಕೆ | 2016–17ನೇ ಸಾಲಿನಲ್ಲಿ ಕೈಗೊಂಡಿರುವ ವೆಚ್ಚ |
|---|---|---|---|
| 1 | 102 | ಅಧ್ಯಾಪಕೇತರ ವೇತನ ಬಾಬ್ತು | 94,10,346 |
| 2 | 229 | ಸಚಿಚಿತ ವೇತನ ಬಾಬ್ತು | 21,17,000 |
| 3 | 115 | ಸಾದಿಲ್ವಾರು ವೆಚ್ಚ | 1,98,758 |
| 4 | 118 | ದೂರವಾಣಿ ವೆಚ್ಚ | 25,476 |
| 5 | 107 | ವೈದ್ಯಕೀಯ ವೆಚ್ಚದ ಬಿಲ್ಲು | 4,43,830 |
| 6 | 128 | ಅತಿಥಿಗೃಹ ವೆಚ್ಚ | 14,58,866 |
| 7 | 119 | ವಿದ್ಯುತ್ ಬಿಲ್ಲಿನ ಬಾಬ್ತು | 9,85,492 |
| 8 | 291 | ಶತಮಾನೋತ್ಸವ ಸಮಾರಂಭ | 20,21,44,882 |

ಕಂಡಿಕೆ 10 ರಲ್ಲಿ ಆಕ್ಷೇಪಿಸಿ ಸೂಚಿಸಿರುವ ಸಲಹೆಗಳನ್ನು ನಿರ್ವಹಿಸಲು ಕ್ರಮವಹಿಸಿದ್ದು ಸಂಬಂಧ ಪಟ್ಟ ದಾಖಲಾತಿಗಳನ್ನು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರು ಪಡಿಸಲಾಗುವುದೆಂದು ಈ ಮೂಲಕ ನಿವೇದಿಸಲಾಗಿದೆ.

| | | | |
|---|---|---|---|
| 9 | 155 | ಪರೀಕ್ಷಾ ಖಾತೆ | 25,85,366 |
| 10 | 259 | ಪಿ.ಎಸ್.ಎಫ್.ಎಸ್ ನಿಧಿ | 94,534 |
| 11 | 039 | ಮೂಲಭೂತ ಸೌಕರ್ಯ ಅಭಿವೃದ್ಧಿ ನಿಧಿ | 9,13,01,158 |
| 12 | 136 | ಕಟ್ಟಡಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ಥಿ | 3,14,51,685 |
| 13 | 135 | ಸಣ್ಣ ಕಾಮಗಾರಿಗಳು | 3,01,58,308 |
| 14 | 51 | ಯುವರಾಜ ಕಾಲೇಜು ನಿಧಿ | 89,54,119 |
| 15 | 031 | ಶುಲ್ಕ ಮತ್ತು ಸಂಭಾವನೆ ನಿಧಿ | 7,52,47,921 |
| 16 | 190 | ಘಟಿಕೋತ್ಸವ ಸಮಾರಂಭ ನಿಧಿ–190 | 12,56,266 |
| 17 | 263 | ಭದ್ರತಾ ಸೇವಾ ವೆಚ್ಚಗಳು | 48,94,952 |
| | | **ಒಟ್ಟು** | **46,27,28,959** |

2016–17ನೇ ಸಾಲಿನ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ಕಾಮಗಾರಿಗಳು, ಸಾದಿಲ್ವಾರು, ಸಣ್ಣ ಕಾಮಗಾರಿಗಳು, ಕಟ್ಟಡ ವಾರ್ಷಿಕ ನಿರ್ವಹಣೆ ಮತ್ತು ದುರಸ್ಥಿ, ಅತಿಥಿಗೃಹ ನಿರ್ವಹಣೆ, ಭದ್ರತಾ ಸೇವೆ, ಶತಮಾನೋತ್ಸವ ಸಮಾರಂಭ, ಈ ಲೆಕ್ಕಶೀರ್ಷಿಕೆಗಳಲ್ಲಿ 2016–17ನೇ ಸಾಲಿನ ಆಯವ್ಯಯದಲ್ಲಿ ರೂ.17,96,27,000/– ಅನುದಾನ ಕಾಯ್ದಿರಿಸಿದ್ದು, ಆದರೆ ಖರ್ಚಾಗಿರುವ ಮೊತ್ತ ರೂ.46,27,28,959/– ಆಗಿದ್ದು ಅಯವ್ಯಯದಲ್ಲಿ ಕಾಯ್ದಿರಿಸಿದ ಮೊತ್ತಕ್ಕಿಂತ ರೂ.28,31,01,959/–ಗಳ ಹೆಚ್ಚುವರಿ ಖರ್ಚು ಆಗಿದ್ದು, ಸದರಿ ವೆಚ್ಚಗಳನ್ನು ಭರಿಸಲು ವಿಶ್ವವಿದ್ಯಾನಿಲಯದ ವಿವಿಧ ಲೆಕ್ಕಶೀರ್ಷಿಕೆಗಳಿಂದ ಹಣವನ್ನು ವರ್ಗಾವಣೆಗೊಳಿಸಿ ವೆಚ್ಚ ಭರಿಸಲಾಗಿದೆ, ಈ ಸಂಬಂಧ ಅನುದಾನ ಸ್ವೀಕೃತಿ ಮತ್ತು ವೆಚ್ಚಗಳಿಗೆ, ಸರ್ಕಾರದ ಅನುಮೋದನೆ ಪರಿಷ್ಕೃತ ಆಯವ್ಯಯ ಅಂದಾಜುಗಳ ಅನುಮೋದನೆ ಪರಿಷ್ಕೃತ ಆದೇಶ ಪ್ರತಿಗಳನ್ನು ವಿಚಾರಣೆ ಪತ್ರ ಸಂಖ್ಯೆ:2/04.09.2018 ರಲ್ಲಿ ಕೋರಲಾಗಿ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಆಯವ್ಯಯಕ್ಕಿಂತ ಹೆಚ್ಚುವರಿ ಖರ್ಚಿನ ಅನುಮೋದನೆ ಬಗ್ಗೆ ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ.

| | | |
|---|---|---|
| **11** | **<u>2016–17ನೇ ಸಾಲಿಗೆ ಮಂಜೂರಾದ ವಾರ್ಷಿಕ ಕ್ರಿಯ ಯೋಜನೆ ಮುಂದುವರಿದ ಹೊಸ ಕಾಮಗಾರಿಗಳ ವಿವರ ಆಯಾವ್ಯಯ ಅಂದಾಜು ಅನುಮೋದನೆ ಪ್ರತಿಗಳನ್ನು ಒದಗಿಸದಿರುವುದು:– (ಇಂಜಿನಿಯರಿಂಗ್ ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ವಿಭಾಗದ 2016–17ನೇ ಸಾಲಿನ ಸಿವಿಲ್/ವಿದ್ಯುತ್ ಕಾಮಗಾರಿಗಳನ್ನು ಪರಿಶೀಲಿಸಿದಾಗ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವಿಧ ಕಾಮಗಾರಿಗಳ ಅನುಷ್ಠಾನಕ್ಕಾಗಿ ರಚಿಸಲಾದ ವಾರ್ಷಿಕ ಕ್ರಿಯ ಯೋಜನೆ ಅನುಮೋದಿಸಿರುವ ಪ್ರತಿ ತಾಂತ್ರಿಕ ಅನುಮೋದನೆ ವಿವರದ ಪ್ರತಿ ಹಾಗೂ ವೆಚ್ಚಕ್ಕೆ ಸಂಬಂಧಿಸಿದಂತೆ ಆಯವ್ಯಯ ಅಚಿದಾಜು ಅನುಮೋದನೆ/ದೊಡ್ಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸರ್ಕಾರದ ಅನುಮೋದನೆ ಆದೇಶ ಪ್ರತಿಗಳ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡುವಂತೆ ಆಡಿಟ್ ವಿಚರಣಾ ಪತ್ರ ಸಂಖ್ಯೆ:2/ 04.09.2018 ರಲ್ಲಿ ಕೋರಲಾಗಿದ್ದು ಯಾವುದೇ ಮಾಹಿತಿ ಒದಗಿಸದ ಕಾರಣ ಕಾಮಗಾರಿಗಳ ವೆಚ್ಚ ದೃಢೀಕೃತ ವೆಚ್ಚವಾಗಿರುವುದಿಲ್ಲ ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಸೂಚಿಸಿದೆ. | ವಿಶ್ವವಿದ್ಯಾನಿಲಯದಲ್ಲಿ ಸರ್ಕಾರಿ ಲೋಕೋಪಯೋಗಿ ಇಲಾಖೆಯಲ್ಲಿರುವಂತೆ ಅಯವ್ಯಯದಲ್ಲಿ ಮಂಜೂರಾತಿಯಾಗಿರುವ ಅನುದಾನಕ್ಕೆದುರಾಗಿ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳ ಸಂಬಂಧ ಕ್ರಿಯಾ ಯೋಜನೆ ತಯಾರಿಸಿ ಇಲಾಖೆಯ ಮೇಲಾಧಿಕಾರಿಗಳು ಹಾಗೂ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವ ಕ್ರಮ ಇರುವುದಿಲ್ಲ.<br><br>ಬದಲಾಗಿ, ವಿಶ್ವವಿದ್ಯಾನಿಲಯದಲ್ಲಿ ತಾಂತ್ರಿಕ ಮಂಜೂರಾತಿಗಾಗಿ ಸರ್ಕಾರದಿಂದ ನಿಯೋಜನೆಗೊಂಡ ಕಾರ್ಯಪಾಲಕ ಅಭಿಯಂತರರು, ಹಣಕಾಸು ಸಮಿತಿ, ಕಟ್ಟಡ ಸಮಿತಿ ಹಾಗೂ ಸಿಂಡಿಕೇಟ್ ಸಮಿತಿಗಳಿರುತ್ತದೆ. ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರಿಗೆ ಇರುವ ತಾಂತ್ರಿಕ ಮಂಜೂರಾತಿ ಅಧಿಕಾರವು ಇಲ್ಲಿಗೆ ನಿಯೋಜನೆಗೊಂಡು ಕಾರ್ಯನಿರ್ವಹಿಸುತ್ತಿರುವ ಕಾರ್ಯಪಾಲಕ ಅಭಿಯಂತರರಿಗೆ ಇರುತ್ತದೆ. ಕಟ್ಟಡ ಸಮಿತಿಯಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕ್ಷಕ ಇಂಜಿನಿಯರ್ ರವರು, ವಿದ್ಯುಚ್ಛಕ್ತಿ ಇಲಾಖೆಯ ಅಧೀಕ್ಷಕ ಅಭಿಯಂತರರು ಸದಸ್ಯರಾಗಿದ್ದು; ತಾಂತ್ರಿಕ ವಿಷಯಗಳಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತಾರೆ ಮತ್ತು ಕಾಮಗಾರಿಗಳ ಅಂದಾಜುಗಳನ್ನು ಪರಾಮರ್ಷಿಸಿ ತಾಂತ್ರಿಕವಾಗಿ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಅನುಮೋದನೆಗಳಿಗಾಗಿ ಸಹಮತಿಸಿರುತ್ತಾರೆ. ಕಟ್ಟಡ ಸಮಿತಿಗೆ ಮುಖ್ಯ ಇಂಜಿನಿಯರ್ ರವರಿಗೆ ತಾಂತ್ರಿಕ ವಿಷಯಗಳಲ್ಲಿ ಇರುವ ಆರ್ಥಿಕ ವ್ಯಾಪ್ತಿಯು ಮತ್ತು ಸರ್ಕಾರದ ಅಧಿಕಾರ ವ್ಯಾಪ್ತಿಯು ಸಿಂಡಿಕೇಟ್ ಸಭೆಗೆ ಇರುತ್ತದೆ. ಕೇಂದ್ರ ಸರ್ಕಾರ ಮತ್ತು ಇದರ ಅಧೀನದ ಯು.ಜಿ.ಸಿ, ಡಿ.ಎಸ್.ಟಿ. ಐ.ಓ.ಇ, ಯು.ಪಿ.ಇ ಹಾಗೂ ಕರ್ನಾಟಕ ಸರ್ಕಾರದದಿಂದ ವಿವಿಧ ಯೋಜನೆಗಳಡಿ ಆಗಿಂದಾಗ್ಗೆ ಮಂಜೂರಾತಿಯಾಗಿ ಬಿಡುಗಡೆಗೊಂಡ ಅನುದಾನಕ್ಕೆದುರಾಗಿ ಅಂದಾಜುಗಳನ್ನು ತಯಾರಿಸಿ ಕಟ್ಟಡ ಸಮಿತಿಯ ಮುಂದೆ ಮಂಡಿಸಿ ತಾಂತ್ರಕವಾಗಿ |

| | | |
|---|---|---|
| | | ಶಿಫಾರಸ್ಸುಗೊಂಡ ನಂತರವೇ ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br>ಈ ಸಂಬಂಧ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: . ದಿನಾಂಕ: ದ ಪ್ರತಿಯನ್ನು ಲಗತ್ತಿಸಿದೆ. |

| | | |
|---|---|---|
| 12 | **<u>ಆಯವ್ಯಯವನ್ನು ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಯುವರಾಜ ಕಾಲೇಜು ಸಂಸ್ಥೆ ಎರಡು ಕಡೆಯಲ್ಲಿ ತಯಾರಿಸುತ್ತಿರುವ ವಿಚಾರ ಕುರಿತು :–</u>**<br><br>2016–17ನೇ ವರ್ಷದಲ್ಲಿ ಲೆಕ್ಕಪರಿಶೋಧನಾ ಅವಧಿಯಲ್ಲಿ ಹಾಜರುಪಡಿಸಿರುವ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಯುವರಾಜ ಕಾಲೇಜಿನ ಅಧ್ಯಾಪಕರ/ಅಧ್ಯಾಪಕೇತರ ವೇತನ ಮತ್ತು ಸಾದಿಲ್ವಾರು ಸಲಕರಣೆಗಳು ಇತ್ಯಾದಿ ವೆಚ್ಚಕ್ಕಾಗಿ ವೇತನ ಭತ್ಯೆಗಳನ್ನು ನಿಗದಿಪಡಿಸಿ ವಹಿವಾಟಿನ ಸಂಖ್ಯೆ 22ರಲ್ಲಿ ಆಯವ್ಯಯದಲ್ಲಿ ಅನುಮೋದನೆಗೊಂಡಿದೆ ಹಾಗೂ ಯುವರಾಜ ಕಾಲೇಜಿನಲ್ಲಿ ಯೋಜನೆ ಮತ್ತು ಯೋಜನೇತರ ಆಯವ್ಯಯ ಅಂದಾಜು ತಯಾರಿಸಿ ಪ್ರಾಂಶುಪಾಲರು ಸಹಿ ಹಾಕಿರುತ್ತಾರೆ. ಒಂದೆ ಸಂಸ್ಥೆಯ ಎರಡುಕಡೆ ಪ್ರತ್ಯೇಕವಾಗಿ ಆಯವ್ಯಯ ತಯಾರಿಸಿ ವ್ಯವಹರಿಸುತ್ತಿರುವುದು ನಿಯಮಬಾಹಿರವಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಯುವರಾಜ ಕಾಲೇಜು ಶೈಕ್ಷಣಿಕ ಸ್ವಾಯತ್ತತೆ ಸಂಸ್ಥೆಯಾಗಿದ್ದು, ಹಣಕಾಸು ವಹಿವಾಟಿಗೆ ವಿಶ್ವವಿದ್ಯಾನಿಲಯದ ನಿಯಂತ್ರಣದಲ್ಲಿರುವುದರಿಂದ ಆಯವ್ಯಯ ಅಂದಾಜು ತಯಾರಿಸಿ ವಿಶ್ವವಿದ್ಯಾನಿಲಯದಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ.<br><br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬರುವ ಎಲ್ಲಾ ಅಂಗ ಸಂಸ್ಥೆಗಳನ್ನು ಒಳಗೊಂಡಂತೆ ಸಂಪೂರ್ಣ ಆಯವ್ಯಯವನ್ನು ಸಿದ್ದಪಡಿಸಿ ಮಂಡಿಸಬೇಕಾಗಿದ್ದು, ಅದೇ ರೀತಿ ಯುವರಾಜ ಕಾಲೇಜು, ವಿಶ್ವವಿದ್ಯಾನಿಲಯದ ಒಂದು ಅಂಗ ಸಂಸ್ಥೆಯಾಗಿದ್ದು, ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿ ಸೇರಿಸದೆ ಪ್ರತ್ಯೇಕವಾಗಿ (ಎರಡು) ಆಯವ್ಯಯವನ್ನು ಸಿದ್ದಪಡಿಸಿರುವುದು ಕ್ರಮಬದ್ಧವಾಗಿರುವುದಿಲ್ಲ. ಯುವರಾಜ ಕಾಲೇಜು ಶೈಕ್ಷಣಿಕವಾಗಿ ಸ್ವಾಯತ್ತ (Autonomos) ಸಂಸ್ಥೆಯಾಗಿದ್ದು, ಪ್ರತ್ಯೇಕವಾಗಿ ಆಯವ್ಯಯ ಅಂದಾಜು ಬಗ್ಗೆ ಯಾವುದೇ ಅನುಶಾಸನವಾಗಲಿ ಸರ್ಕಾರದ ಮಂಜೂರಾತಿ ಆದೇಶಗಳನ್ನು ಪರಿಶೀಲನೆಗೆ ಒದಗಿಸದೆ ಇರುವುದರಿಂದ, ನಿಯಮಗಳ ಪ್ರಕಾರ ಲೋಪವಾಗಿರುವುದರಿಂದ ಆರ್ಥಿಕ ವಹಿವಾಟು ನಿರ್ವಹಿಸಿರುವ ವಿಚಾರದಲ್ಲಿ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ. | ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವ್ಯಾಪ್ತಿಯಲ್ಲಿ ಯುವರಾಜ ಕಾಲೇಜು ಮೈಸೂರು ಇದು ಸ್ವಾಯತ್ತ ಸಂಸ್ಥೆಯಾಗಿದ್ದು; ಅಲ್ಲಿ ಕಾರ್ಯ ನಿರ್ವಹಿಸುತ್ತರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಮತು ಭತ್ಯೆಗಳನ್ನು ಮಾತ್ರ ಕರ್ನಾಟಕ ಸರ್ಕಾರದ ಬ್ಲಾಕ್ ಗ್ರಾಂಟ್ ನಿಂದಲೇ ಭರಿಸುತ್ತರುವುದರಿಂದ ಸದರೀ ವೆಚ್ಚಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಅವಕಾಶಮಾಡಿಕೊಂಡು ಅಂದಾಜು ತಯಾರಿಸಲಾಗುತ್ತಿದೆ.<br><br>ಅಂತೆಯೇ ಉಳಿದೆಲ್ಲಾ ವೆಚ್ಚಗಳು ಅಂದರೆ ತಾತ್ಕಾಲಿಕ ನೌಕರರ ವೇತನ, ಸಾದಿಲ್ವಾರು ವೆಚ್ಚಗಳು, ಪ್ರಯೋಗಾಲಯ ನಿರ್ವಹಣೆ ವೆಚ್ಚಗಳು ಹಾಗೂ ಇನ್ನಿತರೆ ವೆಚ್ಚಗಳನ್ನು ಕಾಲೇಜಿನ ಆರ್ಥಿಕ ಸಂಪನ್ಮೂಲದಿಂದಲೇ ಭರಿಸಬೇಕಾಗಿರುವುದರಿಂದ ಈ ವೆಚ್ಚಗಳ ಸಂಬಂಧ ಪ್ರತ್ಯೇಕ ಅಂದಾಜನ್ನು ಆ ಕಾಲೇಜುನಿಂದಲೇ ತಯಾರಿಸಿ ಕೊಳ್ಳಲಾಗುತ್ತಿದೆ.<br><br>ಹೀಗಾಗಿ, ಎರಡುಕಡೆಯೂ ಅಯವ್ಯಯ ಅಂದಾಜು ತಯಾರಿಸಿ ಮಂಜೂರಾತಿ ಪಡೆದು ನಂತರ ಖರ್ಚುಗಳನ್ನು ಭರಿಸಲಾಗುತ್ತದೆ. ಯು.ಜಿ.ಸಿ ಯವರ ಸ್ವಾಯತ್ತತೆ ನೀಡಿರುವ ದಿನಾಂಕ:30.07.2014ರ ಪತ್ರ ಮತ್ತು ಕರ್ನಾಟಕ ಸರ್ಕಾರದ ಸ್ಟಚ್ಯೂಟ್ ಪತ್ರ ಸಂಖ್ಯೆ:ಇಡಿ14 ಯುಜಿಸಿ2000, ದಿನಾಂಕ:04.09.2000 ರ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ. |

1. **ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ತಯಾರಿಕೆಯಲ್ಲಿ ಸೇರಿಸಿರುವ ವಿವರ**

| ಕ್ರಸಂ | ವಹಿವಾಟು ಸಂಖ್ಯೆ | ವಿವರ | ಆಯವ್ಯಯ ಅಂದಾಜು ಮೊಬಲಗು |
|---|---|---|---|
| 1 | 101 | ಅಧ್ಯಾಪಕರ ವೇತನ | 97368000 |
| 2 | 102 | ಅಧ್ಯಾಪಕೇತರ ವೇತನ | 16625000 |
| 3 | 115 | ಸಾದಿಲ್ವಾರು | 30000 |
| 4 | 143 | ಪುಸ್ತಕಗಳು/ನಿಯತಕಾಲಕೆಗಳು | 35000 |
| 5 | 146 | ಪ್ರಯೋಗಶಾಲೆಯ ರಾಸಾಯನಿಕ ಕಿರು ಸಲಕರಣೆಗಳು | 250000 |
| | | **ಒಟ್ಟು** | **114308000** |

2. 2016–17ನೇ ವರ್ಷದ ಯುವರಾಜ ಕಾಲೇಜಿನಲ್ಲಿ ಸಿದ್ದಪಡಿಸಿರುವ ಆಯವ್ಯಯ ಆಧಾರದಂತೆ ವೆಚ್ಚ ಮಾಡಲಾಗಿರುತ್ತದೆ. ಈ ರೀತಿ ಎರಡು ಕಡೆ ಆಯವ್ಯಯ ತಯಾರಿಸಿ ನಿಯಮಬಾಹಿರವಾಗಿ ವೆಚ್ಚ ಮಾಡಿರುವ ವಿಧಾನ ಕ್ರಮಬದ್ಧವಾಗಿರುವುದಿಲ್ಲ ಈ ಬಗ್ಗೆ ಕೂಡಲೆ 2 ಕಡೆ ತಯಾರಿಸಿ ಆಯವ್ಯಯ ತಯಾರಿಸಿ ಅನುಮೋದನೆ ಪಡೆದಿರುವ ವಿಚಾರದಲ್ಲಿ ಸೂಕ್ತ ಆಡಳಿತಾತ್ಮಕ ಕ್ರಮಕೈಗೊಳ್ಳಲು ಸೂಚಿಸಿದೆ. (2016–17ನೇ ಸಾಲಿನ ಯುವರಾಜ ಕಾಲೇಜಿನ ಆಡಿಟ್ ವರದಿ ಕಂಡಿಕೆ 9 ರಲ್ಲಿ ಪ್ರಸ್ತಾಪಿಸಲಾಗಿದೆ)

ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಿಂದ ಯುವರಾಜ ಕಾಲೇಜಿಗೆ ಅನುದಾನ ಬಿಡುಗಡೆಯಾಗುತ್ತಿದ್ದು, ಈ ಕೋಷ್ಠಕದ ಮೊತ್ತವನ್ನು ವಿಶ್ವವಿದ್ಯಾನಿಲಯದ ಮೂಲ ಆಯವ್ಯಯದಲ್ಲಿ ಸೇರಿಸಿಕೊಳ್ಳಲು ಸೂಚಿಸಿದೆ.

**13**

**2016–17ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ಆರ್ಥಿಕ ಪರಿಸ್ಥಿತಿಯ ದೋಷಗಳ ಬಗ್ಗೆ :–**

ಕರ್ನಾಟಕ ವಿಶ್ವವಿದ್ಯಾನಿಲಯದ ಕಾಯ್ದೆ 2000 ನಿಯಮ 46, 47ರ ರೀತ್ಯ ವಾರ್ಷಿಕ ಲೆಕ್ಕಪರಿಶೋಧನೆಯನ್ನು ಸಿದ್ದಪಡಿಸಿ ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಮೂಲಕ ಮುಕ್ತಾಯವಾದ ಆರ್ಥಿಕ ವಹಿವಾಟನ್ನು ಸೆಪ್ಟೆಂಬರ್ ಮಾಹೆಯಲ್ಲಿ ರಾಜ್ಯ ಸರ್ಕಾರದ ಗಮನಕ್ಕೆ ತರಬೇಕಿರುತ್ತದೆ. ಸದರಿ ವಾರ್ಷಿಕ ಲೆಕ್ಕಪತ್ರವು ವಿಶ್ವವಿದ್ಯಾನಿಲಯ ಕಾಯ್ದೆಯ ಸೆಕ್ಷನ್ 32 ರ ರೀತ್ಯ ಅನುಮೋದನೆಗಾಗಿ ಮಂಡಿಸಬೇಕಾಗಿರುತ್ತದೆ. ಹಾಗೂ ಪತ್ರ ಸಂಖ್ಯೆ: ಹ.ಶಾ.52/99/2017–18/617/01.09.2017 ರಂದು ಪ್ರಧಾನ ನಿರ್ದೇಶಕರವರು ಬೆಂಗಳೂರು ಸೂಕ್ತ ನಿರ್ದೇಶನಕ್ಕಾಗಿ ಸಲ್ಲಿಸಲಾಗಿರುತ್ತದೆ. ಈ ವಾರ್ಷಿಕ ಲೆಕ್ಕಪತ್ರದಲ್ಲಿ 40 ಲೆಕ್ಕಖಾತೆಗಳನ್ನು ಒಳಗೊಂಡಿದ್ದು, ಅದರಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದಾಗ ಈ ಮಾದರಿಯಲ್ಲಿ ಪರಿಶೀಲನೆ ಮಾಡಿದ್ದು, ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.

| ಕ್ರ.ಸಂ | Particular | | ಮೊತ್ತ |
|---|---|---|---|
| 1 | 2016–17ನೇ ಸಾಲಿನ ಪ್ರಾರಂಭ ಶಿಲ್ಕು | | 2643100959 |
| 2 | **ಸ್ವೀಕೃತಿ** | | |
| | Part-1 | 6959744093 | 12428181626 |
| | Part-2 | 5468437533 | |
| 3 | ಒಟ್ಟು ಮೊತ್ತ (1 + 2) | | 15071282585 |
| 4 | **ಪಾವತಿ** | | |
| | Part-1 | 6315148996 | 12106948696 |
| | Part-2 | 5791799700 | |
| 5 | 2016–17ನೇ ಸಾಲಿನ ಅಂತಿಮ ಶಿಲ್ಕು (3–4) | | 2964333889 |

2016–17 ನೇ ಸಾಲಿನ ಲೆಕ್ಕ ಪತ್ರಗಳಲ್ಲಿ ವಾರ್ಷಿಕ ಲೆಕ್ಕ ಪತ್ರಗಳ ಆರ್ಥಿಕ ಪರಿಸ್ಥಿತಿಯ ದೋಷಗಳ ಬಗ್ಗೆ ಪ್ರಾಸ್ತಾಪಿಸಲಾಗಿದ್ದು, ಸದರಿ ಆರ್ಥಿಕ ಪರಿಸ್ಥಿಯ ದೋಷಗಳನ್ನು ಸರಿಪಡಿಸುಲು ಕ್ರಮವಹಿಸಿದ್ದು ಸದರಿ ವಿಷಯವು ಕಾರ್ಯರೂಪದಲ್ಲಿರುತ್ತದೆ, ಹಾಗೂ ಆರ್ಥಿಕ ಪರಿಸ್ಥಿಯ ಮಾಹಿತಿಯನ್ನು ಸರಿಪಡಿಸಿ ದಾಖಾಲಾತಿಗಳನ್ನು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರು ಪಡಿಸಲಾಗುಯವುದೆಂದು ನಿವೇದಿಸಿದೆ.

**<u>ಕೆಳಗಿನ ನ್ಯೂನ್ಯತೆಗಳು ವ್ಯತ್ಯಾಸಕ್ಕೆ ಕಾರಣವಾಗಿರುತ್ತದೆ.</u>**

| **2015–16ನೇ ಸಾಲಿನ ಅಂತಿಮ ಶಿಲ್ಕನ್ನು 2016–17ನೇ ಸಾಲಿನಲ್ಲಿ ಪ್ರಾರಂಭಶಿಲ್ಕು ತೆಗೆದುಕೊಳ್ಳುವಾಗ ಕಡಿಮೆ ತೆಗೆದುಕೊಂಡಿರುವುದು** | | | | | | |
|---|---|---|---|---|---|---|
| **Sl. No** | **Particular** | **Head of A/C** | **Account number** | **C.B 31.03.2016** | **O/B 01.04.2016** | **DIFF** |
| 1 | Collaboration courses | 46 | 54007592690 | 302840249.1 | 296287673.1 | –6552576 |
| 2 | Ghandi Bhavan Revolving | | 64170082120 | 393833 | 393633 | –200 |
| 3 | Student welfare trust | 48 | | 4593351.68 | 4592933.74 | –417.94 |
| | | | | | **Total** | |
| **2015–16ನೇ ಸಾಲಿನ ಅಂತಿಮ ಶಿಲ್ಕಿನಲ್ಲಿ 31.03.2016 ಇರುವ ಮೊಬಲಗಿಗಿಂತ 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಹೆಚುವರಿ ತೆಗೆದುಕೊಂಡಿರುವುದು** | | | | | | |
| 4 | General revenue account | 1 | 54007591471 | 132908273 | 132914413 | 6140 |
| 5 | Examination account | 2 | 54007591200 | 109142277.3 | 109203388.3 | 61111 |
| | | | | | **Total** | |
| **2015–16ನೇ ಸಾಲಿನಲ್ಲಿ ಸೇರ್ಪಡೆಯಾಗದೇ 2016–17ನೇ ಸಾಲಿನಲ್ಲಿ ಹೊಸದಾಗಿ ಸೇವರ್ಪಡೆಯಾಗಿದೆ.** | | | | | | |
| 6 | Finance officer (ICAR PROJ) | 52 | | | 294126 | 294126 |
| | | | | | **Grand Total** | **–6191816.00** |

| | |
|---|---|
| 2015–16ನೇ ಸಾಲಿನ ಅಂತಿಮ ಶಿಲ್ಕು | 2649292776 |
| 2016–17ನೇ ಸಾಲಿನ ಪ್ರಾರಂಭ ಶಿಲ್ಕು | 2643100959 |
| ವ್ಯತ್ಯಾಸ | – 6191817 |

1. ಆಯವ್ಯಯದಲ್ಲಿ ನಿಗದಿಯಾಗಿರುವ ಒಟ್ಟು ಮೊತ್ತ ರೂ.270,58,27,078/–
2. ವಾರ್ಷಿಕ ಲೆಕ್ಕಪತ್ರದಲ್ಲಿರುವ ವಾಸ್ತವಿಕ ಮೊತ್ತ ರೂ.1507,12,82,585/–
3. ವಾರ್ಷಿಕ ಲೆಕ್ಕಪತ್ರದಲ್ಲಿ ಕಂಡುಬಂದಿರುವ ಹೆಚ್ಚುವರಿ ಮೊತ್ತದಲ್ಲಿ ನಿಶ್ಚಿತ ಠೇವಣಿ,

ಬ್ಯಾಂಕ್ ಬಡ್ಡಿ, ಹಾಗೂ ಆಯವ್ಯಯದಲ್ಲಿ ಸೇರ್ಪಡೆಗೊಳ್ಳದಿರುವ ವಿವಿಧ ಲೆಕ್ಕಖಾತೆಗಳ ಮೊತ್ತವಾಗಿರಬಹುದಾಗಿದ್ದು, ಇವುಗಳು ಯಾವ ಯಾವ ರೂಪದಲ್ಲಿ ಇಷ್ಟು ವ್ಯತ್ಯಾಸದಲ್ಲಿ ಕಂಡುಬಂದಿರುತ್ತದೆ ಎಂಬುದರ ಬಗ್ಗೆ ಸ್ಪಷ್ಠ ಚಿತ್ರಣ ಇರುವುದಿಲ್ಲ.

4. ಸದರಿ ವಾರ್ಷಿಕ ಲೆಕ್ಕಪತ್ರವನ್ನು ಮತ್ತು ಆಯವ್ಯಯವನ್ನು ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ಪರಿಶೀಲನೆ ಮಾಡಲಾಗಿರುತ್ತದೆ.
5. ಆಯವ್ಯಯಕ್ಕೆ ಮತ್ತು ವಾರ್ಷಿಕ ಲೆಕ್ಕಪತ್ರಗಳಿಗೆ ಒದಗಿಸಿರುವ ದಾಖಲೆಗಳು ಸಮರ್ಪಕವಾಗಿರುವುದಿಲ್ಲ. ನಿಶ್ಚಿತ ಠೇವಣಿಯ ದೃಢೀಕೃತ ಪ್ರಮಾಣಪತ್ರ, ಬ್ಯಾಂಕ್ ಬಡ್ಡಿ ವಿವರ, ದ್ರವ್ಯತೆ ಪಟ್ಟಿ (Liquidity statement), ಋಣಭಾರ ಪಟ್ಟಿ, ವಾರ್ಷಿಕ ಪಟ್ಟಿ, ಸಮತೋಲನ ಪಟ್ಟಿ, ಆಸ್ತಿ ಪಟ್ಟಿ, ಜಮಾ ಖರ್ಚುಗಳಲ್ಲಿನ ತಪ್ಪು ಜಮೆ ಮತ್ತು ಖರ್ಚುಗಳ ಆಂತರಿಕ ವರ್ಗಾವಣೆ ಮತ್ತು ಇತರೆ ಖಾತೆಗಳಲ್ಲಿನ ಸ್ವೀಕೃತಿ ಮತ್ತು ಪಾವತಿದಾಖಲು ಮಾಡಿರುವುದಿಲ್ಲ.ಇನ್ನಿತರೆ ವಾರ್ಷಿಕ ಲೆಕ್ಕಪತ್ರಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿರುವುದಿಲ್ಲದಿರುವುದರಿಂದ ಸಮರ್ಪಕವಾಗಿ-ನಿಖರವಾದ ಅಂಕಿ ಅಂಶಗಳನ್ನು ಸ್ಪಷ್ಟಪಡಿಸಲು ಸಾಧ್ಯವಾಗಿರುವುದಿಲ್ಲ. ಹಾಗೂ ಹಣಕಾಸು ಅಧಿಕಾರಿಗಳು ವಾರ್ಷಿಕ ಲೆಕ್ಕಪತ್ರಗಳಲ್ಲಿನ ಅಂಕಿ ಅಂಶಗಳನ್ನು ಸಹಿ ಮಾಡಿ ದೃಢೀಕರಿಸಿರುವುದಿಲ್ಲ. ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ: 08, 11, 45, 72, 139, 114, 156, 161, 215/2018-19ರಲ್ಲಿ ನೀಡಲಾಗಿದೆ.
6. ವಾರ್ಷಿಕ ಲೆಕ್ಕಪತ್ರದಲ್ಲಿ ಕೆಲವು ಬ್ಯಾಂಕ್ ಖಾತೆಗಳಲ್ಲಿನ ಮೊತ್ತವು ವ್ಯತ್ಯಾಸವಾಗಿರುವುದು ಕಂಡುಬಂದಿರುತ್ತದೆ.

| ಕ್ರ. ಸಂ | ಯಾವ ಖಾತೆ ಸಂಖ್ಯೆ ಯಿಂದ | ಯಾವ ಖಾತೆ ಸಂಖ್ಯೆಗೆ | ಮೊತ್ತ | ಷರಾ |
|---|---|---|---|---|
| 1 | 54007592690 | | 51,03,288 | ವಾರ್ಷಿಕ ಲೆಕ್ಕ ಪತ್ರದಲ್ಲಿ ತಪ್ಪಾಗಿ ನಮೂದಿಸಲಾಗಿದೆ. ಯಾವುದೇ |
| 2 | 54007591448 | | 32,091 | |

| | | | | |
|---|---|---|---|---|
| 3 | 54007591426 | | 53,150 | ಲೆಕ್ಕಪತ್ರಗಳನ್ನು ಹಾಜರುಪಡಿಸದೆ ಇರುವುದರಿಂದ ಈ ಬಗ್ಗೆ ಆಡಳಿತಾತ್ಮಕ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. |
| 4 | 64170082120 | | 95,903<br>**<u>ಒಟ್ಟು 52,84,432</u>** | |
| 5 | 64098950735 | ನಗದು ಪುಸ್ತಕ ಮತ್ತು ಬ್ಯಾಂಕ್ ವಹಿವಾಟು ವ್ಯತ್ಯಾಸದ ಮೊತ್ತ | 65,66,283 | ಲೆಕ್ಕಪತ್ರದ ಪ್ರಕಾರ ಸ್ವೀಕೃತಿ ರೂ. 4,32,81,235<br>– ನಗದು ಪುಸ್ತಕದ ಪ್ರಕಾರ ಜಮೆ ರೂ. <u>3,67,14,952</u><br>65,66,283 |

**14** **ವಿವಿಧ ಬ್ಯಾಂಕ್ ಖಾತೆಗಳಿಂದ ಆಂತರಿಕ ನಿಧಿ ವರ್ಗಾವಣೆ ಮಾಡಿರುವುದರ ಬಗ್ಗೆ :–**

2016–17ನೇ ಸಾಲಿನ ವಿಶ್ವ ವಿದ್ಯಾನಿಲಯದ ಹಣಕಾಸು ವಿಭಾಗದ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿರುವ ದಾಖಲಾತಿ ಹಾಗೂ ಪುನರ್ ಪರಿಶೀಲನಾ ಅವಧಿಯಲ್ಲಿ ಅನುಪಾಲನಾ ವರದಿಯನ್ನು ಪರಿಶೀಲಿಸಿದಾಗ ಬ್ಯಾಂಕ್ ಸ್ಟೇಟ್‌ಮೆಂಟ್, ನಗದು ಪುಸ್ತಕ, ವಾರ್ಷಿಕ ಲೆಕ್ಕಪತ್ರಗಳೊಂದಿಗೆ ಪರಿಶೀಲಿಸಿದಾಗ ಲೆಕ್ಕ ಸಮನ್ವಯಗೊಳಿಸದೆ ಹಾಗೂ ಅಂತರಿಕ ನಿಧಿ ವರ್ಗಾವಣೆ ಕುರಿತು ಪ್ರತ್ಯೇಕ ಖಿ.ಇ.ಔ ರಿಜಿಸ್ಟರ್ ನಿರ್ವಹಿಸಿ ಹಣಕಾಸು ಅಧಿಕಾರಿಗಳು ದೃಢೀಕರಿಸಬೇಕಾಗಿರುತ್ತದೆ. ಅದರೆ ಲೆಕ್ಕ ಸಮನ್ವತೆಯನ್ನು ಜಮಾ ಖರ್ಚಿನೊಂದಿಗೆ ತಾಳೆ ಮಾಡಿ ನಿರ್ವಹಿಸದೆ ಇರುವುದರಿಂದ ಈ ಬಗ್ಗೆ ಕ್ರಮವಾಗಿ I.T.E.O ರಿಜಿಸ್ಟರ್ (ಆಂತರಿಕ ವರ್ಗಾವಣೆ ವಹಿ) ನಲ್ಲಿ ಲೆಕ್ಕ ಹೊಂದಾಣಿಕೆಯನ್ನು ಕ್ರಮಬದ್ಧವಾಗಿ ನಿರ್ವಹಿಸಲು ಮತ್ತು ಕಂಡಿಕೆಗೆ ಅನುಪಾಲನಾ ವರದಿ ನೀಡಲು ಸೂಚಿಸಿದೆ.

| ಕಂಡಿಕೆ ಸಂಖ್ಯೆ | Debit | Amount | Credit | Amount |
|---|---|---|---|---|
| 9 | GRA/ A/c. No. 5400759471<br>Cheque. No. 180446<br>Date: 8-03-2017 | 15000000 | HBA A/c No. 54007591368<br>cheque No.180446<br>Date: 10.03.2017 | 15000000 |
| 28 | SPA A/c. No 6498950735<br>cheque No.809369<br>Date: 29.06.2015 | 66,12,256 | GRA/ A/c. No. 5400759471<br>Cheque. No. 174533<br>Date:28-04-2016 | 66,12,256 |
| 30 | Examination A/c 54007591200 | 40000000 | GRA/ A/c. No. 5400759471<br>Receipt No.44788 & 44789<br>Date:26-04-2016 | 40000000 |
| | **Total** | **55661256** | | **55661256** |

ವಿಶ್ವವಿದ್ಯಾನಿಲಯದ 2016–17 ನೇ ಸಾಲಿನಲ್ಲಿ ವಿವಿಧ ಶೀರ್ಷಿಕೆಗಳಡಿಯಲ್ಲಿ ವೆಚ್ಚ ಮಾಡಿರುವ ಹಲವು ಶೀರ್ಷಿಕೆಗಳಲ್ಲಿ ಹೆಚ್ಚುವರಿ ವೆಚ್ಚ ಭರಿಸಲು ಇತರೆ ಆಂತರಿಕ ಶೀರ್ಷಿಕೆಗಳಡಿಯಲ್ಲಿನ ಅನುದಾನವನ್ನು I.T.E.O ಮೂಲಕ ವರ್ಗಾವಣೆ ಮಾಡಿಕೊಂಡಿದ್ದು ಈ ಬಗ್ಗೆ ಬ್ಯಾಂಕ್ ಸ್ಟೇಟ್‌ಮೆಂಟ್ ನಗದು ಪುಸ್ತಕ, ವಾರ್ಷಿಕ ಲೆಕ್ಕ ಪತ್ರಗಳೊಂದಿಗೆ ಸಮನ್ವಯಗೊಳಿಸಲು, I.T.E.O ರಿಜಿಸ್ಟರ್ ನಿರ್ವಹಿಸಿ ಮಾಹಿತಿಗಳನ್ನು ದಾಖಲಿಸಲು ಹಾಗೂ ಕಂಡಿಕೆ 14 ರಲ್ಲಿ ಪ್ರಸ್ತಾಪಿಸಿ ಸೂಚಿಸಿರುವ ಎಲ್ಲಾ ವಿಷಯಗಳನ್ನು ನಿರ್ವಹಿಸಲು ಬಗ್ಗೆ ಕ್ರಮವಹಿಸಿದ್ದು ಸದರಿ ವಿಷಯ ಹಾಗೂ ಮಾಹಿತಿಯ ದಾಖಾಲಾತಿಗಳನ್ನು ಮುಂದಿನ ಲೆಕ್ಕ ಪರಿಶೋಧನಾ ಸಮಯದಲ್ಲಿ ಹಾಜರು ಪಡಿಸಲಾಗುವುದೆಂಬ ಅಂಶವನ್ನು ನಿವೇದಿಸಲಾಗಿದೆ.

| | | | |
|---|---|---|---|
| | 1) ಕಂಡಿಕೆ 9ಕ್ಕೆ ಸಂಬಂಧಿಸಿದಂತೆ ವಹಿವಾಟು ಸಂಖ್ಯೆ 203 ರಲ್ಲಿ ಜಿ.ಅರ್.ಖಾತೆ ಎಂದು ವಾರ್ಷಿಕ ಲೆಕ್ಕ ಪತ್ರದಲ್ಲಿ ಮುದ್ರಣ ದೋಷದಿಂದ ಖರ್ಚು ತೋರಿಸಲಾಗಿದೆ. ಅದರೆ ವಾಸ್ತವಿಕವಾಗಿ ದಿನಾಂಕ:28.02.2017ರಲ್ಲಿ ಸದರಿ ಮೊತ್ತವನ್ನು ಗೃಹ ನಿರ್ಮಾಣ (H.B.A) ಖಾತೆಗೆ ವರ್ಗಾಸಲಾಗಿದೆ.<br>2) ಕಂಡಿಕೆ 105ಕ್ಕೆ ಸಂಬಂಧಿಸಿದಂತೆ ಸ್ಕೂಲ್ ಅಫ್ ಪ್ಲಾನಿಂಗ್ ಖಾತೆಯಿಂದ ಧನಾದೇಶ ಸಂಖ್ಯೆ 809369 ದಿನಾಂಕ:29.05.2015ರಲ್ಲಿ ಜಮೆಯಾದ ಮೊಬಲಗಿನಲ್ಲಿ (ರೂ.2,00,00,000) ಇದರಲ್ಲಿ ಜಿ.ಅರ್.ಖಾತೆ ವರ್ಗಾವಣೆ ಮಾಡಲಾಗಿರುತ್ತದೆ. ಇದರಲ್ಲಿ 1,33,87,744 ವೇತನ ವೆಚ್ಚಕ್ಕಾಗಿ ಭರಿಸಲಾಗಿದೆ ಉಳಿಕೆ ರೂ.66,12,256/–ಗಳನ್ನು ಜಿ.ಅರ್.ಖಾತೆಯಿಂದ ಸ್ಕೂಲ್ ಅಫ್ ಪ್ಲಾನಿಂಗ್ ಖಾತೆ ಧನಾದೇಶ ಸಂಖ್ಯೆ 174533 ದಿನಾಂಕ:22.04.2016 ಮರು ವರ್ಗಾವಣೆ ಮಾಡಿರುವ ಮೊಬಲಗನ್ನು ನಗದು ಪುಸ್ತಕದಲ್ಲಿ ಪ್ರವೇಶ ಶುಲ್ಕವೆಂದು ತೋರಿಸಲಾಗಿದೆ. ಅದರೆ ಆಂತರಿಕ ನಿಧಿ ವರ್ಗಾವಣೆ ಎಂದು ನಮೂದಿಸಬೇಕಾಗಿದ್ದು, ಈ ಬಗ್ಗೆ ಹಣಕಾಸು ಅಧಿಕಾರಿಗಳು ದೃಢೀಕರಸಿ ಅನುಪಾಲನಾ ವರದಿಯನ್ನು ನೀಡಲು ತಿಳಿಸುತ್ತಾ ಇಂತಹ ಪ್ರಕರಣಗಳು ಮರುಕಳಿಸಿದಲ್ಲಿ ಸಂಬಂಧಪಟ್ಟವರ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ.<br>3) ಕಂಡಿಕೆ ಸಂಖ್ಯೆ 18ಕ್ಕೆ ಸಂಬಂಧಿಸಿದಂತೆ ಸಿಬ್ಬಂದಿ ವೇತನ ಹಾಗೂ ಪಿಂಚಣಿ ಪಾವತಿಗಾಗಿ ವರ್ಗಾವಣೆ ಮಾಡಿರುವ ಮೊತ್ತವು ನಗದು ಪುಸ್ತಕದಲ್ಲಿ ಶೀರ್ಷಿಕೆ–15 ಎಂದು ನಮೂದಿಸುವ ಬದಲು ಶೀರ್ಷಿಕೆ–23 ಎಂಬುವುದಾಗಿ ತಪ್ಪಾಗಿ ನಮೂದಿಸಲಾಗಿರುತ್ತದೆ. ಈ ಬಗ್ಗೆ ಕಛೇರಿ ಟಪ್ಪಣಿ ಹೊರಡಿಸಿ ಹಣಕಾಸು ಅಧಿಕಾರಿಗಳು ದೃಢೀಕೃತ ದಾಖಲಾತಿಗಳನ್ನು ಪರಿಶೀಲಿಸಿರುವುದಿಲ್ಲ. ಈ ರೀತಿ ತಪ್ಪುಗಳು ಮರುಕಳಿಸದಂತೆ ನಿಗ ವಹಿಸಲು ಹಾಗೂ ದಾಖಲಾತಿಗಳನ್ನು ಭೌತಿಕವಾಗಿ ಸ್ವತಃ ಹಣಕಾಸು ಅಧಿಕಾರಿಯವರೆ ಪರಿಶೀಲಿಸಲು ತಿಳಿಸಲಾಗಿದೆ. ಮೇಲಿನ ವಿವರದಲ್ಲಿ ತಿಳಿಸಿರುವಂತೆ ಎಲ್ಲಾ ಪ್ರಮುಖ ಲೋಪದೋಷಗಳ ಬಗ್ಗೆ ಲೆಕ್ಕ ಸಮನ್ವಯಗೊಳಿಸಿ ದೃಢೀಕೃತ ಪ್ರತಿಗಳೊಂದಿಗೆ ಅನುಪಾಲನಾ ವರದಿ ಕೊಡಲು ತಿಳಿಸಿ ಸೂಚಿಸಲಾಗಿದೆ | | |

| | | |
|---|---|---|
| **15** | <u>**ವಿವಿಧ ಬ್ಯಾಂಕ್ ಖಾತೆ ತೆರೆದಿರುವ ಹಣಕಾಸು ವಿಭಾಗದಲ್ಲಿ ಭಾಗಶಃ ಹಾಜರುಪಡಿಸಿರುವುದು ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿ ಬ್ಯಾಂಕ್ ಖಾತೆಗಳ ಜಮಾ ಖರ್ಚುಗಳನ್ನು ತೆಗೆದುಕೊಳ್ಳದೆ ಇರುವುದು :–**</u><br><br>ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಎಲ್ಲಾ ಬ್ಯಾಂಕ್ ಖಾತೆ ತರೆದಿರುವ ವಿವರವನ್ನು ಲೆಕ್ಕಪರಿಶೋಧನೆಗೆ ಸಂಪೂರ್ಣವಾಗಿ ಹಣಕಾಸು ಅಧಿಕಾರಿಗಳು ದೃಢೀಕರಿಸಿ ಬ್ಯಾಂಕ್ ಖಾತೆಗಳ ಪಟ್ಟಿಗಳ (List of Bank Account) ದೃಢೀಕೃತ ಪ್ರತಿ ಹಾಜರುಪಡಿಸಬೇಕಾಗಿರುತ್ತದೆ. ಆದರೆ ಭಾಗಶಃ ಹಾಜರುಪಡಿಸಿರುತ್ತಾರೆ. ಹಾಗೂ ವಾರ್ಷಿಕ ಲೆಕ್ಕಪತ್ರ ಸೇರಿಸಿ ಅನುಮೋದನೆಗೊಂಡಿರುವಂತೆ ಜಮಾ ಹಾಗೂ ಖರ್ಚಿನ ವಿವರವನ್ನು ಅಂಕಿ ಅಂಶಗಳೊಂದಿಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಹಾಜರುಪಡಿಸಿರುವ ಬ್ಯಾಂಕ್ ಖಾತೆಗಳ ಆಧಾರದ ಮೇಲೆ ತಪಾಸಣೆ ಕೈಗೊಳ್ಳಲಾಗಿ ವಿಚಾರಣೆ ಸಂಖ್ಯೆ:156/2018–19/01.08.2018 ಹಾಗೂ 161/02.08.2018 ರಂದು ನೀಡಲಾಗಿದ್ದರೂ ಹಾಜರುಪಡಿಸಿರುವುದಿಲ್ಲ. ಮುಂದುವರೆದು ಇದೇ ರೀತಿ ಚಾಲ್ತಿಯಲ್ಲಿರುವ ಎಲ್ಲಾ ಬ್ಯಾಂಕ್ ಖಾತೆಗಳನ್ನು ಶಾಖಾಧಿಕಾರಿಗಳು ದೃಢೀಕರಿಸಿದ ಪ್ರತಿಗಳನ್ನು ಹಾಜರುಪಡಿಸಬೇಕಾಗಿರುತ್ತದೆ. ಈ ಬಗ್ಗೆ ವಿಚಾರಣಾ ಪತ್ರ ನೀಡಿದ್ದಾಗ್ಯೂ ಭಾಗಶಃ ಬ್ಯಾಂಕ್ ಖಾತೆ ವಿವರ ಹಾಜರುಪಡಿಸಿರುತ್ತಾರೆ. ಇದರಿಂದಾಗಿ ವಾರ್ಷಿಕ ಲೆಕ್ಕ, ಬ್ಯಾಂಕ್ ಖಾತೆ, ನಗದು ಪುಸ್ತಕ ಇತ್ಯಾದಿಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ಯಾವುದೇ ರೀತಿಯ ಹಣದುರುಪಯೋಗ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿ/ನೌಕರರ ಮೇಲೆ ಆಡಳಿತಾತ್ಮಕ ಕ್ರಮಕೈಗೊಂಡು ಆಡಿಟ್ ಕಂಡಿಕೆಗೆ ಪಾಲನ ವರದಿ ನೀಡಲು ತಿಳಿಸಿದೆ.<br>1. ಶತಮಾನೋತ್ಸವ ನಿಧಿ (Centenary fund) ಖಾತೆ ಸಂಖ್ಯೆ:64188362460 ರೂ.2,46,55,703/– ರಾಷ್ಟ್ರೀಯ ವಿಜ್ಞಾನ ಕಾಂಗ್ರೇಸ್ (University science | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತಾವಿತ ಬ್ಯಾಂಕ್ ಖಾತೆಯಲ್ಲಿ 2016–17 ನೇ ಸಾಲಿನಲ್ಲಿ ಆಂತರಿಕವಾಗಿ ವರ್ಗಾವಣೆಯಾಗಿರುವ ಮೊತ್ತಕ್ಕೆ ಸಂಬಂಧಿಸಿದಂತೆ ವರ್ಗಾವಣೆಯಾಗಿರುವ ಮೊತ್ತಗಳನ್ನು ಧೃಢೀಕರಿಸಿ ಬ್ಯಾಂಕ್ ಸ್ಕ್ರೋಲ್ ಪ್ರತಿಯನ್ನು ಈ ಸಂಬಂಧದ ಕಛೇರಿ ಆದೇಶಗಳ ಪ್ರತಿಯೊಂದಿಗೆ ಲೆಕ್ಕಪರಿಶೋಧನೆಗೆ ಸಲ್ಲಿಸಿದೆ.<br><br>(1) ಶತಮಾನೋತ್ಸವ ಖಾತೆಯಿಂದ (ಎಸ್.ಬಿ ಖಾತೆ ಸಂಖ್ಯೆ:6417214133) ರ ಖಾತೆಯಿಂದ ದಿನಾಂಕ:14.02.2017 ರಲ್ಲಿ ಖರ್ಚುಗಿರುವ ಮೊತ್ತ ರೂ.2,46,55,103/– ಗಳು (ರಾಷ್ಟ್ರೀಯ ವಿಜ್ಞಾನ ಕಾಂಗ್ರೇಸ್) ಖಾತೆ ಸಂಖ್ಯೆ:64188362460 ಕ್ಕೆ 28.02.2017 ರಲ್ಲಿ ರೂ.246,55,103/– ಗಳು ಜಮೆಯಾಗಿರುವುದಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಸ್ಕ್ರೋಲ್ ಪ್ರತಿ ಲಗತ್ತಿಸಿದೆ.<br>(2) ಸದರಿ ವಹಿವಾಟಿನಲ್ಲಿ ವಿಶ್ವವಿದ್ಯಾನಿಲಯದ ಆದೇಶದೊಂದಿಗೆ Kset ಖಾತೆಯ ನಿಧಿ ವರ್ಗಾವಣೆ ಹುಂಡಿಯ ದಿನಾಂಕ:29.11.2016, Kset ಸಂಯೋಜಕ ರ ಕಛೇರಿ ಆದೇಶದೊಂದಿಗೆ ರೂ.2,50,00,000/– ವಿಶ್ವವಿದ್ಯಾನಿಲಯದ ಮೂಲಭೂತ ಸೌಕರ್ಯ ನಿಧಿ ಖಾತೆಗೆ ಹೊಂದಿಕೆಯಾಗಿರುವ ವಾಹಿವಾಟನ್ನು ಧೃಢೀಕರಿಸುವ ಸಂಯೊಜಕರ ಕಛೇರಿ ಆದೇಶದೊಂದಿಗೆ ರೂ.2,50,00,000/– ವಿಶ್ವವಿದ್ಯಾನಿಲಯದ ಮೂಲಭೂತ ಸೌಕರ್ಯ ನಿಧಿ ಖಾತೆಗೆ ಹೊಂದಾಣಿಕೆಯಾಗಿರುವ ವಾಹಿವಾಟನ್ನು ಧೃಢೀಕರಿಸುವ ಬ್ಯಾಂಕ್ ಸ್ಕ್ರೋಲ್ ವಿವರವನ್ನು ಲೆಕ್ಕ ತನಿಖೆ ಅವಗಾಹನೆಗೆ |

| | | |
|---|---|---|
| | congress) ಖಾತೆಗೆ ಜಮೆ ಆಗಿರುವ ಮತ್ತು<br>2. ಖಾತೆ ಸಂಖ್ಯೆ:64188362460 ರೂ.2,46,55,103/- University Science Congress ಖಾತೆಯಿಂದ Century fund ಖಾತೆಗೆ ಜಮೆಯಾಗಿರುವ ಹಾಗೂ<br>3. ಮೂಲಭೂತ ಸೌಕರ್ಯಗಳು ಅಭಿವೃದ್ಧಿ ಖಾತೆಯಿಂದ 54007591324 ಯಿಂದKset ಖಾತೆಯ ಸಂಖ್ಯೆ 64086586543 ಕ್ಕೆ ರೂ.2,50,00,000/-ಗಳ ಜಮೆ<br>4. ಅಮಾನತ್ತು ಖಾತೆ ಸಂಖ್ಯೆ:64078361619 ರಲ್ಲಿನ ಜಮಾ : 23,30,95,557/-<br>ಖರ್ಚು : 2,33,73,224/-<br>ವಿಚಾರಣೆ ಸಂಖ್ಯೆ:222/21.08.2018 ರಂತೆ ವಾರ್ಷಿಕ ಲೆಕ್ಕ ಮತ್ತು ಪೂರ್ಣವಾಗಿ ಜಮಾ ಖರ್ಚಿನ ವಿವರವನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದಿರುವುದಿಲ್ಲ ಹಾಗೂ ಕೆಲವೊಂದನ್ನು ವಾರ್ಷಿಕ ಲೆಕ್ಕದಲ್ಲಿ ತೆಗೆದುಕೊಂಡಿರುವುದಿಲ್ಲ. ಇದು ಸರ್ಕಾರದ ಆರ್ಥಿಕ ವಹಿವಾಟಿನ ನಿಯಮಕ್ಕೆ ವಿರುದ್ಧವಾಗಿರುತ್ತದೆ. | ಮಂಡಿಸಿದೆ ಸಂಬಂಧಿಸಿದಂತೆ ಬ್ಯಾಂಕ್ ಸ್ಕ್ರೋಲ್ ಪ್ರತಿ ಲಗತ್ತಿಸಿದೆ.<br>(3) ಖಾತೆ ಸಂ:64078361619 ರಲ್ಲಿನ 2016-17 ನೇ ಸಾಲಿನಲ್ಲಿ ಅರ್ಥಿಕ ವಹಿವಾಟಿಗೆ ಸಂಬಂಧಿಸಿದ ಒಟ್ಟು ಜಮಾ ರೂ.23,30,95,557/- ಮತ್ತು ಒಟ್ಟು ಖರ್ಚು ರೂ.2,33,73,224/- ರ ವಿವರವನ್ನು ಬ್ಯಾಂಕ್ ಅಧಿಕಾರಿಗಳ ಧೃಢೀಕರಣ ವಿವರದೊಂದಿಗೆ ಸಲ್ಲಿಸಿದೆ.<br>ಮೇಲಿನ ಅರ್ಥಿಕ ವಹಿವಾಟುಗಳ ವಾರ್ಷಿಕ ಲೆಕ್ಕ ಪತ್ರದಲ್ಲಿ ಸೇರ್ಪಡೆಯಾಗಿರುವುದರ ವಿವರ ಮತ್ತು ಸಿಂಡಿಕೇಟ್ ಸಭಯಲ್ಲಿ ಮುಂಚಿತವಾಗಿ ಅನುಮೋಧನೆಯಾಗಿರುವ ವಿವರ ಲಗತ್ತಿಸಿದೆ. ಅದ್ದರಿಂದ ಸದರಿ ಕಂಡಿಕೆಯನ್ನು ಕೈ ಬಿಡಲು ಕೋರಿದೆ. |

<table>
<tr>
<td>16</td>
<td>
<u>2016–17ನೇ ಸಾಲಿನ ಜಿ.ಆರ್.ಎ ನಗದು ಪುಸ್ತಕದ ಒಟ್ಟು ಸ್ವೀಕೃತಿ ಹಾಗೂ ವಾರ್ಷಿಕ ಲೆಕ್ಕಪತ್ರದ ಒಟ್ಟು ಸ್ವೀಕೃತಿಗೂ ವ್ಯತ್ಯಾಸ ಕಂಡುಬಂದಿರುವ ಬಗ್ಗೆ :–</u><br>
2016–17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಲೆಕ್ಕಪರಿಶೋಧನೆ ಕೈಗೊಂಡ ಸಂದರ್ಭದಲ್ಲಿ ಜಿ.ಆರ್.ಎ ನಗದು ಪುಸ್ತಕ ಹಾಗೂ ವಾರ್ಷಿಕ ಲೆಕ್ಕಪತ್ರದಂತೆ ಒಟ್ಟಾರೆ ಸ್ವೀಕೃತಿಯಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ಈ ವ್ಯತ್ಯಾಸ ಕುರಿತು ವಿಚಾರಣಾ ಪತ್ರ ಸಂಖ್ಯೆ:215/2018–19 ದಿನಾಂಕ:27.08.2018 ಹಾಗೂ ವಿಚಾರಣಾ ಪತ್ರ ಸಂಖ್ಯೆ:08/06.07.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ಸಂಬಂಧಿಸಿದ ನಗದು ಪುಸ್ತಕ ಹಾಗೂ ವಾರ್ಷಿಕ ಲೆಕ್ಕಪತ್ರದ ಸ್ವೀಕೃತಿ ವರ್ಗೀಕರಣ ವಿವರವನ್ನು ತಾಳೆ ಮಾಡಿ ಪರಿಶೀಲನೆಗೆ ಹಾಜರುಪಡಿಸಬೇಕೆಂದು ತಿಳಿಸಲಾಗಿದ್ದರೂ ವಿಚಾರಣಾ ಅವಧಿಯಲ್ಲಿ ಸ್ವೀಕೃತಿ ಹೊಂದಾಣಿಕೆ ವರ್ಗೀಕರಣ ವಿವರವನ್ನು ಹಾಜರುಪಡಿಸದೇ ಇರುವುದರಿಂದ ಈ ಬಗ್ಗೆ ಹಣಕಾಸು ಅಧಿಕಾರಿಗಳಿಗೆ ಕಂಡಿಕೆಗೆ ವಿವರಣೆಯನ್ನು ನೀಡಲು ಸೂಚಿಸುತ್ತಾ ಯಾವುದೆ ರೀತಿಯ ವ್ಯತ್ಯಾಸ ಹಾಗೂ ಅಪವ್ಯಯ ಕಂಡುಬಂದಲ್ಲಿ ಸಂಬಂಧಿಸಿದವರ ಮೇಲೆ ಆಡಳಿತಾತ್ಮಕ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.<br>
ಹಣಕಾಸು ವಿಭಾಗದಲ್ಲಿ ನಿರ್ವಹಿಸಿರುವ ನಗದು ಪುಸ್ತಕ ಹಾಗೂ ವಾರ್ಷಿಕ ಲೆಕ್ಕಪತ್ರದಂತೆ ವ್ಯತ್ಯಾಸವು ಈ ರೀತಿ ಇದೆ.<br>
1. ಜಿ.ಆರ್.ಎ ನಗದು ಪುಸ್ತಕ ಹಾಗೂ ಜಿ.ಆರ್.ಎ ಖಾತೆ ಸಂಖ್ಯೆ:54007591471<br>
ರೂ.4315917380/–<br>
2. 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದ ಒಟ್ಟು ಸ್ವೀಕೃತಿ <u>ರೂ.3547465214/– </u>ವ್ಯತ್ಯಾಸ <u>ರ(–) 768452166/–</u><br>
ನಗದು ಪುಸ್ತಕದ ಪ್ರಕಾರ 2016–17ನೇ ಸಾಲಿನ ಜಮಾ ಮತ್ತು ಖರ್ಚಿನ ವಿವರಗಳು ಕೆಳಕಂಡಂತಿದೆ.
<table>
<tr><th colspan="3">Cash Book OB 132908272/-</th></tr>
<tr><th></th><th>Recipet</th><th>Payment</th></tr>
<tr><td>4/16</td><td>336343131</td><td>340684158</td></tr>
</table>
</td>
<td>ಲೆಕ್ಕಪರಿಶೋಧನಾ ವರದಿಯಲ್ಲಿ ಜಿ.ಆರ್.ಎ ಖಾತೆಯ ಅರ್ಥಿಕ ವಹಿವಾಟಿನಲ್ಲಿ ಜಿ.ಆರ್.ಎ ನಂ:540075914771 ನಗದು ಪುಸ್ತಕದ ಪ್ರಕಾರ ಒಟ್ಟು ಸ್ವಿಕೃತಿಗಳು 4,31,59,17,380/–ರೂ ಆಗಿದ್ದು ವಾರ್ಷಿಕ ಲೆಕ್ಕಪತ್ರದ ಪ್ರಕಾರ 3.54.74.65.214/– ವ್ಯತ್ಯಾಸ 76,84,52,166/– ಇರುವ ಬಗ್ಗೆ ಯಾವುದೇ ವಿವರಣೆಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದು ಎಂದು ಉಲ್ಲೇಖಿಸಲಾಗಿದೆ, ಈ ವ್ಯತ್ಯಾಸ ಕಾರಣವಾಗಿರುವ ಕಾಂಟ್ರಾ ಎಂಟ್ರಿಗಳ ದಾಖಲೆ ವಿವರಗಳೊಂದಿಗೆ ಸಮನ್ವಯಗೊಳಿಸಿರುವ ವಿವರವನ್ನು ಸಲ್ಲಿಸಲಾಗಿದೆ ಈ ಹಿನ್ನೆಲೆಯಲ್ಲಿ ಸದರಿ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ.</td>
</tr>
</table>

| | | | | | | |
|---|---|---|---|---|---|---|
| | | 5/16 | 340887949 | 224678469 | | |
| | | 6/16 | 417685716 | 272466546 | | |
| | | 7/16 | 458315449 | 697601120 | | |
| | | 8/16 | 32035548 | 303403561 | | |
| | | 9/16 | 348979418 | 354072823 | | |
| | | 10/16 | 526084353 | 415599202 | | |
| | | 11/16 | 390302252 | 442395581 | | |
| | | 12/16 | 333937150 | 145395897 | | |
| | | 01/17 | 27453309 | 515900290 | | |
| | | 02/17 | 295268723 | 231527062 | | |
| | | 03/17 | 273216382 | 363952895 | | |
| | | **ಒಟ್ಟು** | **4315917380** | **4307677604** | | |

| | | |
|---|---|---|
| **17** | **<u>2016–17ನೇ ವರ್ಷದ ಹಣಕಾಸು ವಿಭಾಗದಲ್ಲಿನ ಮಾಸಿಕ ಜಮಾ ಖರ್ಚುಗಳ ಲೆಕ್ಕಪತ್ರಗಳನ್ನು ನಿರ್ವಹಿಸದೆ ಇರುವುದು ಹಾಗೂ ಬ್ಯಾಂಕ್ ಖಾತೆ ಜಮಾ ಖರ್ಚು ಪ್ರತ್ಯೇಕ ಲೆಕ್ಕಪತ್ರಗಳನ್ನು ನಿರ್ವಹಿಸದೆ ಹಾಗೂ ಹೆಚ್ಚುವರಿ ಬ್ಯಾಂಕ್ ಖಾತೆಗಳನ್ನು ತೆರೆದಿರುವುದರ ವಿವರ ಹಾಜರುಪಡಿಸದೆ ಇರುವುದು :–</u>**<br>2016–17ನೇ ವರ್ಷದ ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ತಪಾಸಣೆಯ ಅವಧಿಯಲ್ಲಿ ಹಾಜರುಪಡಿಸಿರುವ ವಾರ್ಷಿಕ ಲೆಕ್ಕಪತ್ರ ನಗದು ಪುಸ್ತಕ ಬ್ಯಾಂಕ್ ಸ್ಕ್ರೋಲ್‌ಗಳನ್ನು ಪರಿಶೀಲಿಸಿದಾಗ ಮಾಹೆವಾರು ದೈನಂದಿನ ಜಮಾ ಖರ್ಚುಗಳಿಗೆ ಸಂಬಂಧಿಸಿದಂತೆ ಮಾಹೆವಾರು ಜಮಾ ಖರ್ಚಿನ ಸ್ವೀಕೃತಿ ವೆಚ್ಚದ ವರ್ಗೀಕರಣ ವಿವರದೊಂದಿಗೆ ಉಪಶೀರ್ಷಿಕೆವಾರು ವರ್ಗೀಕೃತ ಜಮಾ ಖರ್ಚು ತಯಾರಿಸಿಬೇಕಾಗಿದ್ದು, ಮಾಸಿಕ ಲೆಕ್ಕಪತ್ರ ತಯಾರಿಸದೆ ಇರುವುದರಿಂದ ಯಾವ ಯಾವ ಬ್ಯಾಂಕ್ ಖಾತೆ ನಗದು ಪುಸ್ತಕ ಅಂತಿಮ ಶಿಲ್ಕು ಇತರೆ ವ್ಯತ್ಯಾಸಗಳನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ. ಬ್ಯಾಂಕ್ ಖಾತೆವಾರು ನಿರ್ವಹಿಸಿರುವ ನಗದು ಪುಸ್ತಕಕ್ಕೆ ಅನುಗುಣವಾಗಿ ಪ್ರತ್ಯೇಕ ಜಮಾ ಖರ್ಚುಗಳ ಸ್ವೀಕೃತಿ ಪಾವತಿಗಳನ್ನು ಯಾವ ಯಾವ ಮೂಲಗಳಿಂದ ಆದಾಯ ಸ್ವೀಕೃತಿ ಶುಲ್ಕ ತೆರಿಗೆ ಇತರೆ ಅನುದಾನ ಸ್ವೀಕೃತಿ ಇತ್ಯಾದಿ ಮತ್ತು ಯಾವ ಯಾವ ಬಾಬ್ತು ಯೋಜನೆಗಳಿಗೆ ಎಷ್ಟು ವೆಚ್ಚ ಮಾಡಲಾಗಿದೆ ಇತ್ಯಾದಿ ವೆಚ್ಚದ ವಿವರ ಉಪಶೀರ್ಷಿಕೆವಾರು ತಾಳೆ ಮಾಡಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಕ್ರಮಕೈಗೊಂಡು ಮಾಸಿಕ ಲೆಕ್ಕಪತ್ರವನ್ನು ನಿರ್ವಹಿಸಲು ಸೂಚಿಸಿದೆ.<br>ಸದರಿ ವಿಚಾರದಲ್ಲಿ ವಿಚಾರಣೆ ಸಂಖ್ಯೆ:90/2018–19 ದಿನಾಂಕ:28.07.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ವರ್ಗೀಕೃತ ಜಮಾ ಖರ್ಚಿನ ಮಾಸಿಕ ಲೆಕ್ಕಪತ್ರಗಳನ್ನು ಹಾಜರುಪಡಿಸದೆ ಇರುವುದರ ವಿಚಾರದಲ್ಲಿ ಹಣಕಾಸು ಅಧಿಕಾರಿಗಳು ಕ್ರಮಕೈಗೊಂಡು ಮಾಸಿಕ ಲೆಕ್ಕಪತ್ರಗಳನ್ನು ನಿರ್ವಹಿಸಲು ತಿಳಿಸಿದೆ. ಮಾಸಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸುವುದು ಹಣಕಾಸು ಅಧಿಕಾರಿಯವರ ಆದ್ಯ ಕರ್ತವ್ಯವಾಗಿರುತ್ತದೆ. | ಈ ಕಂಡಿಕೆಯಲ್ಲಿ ಸಲಹೆ ಸೂಚನೆಗಳನ್ವಯ ಮಾಸಿಕ ಜಮ ಖರ್ಚುಗಳ ಲೆಕ್ಕ ಪತ್ರಗಳನ್ನು ಮುಂದೆ ನಿರ್ವಹಿಸಲು ಹಾಗೂ ಬ್ಯಾಂಕ್ ಖಾತೆಯ ಜಮ ಖರ್ಚುಗಳ ಪ್ರತೇಕ ಲೆಕ್ಕ ಪತ್ರ ನಿರ್ವಹಿಸಲು ಅಗತ್ಯ ಕ್ರಮವಹಿಸಲಾಗುತ್ತದೆ. |

| | | |
|---|---|---|
| 18 | **<u>ಹಣಕಾಸು ವಿಭಾಗದ ವಿವಿಧ ಬ್ಯಾಂಕ್ ಖಾತೆಗಳ ನಡುವೆ ಆದ ಜಮಾ ಖರ್ಚು (Inter A/C Transfer) ಸರಿಯಾಗಿ ಸಮನ್ವಯಗೊಳಿಸದೆ ಇರುವುದು :-</u>**<br><br>ಮೈಸೂರು ವಿಶ್ವವಿದ್ಯಾನಿಲಯದ 2016-17ನೇ ವರ್ಷದ ಹಣಕಾಸು ವಿಭಾಗದ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ ವಿವಿಧ ಖಾತೆಗಳ ನಡುವೆ ಜಮೆ ಹಾಗೂ ಪಾವತಿ ನಡೆದಿರುವುದು ಕಂಡುಬಂದಿರುತ್ತದೆ. ಸದರಿ ಜಮೆ ಮತ್ತು ಪಾವತಿಗಳು ಯಾವುದೇ ಬಾಹ್ಯ ಸಂಸ್ಥೆಗಳಿಂದಾಗದೆ ವಿಶ್ವವಿದ್ಯಾನಿಲಯದ ಖಾತೆಗಳ ನಡುವೆಯೆ ಆಗಿರುತ್ತದೆ. ಆದರೆ ಖಾತೆಗಳ ನಡುವೆ ಆದ ಒಟ್ಟು ಜಮೆಯ ಮೊತ್ತವು ಖಾತೆಗಳ ನಡುವೆ ಪಾವತಿಯಾದ ಮೊತ್ತಕ್ಕೆ ಸಮವಾಗಿರುವುದು ಅವಶ್ಯಕವಿರುತ್ತದೆ. ಆದರೆ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಜಮಾ ಖರ್ಚುಗಳನ್ನು ಸಮನ್ವಯಗೊಳಿಸದೆ ಇರುವುದು ಕಂಡುಬಂದಿರುತ್ತದೆ.<br><br>ವಾರ್ಷಿಕ ಲೆಕ್ಕಪತ್ರದಲ್ಲಿ 205 ವರ್ಗಾವಣೆ/ಸಾಲ ಇತರೆ ನಿಧಿಗಳಿಗೆ ಹೆಚ್ಚಿನ ಖಾತೆಗಳ ನಡುವೆ ಆದ ಜಮೆ ಮತ್ತು ಪಾವತಿಯನ್ನು ನಮೂದಿಸಿದ್ದು, ಸಂಬಂಧಪಟ್ಟ ಖಾತೆಗಳ ವಿವರಗಳನ್ನು ನಮೂದಿಸಿರುವುದಿಲ್ಲ. ಖಾತೆಗಳ ನಡುವಿನ ಜಮಾ ಮತ್ತು ಖರ್ಚು Inter Accounts transferಗಳನ್ನು ಒಂದೇ ಲೆಕ್ಕಶೀರ್ಷಿಕೆ 205ರಲ್ಲಿ ನಮೂದಿಸದೆ ನಿಖರವಾಗಿ ವಿವರವಾಗಿ ನಿರ್ದಿಷ್ಟ ಖಾತೆಗೆ ಜಮೆ ಆದ ಖರ್ಚು ಎಂದು ನಮೂದಿಸಿದ್ದಲ್ಲಿ ಹೆಚ್ಚಿನ ಸ್ಪಷ್ಟತೆ ಇರುತ್ತಿತ್ತು.<br><br>ಈ ಬಗ್ಗೆ ವಿಚಾರಣೆ ಸಂಖ್ಯೆ:199/2018-19 ದಿನಾಂಕ:20.08.2018 ಮತ್ತು 58/2018-19 ದಿನಾಂಕ:19.07.2018ರಲ್ಲಿ ಎಲ್ಲ ಖಾತೆಗಳ ನಡುವೆ ಆದ ಜಮಾ ಮತ್ತು ಖರ್ಚು (Inter Accounts transfer) ವಿವರ ಕೋರಲಾಗಿ ಈ ಕೆಳಗಿನ ಖಾತೆಗಳ ವಿವರ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br><br>ಕ್ರ.ಸಂ / ವಿವರ / ಬ್ಯಾಂಕ್ ಖಾತೆ ಸಂಖ್ಯೆ:<br>1 / ಪ್ರಾಯೋಜಿತ ಕಾರ್ಯಕ್ರಮಗಳು / 54007591437<br>2 / ಮೂಲಭೂತ ಸೌಕರ್ಯ ಅಭಿವೃದ್ಧಿ ನಿಧಿ / 54007591324<br>3 / School of Planning Architecture / 64098950735<br>4 / N.S.S Regular / 64079956683<br>5 / ದತ್ತಿ ನಿಧಿ / 54007591299 | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಲವಾರು ವಿಭಾಗ/ ಕಛೇರಿಗಳು, ಕಾರ್ಯನಿರ್ವಹಿಸುತ್ತಿದ್ದು ಪ್ರತಿಯೊಂದು ವಿಭಾಗ ಕಛೇರಿಗಳಡಿ ವಿವಿಧ ರೀತಿಯ ಚಟುವಟಿಕೆಗಳ ಕಾರ್ಯಕಲಾಪಗಳು ನಡೆಯುತ್ತಿದ್ದು ಈ ಕಾರ್ಯಕಲಾಪಗಳ ಸುಗಮವಾಗಿ ಹಾಗೂ ತ್ವರಿತವಾಗಿ ಮುಂದುವರಿಯಲು ಉದ್ದೇಶದಿಂದ ವಿಶ್ವವಿದ್ಯಾನಿಲಯದ ಕಟ್ಟಡ ಸಂಕೀರ್ಣದಲ್ಲಿ ಹಾಗೂ ಇತರೆಡೆ ಇರುವಂತಹ ಅಂಗೀಕೃತ ಬ್ಯಾಂಕುಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವ್ಯಾಪ್ತಿಯಲ್ಲಿ ಖಾತೆಗಳನ್ನು ತೆರೆದು ಆಯಾಯ ಬ್ಯಾಂಕುಗಳಲ್ಲಿ ಕಾರ್ಯ ಯೋಜಿನೆಗಳಿಗನುಸಾರ ಕಾರ್ಯನಿರ್ವಹಿಸಲಾಗುತ್ತಿದೆ, ಅದರಂತೆ 2016-17 ನೇ ಸಾಲಿನಲ್ಲಿಯೂ ಸಹ ವಿವಿಧ ಬ್ಯಾಂಕುಗಳಲ್ಲಿ ವಿವಿಧ ಶೀರ್ಷಿಕೆಯಡಿ ಯೋಜನೆಗಳಿಗನುಸಾರ ಜಮೆ ಮತ್ತು ಖರ್ಚುಗಳ ನಿರ್ವಹಣೆಯನ್ನು ಪ್ರತ್ಯೇಕ ನಿರ್ವಹಿಸಲಾಗಿದ್ದು ಜಮೆ ಮತ್ತು ಖರ್ಚುಗಳ ವಿವರವನ್ನು ಸಮನ್ವಯಗೊಳಿಸಿದ್ದು ಹಲವು ಖಾತೆಗಳ ಸಮನ್ವಯ ಕಾರ್ಯ ಪ್ರಗತಿಯಲ್ಲಿದ್ದು ಇದನ್ನು ಪೂರ್ಣಗೊಳಿಸಿ ಮುಂದಿನ ಲೆಕ್ಕ ತನಿಖಾ ಅವಧಿಗೆ ಹಾಜರುಪಡಿಸಲಾವುದೆಂಬ ಅಂಶವನ್ನು ನಿವೇದಿಸಲಾಗಿದೆ. |

| | | |
|---|---|---|
| 6 | EMMRC | 64195528043 |
| 7 | ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನ | 64178514575 |
| 8 | ಶತಮಾನೋತ್ಸವ ನಿಧಿ | 641883662460 |
| 9 | ಅಮೃತ ಮಹೋತ್ಸವ ನಿಧಿ | 54007591380 |
| 10 | ಜೈನಾಲಜಿ ಮತ್ತು ಪ್ರಾಕೃತ್ | 54007591288 |

ಸದರಿ ವಿಚಾರಣೆಗಳಿಗೆ ನೀಡಿದ ಲಿಖಿತ ಉತ್ತರದಲ್ಲಿ ಈ ಕೆಳಗಿನ ಜಮೆ ಮತ್ತು ಪಾವತಿಗಳನ್ನು (ಭಾಗಶಃ) ನೀಡಲಾಗಿದೆ ಎಂದು ವಿಶ್ವವಿದ್ಯಾನಿಲಯ ಹಣಕಾಸು ವಿಭಾಗದಿಂದ ದೃಢೀಕರಿಸಿ ನೀಡಲಾಗಿದೆ.

| ಕ್ರ.ಸಂ | ವಿವರ | ಬ್ಯಾಂಕ್ ಖಾತೆ ವಿವರ | ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳ ಜಮಾ ಹಾಗೂ ಪಾವತಿ | |
|---|---|---|---|---|
| | | | ಜಮಾ | ಪಾವತಿ |
| 1 | ಸಾಮಾನ್ಯ ನಿಧಿ ಖಾತೆ | 54007591471 | 842500000 | 770000000 |
| 2 | ಪರೀಕ್ಷ ನಿಧಿ | 54007591200 | 300000000 | 613382708 |
| 3 | ಅಮಾನತ್ತು ಖಾತೆ | 54007592511 | – | 1468284 |
| 4 | ಪಿಂಚಣಿ ಖಾತೆ | 54007591379 | 887864486 | – |
| 5 | ವಿ.ವಿ ಶತಮಾನೋತ್ಸವ | 64148299721 | 80000000 | 398500000 |
| 6 | ಸಹದ್ಯೋಮ ಕೋರ್ಸುಗಳು | 54007592690 | 375339330 | 392624189 |
| 7 | ಸಾಲಮುಂಗಡ ಮತ್ತು ಠೇವಣಿ | 54007591368 | – | 17500000 |
| 8 | Institution of Excalation | 64049535138 | 781 | – |
| | | ಒಟ್ಟು | **2485705197** | **2882139667** |

ನೀಡಿರುವ ಲಿಖಿತ ಉತ್ತರಗಳ ಪ್ರಕಾರ ಒಟ್ಟು ಜಮೆ ಮತ್ತು ಒಟ್ಟು ಪಾವತಿಗಳು ಸಮವಾಗಿರದ ಕಾರಣ ಮತ್ತು ಎಲ್ಲಾ ಖಾತೆಗಳ ವಿವರ ನೀಡದ ಕಾರಣ ಖಾತೆಗಳ ನಡುವಿನ ಜಮೆ ಖರ್ಚು (Inter accounts transfer) ಸರಿಯಾದ ಮೊತ್ತವನ್ನು ಕಂಡುಹಿಡಿಯಲು ಸಾಧ್ಯವಿಲ್ಲ ಮತ್ತು ಈ ಮಾಹಿತಿಯನ್ನು ಅಪೂರ್ಣವಾಗಿ ವಾರ್ಷಿಕ ಲೆಕ್ಕಪತ್ರದಲ್ಲಿ ನಮೂದಿಸಿರುವುದು ವಾರ್ಷಿಕ ಲೆಕ್ಕಪತ್ರದ ಪ್ರಮುಖ

| | | |
|---|---|---|
| | ಲೋಪದೋಷವಾಗಿರುತ್ತದೆ.<br>ಸದರಿ ಮಾಹಿತಿ (Inter accounts transfer) ಪೂರ್ಣವಾಗಿರದ ಕಾರಣ ಅಂಕಿ ಅಂಶಗಳನ್ನು ಸಮನ್ವಯಗೊಳಿಸಿ ಅನುಪಾಲನ ವರದಿ ನೀಡಲು ಸೂಚಿಸಿದೆ. | |

19 **<u>ವಿವಿಧ ಬ್ಯಾಂಕ್ ಖಾತೆಗಳ ನಗದು ಪುಸ್ತಕದಲ್ಲಿ ಋಣಾತ್ಮಕ ಅಂತಿಮ ಶಿಲ್ಕು ಉಳಿದಿದ್ದು, ಧನಾದೇಶವನ್ನು ಹೆಚ್ಚುವರಿ ನೀಡಿರುವುದು :–</u>**

2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ನಗದು ಪುಸ್ತಕ ಹಾಗೂ ಬ್ಯಾಂಕ್ ಪಾಸ್‌ಶೀಟ್‌ಗಳ ಪ್ರಕಾರ ದಿನಾಂಕ:31.03.2017ರ ಅಂತ್ಯಕ್ಕೆ ವಿವಿಧ ಬ್ಯಾಂಕ್ ಖಾತೆಗಳಲ್ಲಿ ಅಂತಿಮ ಶಿಲ್ಕು ಋಣಾತ್ಮಕವಾಗಿದ್ದು, ಬ್ಯಾಂಕ್ ಖಾತೆಯಲ್ಲಿ (Available Balance) ದೊರೆಯಬಹುದಾದರೆ ಬಾಕಿ ಇಲ್ಲದೆ ಹೆಚ್ಚುವರಿ ಧನಾದೇಶಗಳನ್ನು ನೀಡಿರುವುದು ನಿಯಮ ಬಾಹಿರವಾಗಿರುತ್ತದೆ. ಈ ಪದ್ಧತಿ Negotiable investment acts ಕಾಯಿದೆಗೆ ವಿರುದ್ಧವಾಗಿರುತ್ತದೆ. ಹಾಗೂ ನಗದು ಪುಸ್ತಕದ ನಿರ್ವಹಣೆಯ ಗಂಭೀರ ಕರ್ತವ್ಯ ಲೋಪವಾಗಿರುತ್ತದೆ. ಈ ಬಗ್ಗೆ ಬ್ಯಾಂಕ್ ವ್ಯವಸ್ಥಾಪಕರಿಗೆ ಪತ್ರವ್ಯವಹರಿಸಿ ಅನುದಾನ ಸ್ವೀಕೃತಿ ಬಗ್ಗೆ ಪ್ರಮಾಣೀಕರಣ ಮಾಡಿರುವ ದೃಢೀಕರಣ ಪತ್ರ ಪಡೆಯದೆ ನಿಯಮ ಬಾಹಿರವಾಗಿ ಧನಾದೇಶ ವಿತರಿಸಿರುವ ಹಿನ್ನೆಲೆಯಲ್ಲಿ ಅಂತಿಮ ಶಿಲ್ಕು ಋಣಾತ್ಮಕವಾಗಿದ್ದು, ಈ ಬಗ್ಗೆ ವಿಚಾರಣೆ ಸಂಖ್ಯೆ:35/2018–19 ದಿನಾಂಕ:18.07.2018ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಬ್ಯಾಂಕ್ ದೃಢೀಕರಣ ಪತ್ರ ಹಾಜರುಪಡಿಸದೆ ಹೆಚ್ಚುವರಿ ಧನಾದೇಶ ಮುಂಗಡ ನೀಡಿರುವುದರಿಂದ ಸ್ಪಷ್ಟ ವಿವರಣೆ ಮತ್ತು ಪೂರಕ ದಾಖಲಾತಿ ನೀಡುವವರೆಗೆ **ರೂ.2,67,14,017/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ವಿವರ ಈ ರೀತಿ ಇದೆ.

| ಕ್ರ ಸಂ | ಖಾತೆ ವಿವರ | ಖಾತೆ ಸಂಖ್ಯೆ | ದಿನಾಂಕ | ನಗದು ಪುಸ್ತಕ ಶಿಲ್ಕು | ಬ್ಯಾಂಕ್ ಪಾಸ್‌ಬುಕ್ ಪ್ರಕಾರ ಶಿಲ್ಕು | ಹೆಚ್ಚುವರಿ ಧನಾದೇಶ ನೀಡಿಕೆ |
|---|---|---|---|---|---|---|
| 1 | NSS Reguler | 64079956633 | 31.05.16 | 700514 | 229335 | 929849 |
| 2 | ಅಮಾನತ್ತು ಖಾತೆ | 54007532511 | 28.02.17<br>31.03.17 | 8635162<br>270143 | 15647690 | 10199931<br>270143 |
| 3 | ಪ್ರಸಾರಾಂಗ ಆವರ್ತನಿಧಿ | 54007591426 | 01.04.16<br>30.04.16 | 4583116.28<br>472989.03 | 905922.72<br>1198065.97 | 13643039<br>1671053 |
| | | | | | ಒಟ್ಟು | **26714017** |

(1) ದಿನಾಂಕ:31.3.2016 ರಂದು ಧನಾದೇಶ ಸಂಖ್ಯೆ: 819278ರ ಮೂಲಕ ರೂ 8,84,000/–ಗಳನ್ನು ಸಂಖ್ಯೆ:54007591790ಂದ ಎನ್.ಎಸ್.ಎಸ್ Regular A/c No:64079956683 ಕ್ಕೆ ವರ್ಗಾಯಿಸಲು ಕೋರಿ ಬ್ಯಾಂಕ್ ವ್ಯವಸ್ಥಾಪಕರಿಗೆ ಪತ್ರ ಬರೆಯಲಾಗಿತ್ತು.

ಆದರೆ, ಬ್ಯಾಂಕಿನವರು ದಿನಾಂಕ:31.05.2016 ರಂದು ಸದರೀ ಮೊತ್ತವನ್ನು ಜಮೆ ಮಾಡುವ ಬದಲು ದಿನಾಂಕ:1.6.2016 ರಂದು ಜಮೆ ಮಾಡಿರುತ್ತಾರೆ. ಹಾಗಾಗಿ ದಿನಾಂಕ:31.5.2016ರ ಅಂತ್ಯಕ್ಕೆ ರೂ.(–)7,00,514/–ಗಳ ಋಣಾತ್ಮಕ ಅಂತಿಮ ಶಿಲ್ಕು ಸಂಭವಿಸಿರುತ್ತದೆ.

ದಿನಾಂಕ:01.06.2016ರಂದು ರೂ8,84,000/–ಗಳು ಜಮಾ ಆಗಿರುವುದರಿಂದ ದಿನಾಂಕ 30.06.2016ರ ಅಂತಿಮ ಶಿಲ್ಕು ರೂ2,43,978/–ಗಳಾಗಿದ್ದು ನಗದು ಪುಸ್ತಕದ ಅಂತಿಮ ಶಿಲ್ಕಿಗೂ ಬ್ಯಾಂಕ್ ಖಾತೆಯ ಅಂತಿಮ ಶಿಲ್ಕಿಗೂ ತಾಳೆಯಾಗಿರುತ್ತದೆ.

ನಗದು ಪುಸ್ತಕದ ಪ್ರತಿ ಹಾಗೂ ಬ್ಯಾಂಕ್ ಸ್ಟ್ರೋಲ್ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ ಆಕ್ಷೇಪಣೆ ಮೊತ್ತ ರೂ.29,849/–ಗಳನ್ನು ತೀರುವಳಿಗೊಳಿಸಲು ಕೋರಿದೆ.

(2) ಅಮಾನತ್ತು ಖಾತೆ ಸಂಖ್ಯೆ 54007592511ಕ್ಕೆ ಸಂಬಂಧಿಸಿದಂತೆ ದಿನಾಂಕ 25.2.2017 ಮತ್ತು ದಿನಾಂಕ 28.2.2017ರಂದು ಈ ಕೆಳಕಾಣಿಸಿದ ವಿವರಗಳಂತೆ ಜಮೆ ಮಾಡಿದ ಒಟ್ಟು ಮೊತ್ತ ರೂ.2,13,62,022/–ಗಳನ್ನು ಬ್ಯಾಂಕಿನವರು ದಿನಾಂಕ 1.3.2017ರಂದು ಖಾತೆಗೆ ಜಮೆ ತೆಗೆದು ಕೊಂಡಿರುತ್ತಾರೆ.

| ಕ್ರ | ಚಲನ್ ಸಂಖ್ಯೆ | ಜಮೆ ಮಾಡಿದ | ಜಮೆ ತೆಗೆದುಕೊಂಡಿರುವ ದಿನಾಂಕ |
|---|---|---|---|

| ಸಂ | ದಿನಾಂಕ | ಮೊತ್ತ (ರೂ) | |
|---|---|---|---|
| 1 | 3586/25.2.2017 | 39772 | 1.3.2017 |
| 2 | 3584/25.2.2017 | 25000 | 1.3.2017 |
| 3 | 3583/25.2.2017 | 25000 | 1.3.2017 |
| 4 | 3590/25.2.2017 | 94939 | 1.3.2017 |
| 5 | 3585/25.2.2017 | 23750 | 1.3.2017 |
| 6 | 3588/25.2.2017 | 31500 | 1.3.2017 |
| 7 | 3589/25.2.2017 | 10522 | 1.3.2017 |
| 8 | 3587/25.2.2017 | 226500 | 1.3.2017 |
| 9 | 3582/28.2.2017 | 900300 | 1.3.2017 |
| 10 | 3580/28.2.2017 | 649020 | 1.3.2017 |
| 11 | 3581/28.2.2017 | 19235719 | 1.3.2017 |
| | ಒಟ್ಟು | 2,13,62,022/– | |

ಹಾಗೂ ದಿನಾಂಕ 31.3.2017ರಂದು ರೂ.14,52,214/–ಗಳನ್ನು ಅಮಾನತ್ತು ಖಾತೆಯಿಂದ ಸಾಮಾನ್ಯ ರೆವಿನ್ಯೂ ಖಾತೆಗೆ ಜಮೆ ಮಾಡಿದ ಮೊತ್ತವನ್ನು ಶೂನ್ಯ ಮೊತ್ತಕ್ಕೆ ವರ್ಗಾಯಿಸಲಾಗಿದೆ ಈ ಕಾರಣದಿಂದಾಗಿ ಫ್ರೆಬ್ರವರಿ ಮತ್ತು ಮಾರ್ಚ್2017ರ ಮಾಹೆಯಲ್ಲಿ ಋಣಾತ್ಮಕ ಅಂತಿಮ ಶಿಲ್ಕು ರೂ(–)2,70,143/–ಗಳು ದಾಖಲಾಗಿರುತ್ತದೆ.

ಮೇಲಿನ ಮೊತ್ತ ರೂ.21362022/–ಗಳು ದಿನಾಂಕ 31.3.2017ರಂದು ಜಮೆ ಆದನಂತರ ನಗದು ಪುಸ್ತಕದ ಅಂತಿಮ ಶಿಲ್ಕು ಆಗಿರುವುದಿಲ್ಲ.

2016–17ನೇ ಪ್ರಸಾರಾಂಗ ಆವರ್ತನಾ ನಿಧಿ ಸಂಬಂಧ ಖಾತೆಗಳ ವ್ಯವಹಾರಕ್ಕೆ ಅನುಗುಣವಾಗಿ ಧನಾದೇಶಗಳನ್ನು ನೀಡಬೇಕಾಗಿತ್ತು. ವಾರ್ಷಿಕ ಲೆಕ್ಕ ಪತ್ರಗಳ ಕೊನೆಯ ದಿನಾಂಕ:31.03.2017 ಆಗಿದ್ದು; ಇದರ ಒಳಗಾಗಿ ಸಿದ್ಧಪಡಿಸಬೇಕಿತ್ತು. ಸಂಬಂಧಪಟ್ಟ ಖಾತೆಗಳಿಗೆ ವಿವಿಧ ಬೇರೆ ಖಾತೆಗಳಿಂದ ಹಣವನ್ನು ವರ್ಗಾವಣೆ ಮಾಡಿ ಈ ಖಾತೆಯ ಮುಂಖಾಂತರ ಧನಾದೇಶ ವಿತರಿಸಬೇಕಿತ್ತು. ಆದರೆ ಸದರಿ ಖಾತೆಗೆ ಯಾವುದೇ ಬೇರೆ ಖಾತೆಯಿಂದ ಹಣವನ್ನು

| | | |
|---|---|---|
| | | ವರ್ಗಾಯಿಸಲು ಸಾಧ್ಯವಾಗಲಿಲ್ಲ. ನಿಧಿ ವರ್ಗಾವಣೆ ನಿರೀಕ್ಷೆಯಲ್ಲಿ ಅಂತಿಮ ದಿನಾಂಕವನ್ನು ಗಮನದಲ್ಲಿಟ್ಟುಕೊಂಡು ಧನಾದೇಶಗಳನ್ನು ಸಿದ್ಧಪಡಿಸಲಾಗಿತ್ತು. ಆದರೆ, ಯಾವುದೆ ಖಾತೆಗಳಿಂದ ಈ ಖಾತೆಗೆ ಹಣ ವರ್ಗಾವಣೆ ಆಗದ ಕಾರಣ ಧನಾದೇಶಗಳನ್ನು ಯಾರಿಗೂ ವಿತರಿಸಲಾಗಿಲ್ಲ.<br>ಈ ಸಂಬಂಧ ಖಾತೆಯ ನಗದು ಪುಸ್ತಕವನ್ನು ಅಂತಿಮಗೊಳಿಸಬೇಕಾಗಿದ್ದರಿಂದ ವಿವರಗಳನ್ನು ನಮೂದಿಸಿದೆ. ಅದು ಋಣಾತ್ಮಕ ಅಂತಿಮ ಶಿಲ್ಕು ಆಗಿ ಕಂಡುಬಂದಿರುತ್ತದೆ. ಧನಾದೇಶಗಳನ್ನು ಸಿದ್ದಪಡಿಸಿದ್ದಾಗಿಯೂ ಯಾರಿಗೂ ನೀಡದಿರುವುದು ಮತ್ತು ಈ ಖಾತೆಯಿಂದ ಪಾವತಿ ಆಗದೇ ಇರುವುದರಿಂದ ಈ ಖಾತೆಯಲ್ಲಿ ಹಣ ಇದ್ದು; ಯಾವುದೇ ಋಣಾತ್ಮಕ ಶಿಲ್ಕು ಆಗಿರುವುದಿಲ್ಲ ಎಂಬುದಾಗಿ ಈ ಮೂಲಕ ದೃಢೀಕರಿಸಿದೆ.<br>ಈ ಖಾತೆಯ ನಿಶ್ಚಿತ ಠೇವಣಿಯಲ್ಲಿ ರೂ.1,58,31,762/–ಗಳು ಇರುತ್ತದೆ. ಲೆಕ್ಕ ತನಿಖಾ ಸಮಯದಲ್ಲಿ ಆಡಿಟ್ ವಿಚಾರಣಾ ಸಂಖ್ಯೆ 35 ದಿನಾಂಕ:2.8.2018ರ ಸಂಬಂಧ ವಿವರವಾದ ಉತ್ತರ ಸಲ್ಲಿಸಲಾಗಿದ್ದು; ಅದನ್ನು ಲೆಕ್ಕ ಪರಿಶೋಧಕರು ಪರಿಶೀಲಿಸಿರುವುದುದಾಗಿ ಷರಾ ಬರೆದು ಸಹಿ ಮಾಡಿರುತ್ತಾರೆ.<br>ಆದಾಗ್ಯೂ; ಈ ಆಕ್ಷೇಪಣೆಯು ಮತ್ತೆ ವರದಿಯಲ್ಲಿ ದಾಖಲಾಗಿರುವುದರಿಂದ ದಿನಾಂಕ:31.5.2016 ಹಣಕಾಸು ಅಧಿಕಾರಿಗಳ ಪತ್ರದ ಪ್ರತಿ; ಬ್ಯಾಂಕ್ ಸ್ಟೇಟ್ಮೆಂಟ್ ಪ್ರತಿ ಹಾಗೂ ವಿವರವಾದ ವರದಿಯ ಪ್ರತಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ; ರೂ.2,67,14,017ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಿದೆ.<br>ಮುಂದೆ ಇಂತಹ ನ್ಯೂನ್ಯತೆಗಳಿಗೆ ಅವಕಾಶವಾಗದಂತೆ ಅಗತ್ಯ ಕ್ರಮ ವಹಿಸಲಾಗುತ್ತದೆ. ಅಲ್ಲದೇ ಸೂಚಿತವಾದ ಅವಧಿಯಲ್ಲಿ ಸೂಚಿತ ಖಾತೆಗಳಲ್ಲಿನ ಆರ್ಥಿಕ ವಹಿವಾಟುಗಳು ಕ್ರಮಬದ್ದವಾಗಿರುತ್ತದೆ ಎಂದು ಬ್ಯಾಂಕ್ ಅಧಿಕಾರಿಗಳು ಧೃಢೀಕರಿಸಿರುತ್ತಾರೆ (ಈ ಸಂಬಂಧ ಬ್ಯಾಂಕ್‌ನವರು ನೀಡಿರುವ ಧೃಢೀಕರಣದ ಪತ್ರದ ಪ್ರತಿ ಲಗತ್ತಿಸಿದೆ.) |

| | | |
|---|---|---|
| 20 | **<u>2016–17ನೇ ಸಾಲಿನ ವಿವಿಧ ಬ್ಯಾಂಕ್ ಖಾತೆಗಳ ಮುಕ್ತಾಯವಾಗಿರುವ ಹಾಗೂ ಹೊಸದಾಗಿ ಸೇರ್ಪಡೆಯಾಗಿರುವ, ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗಳ ವಿವರ ಪಟ್ಟಿಯನ್ನು ದೃಢೀಕರಿಸಿ ಹಾಜರುಪಡಿಸದೆ ಇರುವುದು :–</u>**<br>ಮೇಲಿನ ವಿಷಯದಲ್ಲಿ ಹಣಕಾಸು ವಿಭಾಗದ 2018–19ನೇ ಸಾಲಿನ ಲೆಕ್ಕತಪಾಸನಾ ಅವಧಿಯಲ್ಲಿ ದಿನಾಂಕ:31.03.2017ರ ಅಂತ್ಯಕ್ಕೆ ವಾರ್ಷಿಕ ಲೆಕ್ಕಪತ್ರದಂತೆ ಜಮಾ ಖರ್ಚು ತೆಗೆದುಕೊಂಡಿರುವ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗಳು ಹಾಗೂ ಮುಕ್ತಾಯಗೊಳಿಸಿರುವ ಬ್ಯಾಂಕ್ ಖಾತೆ ವಿವರವನ್ನು ಬಾಂಕ್ ವ್ಯವಸ್ಥಾಪಕರಿಂದ Confirmation Certificate ಪಡೆದು ತಪಾಸಣೆಗೆ ಹಾಜರುಪಡಿಸಬೇಕಾಗಿರುತ್ತದೆ. ಹಾಗೂ ಮುಕ್ತಾಯಗೊಂಡಿರುವ ಬ್ಯಾಂಕ್ ಖಾತೆಯಲ್ಲಿನ ಅಂತಿಮ ಶಿಲ್ಕು ಮೊಬಲಗನ್ನು ವರ್ಗಾಯಿಸಿರುವ ಬ್ಯಾಂಕ್ ಖಾತೆ ವಿವರವನ್ನು ಹಾಜರುಪಡಿಸಿರುವುದಿಲ್ಲ. ಇದರಿಂದ ಯಾವ ಯಾವ ಬ್ಯಾಂಕ್ ಖಾತೆಗಳಲ್ಲಿ ಎಷ್ಟು ಅಂತಿಮ ಶಿಲ್ಕಿನಲ್ಲಿ ಬಾಕಿ ಉಳಿದಿದೆ ಹಾಗೂ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಿರುವ ಜಮಾ ಖರ್ಚಿನ ವಿವರವನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಇದರಿಂದ ಮುಕ್ತಾಯಗೊಂಡಿರುವ ಬ್ಯಾಂಕ್ ಖಾತೆಗಳ ಆರ್ಥಿಕ ವಹಿವಾಟಿನಲ್ಲಿ ಯಾವುದೇ ರೀತಿಯ ಅಪವ್ಯಯ ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿ/ನೌಕರರ ಮೇಲೆ ಕ್ರಮ ಕೈಗೊಳ್ಳಲು ತಿಳಿಸುತ್ತಾ ಮತ್ತು ಹೊಸದಾಗಿ ಬೇರೆ ಬೇರೆ ವಿಭಾಗಗಳಲ್ಲಿ ಬ್ಯಾಂಕ್‌ಗಳಲ್ಲಿ ತೆರೆದಿರುವ ಬ್ಯಾಂಕ್ ಖಾತೆ ವಿವರವನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ತೆಗೆದುಕೊಂಡಿರುವ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಸದರಿ ವಿಚಾರದಲ್ಲಿ ವಿಚಾರಣೆ ಸಂಖ್ಯೆ: 156/2018–19 ದಿನಾಂಕ:01.08.2018 ಸಂಖ್ಯೆ:202/2018–19 ದಿನಾಂಕ:21.08.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ಸಂಬಂಧಿಸಿದಂತೆ ಹಾಗೂ ಇಂದಿನ 2015–16ನೇ ಸಾಲಿನ ಆಡಿಟ್ ವರದಿಯಲ್ಲಿ ಪ್ರಸ್ತಾಪಿಸಿರುವಂತೆ ಮುಕ್ತಾಯಗೊಂಡಿರುವ ಬ್ಯಾಂಕ್ ಖಾತೆಗಳ ವಿವರವನ್ನು ಹಾಜರುಪಡಿಸಬೇಕೆಂದು ವಿಚಾರಣೆ ನೀಡಲಾಗಿದ್ದು, ಅದಕ್ಕೆ ವಿವರಣೆ ನೀಡದೆ, ಸಂಬಂಧಿಸಿದ ದಾಖಲಾತಿ ನೀಡದೆ ಇರುವುದರಿಂದ ಪಾಲನ ವರದಿ ನೀಡಲು ತಿಳಿಸುತ್ತಾ ಈ ಬಗ್ಗೆ ಪರಿಶೀಲಿಸಿ ದಾಖಲಾತಿಗಳೊಂದಿಗೆ ವಿವರಣೆ ನೀಡಲು ತಿಳಿಸಿದ ವಿವರವನ್ನು **<u>ಅನುಬಂಧ–5ರಲ್ಲಿ</u>** ಲಗತ್ತಿಸಿದೆ. | ಕಂಡಿಕೆ 20 ರಲ್ಲಿ ಆಕ್ಷೇಪಿಸಿ ಸೂಚಿಸಿರುವ ವಿಷಯದಲ್ಲಿ ದಾಖಲಾತಿಗಳನ್ನು ಪಡೆದು ನಿರ್ವಹಿಸಲು ಕ್ರಮವಹಿಸಿದ್ದು ಕಂಡಿಕೆಗೆ ಸಂಬಂಧಸಿದ ದಾಖಲಾತಿ ವಿವರಗಳನ್ನು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರು ಪಡಿಸಲಾಗುವೆಂಬ ಅಂಶವನ್ನು ನಿವೇದಿಸಲಾಗಿದೆ. |

| 21 | **<u>ನಗದಾಗದೆ ಇರುವ ಧನಾದೇಶಗಳು ದಿನಾಂಕ:31.03.2017ಕ್ಕೆ ಬಾಕಿ ಉಳಿದಿರುವುದು :–</u>**<br><br>2016–17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ನಗದು ಪುಸ್ತಕ ಹಾಗೂ ಬ್ಯಾಂಕ್ ಖಾತೆಯೊಂದಿಗೆ ಪರಿಶೀಲಿಸಿದಾಗ ವಿವಿಧ ಬ್ಯಾಂಕ್ ಖಾತೆಯಲ್ಲಿ ದಿನಾಂಕ:31.03.2017ರ ಅಂತ್ಯಕ್ಕೆ ನಗದು ಪುಸ್ತಕದಲ್ಲಿ ನಗದಾಗದೆ ಇರುವ ಧನಾದೇಶಗಳು ಕಂಡುಬಂದಿದು, ಈ ಬಗ್ಗೆ ಕ್ರಮಕೈಗೊಂಡು ಅವಧಿ ಮೀರಿದ ಧನಾದೇಶಗಳನ್ನು ರದ್ದುಪಡಿಸಿ ನಗದು ಪುಸ್ತಕದೊಂದಿಗೆ ಹೊಂದಾಣಿಕೆ ಮಾಡಿ ಲೆಕ್ಕ ಸಮನ್ವಯಗೊಳಿಸಿ Bank Reconciliation statementನೊಂದಿಗೆ ಪಾಲನ ವರದಿ ನೀಡಲು ಸೂಚಿಸಿದೆ. ವಿವರವನ್ನು <u>**ಅನುಬಂಧ–6ರಲ್ಲಿ**</u> ನೀಡಿದೆ. | ವಿಶ್ವವಿದ್ಯಾನಿಲಯದ 2016–17ನೇ ಸಾಲಿನಲ್ಲಿ ದಿನಾಂಕ:31.3.2017ರ ಅಂತ್ಯಕ್ಕೆ ವಿತರಿಸಲಾಗಿದ್ದು ಧನಾದೇಶಗಳ ಪೈಕಿ; ಸಮಯ ಮಿರಿದರೂ ನಗದಾಗದಿರುವ ಧನಾದೇಶಗಳನ್ನು ಪಟ್ಟಿಮಾಡಿ ರದ್ದುಗೊಳಿಸಿದ ಧನಾದೇಶಗಳ ಮೊತ್ತಗಳನ್ನು ಆಯಾ ಶಿರ್ಷಿಕೆಗಳಡಿ ವಾರ್ಷಿಕ ಲೆಕ್ಕದಲ್ಲಿ ವಹಿಯ ಸಂಖ್ಯೆ:083ರಲ್ಲಿ ಜಮೆ ತೆಗೆದುಕೊಳ್ಳಲಾಗಿದೆ. ಹಾಗೂ ನಗದು ಪುಸ್ತಕದಲ್ಲಿ ಸಮನ್ಮಯಗೊಳಿಸಲಾಗಿರುತ್ತದೆ.<br><br>ರದ್ದುಗೊಳಿಸಿದ ಮೊತ್ತಗಳನ್ನು ಆಯಾ ಶೀರ್ಷಿಕೆಯಡಿ ಜಮೆ ತೆಗೆದುಕೊಂಡಿರುವ ವಿವರ ತಃಖ್ತೆಯನ್ನು ಈ ಕೊಡ ಲಗತ್ತಿಸಿ ಸಲ್ಲಿಸಲಾಗಿದೆ. |
|---|---|---|

| | | |
|---|---|---|
| **22** | <u>ಪ್ರಾಯೋಜಿತ ಕಾರ್ಯಕ್ರಮ/ಯೋಜನೆಗಳಲ್ಲಿ ಭರಿಸಲಾದ ವೆಚ್ಚಗಳಿಗೆ ಮಾಹಿತಿ ನೀಡದಿರುವ ಬಗ್ಗೆ:–</u><br>2016–17ನೇ ಸಾಲಿನ ಪ್ರಾಯೋಜಿತ ಕಾರ್ಯಕ್ರಮ ಯೋಜನೆಗಳಡಿಯಲ್ಲಿ ಸಲಕರಣೆಗಳ ಖರೀದಿಗಾಗಿ ರೂ.82,98,264/–ಗಳನ್ನು ವೆಚ್ಚ ಮಾಡಲಾಗಿದೆ. ಆದರೆ ವೆಚ್ಚಕ್ಕೆ ಸಂಬಂಧಿಸಿದ ವಿವರವಾದ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಮೊಬಲಗು ಆಕ್ಷೇಪಣೆಯಲ್ಲಿಡಲಾಗಿದೆ.<br>ಈ ಯೋಜನೆಯ ಖಾತೆಯಡಿಯಲ್ಲಿ 2016–17ರ ಆರ್ಥಿಕ ಸಾಲಿನಲ್ಲಿ ಯು.ಜಿ.ಸಿ ಯೋಜನೆಗಳು, ಭಾರತ ಸರ್ಕಾರದ ಯೋಜನೆಗಳು, ಕರ್ನಾಟಕ ಸರ್ಕಾರದ ಯೋಜನೆಗಳು, ವಿದೇಶಿ ಏಜೆನ್ಸಿಗಳಿಂದ ಬರುವ ಮೊತ್ತ, ಇತರೆ ಏಜೆನ್ಸಿಯಿಂದ ಬಂದ ಮೊತ್ತ ಎಂದು ಒಟ್ಟು ರೂ.22,43,23,223/–ಗಳಾಗಿರುತ್ತದೆ.<br>ಪ್ರಾಯೋಜಕರಿಗೆ ಬಳಕೆ ಆಗದ ಮೊತ್ತ ಹಿಂದಿರುಗಿಸುವಿಕೆ ಎಂದು ರೂ.4,89,50,178/– ಎಂದು ನಮೂದಿಸಲಾಗಿದೆ. ಬಿಡುಗಡೆಯಾದ ಮೊತ್ತವು ಸದ್ಬಳಕೆಯಾಗದಿರಲು ಕಾರಣ ಹಾಗೂ ಸಂಬಂಧಿಸಿದ ಯೋಜನೆಯ ಮಾರ್ಗದರ್ಶಿಯನ್ನು ಲೆಕ್ಕಪತ್ರ ತಪಾಸಣೆ ಕಾರ್ಯಕ್ಕೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:85/ ದಿ:24.07.2018 ರಲ್ಲಿ ನೀಡಲಾಗಿತ್ತು, ಆದರೆ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.<br>ಸಲಕರಣೆಗಳಿಗೆ ಭರಿಸಲಾದ ವೆಚ್ಚ ರೂ.82,98,264/– ಯಾವ ಯೋಜನೆಯಡಿ ಬಿಡುಗಡೆಯಾದ ಮೊತ್ತದಲ್ಲಿ ಭರಿಸಲಾಗಿದೆ ಎಂದು ತಿಳಿದು ಬಂದಿರುವುದಿಲ್ಲ.<br>ಹಾಗೆಯೇ ಪ್ರಾಯೋಜಕರಿಗೆ ಬಳಕೆ ಆಗದ ಮೊತ್ತ ಹಿಂದಿರುಗಿಸಿದೆ ಎಂದು ನಮೂದಿಸಿರುವ ಮೊತ್ತ ರೂ.4,89,50,178/– ಯಾವ ಯೋಜನೆಯಡಿ ಬಿಡುಗಡೆಯಾದ ಮೊತ್ತ ಹಾಗೂ ಯಾವ ಕಾರಣಕ್ಕಾಗಿ ಬಳಕೆ ಮಾಡಿದೆ ಎಂದು ಸ್ಪಷ್ಟವಾದ ವಿವರವನ್ನು ಒದಗಿಸದ ಕಾರಣ ರೂ.(82,98,264+4,89,50,178 = 5,72,48,442) **ರೂ.5,72,48,442/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**<br>ಪ್ರಾಯೋಜಿತ ಕಾರ್ಯಕ್ರಮದ ಯೋಜನೆಯಡಿಯಲ್ಲಿ ನೌಕರರ ತರಬೇತಿಗಾಗಿ ರೂ.59,00,600/– ವೆಚ್ಚ ಮಾಡಲಾಗಿದ್ದು, ಈ ಬಗ್ಗೆ ತರಬೇತಿಗೆ ಹಾಜರಾದ ನೌಕರರ | ಪ್ರಾಯೋಜಿತ ಕಾರ್ಯಕ್ರಮದ ಯೋಜನೆಯಡಿಯಲ್ಲಿ ನೌಕರರ ತರಬೇತಿಗಾಗಿ ಹಾಜರಾದ ನೌಕರರ ವಿವರದ ಮಾಹಿತಿಯನ್ನು ಕಂಡಿಕೆ 22 ರಲ್ಲಿ ಸೂಚಿಸಿರುವಂತೆ ನಿರ್ವಹಿಸಿ ದಾಖಲಾತಿಗಳನ್ನು ಹಾಜರು ಪಡಿಸಲು ಕ್ರಮವಹಿಸಲಾಗಿದೆ ಎಂಬ ಅಂಶವನ್ನು ನಿವೇದಿಸಲಾಗಿದೆ. |

| | | |
|---|---|---|
| | ವಿವರ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:83/ ದಿ:24.07.2018 ರಲ್ಲಿ ನೀಡಲಾಗಿದೆ. ಆದರೆ ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದುದರಿಂದ ಈ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br>ಒಟ್ಟು ಮೊತ್ತ ರೂ.5,72,48,442+59,00,600=**6,31,49,042/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | |

| 23 | <u>**ಸ್ವಂತಕ್ಕೆ ಹಣಡ್ರಾ ಮಾಡಿ ವೆಚ್ಚ ಭರಿಸಿರುವುದಕ್ಕೆ ನಗದಿನ ಮುಖಾಂತರ ಪಾವತಿಸಿರುವುದು :- (ಯುವರಾಜ ಕಾಲೇಜು)**</u> | |
|---|---|---|

**23** **ಸ್ವಂತಕ್ಕೆ ಹಣಡ್ರಾ ಮಾಡಿ ವೆಚ್ಚ ಭರಿಸಿರುವುದಕ್ಕೆ ನಗದಿನ ಮುಖಾಂತರ ಪಾವತಿಸಿರುವುದು :- (ಯುವರಾಜ ಕಾಲೇಜು)**

2016–17ನೇ ಸಾಲಿನ ಯುವರಾಜ ಕಾಲೇಜು ಸಂಸ್ಥೆಯ ಲೆಕ್ಕಪರಿಶೋಧನೆಯಲ್ಲಿ ಜಿ.ಆರ್.ಎ ಖಾತೆ (ಖಾತೆ ಸಂಖ್ಯೆ:64078604199) ಯಿಂದ ವೆಚ್ಚಭರಿಸಲಾಗಿರುವ ಓಚರ್‌ಗಳನ್ನು ಪರಿಶೀಲಿಸಲಾಗಿ ಪ್ರಾಂಶುಪಾಲರು ಯುವರಾಜ ಕಾಲೇಜು ಇವರ ಹೆಸರಿನಲ್ಲಿ ಧನಾದೇಶ ಸಂಖ್ಯೆ:162451 ದಿನಾಂಕ:05.10.2016 ಮತ್ತು ಧನಾದೇಶ ಸಂಖ್ಯೆ:512975 ದಿನಾಂಕ:08.10.2016ರಲ್ಲಿ ಸ್ವಂತಕ್ಕೆ ಡ್ರಾ ಮಾಡಲಾಗಿದ್ದು, ಮೆ॥ ಸಿ.ಡಿ ವಿನೂತ (ಅಡಿಗೆ ಕಂಟ್ರಾಕ್ಟರ್) ಮೈಸೂರು ಇವರಿಗೆ ಕಾಲೇಜಿನಲ್ಲಿ ನಡೆದಿರುವ ವಿವಿಧ ಸಭೆಗಳಿಗೆ ಊಟೋಪಚಾರ ಮತ್ತು ಲಘು ಉಪಹಾರ ಸರಬರಾಜು ಮಾಡಿರುವುದಕ್ಕೆ ವೆಚ್ಚ ಭರಿಸಿರುವ ಮೊತ್ತವನ್ನು ನಗದಿನ ಮುಖಾಂತರ ಪಾವತಿಸಿರುವುದನ್ನು ಗಮನಿಸಲಾಗಿದ್ದು, ಪಾವತಿಯ ವಿವರಗಳು ಕೆಳಕಂಡಂತಿವೆ.

| ಕ್ರಸಂ | ಬಿಲ್‌ನ ದಿನಾಂಕ | ಮೊತ್ತ | ಉಪಹಾರ ಸರಬರಾಜಾಗಿರುವ ದಿನಾಂಕ | ಷರಾ |
|---|---|---|---|---|
| 1 | 15.06.2016 | 28800 | 11.06.2016 | AC Meeting |
| 2 | 13.10.2016 | 36000 | 06.10.2016, 07.10.2016 & 08.10.2016 | AC Meeting |
| 3 | 17.10.2016 | 27400 | 13.10.2016& 15.10.2016 | AC Meeting |
| | **ಒಟ್ಟು ಮೊತ್ತ** | **92200** | | |

ಕರ್ನಾಟಕ ಆರ್ಥಿಕ ಸಂಹಿತೆ–1958 ರ ಅನುಚ್ಛೇದ 72 (ಎ) ರನ್ವಯ ಹಾಗೂ ಯಾವುದೇ ಪಾವತಿಯನ್ನು ಧನಾದೇಶ/NEFT/RTGS ಮುಖಾಂತರ ಮಾಡಬೇಕಾಗಿದ್ದು, ನಗದು ವ್ಯವಹಾರಕ್ಕೆ ಅವಕಾಶವಿರುವುದಿಲ್ಲವಾದ್ದರಿಂದ ನಗದಿನ ಮುಖಾಂತರ ವೆಚ್ಚಭರಿಸಲು ವಿಶ್ವವಿದ್ಯಾನಿಲಯದಿಂದ ಪಡೆದಿರುವ ಆದೇಶದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:38/2018–19 ದಿನಾಂಕ:25.09.2018ರಲ್ಲಿ ಕೋರಲಾಗಿದ್ದು ಈ ಕುರಿತು ಯಾವುದೇ ಆದೇಶ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿಲ್ಲವಾದ್ದರಿಂದ ಈ ಮೇಲೆ

ನಿಯಮಾನುಸಾರ ಎಲ್ಲಾ ಪಾವತಿಗಳನ್ನೂ ಧನಾಸೇಧ/NEFT/RTGS ಮುಂಖಾಂತರ ಪಾವತಿಸಬೇಕಾಗಿರುವುದು ಸರಿಯಷ್ಟೆ. ಆದರೆ, ಉಪಹಾರ ಸರಬರಾಜು ಮಾಡಿದ ಹೀಟೆಲ್ ಮಾಲೀಕರುಗಳು ನಗದು ರೂಪದಲ್ಲಿ ಬಿಲ್ಲುಗಳನ್ನು ಪಾವತಿಸುವಂತೆ ಬೇಡಿಕೆ ಇಟ್ಟದುದರಿಂದ ನಗದು ರೂಪದಲ್ಲಿ ಪಾವತಿಗಳನ್ನು ಮಾಡಲಾಗಿದೆ. ಇದಕ್ಕೆ ವಿಶ್ವವಿದ್ಯಾನಿಲಯದ ಆದೇಶ ಇರುವುದಿಲ್ಲ.

ಮುಂದೆ ಇಂತಹ ನ್ಯೂನತೆಗಳಿಗೆ ಅವಕಾಶವಾಗದಂತೆ ಅಗತ್ಯ ಕ್ರಮವಹಿಸಲಾಗುತ್ತದೆ ಎಂಬುದಾಗಿ ನಿವೇಧಿಸುತ್ತಾ; ರೂ.92,200/–ಗಳ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ.

| | | |
|---|---|---|
| | ತಿಳಿಸಲಾಗಿರುವ ಮೊತ್ತ ಒಟ್ಟು **ರೂ.92,200/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** ಹಾಗೂ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಲು ಸೂಚಿಸಿದೆ. | |

**24**

**ವಿಶ್ವವಿದ್ಯಾನಿಲಯದ ನಗದು ಪುಸ್ತಕ ಪ್ರಕಾರ ಆರ್ಥಿಕ ಪರಿಸ್ಥಿತಿಯ ವಿವರ :–**

2016–17ನೇ ಸಾಲಿನ ಹಣಕಾಸು ವಿಭಾಗದ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಹಾಜರುಪಡಿಸಿರುವ ನಗದು ಪುಸ್ತಕ ಹಾಗೂ ಬ್ಯಾಂಕ್ ಸ್ಕ್ರೋಲ್ ಪ್ರಕಾರ ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮ ಪ್ರಕರಣ 29(4) ಹಾಗೂ 32(1) (3) ಪ್ರಕಾರ ಹಣಕಾಸು ವಿಭಾಗ ಜಿ.ಆರ್.ಎ ಖಾತೆ ಹಾಗೂ ಎಫ್&ಅರ್ ಖಾತೆಯ ಇತರೆ ಯೋಜನೆಗಳ ಒಟ್ಟು 40 ಬ್ಯಾಂಕ್ ಖಾತೆಗಳ ಪ್ರಕಾರ ನಗದು ಪುಸ್ತಕದೊಂದಿಗೆ ಆರ್ಥಿಕ ಪರಿಸ್ಥಿತಿಯ ವಿವರ ನೀಡಲಾಗಿದೆ.

1. **(Includingcontra)**

| | |
|---|---|
| ದಿನಾಂಕ:01.04.2016ರ ಪ್ರಾರಂಭ ಶಿಲ್ಕು | 2643100960 |
| 2016–17ನೇ ಸಾಲಿನ ಸ್ವೀಕೃತಿ | 12454264319 |
| ಒಟ್ಟು | 15097365279 |
| 2016–17ನೇ ಸಾಲಿನ ವೆಚ್ಚ | 12157458468 |
| ದಿನಾಂಕ:31.03.2017ಕ್ಕೆ ಅಂತಿಮ ಶಿಲ್ಕು | 2939906811 |

2. **Without Contra:**

| | |
|---|---|
| ದಿನಾಂಕ:01.04.2016ರ ಪ್ರಾರಂಭ ಶಿಲ್ಕು | 2643100960 |
| 2016–17ನೇ ಸಾಲಿನ ಒಟ್ಟು ಜಮಾ | 8308557853 |
| ಒಟ್ಟು | 10951658813 |
| 2016–17ನೇ ಸಾಲಿನ ಒಟ್ಟು ವೆಚ್ಚ | 8011752002 |
| ದಿನಾಂಕ:31.03.2017ಕ್ಕೆ ಅಂತಿಮ ಶಿಲ್ಕು | 2939906811 |

ವಿವರವನ್ನು ಅನುಬಂಧ –7ರಲ್ಲಿ ನೀಡಿದೆ.

ಕಂಡಿಕೆ 24 ರಲ್ಲಿ ಆಕ್ಷೇಪಿಸಿ ಸೂಚಿಸಲಾಗಿರುವ ಮಾಹಿತಿಯನ್ನು ನಿರ್ವಹಿಸಲು ಕ್ರಮ ವಹಿಸಲಾಗಿದ್ದು ಒಟ್ಟು 40 ಬ್ಯಾಂಕ್ ಖಾತೆಗಳು ಹಾಗೂ ನಗದು ಪುಸ್ತಕಗಳ ವಿವರಗಳೊಂದಿಗೆ ಆರ್ಥಿಕ ಪರಿಸ್ಥಿಯನ್ನು ಸಮನ್ವಯಗೊಳಿಸಲು ಕ್ರಮವಹಿಸಿ ಮಾಹಿತಿಯನ್ನು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರು ಪಡಿಸಲಾಗುವುದು.

**25**

**ನಿಶ್ಚಿತ ಠೇವಣಿ ಹೂಡಿಕೆ ವಹಿ ಕರ್ನಾಟಕ ಆರ್ಥಿಕ ಸಂಹಿತೆ ಪ್ರಕಾರ ಠೇವಣಿ ವಹಿ ನಿರ್ವಹಿಸದೆ ಹಾಗೂ ದಿನಾಂಕ:31.03.2017ರ ಅಂತ್ಯಕ್ಕೆ Bank conformationletter ಪಡೆದು ಹಾಜರುಪಡಿದೆ ಇರುವುದು :–**

(ಎ) 2016–17ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಹಾಜರುಪಡಿಸಿರುವ ವಾರ್ಷಿಕ ಲೆಕ್ಕಪತ್ರ ಹಾಗೂ ಹಣಕಾಸು ವಿಭಾಗದಿಂದ ನೀಡಿರುವ Statment ಆಧಾರದ ಮೇಲೆ ಹೂಡಿಕೆ ವಿವರ ನೀಡಲಾಗಿದೆ. ಸದರಿ ವಿಚಾರದಲ್ಲಿ ವಿಚಾರಣೆ ಸಂಖ್ಯೆ:2018–19ನೇ ದಿನಾಂಕ:09.07.2018 ರಂದು ವಿಚಾರಣೆಯನ್ನು ನೀಡಲಾಗಿದ್ದು, ವಿಚಾರಣೆ ಅವಧಿಯಲ್ಲಿ ಯಾವುದೇ ರೀತಿಯ ಠೇವಣಿ ವಹಿ ಕಡತವನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸಲು ಸಾಧ್ಯವಾಗಿಲ್ಲದ ಕಾರಣ ಸೂಕ್ತ ವಿವರಣೆ ನೀಡಬೇಕಾಗಿ ತಿಳಿಸಿದೆ.

| Particulars | Asper cash book | Asper annual account |
|---|---|---|
| Opening balance | 220658872 | 220658872 |
| add Receipt | 2575085473 | 2560003459 |
| Total | 4781674345 | 4766592331 |
| Less payment | 2456525224 | 2441443210 |
| Clossing Balance | 2325149121 | 2325149121 |

(ಬಿ) ವಿಶ್ವವಿದ್ಯಾನಿಲಯದ ಠೇವಣಿ ವಿವರಗಳನ್ನು ಪರಿಶೀಲಿಸಿದಾಗ ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಹೂಡಿಕೆಯನ್ನು ಬೇರೆ ಬೇರೆ ಬಡ್ಡಿ ದರದಲ್ಲಿ ಮಾಡಿರುವುದು ಕಂಡುಬಂದಿದ್ದು, ಠೇವಣಿ ಹೂಡುವಾಗ ಗರಿಷ್ಠ ಬಡ್ಡಿ ಮೊತ್ತ ನೀಡುವ ಬ್ಯಾಂಕಿಗೆ ಠೇವಣಿಯನ್ನು ಹೂಡಿಕೆ ಮಾಡದೆ ಕಡಿಮೆ ಬಡ್ಡಿದರದಲ್ಲಿ ನೀಡಿರುವ ಬ್ಯಾಂಕಿನಲ್ಲಿ ಹೂಡಿಕೆ ಮಾಡಿರುವುದು ಕಂಡುಬಂದಿರುತ್ತದೆ. ಹಾಗೂ ಸ್ಪರ್ಧಾತ್ಮಕ ಬಡ್ಡಿದರ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಟೆಂಡರ್ ಕರೆಯದೆ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಣೆ ಹೊರಡಿಸದೆ ಹೂಡಿಕೆ ಮಾಡಿದ್ದರಿಂದ ಆರ್ಥಿಕವಾಗಿ ನಷ್ಟವನ್ನು ತಪ್ಪಿಸಬಹುದಾಗಿತ್ತು.

2016–17ನೇ ಸಾಲನ ಲೆಕ್ಕ ಪರಿಶೋಧನಾವರದಿಯ ಕಂಡಿಕೆ 25ರಲ್ಲಿ ವಿಶ್ವವಿದ್ಯಾನಿಲಯದ ಹೂಡಿಕೆಗಳಿಗೆ ಸಂಬಂಧಿಸಿದಂತೆ ನಿಶ್ಚಿತ ಠೇವಣಿ ಹೂಡಿಕೆಯ ಬಗ್ಗೆ ಪ್ರಸ್ತಾಪಿಸಲಾಗಿದ್ದು ಆ ಮೇರೆಗೆ ವಿವರಣೆಯನ್ನು ನೀಡಲಾಗಿದೆ.

(ಎ) 2016–17ನೇ ಸಾಲನಲ್ಲಿ ವಿಶ್ವವಿದ್ಯಾನಿಲಯದ ನಿಶ್ಚಿತ ಠೇವಣಿ ಬಗ್ಗೆ ಸಂಬಂಧ ಪಟ್ಟ ಅಂದರೆ ನಿಶ್ಚಿತ ಠೇವಣಿ ಹೂಡಿಕೆ ಮಾಡಿರುವ ಬ್ಯಾಂಕುಗಳಿಂದ 2017ರ ಅಂತ್ಯಕ್ಕೆ ಕಸಫರ್ಮೇಷನ್ ಪತ್ರ ಪಡೆಯಲಾಗಿದ್ದು ಸಮನ್ವಯಗೊಳಿಸುವ ಕಾರ್ಯ ಪ್ರಗತಿಯಲ್ಲಿದ್ದು ಸದರಿ ಮಾಹಿತಿ ದಾಖಲಾತಿಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಲಾಗುವುದು.

(ಬಿ) ಪ್ರಸ್ತುತ ಬ್ಯಾಂಕುಗಳಲ್ಲಿ ಠೇವಣಿ ಹೂಡಿಕೆ ಮಾಡಿರುವ ಸಮಯದಲ್ಲಿ ಬೇರೆ ಬ್ಯಾಂಕುಗಳಿಗೆ ತುಲಸಿ ಮಾಡಿದಾಗ ಪ್ರಸ್ತುತ ಹೂಡಿಕೆ ಮಾಡಿರುವ ಬಡ್ಡಿಯು ಅನುಕೂಲಕರವಾಗಿದ್ದರಿಂದ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಲಾಗಿತ್ತು ಕಂಡಿಕೆ 25 ರ (ಬಿ) ನಲ್ಲಿ ಪ್ರಸ್ತಾಪಿಸಿರುವಂತೆ ಸ್ಪರ್ಧಾತ್ಮಕ ಬಡ್ಡಿದರ ಪಡೆಯುವ ಬಗ್ಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ದರ ವಿವರವನ್ನು ಪಡೆಯಲು ಕ್ರಮವಹಿಸಲಾಗಿದೆ.

2016–17ನೇ ಸಾಲಿನ ನಿಶ್ಚಿತ ಠೇವಣಿ ಹೂಡಿಕೆ ಮೊತ್ತ ರೂ.2,32,51,49,121/–ಗಳಿಗೆ ಪ್ರತ್ಯೇಕ ವಹಿನಿರ್ವಹಿಸಿ ವಿವರಗಳನನು ದಾಖಲಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ ಹಾಗೂ ಬ್ಯಾಂಕುಗಳಿಂದ Bank conformation letterಪಡೆದು ಲೆಕ್ಕ ಸಮನ್ವಯಗೊಳಿಸಲಾಗುವುದು.

| | | |
|---|---|---|
| | 2016–17ನೇ ಸಾಲಿಗೆ ಒಟ್ಟು ರೂ.2,32,51,49,121/– ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲಾಗಿದ್ದು, ದಿನಾಂಕ:31.03.2017ರ ಅಂತ್ಯಕ್ಕೆ ಠೇವಣಿ ಮೊತ್ತವನ್ನು ಒಂದು ಪ್ರತ್ಯೇಕ ನಗದು ಪುಸ್ತಕದಲ್ಲಿ ಬಡ್ಡಿ ಲೆಕ್ಕಾಚಾರ ಮಾಡಿ ಪ್ರಾರಂಭಿಕ ಹೂಡಿಕೆ ಠೇವಣಿ ಮೊಬಲಗು ಹೂಡಿಕೆ ಮಾಡಿರುವ ಮೊಬಲಗು ಹಾಗೂ ಹಿಂಪಡೆದಿರುವ ಹೂಡಿಕೆ ಮೊತ್ತ ಆಗಿಂದಾಗ್ಗೆ ಬ್ಯಾಂಕಿನಿಂದ ವಿವಿಧ ದರಗಳಲ್ಲಿ ನಿಗದಿಪಡಿಸದೆ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ನಗದು ಪುಸ್ತಕದಲ್ಲಿ ಜಮಾ ಖರ್ಚು ಮರು ವಿನಿಯೋಗವನ್ನು ಅಂತಿಮ ಶಿಲ್ಕಿಗೆ ತಾಳೆ ಮಾಡಿ ನಿರ್ವಹಿಸಬೇಕಾಗಿದ್ದು,ನಗದು ಪುಸ್ತಕವನ್ನು ನಿರ್ವಹಿಸದೆ ಹಾಗೂ ಬ್ಯಾಂಕ್ ಅಧಿಕಾರಿಗಳಿಂದ Bank conformation letter ಪಡೆದು ಹಾಜರುಪಡಿಸದೆ ಇರುವುದರಿಂದ ನಿಖರವಾಗಿ ಪರಿಶೀಲಿಸಲು ಸಾಧ್ಯವಿಲ್ಲದ ಕಾರಣ ಕೂಡಲೇ ಕ್ರಮಕೈಗೊಂಡು ಬಡ್ಡಿ ದರದಲ್ಲಿ ನಷ್ಟ ಉಂಟಾಗಿರುವ ಹೂಡಿಕೆ ಮೇಲಿನ ಬಡ್ಡಿ ವಸೂಲಾತಿಯ ಬಗ್ಗೆ ಬ್ಯಾಂಕ್ ವ್ಯವಸ್ಥಾಪಕರಿಗೆ/ಸಂಬಂಧಪಟ್ಟ ಅಧಿಕಾರಿಗಳಿಂದ ಮರುಭರಿಕೆಗಾಗಿ ಆಡಳಿತಾತ್ಮಕವಾಗಿ ಕ್ರಮಕೈಗೊಂಡು ಆಡಿಟ್ ಕಂಡಿಕೆಗೆ ಪಾಲನ ವರದಿ ನೀಡಲು ತಿಳಿಸಿದೆ.<br>(ಸಿ) 2016–17ನೇ ವರ್ಷದ ತಪಾಸಣೆಯ ಅವಧಿಯಲ್ಲಿ ಹಾಜರುಪಡಿಸಿರುವ ವಾರ್ಷಿಕ ಲೆಕ್ಕಪತ್ರ ಹಾಗೂ ನಗದು ಪುಸ್ತಕ ಬ್ಯಾಂಕ್ ಸ್ಟ್ರೇಟ್‌ಮೆಂಟ್‌ನೊಂದಿಗೆ ಪರಿಶೀಲಿಸಿದಾಗ ಸದರಿ ಸಾಲಿನ ವಿವಿಧ ಬ್ಯಾಂಕ್ ಖಾತೆಗಳಿಂದ ಬಂದಿರುವ ಬಡ್ಡಿಯ ಮೊಬಲಗನ್ನು ಮರು ಹೂಡಿಕೆ ಮಾಡಿರುವ ವಿವರ ಹಾಜರುಪಡಿಸದೆ ಇರುವುದರಿಂದ ವಿಶ್ವವಿದ್ಯಾನಿಲಯದ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುತ್ತದೆ. ಕೂಡಲೇ ಕ್ರಮಕೈಗೊಂಡು ರೂ.17,88,33,931/–ಗಳು ಹೂಡಿಕೆ ಮಾಡಿರುವ ಪೂರ್ಣ ದಾಖಲಾತಿ ಹಾಗೂ ಬ್ಯಾಂಕ್ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆದು ಕಂಡಿಕೆಗೆ ಪಾಲನ ವರದಿ ನೀಡಬೇಕಾಗಿ ಸೂಚಿಸಿದೆ. ವಿವರವನ್ನು **ಅನುಬಂಧ–8ರಲ್ಲಿ** ನೀಡಿದೆ. | (ಸಿ) ಉಪ ಪ್ಯಾರಾದಲ್ಲಿ ಗಮನಿಸಿ ಸಲಹೆ ನೀಡಿರುವ ಬಗ್ಗೆ ರೂ.17,88,33,931/–ಗಳಿಗೆ ಹೂಡಿಕೆ ಮಾಡಿರುವ ವಿವರಗಳನ್ನು ಪಡೆದು ವಹಿಯಲ್ಲಿ ದಾಖಲಿಸಿ ಮಾಹಿತಿಯನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಲಾಗುವುದೆಂದು ನಿವೇದಿಸಲಾಗಿದೆ. |

**26** **<u>ನಿಶ್ಚಿತ ಠೇವಣಿ ನಿರ್ವಹಣೆಯಲ್ಲಿ ನಷ್ಟವಾಗಿರುವುದು :–</u>**

ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಹಲವಾರು ನಿಧಿ ಶೀರ್ಷಿಕೆಗಳಲ್ಲಿ ನಿಶ್ಚಿತ ಠೇವಣಿಗಳನ್ನು ನಿರ್ವಹಿಸಿರುವುದು ಸರಿಯಷ್ಟೆ ಪಕ್ವಗೊಂಡ ಠೇವಣಿಗಳನ್ನು ನವೀಕರಿಸುವಾಗ ಮತ್ತು ಹೊಸ ಠೇವಣಿಗಳಲ್ಲಿ ಹೂಡಿಕೆ ಮಾಡುವಾಗ ತುಲನಾತ್ಮಕ ಬಡ್ಡಿ ದರಪಟ್ಟಿಯನ್ನು ಸಂಗ್ರಹಿಸಿ ಹೂಡಿಕೆ ಮಾಡುವುದು ಅನಿವಾರ್ಯವಾಗಿರುತ್ತದೆ. ಅತಿ ಹೆಚ್ಚು ಬಡ್ಡಿ ನೀಡುವ ಬ್ಯಾಂಕ್‌ನಲ್ಲಿ ಠೇವಣಿ ಇಡಬಹುದಾಗಿದ್ದು, ಹೀಗೆ ಮಾಡದಿರುವುದು ನಷ್ಟಕ್ಕೆ ಕಾರಣವಾಗಿದೆ. ನೀಡಿದ ದಾಖಲಾತಿಗಳ ಆಧಾರದ ಮೇಲೆ ಸದರಿ ಬಡ್ಡಿ ನಷ್ಟ **ರೂ.7,56,513/–ಗಳಾಗಿದ್ದು,** ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಾತಿಗೆ ಸೂಚಿಸಲಾಗಿದೆ ವಿವರಗಳನ್ನು **<u>ಅನುಬಂಧ–9 ರಲ್ಲಿ</u>** ನೀಡಲಾಗಿದೆ. ದಿನಾಂಕ:21.01.2019 ರಂದು ನಡೆದ ಪುನರ್ ಪರಿಶೀಲನೆಯಲ್ಲಿ ಹಾಜರುಪಡಿಸಿದ ಅನುಪಾಲನಾ ವರದಿಯನ್ನು ಪರಿಶೀಲಿಸಿದಾಗ ರಾಷ್ಟ್ರೀಕೃತ ಬ್ಯಾಂಕ್‌ಗಳ ಮುಖಾಂತರ ಟೆಂಡರ್ ಕರೆಯದೆ ಇರುವುದರಿಂದ ನೀಡಿರುವ ಅನುಪಾಲನಾ ವರದಿ ಸಮಂಜಸವಲ್ಲದ ಕಾರಣ ಕಂಡಿಕೆ ಮುಂದುವರೆಸಲಾಗಿದೆ.

2016–17ನೇ ಸಾಲಿನ ಬ್ಯಾಂಕ್ ಅಕೌಂಟ್–54007591346 ಕನ್ನಡ ಪುಸ್ತಕ ಮುದ್ರಣ ಪ್ರಕಟಣೆ ವಿಭಾಗದ ಹೂಡಿಕೆ ಮಾಡಿರುವ ಬಡ್ಡಿ ದರದಲ್ಲಿ ಕಡಿಮೆ ಬಡ್ಡಿ ದರಕ್ಕೆ ಹೂಡಿಕೆ ಮಾಡಲಾಗಿದೆ. ಇದರಿಂದ ಬಡ್ಡಿ ದರದಲ್ಲಿ ವ್ಯತ್ಯಾಸ ಮೊಬಲಗು ರೂ.9,500/– ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗಿರುತ್ತದೆ. ಈ ನಷ್ಟದ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಂಡು ಪಾಲಿಕೆಗೆ ಸೂಕ್ತ ವರದಿ ನೀಡಲು ಸೂಚಿಸಿದೆ.

ಹೂಡಿಕೆ ಮೊಬಲಗಿನಲ್ಲಿ ಹೆಚ್ಚಿನ ಬಡ್ಡಿದರ 7.75% ಬದಲಾಗಿ 7.55% ಹಾಗೂ 7% ಬಡ್ಡಿ ದರದಲ್ಲಿ ಕಡಿಮೆ ತೊಡಗಿಸಿರುವ ಕಂಡು ಬಂದಿದೆ.

| | |
|---|---|
| 5,00,000 x 0.20% /100 | 1000 |
| 5,00,000 x 0.20% /100 | 1000 |
| 5,00,000 x 0.75% / 100 | 3,750 |
| 5,00,000 x 0.75% 1000 | 3,750 |
| | |
| **TOTAL** | **9,500** |

ಪ್ರಸ್ತಾವಿತ ಕಂಡಿಕೆಯಲ್ಲಿ ವಿಶ್ವವಿದ್ಯಾನಿಲಯದ ನಿಶ್ಚಿತ ಠೇವಣಿಯಲ್ಲಿನ ಹೂಡಿಕೆಗಳ ನಿರ್ವಹಣೆಯಲ್ಲಿನ ಲೋಪದಿಂದ ಉಂಟಾಗಿರುವ ಆರ್ಥಿಕ ನಷ್ಟದ ಬಗ್ಗೆ ಪ್ರಸ್ತಾಪಿಸಲಾಗಿದೆ, ರೂ.7,56,513/– + 9,500/– =7,66,013/–ಆದರೆ ವಾಸ್ತವವಾಗಿ ಹೂಡಿಕೆಗಳನ್ನು ಅವುಗಳಿಂದ ದೊರೆಯಬಹುದಾದ ಆರ್ಥಿಕ ಲಾಭವನ್ನಷ್ಟೆ ಪರಿಗಣಿಸದೇ ಅಯಾ ಬ್ಯಾಂಕುಗಳು ಸಂಸ್ಥೆಗೆ ಒದಗಿಸುವ ಸಮರ್ಪಕ ಸೇವೆಯನ್ನು ಪರಿಗಣಿಸಬೇಕಾಗುತ್ತದೆ, ಸದರಿ ಪ್ರಕರಣಗಳಲ್ಲಿ ಹೂಡಿಕೆಗಳನ್ನು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲೇ ಮಾಡಲಾಗಿದೆ ಪಕ್ವವಾಗಿರುವ ಪ್ರಕರಣಗಳಲ್ಲಿ ಮುಂದುವರಿಸಲಾಗಿದೆ

ಒಂದು ಬ್ಯಾಂಕಿನಿಂದ ಮತ್ತೊಂದು ಬ್ಯಾಂಕಿಗೆ ವರ್ಗಾವಣೆ ಮಾಡುವ ಅವಧಿಯಲ್ಲಿಯೇ ಬ್ಯಾಂಕ್ ಬಡ್ಡಿ ದರಗಳ ವ್ಯತ್ಯಸ ಆಗಿರುವ ಸಂಧರ್ಭಗಳು ಇವೆ ಅಲ್ಲದೆ ಒಂದು ಬ್ಯಾಂಕ್‌ನಲ್ಲಿ ನಿರ್ಧಿಷ್ಟ ಅವಧಿಗೆ ಹೂಡಿಕೆ ಮಾಡಿದ ಮೊತ್ತವನ್ನು ಮುಂಚಿತವಾಗಿ ಹಿಂಪಡೆದ ಸಂಧರ್ಭದಲ್ಲಿ ಉಂಟಾಗುವ ಬಡ್ಡಿಯ ನಷ್ಟವು ಬೇರೆ ಬ್ಯಾಂಕಿನಲ್ಲಿ ಹೂಡಿದ ಮೊತ್ತಕ್ಕೆ ದೊರೆಯುವ ಲಾಭಕ್ಕೆ ಸಮನಾಗುವ ಸಂಧರ್ಭಗಳು ಇರುತ್ತದೆ ಹೂಡಿಕೆಗಳ ಸಂಧರ್ಭದಲ್ಲಿ ಆರ್ಥಿಕಲಾಭಗಳು, ಭದ್ರತೆ ಸಂಬಂಧಿಸಿದ ಬ್ಯಾಂಕ್‌ಗಳಿಂದ ವಿಶ್ವವಿದ್ಯಾನಿಲಯಕ್ಕೆ ದೊರೆಯುವ ಉತ್ತಮ ಸೇವೆ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಪರಿಗಣಿಸಿಯೇ ಹೂಡಿಕೆ ಕ್ರಮವಹಿಸಲಾಗಿದೆ ಎಂಬ ಅಂಶವನ್ನು ಲೆಕ್ಕ ತನಿಖೆ ಅವಗಾಹನೆಗೆ ತರಲಾಗಿದೆ

ಈ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಪರಿಗಣಿಸಿ ಉಲ್ಲೇಖಿತ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ.

| | | |
|---|---|---|
| **27** | <u>ಬ್ಯಾಂಕ್ ಖಾತೆಯಲ್ಲಿ ಬಂದಿರುವ ಬಡ್ಡಿ ಮರು ಜಮೆ ಮಾಡದೆ ಇರುವುದು:–</u><br>2016–17ನೇ ವರ್ಷದಲ್ಲಿ ಬ್ಯಾಂಕ್ ಖಾತೆಯ ಸಂಖ್ಯೆ:64178514575 ರಲ್ಲಿ RUSAಅನುದಾನ ಹೊಂದಾಣಿಕೆಯಾಗಿರುವ ಬ್ಯಾಂಕ್ ಖಾತೆಯಲ್ಲಿ ಬಡ್ಡಿ ಜಮೆಯಾಗಿದ್ದು ಬಡ್ಡಿ ಮೊಬಲಗು ಹಿಂಪಡೆತ ಲೆಕ್ಕಶೀರ್ಷಿಕೆ (Rashtriya uchcharar Shiksha ABH) ದಿನಾಂಕ:30.06.2016 ರೂ.8,06,420 ಬಡ್ಡಿ ಬಾಬ್ತು ಜಮೆಯಾಗಿದ್ದು, ಸದರಿ ಮೊತ್ತವನ್ನು Special officer Karnataka State higher education council Government institute of printing technologys building Bangalore ರವರಿಗೆ ಜಮಾ ಮಾಡಿರುವುದಿಲ್ಲ. ಲೆಕ್ಕಶೀರ್ಷಿಕೆ 2202–03–102–0–01–118–101 ಜಮೆ ಮಾಡಿ ಪಾಲನಾ ವರದಿ ನೀಡುವ ತನಕ ಮೊಬಲಗು **ರೂ.8,06,420/–ಗಳನ್ನು ವಸೂಲಾತಿಗೆ ಸೂಚಿಸಿದೆ.** | ಪ್ರಸ್ತುತ ಕಂಡಿಕೆಯಲ್ಲಿ ಸೂಚಿಸಿರುವ ಯೋಜನೆಯ Rashtriya uchcharar Shiksha ABH)ಬಡ್ಡಿಯ ಮೊತ್ತವನ್ನು ಧನಾದೇಶ ಸಂಖ್ಯೆ:907976/30.03.2020ರಲ್ಲಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿರುವ ವಿವರವನ್ನು ಲೆಕ್ಕ ಪರಿಶೋಧನಗೆ ಹಾಜರು ಪಡಿಸಿದೆ ಅದ್ದರಿಂದ ಸದರಿ ಕಂಡಿಕೆಯನ್ನು ಕೈ ಬಿಡಲು ಕೋರಿದೆ.<br>(ಅಡಕ ಈ ಸಂಬಂಧ ವರದಿ ಅರ್ಥಿಕ ಅಧಿಕಾರಿಗಳಿಂದ ಧೃಡೀಕರಣ ಪ್ರತಿ ಮತ್ತು ಧನಾದೇಶದ ಜೆರಾಕ್ಸ್ ಪ್ರತಿ) |

| | | |
|---|---|---|
| **28** | **<u>ಇಂಜಿನಿಯರಿಂಗ್ ವಿಭಾಗದ ಕಛೇರಿ ನಗದು ಪುಸ್ತಕವನ್ನು ಪ್ರತ್ಯೇಕ ವಿಭಾಗಗಳಾಗಿ ನಿರ್ವಹಿಸಿರುವ ಬ್ಯಾಂಕ್ ಖಾತೆ, ಧನಾದೇಶದೊಂದಿಗೆ ಸಮನ್ವಯಗೊಳಿಸದೆ ಇರುವುದು :– (ಇಂಜಿನಿಯರಿಂಗ್ ವಿಭಾಗ)</u>**<br>ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರ ಕಛೇರಿಯ 2016–17ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿರುವ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಕ್ರಮಬದ್ಧವಾಗಿ ಜಮಾ ಖರ್ಚಿನ ವಿವರಗಳೊಂದಿಗೆ ಹಣಕಾಸು ವಿಭಾಗದಿಂದ ಪಡೆದಿರುವ ಚೆಕ್, ಡಿ.ಡಿ ಕ್ಯಾಷ್ ಇತ್ಯಾದಿ ರೂಪದಲ್ಲಿ ಬಂದಿರುವಂತಹ ಧನಾದೇಶಗಳನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿ ಆಯಾ ಹಂತದಲ್ಲಿ ಪ್ರತಿದಿನ ದೈನಂದಿನ ಜಮಾ ಖರ್ಚುಗಳನ್ನು ದೃಢೀಕರಿಸಿ ಸಮನ್ವಯಗೊಳಿಸಿರುವುದಿಲ್ಲ. ಈ ಕೆಳಕಂಡ ವಿವರದಂತೆ ಪತ್ರ್ಯೇಕ ಭಾಗಗಳಾಗಿ ವಿಂಗಡಿಸಿ ನಗದು ಪುಸ್ತಕವನ್ನು ನಿರ್ವಹಿಸಲಾಗಿದೆ. ಈ ರೀತಿ ಕ್ರಮಬದ್ಧವಾಗಿ ನಿರ್ವಹಿಸದೆ ಇರುವ ನಗದು ಪುಸ್ತಕ ನಿರ್ವಹಣೆ ಕುರಿತು ಸೂಕ್ತ ವಿವರಣೆ ಸಲ್ಲಿಸಬೇಕಾಗಿದೆ.<br>1. ಬ್ಯಾಂಕ್ ಖಾತೆ ಸಂಖ್ಯೆ:64146330979 ನಗದು ಪುಸ್ತಕವನ್ನು ನಿರ್ವಹಿಸಲಾಗಿದೆ. ಈ ನಗದು ಪುಸ್ತಕವನ್ನು ಹಣಕಾಸು ವಿಭಾಗದಿಂದ ಕಾರ್ಯಪಾಲಕ ಅಭಿಯಂತರವರ ಹೆಸರಿಗೆ ಬಂದಿರುವ ಧನಾದೇಶಗಳನ್ನು ಬ್ಯಾಂಕ್ ಖಾತೆಗೆ ತೆಗೆದುಕೊಂಡು ಜಮೆ ಖರ್ಚನ್ನು ನಗದು ಪುಸ್ತಕದಲ್ಲಿ ತೋರಿಸಲಾಗಿದೆ.<br>2. GRA A/c No. 54007591471 SBM Bank ಖಾತೆಯಲ್ಲಿ ವಿವಿಧ ಬಾಬ್ತುಗಳಿಂದ ವಸೂಲಿಯಾದ (ಉದಾ: ಟೆಂಡರ್ ದಸ್ತಾವೇಜು ಮಾರಾಟ, ಲೈಸನ್ಸ್ ಫೀ, ವಸತಿಗೃಹ ಬಾಡಿಗೆ ಇತರೆ) ಸಾದಿಲ್ವಾರು ವೆಚ್ಚ, ವೇತನ ಬಿಲ್ಲು, ನಗದೀಕರಣ ಬಿಲ್ಲು, ವೈದ್ಯಕೀಯ ಬಿಲ್ಲು, ಇತ್ಯಾದಿಗಳನ್ನು ನಗದು ಪುಸ್ತಕದಲ್ಲಿ ನಿರ್ವಹಿಸಿರುವುದಿಲ್ಲ. ಆದರೆ, ಬ್ಯಾಂಕ್ ಖಾತೆಯೊಂದಿಗೆ ನಿರ್ವಹಿಸಿರುವುದು ಕಂಡುಬಂದಿರುತ್ತದೆ. ನಗದು ಪುಸ್ತಕದಲ್ಲೂ ನಿರ್ವಹಿಸಬೇಕಿರುತ್ತದೆ.<br>3. ವಿಭಾಗದ ಕಾಮಗಾರಿ ಬಿಲ್ಲುಗಳ ಪಾವತಿಯನ್ನು ವರ್ಕ್ ಕ್ಯಾಷ್‌ಬುಕ್‌ನಲ್ಲಿ ನಿರ್ವಹಿಸಿರುವುದು ಕ್ರಮಬದ್ಧವಾಗಿರುವುದಿಲ್ಲ, ಸದರಿ ನಗದು ಪುಸ್ತಕದಲ್ಲಿ ನಿರ್ವಹಿಸದಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಗುತ್ತಿಗೆದಾರರಿಗೆ | ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ಕಂಡಿಕೆ 28 ಕ್ಕೆ ಸಂಬಂಧಿಸಿದಂತೆ 2016–17 ನೇ ಸಾಲಿನ ನಗದು ಪುಸ್ತಕ, ಟೆಂಡರ್ ದಾಸ್ತಾವೇಜು, ಮಾರಾಟ, ಲೈಸೆನ್ಸ್ ಫೀ, ವಸತಿಗೃಹ ಬಾಡಿಗೆ ವಿವರ, ಕಾಮಗಾರಿಗಳ ಬಿಲ್ಲುಗಳ ನಗದು ಪುಸ್ತಕ ನಿರ್ವಹಣೆಯ ಬಗ್ಗೆ ಕಂಡಿಕೆ 28 ರಲ್ಲಿ (ಕ್ರ ಸಂ,1,2&3) ಸಲಹೆ ಸೂಚನೆಗಳನ್ನು ನೀಡಲಾಗಿದ್ದು ಅದರಂತೆ ನಿರ್ವಹಿಸಲು ಕ್ರಮ ತೆಗೆದುಕೊಳ್ಳಲಾಗಿದ್ದು ಸದರಿ ಮಾಹಿತಿಯನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಒದಗಿಸಲಾಗುವುದು. |

| | | |
|---|---|---|
| | ಪಾವತಿಸಿರುವ ಬಿಲ್ಲಿನ ಮೊತ್ತಕ್ಕೆ ಅನುಗುಣವಾಗಿ ಪಾವತಿಸಿರುವ ಕಾಮಗಾರಿ ಬಿಲ್ಲಿನ ಕಟಾವಣೆಗಳು ನಿವ್ವಳ ಮೊತ್ತಕ್ಕೆ ತಾಳೆಯಾಗಿರುವುದಿಲ್ಲ. ಹಾಗೂ ಹಣಕಾಸು ವಿಭಾಗದಿಂದ ನೀಡಿರುವ ಕಾಮಗಾರಿಯ ಧನಾದೇಶಗಳಿಗೆ ಅನುಗುಣವಾಗಿ ಜಮಾ ಖರ್ಚನ್ನು ದೈನಂದಿನ ಪ್ರಾರಂಭ ಶಿಲ್ಕು ಅಂತಿಮ ಶಿಲ್ಕಿನೊಂದಿಗೆ ದಿನಾಂಕ:31.03.2017 ಅಂತ್ಯಕ್ಕೆ ನಗದಾಗದೆ ಬಾಕಿ ಉಳಿದಿರುವ ಧನಾದೇಶಗಳ ಮೊತ್ತ ಹಾಗೂ ಹೊಂದಾಣಿಕೆಯಾಗಿರುವ ಮುಂಗಡ ವಿಚಾರದಲ್ಲಿ ಪರಿಶೀಲಿಸಲು ಸಾಧ್ಯವಾಗಿಲ್ಲದ ಕಾರಣ ತಾಳೆಯಾಗಿರುವುದಿಲ್ಲ. ಆದ್ದರಿಂದ ಕ್ರಮಬದ್ಧವಾಗಿ ನಗದು ಪುಸ್ತಕ ನಿರ್ವಹಿಸುವಂತೆ ಸೂಚಿಸಿದೆ. | |

29

**<u>2016–17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಗೃಹಗಳಿಂದ ಬಂದ ಆದಾಯ (ಬಾಡಿಗೆ) ಮೊತ್ತವನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಕಡಿಮೆ ತೆಗೆದುಕೊಂಡಿರುವ ಮೊತ್ತ ರೂ.28,240/– :– (ಹಣಕಾಸು ವಿಭಾಗ)</u>**

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಅತಿಥಿ ಗೃಹದ ಬಾಡಿಗೆ ಬಾಬ್ತು ಜಿ.ಆರ್.ಎ ಖಾತೆಗೆ ವಾರ್ಷಿಕ ಲೆಕ್ಕಪತ್ರದಂತೆ ರೂ.13,69,810/–ಗಳು ಜಮೆಯಾಗಿರುತ್ತದೆ ಎಂದು ನಮೂದಿಸಲಾಗಿರುತ್ತದೆ. ಈ ಮೊತ್ತಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣೆ ಪತ್ರ ಸಂಖ್ಯೆ:98/26.07.2018ರಲ್ಲಿ ಸೂಚಿಸಲಾಗಿತ್ತು. ತಪಾಸಣೆಗೆ ಹಾಜರುಪಡಿಸಿದ ಚಲನ್ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ 2016–17ನೇ ಸಾಲಿನಲ್ಲಿ ಅತಿಥಿ ಗೃಹಕ್ಕೆ ಬಾಡಿಗೆಯಿಂದ ಸಂಗ್ರಹಿಸಿದ ಒಟ್ಟು ಮೊತ್ತ ರೂ.13,98,050/–ಗಳಾಗಿರುತ್ತದೆ. ವಾರ್ಷಿಕ ಲೆಕ್ಕಪತ್ರದ ಸ್ವೀಕೃತಿ ಮೊತ್ತಕ್ಕೂ ಹಾಜರುಪಡಿಸಿದ ಚಲನ್ ದಾಖಲಾತಿ ಮೊತ್ತ ರೂ.28,240/– ಗಳ ವ್ಯತ್ಯಾಸ ಕಂಡುಬಂದಿರುತ್ತದೆ. ರೂ.28,240/–ಗಳನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಕಡಿಮೆ ತೆಗೆದುಕೊಳ್ಳಲಾಗಿದೆ ಈ ಬಗ್ಗೆ ಲೆಕ್ಕಸಮನ್ವಯ ಮಾಡಿಕೊಳ್ಳಲು ಸೂಚಿಸಿದೆ. ಚಲನ್‌ಗಳ ಮೊತ್ತದ ವಹಿವಾಟು ಕ್ರೋಢೀಕರಿಸಿ **<u>ಅನುಬಂಧ–10ರಲ್ಲಿ</u>** ಲಗತ್ತಿಸಿದೆ.

| 2016–17 | | | |
|---|---|---|---|
| ಕ್ರ.ಸಂ | ವಾರ್ಷಿಕ ಲೆಕ್ಕಪತ್ರದ ಪ್ರಕಾರ | ಚಲನ್‌ಗಳನ್ನು ಖಾತೆಗೆ ಜಮಾ ಮಾಡಿರುವ ಪ್ರಕಾರ | ಷರಾ |
| 1 | 1369810 | 1398050 | 28240 |

2016–17ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 29 ರಲ್ಲಿ ಅತಿಥಿ ಗೃಹಗಳ ಬಾಡಿಗೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿ ಸ್ವೀಕೃತಿಯ ಮೊತ್ತ ಚಲನ್ ಮತ್ತು ಇತರೆ ದಾಖಲಾತಿಗಳ ಪ್ರಕಾರ ರೂ.13,98,050/–ಗಳಾಗಿದ್ದು ವಾರ್ಷಿಕ ಲೆಕ್ಕ ಪತ್ರದ ಪ್ರಕಾರ ರೂ.13,69,810/–ಗಳಿದ್ದು ರೂ.28,240/–ಗಳ ವ್ಯತ್ಯಾಸದ ಬಗ್ಗೆ ಪ್ರಸ್ತಾಪಿಸಲಾಗಿದ್ದು ಆ ಮೇರೆಗೆ ಸಂಬಂದ ಪಟ್ಟ ದಾಖಲಾತಿಗಳನ್ನು ಪರಿಶೀಲಿಸಲಾಗಿ 2016–17ನೇ ಸಾಲಿನ ಅತಿಥಿ ಗೃಹಗಳ ಬಾಡಿಗೆಗೆ ಸಂಬಂಧಿಸಿ ಚಲನ್‌ಗಳ ಪ್ರಕಾರ ರೂ.13,98,050/–ಗಳಾಗಿದ್ದು 2016–17ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸುವ ಸಂದರ್ಭದಲ್ಲಿ ಕೈ ತಪ್ಪಿನಿಂದ ರೂ.28,240/–ಗಳು ಬೇರೆ ಶೀರ್ಷಿಕೆಯಲ್ಲಿ ಸೇರ್ಪಡೆಯಾಗಿರುವುದು ಕಂಡು ಬಂದಿರುತ್ತದೆ, ಆದ್ದರಿಂದ ಸದರಿ ಮೊತ್ತದ ಲೆಕ್ಕ ಪತ್ರಗಳನ್ನು ಸಮನ್ವಯಗೊಳಿಸಿ ಸರಿಯಾದ ಮಾಹಿತಿಯನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಲಾಗುವುದೆಂದು ನಿವೇದಿಸಲಾಗಿದೆ.

| | | |
|---|---|---|
| 30 | **<u>ಮೈದಾನಗಳ, ಕಟ್ಟಡಗಳ, ಸಭಾಂಗಣಗಳನ್ನು ಬಾಡಿಗೆಗೆ ನೀಡುವಾಗ ವಾಣಿಜ್ಯ ಸಂಘ ಸಂಸ್ಥೆಗಳಿಗೂ ರಿಯಾಯಿತಿ ನೀಡಿರುವುದು:– (ಆಡಳಿತ ವಿಭಾಗ)</u>**<br>ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ 2016–17ನೇ ಸಾಲಿನ ತಪಾಸಣೆಯಲ್ಲಿ ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಡುವ ವಿವಿಧ ಖಾಲಿ ಮೈದಾನಗಳು, ಬಯಲು ರಂಗಮಂದಿರ ಹಾಗೂ ವಿವಿಧ ಸಭಾಂಗಣಗಳನ್ನು ವಿವಿಧ ಉದ್ದೇಶಗಳಿಗಾಗಿ ಸಾರ್ವಜನಿಕ ಸಂಸ್ಥೆಗಳಿಗೆ ಕೆಲವು ವಿದ್ಯಾ ಸಂಸ್ಥೆಗಳಿಗೆ ಹಾಗೂ ಹಲವು ವಾಣಿಜ್ಯ ಸಂಸ್ಥೆಗಳಿಗೆ ಬಾಡಿಗೆ ನೀಡಿ ಬಾಡಿಗೆ ಶುಲ್ಕಗಳನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿಎಲ್+1/726/2012–13 ದಿನಾಂಕ:29.08.2015ರನ್ವಯ ನಿಗದಿಪಡಿಸಲಾಗಿರುವ ದರಗಳಿಗೆ ಅನುಗುಣವಾಗಿ ಮತ್ತು ಆದೇಶದಲ್ಲಿ ಮಾಡಿಕೊಳ್ಳಲಾಗಿರುವ ಕೆಲವು ನಿಯಮಗಳನ್ವಯ ಬಾಡಿಗೆ ಶುಲ್ಕಗಳನ್ನು ವಸೂಲಿ ಮಾಡಲಾಗಿರುವ ವಿವರಗಳನ್ನು ಹಾಗೂ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿ ಕೆಲವು ಆದ್ಯತೆ–ನಿಯಮಗಳ ಕ್ರಮಸಂಖ್ಯೆ:06ರ ಪ್ರತ್ಯಾಧಿಕಾರವನ್ನು ಉಪಯೋಗಿಸಿಕೊಂಡು ಕೆಲವು ಸಾಮಾಜಿಕ ಚಟುವಟಿಕೆಗಳ ಸಂಸ್ಥೆಗಳಿಗೆ, ವಿದ್ಯಾ ಸಂಸ್ಥೆಗಳಿಗೆ ಶೇ25% ಮತ್ತು 50% ರಿಯಾಯಿತಿಗಳನ್ನು ನಿಗದಿಪಡಿಸಲಾಗಿರುವ ದರಗಳ ಮೇಲೆ ನೀಡಿರುವುದು ಸರಿಯಷ್ಟೆ ಆದರೆ ಈ ಕೆಳಗೆ ವಿವರಸಲಾಗಿರುವ ವ್ಯಾಪಾರ ವಹಿವಾಟು ಮಾಡುವ, ಹಣಗಳಿಸುವ, ವಾಣಿಜ್ಯ ಸಂಸ್ಥೆಗಳಿಗೆ ಶೇ.50 ರಷ್ಟು ಮೊತ್ತ, ಶೇ25 ರಷ್ಟು ರಿಯಾಯಿತಿಯನ್ನು ನೀಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಕ್ರೋಢೀಕರಿತವಾಗುವ ಆದಾಯದ ಮೇಲೆ ಆರ್ಥಿಕ ನಷ್ಟ ಉಂಟಾಗಬಹುದೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಟ್ಟಿದ್ದು, ಈ ರೀತಿ ರಿಯಾಯಿತಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವಾಣಿಜ್ಯ ವಹಿವಾಟು ನಡೆಸುವ ಸಂಸ್ಥೆಗಳಿಗೆ ವಿಶ್ವವಿದ್ಯಾನಿಲಯವು ನಿಗದಿಪಡಿಸಲಾಗಿರುವ ದರಗಳಲ್ಲಿಯೆ ನೀಡುವುದರಿಂದ ವಿಶ್ವವಿದ್ಯಾನಿಲಯದ ಆದಾಯಕ್ಕೆ ಉಂಟಾಗುವ ನಷ್ಟವನ್ನು ತಪ್ಪಿಸಬಹುದಾಗಿದೆ. ಎಂಬುದಾಗಿ ಲೆಕ್ಕಪರಿಶೋಧನೆ ಅಭಿಪ್ರಾಯಿಸಿದೆ.<br>1. Recepit Book No. 147/Recepit Bo.7301/09.02.2016 M/S Mitra enterprises ನಿಗದಿತ ದರ 75,000/– ರಿಯಾಯಿತಿ 50% | ವಿಶ್ವವಿದ್ಯಾನಿಲಯದ ಮೈದಾನಗಳ ಕಟ್ಟಡಗಳ ಹಾಗೂ ಸಭಾಂಗಣಗಳನ್ನು ಬಾಡಿಗೆಗೆ ನೀಡುವಾಗ ಆಧೇಶ ಸಂಖ್ಯೆ ಜಿಎಲ್+1/726/2012–13 ದಿನಾಂಕ:29.08.2015ರಲ್ಲಿ ನಿಗದಿಪಡಿಸಲಾಗಿರುವ ದರಗಳಿಗೆ ಅನುಗುಣವಾಗಿ ಮಾನ್ಯ ಕುಲಪತಿಗಳಿಗೆ ಕ್ರಮ ಸಂಖ್ಯೆ 06ರ ಪ್ರಾತ್ಯಾಧಿಕಾರವನ್ವಯ ಕೆಲವು ಸಾಮಾಜಿಕ ಚಟುವಟಿಕೆಗಳ ಸಂಸ್ಥೆಗಳಿಗೆ ವಿದ್ಯಾ ಸಂಸ್ಥೆಗಳಿಗೆ ಶೇ ಬಡ 25% ಮತ್ತು ಬಡ 50%ರಂತೆ ವಿಯಾಯಿತಿ ನೀಡಲು ಅವಕಾಶ ಕಲ್ಪಸಲಾಗಿದೆ.<br>ಮೇ. ಮಿತ್ರ ಎಂಟರ್ ಪ್ರೈಸಸ್; ಮೆ; ಗೃಹಶೋಭಾ ಹಾಗೂ ಮೇ; ಸಿಮಾನ್ಸ್ ಎಕ್ಸಿಬಿಷನ್ ಬೆಂಗಳೂರು ಸಂಸ್ಥೆಗಳು ವಾಣಿಜ್ಯ ಸಂಸ್ಥೆಗಳಾಗದ್ದರೂ ಸಹ ಸಾಮಾಜಿಕ ಚಟುವಟಿಕೆ ಒಳಗೊಂಡಿದ್ದು ಸಾರ್ವಜನಿಕರಿಗೆ ಉಪಯೋಗವಾಗುವಂತಹ ವಸ್ತು ಪ್ರದರ್ಶನ ಕಾರ್ಯ ನಡೆಸುತ್ತಿದ್ದುದರಿಂದ ಮೇಲಿನಂತೆ ರಿಯಾಯಿತಿ ದರದಲ್ಲಿ ಖಾಲಿ ಜಾಗಗಳನ್ನು ನೀಡಲಾಗಿದೆ ಸಾರ್ವಜನಿಕ ಹಿತ ದೃಷ್ಟಿಯಿಂದ ಈ ಸಂಸ್ಥೆಗಳಿಗೆ ರಿಯಾಯಿತಿ ನೀಡಲಾಗಿದೆಯಾದ್ದರಿಂದ ಇದನ್ನು ವಿಶ್ವವಿದ್ಯಾನಿಲಯಕ್ಕೆ ನಷ್ಟ ಎಂದು ಪರಿಗಣಿಸಿದಿರುವಂತೆ ನಿವೇದಿಸಿದೆ. |

| | | |
|---|---|---|
| | 35,000/– ಪಡೆಯಲಾಗಿದೆ. ಸೆನೆಟ್ ಭವನ.<br>2. Recepit Book No.144/Recepit No7151 ಹಾಗೂ 7154 ಒಟ್ಟು ರೂ.9,00,000/–ಗಳಿಗೆ 25% ರಿಯಾಯಿತಿ ನೀಡಿರುವುದು ನಿವ್ವಳ ರೂ.6,75,000/– ಒ/ಖ ಉಡಿಣ್ಣು,ಽಠಛುಚಿ ಮಹಾರಾಜ ಮೈದಾನ.<br>3. Recepit Book No. 147/Receipt No. 7310/15.12.2016 ರಂದು ಮಹಾರಾಜ ಕಾಲೇಜು ಮೈದಾನ ಒಟ್ಟು 10 ದಿನಗಳಿಗೆ 10,00,000/– ರೂ.ಗಳಿಗೆ ಶೇ 50% ರಷ್ಟು ರಿಯಾಯಿತಿಯನ್ನು M/S Simons Exhibition Bangalore ಇವರಿಗೆ ನೀಡಿ ಕೇವಲ ರೂ.5,00,000/– ಗಳನ್ನು ಮಾತ್ರ ಪಡೆಯಲಾಗಿದೆ.<br>Recepit Book No. 142/Receipt No. 7060/20.05.2016 ಒಟ್ಟು 5 ದಿನಗಳಿಗೆ ರೂ.5,00,000/–ಗಳ ಬಾಡಿಗೆಗೆ 50% ರಿಯಾಯಿತಿ ನೀಡಿ ಕೇವಲ ರೂ.2,50,000/– ಗಳನ್ನು ಮಾತ್ರ ಪಡೆಯಲಾಗಿದೆ. | |

| | | |
|---|---|---|
| **31** | **<u>2016–17ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರಾದ ವಿದ್ಯಾರ್ಥಿ ವೇತನ ಪೂರ್ಣವಾಗಿ ಬಟವಾಡೆಯಾಗದಿರುವ ಕುರಿತು :– (ಆಡಳಿತಾಧಿಕಾರಿಗಳ ಕಛೇರಿ)</u>**<br>2016–17ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ವಿದ್ಯಾರ್ಥಿಗಳು ಸಲ್ಲಿಸಿರುವ ಶುಲ್ಕ ವಿನಾಯಿತಿ ಬೇಡಿಕೆ ಮೊತ್ತವನ್ನು ಹಾಗೂ ಮಂಜೂರಾತಿಯಾದ ಬಾಕಿಯ ವಿವರಗಳನ್ನು ಬಟವಾಡೆ ವಹಿಯೊಂದಿಗೆ ಪರಿಶೀಲಿಸಿದಾಗ 2016–17ನೇ ಸಾಲಿನಲ್ಲಿ ವಿಭಾಗಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸಂಬಂಧಿತ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮೊತ್ತ ರೂ.1,14,11,382/–ಗಳು ಮಾತ್ರ ಮಂಜೂರಾಗಿರುತ್ತದೆ.<br><br>ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ಬಟವಾಡೆ ವಹಿಯನ್ನು ಪರಿಶೀಲಿಸಿದಾಗ ರೂ.1,08,63,616/–ಗಳು ಮಾತ್ರ ಬಟವಾಡೆಯಾಗಿದ್ದು ರೂ.5,47,766/–ಗಳು ಬಟವಾಡೆಯಾಗದೆ ಬಾಕಿ ಉಳಿಕೆ ಇರುತ್ತದೆ. ಪ್ರಸಕ್ತ ಸಾಲಿನವರೆಗೂ ವಿತರಿಸದೆ ಬಾಕಿ ಉಳಿದಿರುವುದು ನಿಯಮ ಬಾಹಿರ ಕ್ರಮವಾಗಿರುವುದರಿಂದ ಶೀಘ್ರವಾಗಿ ರೂ.5,47,766/–ಗಳನ್ನು ಬಡ್ಡಿ ಸಮೇತ ಸಂಬಂಧಿತ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ ಹಾಗೂ ಹಿಂದಿನ ಸಾಲುಗಳಲ್ಲಿ ಬಟವಾಡೆಯಾಗದೆ ಉಳಿದ ಮೊತ್ತವನ್ನು ಸಹ ಹಿಂದಿರುಗಿಸಲು ಕ್ರಮ ಕೈಗೊಳ್ಳುವುದು ಹಾಗೂ ಬ್ಯಾಂಕ್ ತಃಖ್ತೆಯೊಂದಿಗೆ ಬಾಕಿ ಉಳಿಕೆ ಶಿಲ್ಕನ್ನು ಸಮನ್ವಯಗೊಳಿಸಿ ವರದಿ ನೀಡುವಂತೆ ಸೂಚಿಸಿದೆ. ಹಾಗೂ ಇಲಾಖೆಯಿಂದ ಮರುಭರಿಕೆಯಾಗಬೇಕಾಗಿರುವ ಮೊತ್ತ **ರೂ.5,47,766**/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ಮರುಭರಿಕೆ ಮಾಡಿಕೊಂಡು ಲೆಕ್ಕ ಸಮನ್ವಯ ಮಾಡಿಕೊಳ್ಳಲು ಸೂಚಿಸುತ್ತ ಸದರಿ ಮೊತ್ತವನ್ನು ಇತ್ಯರ್ಥಗೊಳಿಸುವವರೆಗೆ **ಆಕ್ಷೇಪಣೆಯಲ್ಲಿಡಲಾಗಿದೆ.** | 2016–17ನೇ ಸಾಲಿನಲ್ಲಿ ಹಿಂದುಳಿದ ವರ್ಗಗಗಳ ಕಲ್ಯಾಣ ಇಲಾಖೆಯಿಂದ ಬಿಡುಗಡೆ ಆಗಿರುವ ಒಟ್ಟು ಮೊತ್ತ ರೂ.1,14,11,382/–ಗಳ ಪೈಕಿ ರೂ.1,08,63,616/–ಗಳು ಬಟವಾಡೆ ಆಗಿರುತ್ತದೆ. ಉಳಿಕೆ ಮೊತ್ತ ರೂ.5,47,766/–ಗಳು ಸಾಮಾನ್ಯವಾಗಿ ವಿದ್ಯಾರ್ಥಿವೇತನ ಅಥವಾ ಶುಲ್ಕವಿನಾಯಿತಿ ಮೊತ್ತಗಳು ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರರ ಕಲ್ಯಾಣ ಇಲಾಖೆಯಿಂದ ತುಂಬಾತಡವಾಗಿ ಅಂದರೆ ಶೈಕ್ಷಣಿಕ ವರ್ಷ ಮುಗಿದ ನಂತರ ಬಿಡುಗಡೆಗೊಳ್ಳುತ್ತದೆ. ವಿದ್ಯಾರ್ಥಿಗಳು ಕೋರ್ಸ್‌ಮುಗಿಸಿ ಅಧ್ಯಯನ ವಿಭಾಗವನ್ನು ಬಿಟ್ಟುಹೋದನಂತರ ತಡವಾಗಿ ಬಿಡುಗಡೆಗೊಳ್ಳುವುದರಿಂದ ಸ್ವಲ್ಪಮಟ್ಟಿಗೆ ಮೊತ್ತಗಳು ಬಟವಾಡೆಆಗದೇ ಉಳಿದಿರುತ್ತದೆ. ಪ್ರಸ್ತುತ ಸಾಲಿನಲ್ಲಿ ರೂ.5,47,766/–ಗಳು ಬಟವಾಡೆ ಆಗದೇಉಳಿದಿದ್ದು, ವಿದ್ಯಾರ್ಥಿಗಳು ಕೊಡಲೇ ಬಟವಾಡೆ ನಮೂನೆಯನ್ನು ಸಹಿಯೊಂದಿಗೆ ಸಲ್ಲಿಸುವಂತೆ ವಿದ್ಯಾರ್ಥಿಗಳ ಮನೆವಿಳಾಸಕ್ಕೆ ಪತ್ರವ್ಯವಹಾರ ಮಾಡಲಾಗುತ್ತದೆ. ಅಲ್ಲದೆ ವಿವಿಧ ಅಧ್ಯಯನವಿಭಾಗಗಳಿಗೆ ಪತ್ರ ಬರೆದು ಸಂಭಂಧಪಟ್ಟ ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ಕೋರಲಾಗಿದೆ. ಹಾಗೂ ವಿದ್ಯಾರ್ಥಿಗಳಿಂದ ಶುಲ್ಕ ಮರುಭರಿಕೆಯಾದ ನಂತರವೇ ಬೇಬಾಕಿ ಪ್ರಮಾಣಪತ್ರ ನೀಡಿ ಮೂಲ ದಾಖಲೆಗಲು ಹಿಂದಿರುಗಿಸುವ ಬಗ್ಗೆ ಕ್ರಮವಹಿಸುವುದು. ವಿದ್ಯಾರ್ಥಿಗಳು ಕಛೇರಿಗೆ ಬಂದು ಶುಲ್ಕವಿನಾಯಿತಿ ಮೊತ್ತ ಪಡೆಯದಿದ್ದಲ್ಲಿ ವಿಶ್ವವಿದ್ಯಾನಿಲಯಕ್ಕೆ ಬರಬೇಕಾದ ಮೊತ್ತವನ್ನು ಮರುಭರಿಕೆ ಮಾಡಿಕೊಂಡು ಉಳಿದ ಶುಲ್ಕ ವಿನಾಯಿತಿ ಮೊತ್ತವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಹಿಂದುರುಗಿಸುವ ಬಗ್ಗೆ ಕುಲಸಚಿವರಿಂದ ಅನುಮೋದನೆ ಪಡೆದು ಕ್ರಮವಹಿಸುವುದಾಗಿ ನಿವೇದಿಸುತ್ತಾ ರೂ.5,47,766/–ಗಳ ಆಕ್ಷೇಪಣೆ ಮೊತ್ತ ತೀರುವಳಿಗೊಳಿಸಲು ಕೋರಿದೆ. |

32

**2016–17ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ವಿದ್ಯಾರ್ಥಿಗಳು ಸಲ್ಲಿಸಿರುವ ಶುಲ್ಕ, ವಿನಾಯಿತಿ, ಬೇಡಿಕೆ ಮೊತ್ತವನ್ನು ಹಾಗೂ ಮಂಜೂರಾಗಬೇಕಿರುವ ಬಾಕಿಯ ವಿವರ :– (ಆಡಳಿತಾಧಿಕಾರಿಗಳ ಕಛೇರಿ)**

2016–17ನೇ ಸಾಲಿನ ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು ಸಂಸ್ಥೆಯ ಲೆಕ್ಕಪರಿಶೋಧನೆಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರಾತಿಯಾದ ಶುಲ್ಕ ವಿನಾಯಿತಿ ಸಂಬಂಧಪಟ್ಟಂತೆ ಬೇಡಿಕೆ ಹಾಗೂ ಬಾಕಿ ಮಂಜೂರಾಗಬೇಕಾದ. ವಿವರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

| | |
|---|---|
| 2015–16ನೇ ಸಾಲಿನಲ್ಲಿ ಒ.ಬಿ.ಸಿ ಕಲ್ಯಾಣ ಇಲಾಖೆಯಿಂದ ಬರಬೇಕಾದ ಶುಲ್ಕ ವಿನಾಯಿತಿ ಮೊತ್ತ | 1,92,83,158 |
| 2016–17ನೇ ಸಾಲಿನಲ್ಲಿ ಒ.ಬಿ.ಸಿ ಕಲ್ಯಾಣ ಇಲಾಖೆಗೆ ಸಲ್ಲಿಸಿರುವ ಶುಲ್ಕ ವಿನಾಯಿತಿ ಬೇಡಿಕೆ ಮೊತ್ತ | 1,49,00,416 |
| 2016–17ನೇ ಸಾಲಿನಲ್ಲಿ ಒ.ಬಿ.ಸಿ ಕಲ್ಯಾಣ ಇಲಾಖೆಗೆ ಸಲ್ಲಿಸಿರುವ ಒಟ್ಟು ಶುಲ್ಕ ವಿನಾಯಿತಿ ಬೇಡಿಕೆ ಮೊತ್ತ | 3,41,83,574 |
| 2016–17ನೇ ಸಾಲಿನಲ್ಲಿ ಒ.ಬಿ.ಸಿ ಕಲ್ಯಾಣ ಇಲಾಖೆಯಿಂದ ಮಂಜೂರಾದ ಮೊತ್ತ | 1,46,50,299 |
| ಮಂಜೂರಾಗದೆ ಬಾಕಿ ಇರುವ ಶುಲ್ಕ ವಿನಾಯಿತಿ ಮೊತ್ತ | 46,32,859 |

ಮಂಜೂರಾಗದೆ ಬಾಕಿ ಇರುವ ಶುಲ್ಕ ವಿನಾಯಿತಿ ಮೊತ್ತ **ರೂ.46,32,859/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.** ಸೂಚಿಸಿದೆ.

2016–17ನೇ ಸಾಲಿನಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ವಿದ್ಯಾರ್ಥಿಗಳು ಸಲ್ಲಿಸಿರುವ ಬೇಡಿಕೆ ಮೊತ್ತ ರೂ.46,32,859/–ಗಳನ್ನು ಬಿಡಿಗಡೆ ಮಾಡಿ ಕೊಡುವಂತೆ ಇಲಾಖೆಗೆ ಪತ್ರಗಳನ್ನು ಬರೆಯಲಾಗಿರುತ್ತದೆ ಬಿಡುಗಡೆ ಆದ ಕೂಡಲೇ ವಿದ್ಯಾರ್ಥಿಗಳ ಶುಲ್ಕ ಮೊತ್ತಗಳಿಗೆದುರಾಗಿ ಮೊತ್ತಗಳನ್ನು ಹೊಂದಾಣಿಕೆ ಮಾಡಿಕೊಂಡು ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲಾಗುತ್ತದೆ.

| | | |
|---|---|---|
| **33** | **<u>ಎಸ್.ಸಿ/ಎಸ್.ಟಿ ವಿದ್ಯಾರ್ಥಿ ವೇತನ ಖಾತೆಯಲ್ಲಿ ಜಮೆಯಾಗಿರುವ ಬ್ಯಾಂಕ್ ಬಡ್ಡಿಯನ್ನು ಸಂಬ್ಬಂಧಪಟ್ಟ ಇಲಾಖೆ ಖಾತೆಗೆ ಹಿಂದಿರುಗಿಸುವ ಬಗ್ಗೆ :– (ಆಡಳಿತಾಧಿಕಾರಿಗಳ ಕಛೇರಿ)</u>**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿ ವೇತನ ಖಾತೆಯ ಬ್ಯಾಂಕ್ ಸ್ಟೇಟ್ಮೆಂಟ್ ಅನ್ನು ಪರಿಶೀಲಿಸಲಾಗಿ ಸದರಿ ಖಾತೆಗೆ ವಿವಿಧ ದಿನಾಂಕಗಳಂದು ಬ್ಯಾಂಕ್ ಬಡ್ಡಿ ಜಮೆಯಾಗಿರುತ್ತದೆ. ಈ ಸಂಬಂಧ ಜಮೆಯಾಗಿರುವ ಒಟ್ಟು ಬಡ್ಡಿಯನ್ನು ವಿದ್ಯಾರ್ಥಿ ವೇತನ ಮಂಜೂರು ಮಾಡುವ ಇಲಾಖೆ ಖಾತೆಗೆ ಜಮೆ ಮಾಡಬೇಕಾಗಿರುವುದರಿಂದ ಜಮೆ ಮಾಡಲಾದ ಚಲನ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:18/2018–19 ದಿನಾಂಕ:10.08.2018 ರಂದು ನೀಡಲಾಗಿದ್ದರೂ ಸಹ ಯಾವುದೇ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮ ವಹಿಸಿ ಬ್ಯಾಂಕ್ ಬಡ್ಡಿಯನ್ನು ಸಮಾಜ ಕಲ್ಯಾಣ ಇಲಾಖೆ ಖಾತೆಗೆ ಜಮೆ ಮಾಡಿದ ಚಲನ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೂ ಒಟ್ಟು ಬ್ಯಾಂಕ್ ಬಡ್ಡಿ **ರೂ.6,42,813/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** | ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಾಧಿಕಾರಿ ಕಛೇರಿಯ ಎಸ್.ಸಿ/ಎಸ್.ಟಿ ವಿದ್ಯಾರ್ಥಿವೇತನ ಶಾಖೆಯ ಉಳಿತಾಯ ಖಾತೆ ಸಂಖ್ಯೆ:54035421019 ರಲ್ಲಿ 2016–17ನೇ ಸಾಲಿನಲ್ಲಿ ವಿವಿಧ ದಿನಾಂಕಗಳಂದು ಬ್ಯಾಂಕ್ ಬಡ್ಡಿ ಜಮೆಯಾಗಿರುವ ಒಟ್ಟು ಮೊತ್ತ ರೂ.6,42,813/–ಗಳನ್ನು ಸಮಾಜ ಕಲ್ಯಾಣ ಇಲಾಖೆಯ ಖಾತೆಗೆ ಜಮಾ ಮಾಡದೇ ಇರುವ ಬಗ್ಗೆ ಆಕ್ಷೇಪಿಸಲಾಗಿರುತ್ತದೆ.<br><br>ಈ ಸಂಬಂಧವಾಗಿ ಪ.ಜಾ/ಪ.ಪಂಗಡದ ವಿದ್ಯಾರ್ಥಿವೇತನ ಖಾತೆ ಸಂಖ್ಯೆ:54035401019ರಲ್ಲಿ 2012 ರಿಂದ 2015ರ ವರೆಗೆ ವರ್ಷಕ್ಕೆ ಎರಡು ಬಾರಿಯಂತೆ ಅಂದರೆ ಜೂನ್ ಮತ್ತು ಡಿಸೆಂಬರ್ ಮಾಹೆಯ ಅಂತ್ಯದಲ್ಲಿ ಖಾತೆಗೆ ಜಮಾ ಆಗಿರುವ ಬಡ್ಡಿಯ ಒಟ್ಟು ಮೊತ್ತ ರೂ.11,37,367/–ಗಳು ಮತ್ತು 2016–17 ನೇ ಸಾಲಿನಲ್ಲಿ ಜಮಾ ಆಗಿರುವ ಬಡ್ಡಿಯ ಮೊತ್ತ ರೂ.6,42,813/–ಗಳು ಸೇರಿದಂತೆ ಜಮಾ ಆಗಿರುವ ಒಟ್ಟು ಬಡ್ಡಿಯ ಮೊತ್ತ ರೂ.17,80,450/–ಗಳಾಗಿದ್ದು ಸದರಿ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಗೆ ಜಮೆಮಾಡುವ ಸಂಬಂಧ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ಜಿ.ಎಲ್4/ಇತರೆ/2018–19,ದಿನಾಂಕ:21.01.2019 ರಲ್ಲಿ ಅನುಮತಿ ಪಡೆದು ಹಾಗೂ ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲ್ಲೂಕು, ಮೈಸೂರು ರವರ ಪತ್ರ ಸಂಖ್ಯೆ: ಸ.ನಿ.ಸ.ಕ.ಇ/ಮೈ/ಮೆ.ನಂ.ವಿ.ವೇ/ಸಿ.ಆರ್/2018–19,ದಿನಾಂಕ:08.02.2019ರಲ್ಲಿ ತಿಳಿಸಿ ರುವಂತೆ ಈ ಖಾತೆಗೆ ಜಮೆ ಆದ ಒಟ್ಟು ಮೊತ್ತವನ್ನು ಧನಾದೇಶ ಸಂಖ್ಯೆ:920247, ದಿನಾಂಕ:23.01.2019 ರೂ.17,80,450/–ಗಳಿಗೆ, ಮ್ಯಾನೇಜರ್, ಎಸ್.ಬಿ.ಐ ಸರ್ಕಾರದ ಖಜಾನೆಯ ಶಾಖೆ ಮೈಸೂರು ರವರಿಗೆ ಧನಾದೇಶ ಬರೆದು ಚಲನ್ ಸಂಖ್ಯೆ:ಸಿ.ಆರ್.0219004900000568, ದಿನಾಂಕ:12.02.2019 ರಲ್ಲಿ ಸರ್ಕಾರದ ಲೆಕ್ಕ ಶೀರ್ಷಿಕೆ ಟೋಕನ್ ನಂ ಜೆ–134326464 ದಿನಾಂಕ:13.02.2019 ರಂದು ಜಮೆ ಮಾಡಲಾಗಿರುತ್ತದೆ ಎಂದು ನಿವೇದಿಸುತ್ತಾ ವಿಶ್ವವಿದ್ಯಾನಿಲಯದ ಅನುಮತಿ |

| | | |
|---|---|---|
| | | ಪತ್ರ, ಸಮಾಜ ಕಲ್ಯಾಣ ಇಲಾಖೆಯ ಪತ್ರ ಮತ್ತು ವಿವಿಧ ದಿನಾಂಕಗಳಂದು ಬ್ಯಾಂಕ್ ಬಡ್ಡಿ ಜಮೆಯಾಗಿರುವ ವಿವರ ಮತ್ತು ಬ್ಯಾಂಕ್ ಸ್ಟ್ರೋಲ್ ಪ್ರತಿ ಹಾಗೂ ಚಲನ್ ಪ್ರತಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯಲ್ಲಿನ ಆಕ್ಷೇಪಣೆಯ ಮೊತ್ತ ರೂ.6,42,813/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ. |

| | | |
|---|---|---|
| 34 | **2016–17ನೇ ಸಾಲಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಪೂರ್ಣವಾಗಿ ಬಟವಾಡೆಯಾಗದಿರುವ ಕುರಿತು :– (ಆಡಳಿತಾಧಿಕಾರಿಗಳ ಕಛೇರಿ)**<br><br>2016–17ನೇ ಸಾಲಿನ ಆಡಳಿತಾಧಿಕಾರಿಗಳ ಕಛೇರಿಯ ಲೆಕ್ಕಪರಿಶೋಧನೆಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನದ ಕಡತ ಹಾಗೂ ವಿತರಣಾ ವಹಿಯನ್ನು ಪರಿಶೀಲಿಸಿದಾಗ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಮೈಸೂರು ಕಛೇರಿಯಿಂದ 2016–17ನೇ ಸಾಲಿಗೆ ಮತ್ತು ಹಿಂದಿನ ಸಾಲಿನಲ್ಲಿ ಒಟ್ಟು ರೂ.1,79,32,465/–ಗಳ ವಿದ್ಯಾರ್ಥಿ ವೇತನ ಮಂಜೂರಾತಿಯಾಗಿರುತ್ತದೆ. ವಿವರಗಳನ್ನು **ಅನುಬಂಧ–11** ರಲ್ಲಿ ನೀಡಲಾಗಿದೆ.<br><br>ವಿದ್ಯಾರ್ಥಿ ವೇತನದ ಕಡತ ಪರಿಶೀಲಿಸಿದಾಗ 2016–17ನೇ ಸಾಲಿಗೆ ಪರಿಶಿಷ್ಟ ಜಾತಿ/ ವರ್ಗದ ವಿದ್ಯಾರ್ಥಿಗಳು ವಿವಿಧ ಶೈಕ್ಷಣಿಕ ವಿಭಾಗಗಳಿಗೆ ನೊಂದಣಿಯಾಗಿರುವುದು ಕಂಡು ಬಂದಿದೆ. 2016–17ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಮಂಜೂರಾದ ನಿಲಯ ನಿರ್ವಹಣಾ ಭತ್ಯೆ/ ವಿಶ್ವವಿದ್ಯಾನಿಲಯ ಬೋಧನಾ ಶುಲ್ಕದ ವಿದ್ಯಾರ್ಥಿ ವೇತನ ರೂ.1,67,72,137/–ಗಳನ್ನು ಆರ್.ಟಿ.ಜಿ.ಎಸ್ ಮೂಲಕ ಶೈಕ್ಷಣಿಕ ವಿಭಾಗಗಳಿಂದ ವಿದ್ಯಾರ್ಥಿಗಳ ಹಾಜರಾತಿ ಮತ್ತು ನಿಲಯದ ಹಾಜರಾತಿಯನ್ನು ಪರಿಗಣಿಸಿ ಮಂಜೂರಾದ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯ ಆದೇಶದ ಪ್ರಕಾರ ವಿದ್ಯಾರ್ಥಿಗಳಿಗೆ ಚೆಕ್ ಮೂಲಕ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಸಂದಾಯ ಮಾಡಬೇಕಾಗಿರುತ್ತದೆ. ಹಾಗೂ ಶುಲ್ಕ ಬಾಬ್ತು ಹೊಂದಾಣಿಕೆ ಮಾಡಿಕೊಂಡ ಬಗ್ಗೆ ಮಂಜೂರಾದ ವಿದ್ಯಾರ್ಥಿ ವೇತನದ ಪೂರ್ಣ ಮೊತ್ತಕ್ಕೆ ವಿದ್ಯಾರ್ಥಿಗಳಿಂದ ದ್ವಿಪ್ರತಿಯಲ್ಲಿ ಬಟವಾಡೆ ತಃಖ್ತೆ ಪಡೆಯಬೇಕಾಗಿರುತ್ತದೆ.<br><br>ಪ್ರಸ್ತುತ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ವಿದ್ಯಾರ್ಥಿ ವೇತನದ ಬಟವಾಡೆ ವಹಿಯನ್ನು ಪರಿಶೀಲಿಸಿದಾಗ ಒಟ್ಟು ಮಂಜೂರಾದ ಮೊತ್ತ 2,18,75,386, ವಿತರಿಸಲಾದ ಮೊತ್ತ 2,03,79,317/– ವಿತರಿಸದೆ ಬಾಕಿ ಉಳಿದ ಮೊತ್ತ ರೂ.**14,96,069/–ಗಳನ್ನು** | 2016–17ನೇ ಸಾಲಿನ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ವಿದ್ಯಾರ್ಥಿವೇತನದ ಕಡತ ಮತ್ತು ವಿತರಣಾ ವಹಿಯನ್ನು ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಪರಿಶೀಲಿಸಿದ್ದು ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ಒಟ್ಟು ರೂ.2,18,75,386/– ವಿದ್ಯಾರ್ಥಿಗಳಿಗೆ ವಿತರಿಸಲಾದ ಒಟ್ಟು ಮೊತ್ತ ರೂ.2,03,79,317/–ಗಳು ವಿತರಿಸದೇ ಬಾಕಿ ಉಳಿದ ಮೊತ್ತ ರೂ.14,96,069/–ಗಳಾಗಿರುತ್ತದೆ. ಎಂಬುದಾಗಿ ಪ್ರಸ್ತಾಪಿಸಲಾಗಿರುತ್ತದೆ. ಅದರನ್ವಯ 14 ಮಂದಿ ವಿದ್ಯಾರ್ಥಿಗಳಿಗೆ ಒಟ್ಟು ರೂ.2,27,894/–ಗಳು ವಿತರಣೆ ಮಾಡಲಾಗಿರುತ್ತದೆ. ಉಳಿದ ಮೊತ್ತ ರೂ.12,80,030/–ಗಳ ವಿದ್ಯಾರ್ಥಿಗಳು ಬಡವಾಡೆ ನಮೂನೆ ಫಾರಂ ಸಲ್ಲಿಸದೇ ಇರುವ ಕಾರಣದಿಂದಾಗಿ ಬಾಕಿ ಉಳಿದಿರುತ್ತದೆ. ಸದರಿ ಮೊತ್ತದಲ್ಲಿ ವಿಶ್ವವಿದ್ಯಾನಿಲಯಕ್ಕೆ ಬರಬೇಕಾದ ಮೊತ್ತವನ್ನು ಮರುಭರಿಕೆ ಮಾಡಿಕೊಂಡು ಉಳಿದ ವಿದ್ಯಾರ್ಥಿವೇತನದ ಮೊತ್ತವನ್ನು ಸಮಾಜಕಲ್ಯಾಣ ಇಲಾಖೆಗೆ ಹಿಂದುರುಗಿಸುವ ಬಗ್ಗೆ ಮಾನ್ಯ ಕುಲಸಚಿವರ ಅನುಮೋದನೆ ಪಡೆದು ನಂತರ ಜಮಾಮಾಡಿ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವುದಾಗಿ ನಿವೇದಿಸುತ್ತಾ ವಿದ್ಯಾರ್ಥಿ ವೇತನ ವಿತರಣೆ ಮಾಡಿರುವ ವಿದ್ಯಾರ್ಥಿಗಳ ಪಟ್ಟಿ ಮತ್ತು ವಿತರಣೆಯಾಗದೇ ಬಾಕಿಉಳಿದಿರುವ ವಿದ್ಯಾರ್ಥಿಗಳ ವಿವರಗಳನ್ನು ಈ ಕೊಡಲಗತ್ತಿಸಿ ಸಲ್ಲಸುತ್ತಾ ಕಂಡಿಯಲ್ಲಿನ ಆಕ್ಷೇಪಣೆ ಮೊತ್ತ ರೂ.14,96,169/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಲಾಗಿದೆ. |

| | | |
|---|---|---|
| | ಸಂಬಂಧಪಟ್ಟವರಿಗೆ ವಿತರಿಸಲು ವಿಫಲರಾಗಿರುವವರ (ವಿಳಂಬ ದೋರಣೆ ಅನುಸರಿಸುವವರು) ಮೇಲೆ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. ಅದುವರೆವಿಗೂ ಸದರಿ ಮೊತ್ತವನ್ನು **ಆಕ್ಷೇಪಣೆಯಲ್ಲಿಡಲಾಗಿದೆ.**<br><br>ಪ್ರಸಕ್ತ ಸಾಲಿನವರೆಗೆ ವಿದ್ಯಾರ್ಥಿ ವೇತನ ರೂ.14,96,069/-ಗಳಷ್ಟು ವಿತರಿಸದೆ ಬಾಕಿ ಉಳಿದಿರುವುದು ಕಂಡು ಬಂದಿದ್ದು, ಈ ಕ್ರಮವು ನಿಯಮ ಬಾಹಿರವಾಗಿರುವುದರಿಂದ ಕೂಡಲೇ ಬಡ್ಡಿ ಸಮೇತ ಮಂಜೂರಾದ ಹಣವನ್ನು ಸಂಬಂಧಿತ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ ಹಾಗೂ ಬ್ಯಾಂಕ್ ತಃಖ್ತೆಯೊಂದಿಗೆ ಉಳಿಕೆ ಲಭ್ಯವಿರುವ ಶಿಲ್ಕನ್ನು ಸಮನ್ವಯಗೊಳಿಸಿ ಉಳಿಕೆ ಶಿಲ್ಕಿನ ವರದಿ ನೀಡುವಂತೆ ಸೂಚಿಸಿದೆ. ಹಾಗೂ ಹಿಂದಿನ ಸಾಲುಗಳಲ್ಲಿ ಬಟವಾಡೆಯಾಗದೆ ಉಳಿದ ಮೊತ್ತವನ್ನು ಸಹ ಹಿಂದಿರುಗಿಸಲು ಸೂಚಿಸಿದೆ. | |

**35** **<u>2016–17ನೇ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದ ಡಿ.ಸಿ.ಬಿ ವಹಿ ಪರಿಶೀಲನೆ:– (ಆಡಳಿತಾಧಿಕಾರಿಗಳ ಕಛೇರಿ)</u>**

ಆಡಳಿತಾಧಿಕಾರಿ ಕಛೇರಿಯಲ್ಲಿರುವ 2016–17ನೇ ಸಾಲಿನ ಸ್ನಾತಕೋತ್ತರ ಗ್ರಂಥಾಲಯ, ಮೈ.ವಿ.ವಿ ಮಾನಸಗಂಗೋತ್ರಿ, ಇಲ್ಲಿಯ ಪ್ರವೇಶಾತಿಗೆ ಸಂಬಂಧಿಸಿದಂತೆ ಡಿ.ಸಿ.ಬಿ ವಹಿ ಹಾಗೂ ಡಿ.ಸಿ.ಬಿ ತಃಖ್ತೆಯನ್ನು ಪರಿಶೀಲಿಸಲಾಗಿ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕವನ್ನು ವಸೂಲಾತಿ ಮಾಡಲಾಗಿದ್ದು ವಾಸ್ತವಿಕವಾಗಿ ವಸೂಲು ಮಾಡುವುದಕ್ಕಿಂತ ಕಡಿಮೆ ವಸೂಲಾತಿ ಮಾಡಲಾಗಿದೆ. ರೂ.**4,62,516**/–ಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡುವವರೆಗೂ ಸದರಿ ಮೊತ್ತವನ್ನು **ಆಕ್ಷೇಪಣೆಯಲ್ಲಿಡಲಾಗಿದೆ.** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ಜಮೆ ಮಾಡಲಾದ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. ರೂ.**4,62,516**/–ಗಳು ಅಧಿಕ ಮೊತ್ತವಾಗಿದ್ದು ಈ ಮೊತ್ತವು ವಸೂಲಾಗದೇ ಇರುವುದರಿಂದ ವಿಶ್ವವಿದ್ಯಾನಿಲಯವು ಆರ್ಥಿಕ ಕ್ರಮಗಳನ್ನು ಅನುಷ್ಠಾನಗೊಳಿಸಲು ಕಷ್ಟವಾಗಿ ಪ್ರಗತಿಯು ಕುಂಠಿತವಾಗುತ್ತದೆ. ಆದ್ದರಿಂದ ಕೂಡಲೇ ಆಡಳಿತಾಧಿಕಾರಿಗಳು ಕ್ರಮ ವಹಿಸಿ ವಸೂಲಾತಿ ಮಾಡುವುದು. ಮೈಸೂರು ವಿಶ್ವವಿದ್ಯಾನಿಲಯದ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಪ್ರತಿ ವಿಭಾಗವಾರು ಲಭ್ಯವಾಗುವ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಗೆ ಅನುಗುಣವಾಗಿ ಹಾಗೂ ಮೀಸಲಾತಿಗೆ ಅನುಗುಣವಾಗಿ ಡಿ.ಸಿ.ಬಿ ತಃಖ್ತೆಯನ್ನು ಸಿದ್ದಪಡಿಸುವುದು ವಿಶ್ವವಿದ್ಯಾನಿಲಯದ ಪ್ರಥಮ ಆದ್ಯ ಜವಾಬ್ದಾರಿಯಾಗಿರುತ್ತದೆ. ಆದರೆ ಈ ಚಟುವಟಿಕೆಯನ್ನು ಇದುವರೆವಿಗೂ ಸಮರ್ಪಕವಾಗಿ ನಿರ್ವಹಿಸಿರುವ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ಇದರಿಂದ ವಿಶ್ವವಿದ್ಯಾನಿಲಯದ ಸ್ವೀಕೃತಿ ಪ್ರಮಾಣದ ನಿಖರತೆ ಬಗ್ಗೆ ತಿಳಿಯಲು ಸಾಧ್ಯವಾಗಿರುವುದಿಲ್ಲ.

| | |
|---|---|
| Opening balance (A & B scheme) | 2,10,72,876 |
| Demand (2016-17) (A & B scheme) | 7,88,11,758 |
| Total demand | 9,98,84,634 |
| Total collection | 9,94,22,118 |
| Balnace (2016-17) | **4,62,516** |

2016–17ನೇ ಸಾಲಿನಲ್ಲಿ ಆಡಳಿತಾಧಿಕಾರಿ ಕಛೇರಿಯಿಂದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ "ಎ" ಸ್ಕೀಂ ಮತ್ತು "ಬಿ" ಸ್ಕೀಂ ಗಳಡಿಯಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಡಿ.ಸಿ.ಬಿ ವಹಿಯನ್ನು ಪರಿಶೀಲಿಸಲಾಗಿ ವಿದ್ಯಾರ್ಥಿಗಳಿಂದ ವಾಸ್ತವಿಕವಾಗಿ ವಸೂಲು ಮಾಡುವುದಕ್ಕಿಂತ ಕಡಿಮೆ ವಸೂಲಾತಿ ಮಾಡಿರುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿದ್ದು ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ರೂ.4,62,516/–ಗಳನ್ನು ವಸೂಲಿಮಾಡಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆಮಾಡುವವರೆಗೂ ಆಕ್ಷೇಪಣೆಮಾಡಲಾಗಿದೆ. ಜಮೆಮಾಡಿರುವ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಲಾಗಿರುತ್ತದೆ.

ಅದರನ್ವಯ 2016–17ನೇ ಸಾಲಿನಲ್ಲಿ ಸ್ನಾತಕೋತ್ತರ ಅಧ್ಯಯನ ವಿಭಾಗದ ವಿವಿಧ ವಿಭಾಗಗಳಲ್ಲಿ "ಬಿ" ಸ್ಕೀಂ ಅಡಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು 2ನೇ ಕಂತಿನ ಪ್ರವೇಶಾತಿ ಶುಲ್ಕದ ಒಟ್ಟು ಮೊತ್ತ ರೂ.4,70,359/–ಗಳನ್ನು 2017–18ನೇ ಸಾಲಿನ ಅಂದರೆ 2017ರ ಏಪ್ರಿಲ್ ಮತ್ತು ಮೇ ಮಾಹೆಯಲ್ಲಿ ವಿಶ್ವವಿದ್ಯಾನಿಲಯದ ಸಾಮಾನ್ಯ ಖಾತೆಗೆ (ಜಿ.ಆರ್.ಎ) ಜಮಾ ಮಾಡಲಾಗಿರುತ್ತದೆ. "ಬಿ" ಸ್ಕೀಂ ವಿದ್ಯಾರ್ಥಿಗಳ ಪಟ್ಟಿ ಮತ್ತು ಜಮಾ ಮಾಡಿರುವ ಚಲನ್‌ಗಳ ಪ್ರತಿ ಹಾಗೂ ಜಿ.ಆರ್.ಎ ಖಾತೆಗೆ ಸ್ವೀಕೃತವಾಗಿರುವ ಬ್ಯಾಂಕ್ ಸ್ಕ್ರೋಲ್ ಪ್ರತಿಯನ್ನು ಈ ಕೊಡಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯಲ್ಲಿನ ಆಕ್ಷೇಪಣೆಯ ಮೊತ್ತ ರೂ.4,62,516/–ಗಳನ್ನು ತೀರುವಳಿಗೊಳಿಸಲು ಕೋರಿದೆ.

| 36 | **<u>ಪ್ರವೇಶಾತಿ ವಿವರಗಳನ್ನು ಪರಿಶೀಲಿಸಿರುವುದು :– (ಯುವರಾಜ ಕಾಲೇಜು)</u>**<br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಯುವರಾಜ ಕಾಲೇಜಿನಲ್ಲಿ ವಿವಿಧ ಅಧ್ಯಯನ ವಿಭಾಗಗಳಲ್ಲಿ ಪ್ರವೇಶಾತಿ ಪಡೆದ ಪ್ರಥಮ ವರ್ಷ, ದ್ವಿತೀಯ ವರ್ಷ, ತೃತೀಯ ವರ್ಷಗಳ ಪ್ರವೇಶಾತಿ ವಿವರಗಳು ಹಾಗೂ ಇಂಟಿಗ್ರೇಟೆಡ್ ಎಂ.ಎಸ್ಸಿ, ಅಧ್ಯಯನ ವಿಭಾಗಗಳಲ್ಲಿ ಪ್ರವೇಶಾತಿ ಪಡೆದ ಶುಲ್ಕ ಪಾವತಿ ವಿವರಗಳನ್ನು ಪರಿಶೀಲಿಸಲಾಗಿ, **<u>ಅನುಬಂಧ–12ರಲ್ಲಿ</u>** ವಿವರಿಸಿರುವಂತೆ ಪ್ರವೇಶಾತಿ ವಿವರ ಹಾಗೂ ಶುಲ್ಕಗಳ ವಿವರಗಳನ್ನು ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಯುವರಾಜ ಕಾಲೇಜುನಲ್ಲಿ 2016–17 ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಪ್ರಥಮ ವರ್ಷ, ದ್ವಿತೀಯ ವರ್ಷ ಮತ್ತು ತೃತೀಯ ವರ್ಷಗಳ ಪ್ರವೇಶಾತಿ ವಿವರಗಳುಹಾಗೂ ಇಂಟಿಗ್ರೇಟಡ್ ಎಂ.ಎಸ್ಸಿ, ಅಧ್ಯಯನ ವಿಭಾಗಗಳಲ್ಲಿ ಪ್ರವೇಶಾತಿ ಪಡೆದ ಶುಲ್ಕ ಪಾವತಿ ವಿವರಗಳ ಬಗ್ಗೆ 2016–17 ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಯಾವುದೇ ಆಕ್ಷೇಪಣೆ ಮತ್ತು ವಸೂಲಾತಿಗಳು ಸೂಚಿತವಾಗಿರುವುದಿಲ್ಲ. |
|---|---|---|

| | | |
|---|---|---|
| **37** | **<u>ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ವಿದ್ಯಾರ್ಥಿವೇತನವನ್ನು ಸಂಪೂರ್ಣವಾಗಿ ಬಟವಾಡೆ ವಿತರಿಸದೆ ಇರುವುದು :– (ಯುವರಾಜ ಕಾಲೇಜು)</u>**<br><br>2016–17ನೇ ಸಾಲಿನಲ್ಲಿ ಮಂಜೂರಾಗಿರುವ SC/ST ವಿದ್ಯಾರ್ಥಿವೇತನವು 2015–16ನೇ ಸಾಲಿನ SC/ST ವಿದ್ಯಾರ್ಥಿಗಳಿಗೆ ಸಂಬಂಧಿಸಿದ್ದಾಗಿದ್ದು, ಸದರಿ ಸಾಲಿನಲ್ಲಿ ಮಂಜೂರಾಗಿರುವುದಕ್ಕೆ ಬ್ಯಾಂಕ್ ಸಕ್ರೋಲ್ ಹಾಗೂ ಮಂಜೂರಾತಿ ಪತ್ರಗಳನ್ನು ಪರಿಶೀಲಿಸಲಾಗಿ ಹಿಂದಿನ ಸಾಲುಗಳಲ್ಲಿ ಹಾಗೂ 2016–17ನೇ ಸಾಲಿನಲ್ಲಿ ರೂ.1,67,91,389/–ಗಳಷ್ಟು ವಿದ್ಯಾರ್ಥಿವೇತನವು ಮಂಜೂರಾತಿಯಾಗಿರುತ್ತದೆ. ಕಾಲೇಜಿನ ಖಾತೆಗೆ ಹಾಗೂ ವಿದ್ಯಾರ್ಥಿಗಳಿಗೆ ರೂ.33,01,489/–ಗಳನ್ನು ವಿತರಿಸಲಾಗಿದ್ದು, ಉಳಿಕೆ ಮೊತ್ತ ರೂ.1,34,89,900/–ಗಳನ್ನು ವಿದ್ಯಾರ್ಥಿಗಳಿಗೆ/ಕಾಲೆಜಿನ ಖಾತೆ ಜಮೆ ಮಾಡದೆ ಖಾತೆಯಲ್ಲಿಯೇ ಉಳಿಸಿಕೊಂಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.<br><br>ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳಿಗೆ ಒಟ್ಟಾರೆಯಾಗಿ ರೂ.1,34,89,900/–ಗಳನ್ನು ವಿತರಿಸಲು ಕ್ರಮ ಕೈಗೊಂಡಿರುವ ಬಗ್ಗೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:35/2018–19 ದಿನಾಂಕ:24.09.2018ರಲ್ಲಿ ನೀಡಲಾಗಿದ್ದರೂ ಸಹ ಯಾವುದೇ ವಿವರಣೆ ನೀಡಿರುವುದಿಲ್ಲ. ಆದ್ದರಿಂದ ಮೇಲೆ ತಿಳಿಸಿರುವ ಉಳಿಕೆ ವಿದ್ಯಾರ್ಥಿವೇತನ ಮೊತ್ತವನ್ನು ವಿದ್ಯಾರ್ಥಿಗಳಿಗೆ ವಿತರಿಸಲು/ಕಾಲೇಜಿಗೆ ಜಮಾ ಮಾಡಲು ಕ್ರಮವಹಿಸಿ ವಿದ್ಯಾರ್ಥಿಗಳಿಗೆ ವಿತರಣೆಯಾಗದ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆ ಖಾತೆಗೆ ಹಿಂದಿರುಗಿಸಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ.<br><br>\ | ಯುವರಾಜ ಕಾಲೇಜಿಗೆ ಸಂಬಂಧಿಸಿದಂತೆ 2016–17ನೇ ಸಾಲಿನಲ್ಲಿ ಮಂಜೂರಾತಿಯಾಗಿ ಬಿಡುಗಡೆ ಆದ ಒಟ್ಟು ಮೊತ್ತ ರೂ.1,67,91,389/–ಗಳ ಪೈಕಿ:ರೂ.33,01,489/–ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗಿದ್ದು ಬಾಕಿ ಮೊತ್ತ ರೂ.1,34,89,900/–ಗಳು ವಿತರಣೆ ಆಗದೇ ಉಳಿದಿರುತ್ತದೆ.<br><br>ಸದರೀ ಮೊತ್ತವನ್ನು ಆದಷ್ಟು ಜಾಗ್ರತೆ ವಿತರಿಸುವ ಸಲುವಾಗಿ ವಿದ್ಯಾರ್ಥಿಗಳಿಗೆ ಮನೆ ವಿಳಾಸಕ್ಕೆ ಪತ್ರ ವ್ಯವಹಾರ ಮಾಡಲಾಗುತ್ತಿದೆ.<br><br>ಸದರೀ ಮೊತ್ತವನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಆಥವಾ ವಿತರಣೆ ಆಗದೇ ಉಳಿಯುವ ಮೊತ್ತವನ್ನು ಸಮಜ ಕಲ್ಯಾನ ಇಲಾಖೆಗೆ ಜಮೆ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸಲಾಗುತ್ತದೆ. |

| | | |
|---|---|---|
| **38** | <u>**SC/ST ವಿದ್ಯಾರ್ಥಿ ವೇತನ ಖಾತೆಯಲ್ಲಿ ಜಮೆಯಾಗಿರುವ ಬ್ಯಾಂಕ್ ಬಡ್ಡಿಯನ್ನು ಸಂಬಂಧಪಟ್ಟ ಇಲಾಖೆ ಖಾತೆಗೆ ಹಿಂದಿರುಗಿಸದಿರುವುದು :– (ಯುವರಾಜ ಕಾಲೇಜು)**</u><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿವೇತನಕ್ಕೆ ಸಂಬಂಧಪಟ್ಟ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ಖಾತೆಗೆ 2016–17ನೇ ಸಾಲಿನಲ್ಲಿ ವಿವಿಧ ದಿನಾಂಕಗಳಂದು ಬ್ಯಾಂಕ್ ಬಡ್ಡಿ ಜಮೆಯಾಗಿರುತ್ತದೆ. ಬ್ಯಾಂಕ್ ಬಡ್ಡಿಯನ್ನು ವಿದ್ಯಾರ್ಥಿವೇತನ ಮಂಜೂರು ಮಾಡುವ ಇಲಾಖೆಗೆ ಹಿಂದಿರುಗಿಸಬೇಕಾಗಿದ್ದು, ಈ ಸಂಬಂಧ ಬ್ಯಾಂಕ್ ಬಡ್ಡಿಯನ್ನು ಹಿಂದಿರುಗಿಸಿರುವ ಬಗ್ಗೆ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:03/18–19 ದಿನಾಂಕ:03.09.2018 ರಲ್ಲಿ ತಿಳಿಸಿದ್ದರೂ ಸಹ ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ 2016–17ನೇ ಸಾಲಿನಲ್ಲಿ ಜಮೆಯಾಗಿರುವ ಒಟ್ಟು ಬಡ್ಡಿ **ರೂ.3,25,555/–ಗಳಾಗಿದ್ದು,** ಈ ಮೊತ್ತವನ್ನು ಸಂಬಂಧಪಟ್ಟ ಇಲಾಖೆ ಖಾತೆಗೆ ಜಮಾ ಮಾಡುವುದು. ಜಮಾ ಮಾಡುವವರೆಗೆ ಸದರಿ ಮೊತ್ತವನ್ನು **ಆಕ್ಷೇಪಣೆಯಲ್ಲಿಡಲಾಗಿದೆ.** | 2016–17ನೇಸಾಲಿನ ಅಂತ್ಯಕ್ಕೆ SC/ST ವಿದ್ಯಾರ್ಥಿ ವೇತನ ಖಾತೆಯಲ್ಲಿ ಜಮೆಯಾಗಿರುವ ಬ್ಯಾಂಕ್ ಬಡ್ಡಿಯನ್ನು ಸಂಬಂಧಪಟ್ಟ ಇಲಾಖೆ ಖಾತೆಗೆ ಜಮೆ ಮಾಡುವುದರ ಸಂಬಂಧ ಸಮಾಜ ಲಲ್ಯಾನ ಇಲಾಖೆಗೆ ಪತ್ರ ವ್ಯವಹಾರ ಮಾಡಲಾಲಿರುತ್ತದೆ ಈ ಇಲಾಖೆಯಿಂದ ಅಗತ್ಯ ಸೂಚನೆ ಪತ್ರ ಸ್ವೀಕೃತಗಪಂಡ ಕೂಡಲೇ ಸದರೀ ಮೊತ್ತ ರೂ.3,25,555/–ಗಳನ್ನು ಜಮೆ ಮಾಡಲಾಗುವುದು ಮತ್ತು ವರದಿ ಸಲ್ಲಿಸಲಾಗುವುದು. |

| | | |
|---|---|---|
| 39 | **<u>ವಿತರಿಸದೆ ಬಾಕಿ ಉಳಿದಿರುವ OBC ವಿದ್ಯಾರ್ಥಿ ವೇತನವನ್ನು ಸಂಬಂಧಪಟ್ಟ ಇಲಾಖೆ ಖಾತೆಗೆ ಹಿಂದಿರುಗಿಸದಿರುವುದು :– (ಯುವರಾಜ ಕಾಲೇಜು)</u>**<br><br>2016–17ನೇ ಸಾಲಿನ ಯುವರಾಜ ಕಾಲೇಜಿನ ಲೆಕ್ಕಪರಿಶೋಧನೆಯಲ್ಲಿ OBC ಖಾತೆಗೆ ಸಂಬಂಧಪಟ್ಟ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ 2016–17ನೇ ಸಾಲಿನಲ್ಲಿ ಮಂಜೂರಾದ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ಓಇಈಖಿ ಮೂಲಕ ವಿತರಿಸಬೇಕಿರುತ್ತದೆ. ಆದರೆ ಧನಾದೇಶದ ಮೂಲಕ ವಿತರಿಸಲಾಗಿರುತ್ತದೆ. ಇದುವರೆವಿಗೂ ಈ ಖಾತೆಯಲ್ಲಿ ರೂ.25,094/–ಗಳಷ್ಟು (ಬಡ್ಡಿ ಸೇರಿ) ವಿದ್ಯಾರ್ಥಿವೇತನ ವಿದ್ಯಾರ್ಥಿಗಳಿಗೆ ವಿತರಿಸದೆ ಖಾತೆಯಲ್ಲಿಯೇ ಬಾಕಿ ಉಳಿದಿದ್ದು, ವಿತರಿಸದೆ ಬಾಕಿ ಉಳಿಸಿಕೊಂಡಿರುವುದು ಕರ್ತವ್ಯದ ಉದಾಸೀನತೆ ವಹಿಸಿರುವುದರಿಂದ ಸದರಿ ಮೊತ್ತವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಿತದೃಷ್ಟಿಯಿಂದ ಕೂಡಲೇ ಪಾವತಿಸುವವರೆಗೂ ಮೊತ್ತ **ರೂ.25,094/–ಗಳನ್ನುಆಕ್ಷೇಪಣೆಯಲ್ಲಿಡಲಾಗಿದೆ.** | 2016–17ನೇ ಸಾಲಿನ ಯುವರಾಜ ಕಾಲೇಜಿನ OBC ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಬಟವಾಟೆ ಆಗದೇ ಉಳಿದಿದ್ದ ಬಡ್ಡಿಯು ಸೇರಿದಂತೆ ಒಟ್ಟುಮೊತ್ತ ರೂ.25,094/–ಗಳನ್ನು ಹಿಂದೂಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ಲೆಕ್ಕ ಶೀರ್ಷಿಕೆ 0250–00–102–0–02–000 ಗೆ ಕೆ–2( ಖಜಾನೆ2 ) ಕ್ಕೆ ಚಲನ್ ಸಂಖ್ಯೆ:ಸಿ,ಅರ್ 061902500,2800667 ದಿನಾಂಕ:18.6.2019 ರಂದು ಜಮೆ ಮಾಡಲಾಗಿದೆ ಚಲನ್ ಪ್ರತೆಯನ್ನು ಲಗತ್ತಿಸಿದೆ.<br>ಆದ್ದರಿಂದ ರೂ 25,094/–ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |

| | | |
|---|---|---|
| **40** | <u>**ಸಂಯೋಜನಾ ಮುಂದುವರಿಕೆ ಮಂಜೂರಾತಿಗೆ ಸಂಬಂಧಿಸಿದಂತೆ ಪ್ರವೇಶಾತಿ ಸಂಖ್ಯೆಗೆ ಅನುಗುಣವಾಗಿ ಪಡೆದಿರುವ ಸಂಯೋಜನಾ ಶುಲ್ಕಗಳಿಗೆ ಪೂರಕ ಮಂಜೂರಾತಿ ಆದೇಶ ಪ್ರತಿಗಳನ್ನು ಹಾಜರುಪಡಿಸದೇ ಇರುವುದು:– (ಕಾಲೇಜು ಅಭಿವೃದ್ಧಿ ಮಂಡಳಿ)**</u><br>2016–17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಕೋರ್ಸು/ವಿಷಯಗಳ ಸಂಯೋಜನಾ/ ಮುಂದುವರಿಕೆ ಮಂಜೂರಾತಿಗೆ ಸಂಬಂಧಿಸಿದಂತೆ ಹಾಜರುಪಡಿಸಲಾದ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಕೆಳಗೆ ವಿವರಿಸಲಾಗಿರುವ ಎರಡು ಪ್ರಕರಣಗಳಲ್ಲಿ ಆಯಾ ಕೋರ್ಸುಗಳಿಗೆ ಎಷ್ಟು ಪ್ರವೇಶಾತಿಗೆ ಸಂಯೋಜನಾ ಮುಂದುವರಿಕೆ ಮಂಜೂರಾತಿ ನೀಡುತ್ತಾರೆಂಬುದನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ.<br>1) ಭಾರತಿ ಪ್ರಥಮ ದರ್ಜೆ ಕಾಲೇಜು, ಕಿರುಗಾವಲು, ಮಂಡ್ಯ ಇವರಿಂದ ಬಿ.ಎ. ಕೋರ್ಸಿನ 90+40=130 ವಿದ್ಯಾರ್ಥಿಗಳ (ಪ್ರವೇಶಾತಿಯ) ಎರಡು ಘಟಕಗಳಿಗೆ ಸೇರಿ ನಿಗದಿತ ಸಂಯೋಜನಾ ಮುಂದುವರಿಕೆ ಶುಲ್ಕ ರೂ.47,375/–ಗಳ ಬದಲಿಗೆ ರೂ.33,055/–ಗಳನ್ನು ಸ್ವೀಕರಿಸಿರುತ್ತಾರೆ. ಈ ಬಗ್ಗೆ ವಿವರಣೆ ಕೋರಲಾಗಿ ಪ್ರವೇಶಾತಿ ಸಂಖ್ಯೆ:90+40=130 ರ ಬದಲಿಗೆ 70+40=110 ವಿದ್ಯಾರ್ಥಿಗಳ ಎರಡು ಘಟಕಗಳಿಗೆ ಸೇರಿ ರೂ.33,055/–ಗಳನ್ನು ಪಡೆದಿರುವುದಾಗಿ ಸಮಜಾಯಿಷಿ ನೀಡಿರುತ್ತಾರಾದರೂ ಈ ಸಂಬಂಧ ವಿ.ವಿ ಮಂಜೂರಾತಿ ಆದೇಶ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ.<br>2) ಮಾಂಡವ್ಯ ಪ್ರಥಮ ದರ್ಜೆ ಕಾಲೇಜು, ಮಂಡ್ಯ ಇವರಿಂದ ಬಿ.ಎಸ್ಸಿ ಕೋರ್ಸ್–3 ಘಟಕಗಳು ಒಟ್ಟು ಪ್ರವೇಶಾತಿ ಸಂಖ್ಯೆ:180 ಇದರ ನಿಗದಿತ ಸಂಯೋಜನಾ ಮುಂದುವರಿಕೆ ಶುಲ್ಕ ರೂ.44,550/–ಗಳಾಗಿದ್ದು ಸ್ವೀಕೃತಿಯಾಗಿರುವ ಮೊತ್ತ ರೂ.24,300/–ಗಳು ಈ ಬಗ್ಗೆ ವಿವರಣೆ ಕೋರಲಾಗಿ ಮೇಲೆ ತಿಳಿಸಿದ 3 ಘಟಕಗಳ 180 ಪ್ರವೇಶಾತಿಗೆ ಬದಲು 1 ಘಟಕ 60 ಪ್ರವೇಶಾತಿಗೆ (ಸಿ.ಬಿ.ಡಿ.ಟಿ) ಬಿ.ಎಸ್ಸಿ ಮಾತ್ರ ಸಂಯೋಜನಾ ಮುಂದುವರಿಕೆ ಮಂಜೂರಾತಿ ನೀಡಿದ್ದು ಅದರಂತೆ ನಿಗದಿತ ಸಂಯೋಜನಾ ಮುಂದುವರಿಕೆ ಶುಲ್ಕ ರೂ.24,300/– ಪಡೆದಿರುವುದು ಸರಿಯಿದೆ ಎಂದು ವಿವರಣೆ ನೀಡಿರುತ್ತಾರಾದರೂ. ಈ ಸಂಬಂಧ ವಿಶ್ವವಿದ್ಯಾನಿಲಯದ ಮಂಜೂರಾತಿ ಆದೇಶ ಪ್ರತಿಯನ್ನು ಹಾಜರುಪಡಿಸುವಂತೆ ತಿಳಿಸಲಾಗಿದ್ದರೂ, ಸದರಿ ಆದೇಶ ಪ್ರತಿ | 2016–17ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಕೋರ್ಸ್/ವಿಷಯಗಳ ಸಂಯೋಜನಾ/ಮುಂದುವರಿಕೆ ಶುಲ್ಕದ ಬಗ್ಗೆ ಪ್ರಾರಂಭದಲ್ಲಿ ಆಯಾ ಕಾಲೇಜುಗಳ ವಿದ್ಯಾರ್ಥಿಗಳ ಪ್ರವೇಶಾತಿಯು ಯೂನಿಟ್ ಆಧಾರದ ಮೇಲೆ ನಿಗದಿಯಾಗಿದ್ದು ತದನಂತರದಲ್ಲಿ ಯೂಟ್‌ಗಳಲ್ಲಿ ವ್ಯತ್ಯಾಸ ಆಗುವುದರಿಂದ ಸಂಯೋಜನಾ/ಮುಂದುವರಿಗೆ ಶುಲ್ಕದ ಮೊತ್ತದಲ್ಲಿ ವ್ಯತ್ಯಾಸ ಉಂಟಾಗುತ್ತದೆ.<br><br>**ಕಂಡಿಕೆ ಕ್ರಮಾಂಕ (1) ಭಾರತಿ ಪ್ರಥಮ ದರ್ಜೆ ಕಾಲೇಜು ಕಿರುಗಾವಲು ಮಂಡ್ಯ** ಇವರಿಗೆ ಸಂಯೋಜನೆ/ಮುಂದುವರಿಕೆ ಆದೇಶ ಸಂಖ್ಯೆ:–ಸಿಡಿಸಿ–2/111/2016–17, ದಿನಾಂಕ:09.06.2016ರಲ್ಲಿ ಬಿ.ಎ ಕೋರ್ಸ್‌ಗೆ ಹೆಚ್.ಇ.ಪಿ.–90 + ಹೆಚ್.ಇ.ಕೆ–40 ಒಟ್ಟು 130 ವಿದ್ಯಾರ್ಥಿಗಳಿಗೆ ಎರಡು ಘಟಕಗಳಿಗೆ ಸೇರಿ ಸಂಯೋಜನಾ ಮುಂದುವರಿಕೆ ಶುಲ್ಕ ರೂ.47,375/–ಗಳು. ಆದರೆ ಸದರಿ ಕಾಲೇಜಿನ ಪ್ರಾಂಶುಪಾಲರು 2016–17ನೇ ಸಾಲಿಗೆ ಬಿ.ಎ ಕೋರ್ಸ್‌ನ ಹೆಚ್.ಇ.ಪಿಗೆ–70 ವಿದ್ಯಾರ್ಥಿಗಳ ಪ್ರವೇಶಾತಿಯ ಸಂಯೋಜನೆ/ಮುಂದುವರಿಕೆ ನೀಡಬೇಕೆಂದು ಕೋರಿರುವ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದ ತಿದ್ದುಪಡಿ ಆದೇಶ ಸಂಖ್ಯೆ:ಸಿಡಿಸಿ–/111/2016–17 ದಿನಾಂಕ:20.06.2016 ರಂದು ತಿದ್ದುಪಡಿ ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ ಪ್ರವೇಶಾತಿ **90+40=130ರ ಬದಲಿಗೆ 70+40=110** ವಿದ್ಯಾರ್ಥಿಗಳ ಎರಡು ಘಟಕಗಳಿಗೆ ಸೇರಿ ರೂ.33,055/–ಗಳನ್ನು ಪಡೆದಿರುತ್ತೇವೆ. ಈ ಸಂಬಂಧ ತಿದ್ದುಪಡಿ ಆದೇಶದ ಪ್ರತಿ ಲಗತ್ತಿಸಿ ಸಲ್ಲಿಸಿದೆ.<br><br>**ಕ್ರಮಾಂಕ (2) ಮಾಂಡವ್ಯ ಪ್ರಥಮ ದರ್ಜೆ ಕಾಲೇಜು ಮಂಡ್ಯ** ಇಲ್ಲಿಗೆ ಬಿ.ಎಸ್ಸಿ ಕೋರ್ಸ್–3 ಘಟಕಗಳು ಒಟ್ಟು ಪ್ರವೇಶಾತಿ 180 ರ ನಿಗದಿತ ಸರಿಯಾದ ಮೊತ್ತ ರೂ.40,550/–ಗಳು ಕಂಡಿಕೆಯಲ್ಲಿ ತಿಳಿಸಿರುವಂತೆ ರೂ.44,550/–ಗಳು |

| | | |
|---|---|---|
| | ಹಾಜರುಪಡಿಸಿರುವುದಿಲ್ಲ.<br>ಆದಕಾರಣ, ಮೇಲಿನ ಎರಡೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಂಜೂರಾತಿ ಆದೇಶ ಪ್ರತಿಗಳನ್ನು ಹಾಜರುಪಡಿಸುವವರೆಗೂ ಸದರಿ ಸಂಯೋಜನಾ ಮುಂದುವರಿಕೆಯ ವ್ಯತ್ಯಾಸ ಮೊತ್ತ **ರೂ.38,650/-** (14,320+24,300)ಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ **ಆಕ್ಷೇಪಣೆಗೆ ಇಡಲಾಗಿದೆ.** | ಆಗಿರುವುದಿಲ್ಲ ಎಂಬುದಾಗಿ ನಿವೇದಿಸುತ್ತಾ ಸದರಿ ಕಾಲೇಜಿನ 2016-17ನೇ ಸಾಲಿಗೆ ಬಿ.ಎಸ್ಸಿ ಕೋರ್ಸ್ 3 ಘಟಕಗಳು ಒಟ್ಟು ಪ್ರವೇಶಾತಿ 180 ವಿದ್ಯಾರ್ಥಿಗಳ ಸಂಯೋಜನಾ ಮುಂದುವರಿಕೆ ಶುಲ್ಕ ರೂ.40,550/-ಗಳಾಗಿದ್ದು ಇದರ ಪೈಕಿ ರೂ.20,250/-ಗಳನ್ನು ಡಿ.ಡಿ ನಂ.649520 ದಿನಾಂಕ:31.08.2015 ಚಲನ್ ನಂ.2755 ದಿನಾಂಕ:05.09.2015.ರಲ್ಲಿ ರೂ.1,53,250/-(ಇದರಲ್ಲಿ ರೂ.20,250/-ಗಳು ಸೇರಿರುತ್ತದೆ)ಗಳನ್ನು ಜಿ.ಆರ್.ಎ ಖಾತೆಗೆ ಜಮಾ ಮಾಡಲಾಗಿದ್ದು ಉಳಿಕೆ ಸಂಯೋಜನಾ ಶುಲ್ಕದ ಬಾಕಿ ಮೊತ್ತ ರೂ.20,300/-ಗಳನ್ನು ಡಿ.ಡಿ.ನಂ.301210 ದಿನಾಂಕ:23.12.2019ರಲ್ಲಿ ಚಲನ್.ನಂ.428, ದಿನಾಂಕ:26.12.2019 ರಂದು ಜಿ.ಆರ್.ಎ ಖಾತೆಗೆ ಜಮಾ ಮಾಡಲಾಗಿರುತ್ತದೆ.<br>ಭಾರತಿ ಪ್ರಥಮ ದರ್ಜೆ ಕಾಲೇಜಿನ ಬಿ.ಎ ಕೋರ್ಸ್‌ನಲ್ಲಿ ಹೆಚ್.ಇ.ಪಿ 90ರ ಬದಲಾಗಿ 70ಕ್ಕೆ ಪ್ರವೇಶಾತಿ ನೀಡಿರುವ ತಿದ್ದುಪಡಿ ಆದೇಶದ ಪ್ರತಿ ಮತ್ತು ಮಾಂಡವ್ಯ ಪ್ರಥಮ ದರ್ಜೆ ಕಾಲೇಜಿನ ಬಿ.ಎಸ್ಸಿ ಕೋರ್ಸ್ 3 ಘಟಕಗಳ ಒಟ್ಟು 180ರ ಪ್ರವೇಶಾತಿಯ ಸಂಯೋಜನಾ ಮುಂದುವರಿಕೆ ಶುಲ್ಕದ ಬಾಕಿ ಮೊತ್ತ ರೂ.20,300/-ಗಳ ಚಲನ್ ಪ್ರತಿ ಮತ್ತು ಜಿ.ಆರ್.ಎ ಖಾತೆಯ ಬ್ಯಾಂಕ್ ಸ್ಕ್ರೋಲ್ ಹಾಗೂ ನಗದು ಪುಸ್ತಕದ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ. ಕಂಡಿಕೆಯಲ್ಲಿನ ಆಕ್ಷೇಪಣೆಯ ಸಂಯೋಜನಾ ಮುಂದುವರಿಕೆಯ ಶುಲ್ಕ ವ್ಯತ್ಯಸದ ಮೊತ್ತ **ರೂ.38,650/-(14320+14300)ಗಳನ್ನು** ತೀರುವಳಿಗೊಳಿಸುವಂತೆ ಕೋರಿದೆ. |

| | | |
|---|---|---|
| 41 | **2016–17ನೇ ಸಾಲಿನ ಕಾಲೇಜು ಅಭಿವೃದ್ಧಿ ಮಂಡಳಿಯ ವಿವಿಧ ಶುಲ್ಕಗಳು ಹಾಗೂ ಸಂಯೋಜನಾ ಶುಲ್ಕ ವಸೂಲಾತಿಗೆ ಸಂಬಂಧಿಸಿದ ಡಿ.ಸಿ.ಬಿ ವಹಿ ನಿರ್ವಹಿಸದಿರುವುದು:– (ಕಾಲೇಜು ಅಭಿವೃದ್ಧಿ ಮಂಡಳಿ)**<br><br>ಕಾಲೇಜು ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಬರುವ ಸರ್ಕಾರಿ, ಅನುದಾನಿತ ಅನುದಾನ ರಹಿತ ಖಾಸಗಿ/ ಸರ್ಕಾರದ ಕಾಲೇಜುಗಳ ಕೋರ್ಸ್‍ಗಳ ಮುಂದುವರಿಕೆ/ ನವೀಕರಣಕ್ಕಾಗಿ ವಿವಿಧ ಕಾಲೇಜುಗಳಿಂದ ಸಂಯೋಜನಾ ಶುಲ್ಕ ವಸೂಲಾತಿ ಒಟ್ಟು ರೂ.3,35,28,711/–ಗಳಾಗಿದ್ದು, ಜಿ.ಆರ್.ಎ ಖಾತೆಗೆ ಜಮೆಯಾಗಿರುವ ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿ ಸ್ವೀಕೃತಿ ವಹಿವಾಟು ಸಂಖ್ಯೆ 027ರಲ್ಲಿ ಒಟ್ಟು ರೂ.13,36,85,994/–ಅನ್ನು ತೆಗೆದುಕೊಳ್ಳಲಾಗಿದೆ. ಇದರಿಂದ ವಾಸ್ತವಿಕ ಶುಲ್ಕ ವಸೂಲಾತಿಗೂ ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿ ಜಮೆ ತೆಗೆದುಕೊಂಡಿರುವ ಮೊಬಲಗಿನಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ. ಈ ವ್ಯತ್ಯಾಸ ಕುರಿತು ಬೇಡಿಕೆ ಬಾಕಿ ವಸೂಲಾತಿ ವಹಿ (ಡಿ.ಸಿ.ಬಿ ರಿಜಿಸ್ಟರ್) ಯನ್ನು ನಿರ್ವಹಿಸಿರುವುದಿಲ್ಲ. ಇದರಿಂದ ಸಂಯೋಜನಾ ಶುಲ್ಕ ವಸೂಲಾತಿ ಜಮೆ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಹಾಗೂ ಯಾವ ಯಾವ ಕಾಲೇಜುಗಳಿಂದ ಬರಬೇಕಾದ ಬಾಕಿ ಎಷ್ಟು ಎಂಬುದನ್ನು ಖಚಿತವಾಗಿ ತಪಾಸಣೆ ಅವಧಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸಲು ಸಾಧ್ಯವಿಲ್ಲದ ಕಾರಣ ಈ ಬಗ್ಗೆ ಆಡಳಿತಾತ್ಮಕ ಕ್ರಮ ಕೈಗೊಂಡು, ಎಲ್ಲಾ ಕಾಲೇಜು ಸಂಸ್ಥೆಗಳ ವಸೂಲಾತಿ ಹಾಗೂ ಜಿ.ಆರ್.ಎ ಖಾತೆಗೆ ಜಮೆಯಾಗಿರುವ ಬಗ್ಗೆ ಲೆಕ್ಕಸಮನ್ವಯಗೊಳಿಸಿ ಅನುಪಾಲನ ವರದಿ ನೀಡಲು ಸೂಚಿಸಿದೆ. | ಮೈಸೂರು ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರದ ಸ್ವೀಕೃತಿ ವಹಿವಾಟು ಸಂಖ್ಯೆ:027 ರಲ್ಲಿ ಒಟ್ಟು ರೂ.13,36,85,994/–ಗಳನ್ನು ಜಮೆ ತೆಗೆದುಕೊಳ್ಳಲಾಗಿದೆ. ಸದರಿ ಮೊತ್ತವು ಕಾಲೇಜು ಅಭಿವೃದ್ಧಿ ಮಂಡಳಿ ಸೆಂಟರ್ ಫಾರ್ ಔಟ್‍ರೀಚ್ ಪ್ರೋಗ್ರಾಂ, ದೂರ ಶಿಕ್ಷಣ ಡೈರೆಕ್ಟೋರೇಟ್ ಆಫ್ ಸ್ಟೂಡೆಂಟ್ ವೆಲ್‍ಫೇರ್ ಅಂಡ್ ರೀಸರ್ಚ್ ಸೆಂಟರ್ ಹಾಗೂ ಇತರೆ ವಿಭಾಗಗಳಿಂದ ಒಟ್ಟಾರೆಯಾಗಿ ವಸೂಲಾಗಿರುವ ಶುಲ್ಕಗಳ ಒಟ್ಟು ಮೊತ್ತವಾಗಿರುತ್ತದೆ.<br><br>2016–17ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಾಪ್ತಿಗೆ ಬರುವ ಅನುದಾನಿತ, ಅನುದಾನರಹಿತ, ಖಾಸಗಿ ಕಾಲೇಜುಗಳಲ್ಲಿ ವಿವಿಧ ಕೋರ್ಸ್‍ಗಳ ಮುಂದುವರಿಕೆ ಮತ್ತು ನವೀಕರಣಕ್ಕಾಗಿ ಸಂಯೋಜನಾ ಶುಲ್ಕ ವಸೂಲಾತಿಯ ಒಟ್ಟು ಮೊತ್ತ ರೂ.3,35,28,711/–ಗಳಾಗಿದ್ದು ಸದರಿ ಮೊತ್ತವನ್ನು ಜಿ.ಆರ್.ಎ ಖಾತೆಗೆ ಜಮೆ ಮಾಡಲಾಗಿದೆ. ಇದರಲ್ಲಿ ಯಾವುದೇ ವ್ಯತ್ಯಾಸಗಳು ಉಂಟಾಗುವುದಿಲ್ಲವಾಗಿ ನಿವೇದಿಸುತ್ತಾ ಕಂಡಿಕೆಯಲ್ಲಿನ ತಮ್ಮ ಸಲಹೆ ಮತ್ತು ಸೂಚನೆಯ ಮೇರೆಗೆ 2018–19ನೇ ಸಾಲಿನಿಂದ ಕಾಲೇಜು ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಬರುವ ಸರ್ಕಾರಿ, ಅನುದಾನಿತ, ಅನುದಾನರಹಿತ ಕಾಲೇಜುಗಳ ಕೋರ್ಸುಗಳ ಮುಂದುವರಿಕೆ/ನವೀಕರಣದ ಸಂಯೋಜನಾ ಶುಲ್ಕಗಳ ಡಿ.ಸಿ.ಬಿ ವಹಿಯನ್ನು ನಿರ್ವಹಿಸಿ ಎಲ್ಲಾ ಕಾಲೇಜು ಸಂಸ್ಥೆಗಳ ವಸೂಲಾತಿ ಮೊತ್ತ ಹಾಗೂ ಜಿ.ಆರ್.ಎ ಖಾತೆಗೆ ಜಮೆಯಾಗಿರುವ ಬಗ್ಗೆ ಲೆಕ್ಕ ಸಮನ್ವಯಗೊಳಿಸಿ ಲೆಕ್ಕ ಪರಿಶೋಧನೆಗೆ ಹಾಜರ್‍ಪಡಿಸಲಾಗುವುದು. |

| | | |
|---|---|---|
| **42** | **ಸಂಯೋಜನಾ/ ಮುಂದುವರಿಕೆ ಶುಲ್ಕಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಮೊತ್ತಕ್ಕಿಂತ ಕಡಿಮೆ ಮೊತ್ತ ಸ್ವೀಕೃತಿ ಆಗಿರುವುದು:– (ಕಾಲೇಜು ಅಭಿವೃದ್ಧಿ ಮಂಡಳಿ)**<br>2016–17ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಕೋರ್ಸ್ ಮತ್ತು ವಿಷಯಗಳ ಸಂಯೋಜನಾ/ಮುಂದುವರಿಕೆ ಇತರೆ ಶುಲ್ಕಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶುಲ್ಕಗಳಿಗಿಂತಲೂ (as per 2015-16 fee structure) ಕಡಿಮೆ ಶುಲ್ಕ ಸ್ವೀಕೃತಿಯಾಗಿರುವ ಕೆಲವು ಪ್ರಕರಣಗಳು ಲೆಕ್ಕಪರಿಶೋಧನೆ ವೇಳೆ ಕಂಡು ಬಂದಿದ್ದು, ಈ ಸಂಬಂಧ ವಿವರಣೆ ನೀಡುವಂತೆ ಹಲವು ಬಾರಿ ಮೌಖಿಕವಾಗಿ ಕೋರಲಾಗಿ ಸೂಕ್ತ ವಿವರಣೆ ನೀಡದಿರುವುದರಿಂದ ಸದರಿ ಕಡಿಮೆ ಸ್ವೀಕೃತಿ ಮೊತ್ತ **ರೂ.32,755/–ಗಳನ್ನು** ಸಂಬಂಧಪಟ್ಟ ವಿದ್ಯಾಸಂಸ್ಥೆ/ ಕಾಲೇಜುಗಳಿಂದ **ವಸೂಲಿ** ಮಾಡಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ–13** ರಲ್ಲಿ ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | 2016–17 ನೇ ಸಾಲಿನಲ್ಲಿ ವಿವಿಧ ಕೋರ್ಸ್ ಮತ್ತು ವಿಷಯಗಳ ಸಂಯೋಜನಾ/ಮುಂದುವರಿಕೆ ಇತರೆ ಶುಲ್ಕಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಮೊತ್ತಕ್ಕಿಂತ ಕಡಿಮೆ ಶುಲ್ಕ ವಸೂಲಾತಿಯಾಗಿರುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿದ್ದು ವಸೂಲಾತಿಯಾಗಬೇಕಾಗಿರುವ ಉಳಿಕೆ ಮೊತ್ತ ರೂ.32,755/–ಗಳ ಬಗ್ಗೆ **ಅನುಬಂಧ–13**ರಲ್ಲಿ ವಿವರಿಸಿರುತ್ತದೆ.<br><br>**ಅನುಬಂಧ–13ರಕ್ರಮಾಂಕ (1)ರಭಗವಾನ್ ಬುದ್ಧ ಕಾಲೇಜ್ ಆಫ್ ಎಜುಕೇಶನ್,** ಮಳವಳ್ಳಿ ರವರಿಂದ ಡಿ.ಡಿ.ನಂ:325505 ದಿನಾಂಕ:28.09.2016 ರೂ.9,855/–ಗಳನ್ನು ಚಲನ್ ನಂ:17547 ದಿನಾಂಕ:30.11.2016, **ಕ್ರಮಾಂಕ (2)**ರ **ಬಿ.ಜಿ.ಎಸ್ ದೈಹಿಕ ಶಿಕ್ಷಣ ಕಾಲೇಜು,** ಬಾಲಗಂಗಾಧರ ನಗರ ರವರಿಂದ ಡಿ.ಡಿ.ನಂ.416239 ದಿನಾಂಕ:28.09.2016ರೂ 4,050/–ಗಳನ್ನು ಚಲನ್ ನಂ:17546, ದಿನಾಂಕ:30.11.2016 ಮತ್ತು **ಕ್ರಮಾಂಕ (3)ರಎ.ಇ.ಟಿ ಕಾಲೇಜ್ ಆಫ್ ಎಜುಕೇಶನ್,** ಮಂಡ್ಯರವರಿಂದ ಡಿ.ಡಿ ನಂ:758376 ದಿನಾಂಕ:04.10.2016 ರೂ.18,850/–ಗಳನ್ನು ಚಲನ್ ನಂ:17549 ದಿನಾಂಕ:30.11.2016 ಒಟ್ಟು ಮೊತ್ತ ರೂ.32,755/–ಗಳನ್ನು ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಗೆ ದಿನಾಂಕ:30.11.2016 ಮತ್ತು 02.12.2016 ರಂದು ಜಮೆ ಮಾಡಲಾಗಿರುತ್ತದೆ. ಜಮೆ ಮಾಡಲಾಗಿರುವ ಚಲನ್ ಪ್ರತಿಗಳು, ಜಿ.ಆರ್.ಎ ಖಾತೆಯ ಬ್ಯಾಂಕ್ ಸ್ಟ್ರೋಲ್ ಹಾಗೂ ನಗದು ಪುಸ್ತಕದ ಜೆರಾಕ್ಸ್ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯಲ್ಲಿನ ವಸೂಲಾತಿ ಮೊತ್ತ ರೂ.32,755/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ. |

| | | |
|---|---|---|
| **43** | **ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ವಿನಾಯಿತಿಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾಗುವ ವಿದ್ಯಾರ್ಥಿವೇತನದೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸದಿರುವುದರ ಕುರಿತು :– (ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ)**<br><br>ಮೈಸೂರು ವಿಶ್ವವಿದ್ಯಾನಿಲಯದ ಡಾ॥ ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ 2016–17ನೇ ಸಾಲಿನಲ್ಲಿ ವಿವಿಧ ಕೋರ್ಸು ಮತ್ತು ಪ್ರವೇಶಾತಿ ವಿವರಗಳನ್ನು ಪರಿಶೀಲಿಸಿದಾಗ, P.G Diploma in Dr. B.R Ambedkar Studies ಕೋರ್ಸ್‌ಗೆ ಸಂಬಂಧಿಸಿದಂತೆ ಪ.ಜಾ/ಪ.ಪಂಗಡಕ್ಕೆ ಸೇರಿದ ಒಟ್ಟು ಹತ್ತು ವಿದ್ಯಾರ್ಥಿಗಳಿಗೆ ಹಾಗೂ ಸರ್ಟಿಫಿಕೆಟ್ ಕೋರ್ಸ್‌ಗೆ ಸಂಬಂಧಿಸಿದಂತೆ ಪ.ಜಾ/ಪ.ಪಂಗಡಕ್ಕೆ ಸೇರಿದ ಒಟ್ಟು ಹದಿನೇಳು ವಿದ್ಯಾರ್ಥಿಗಳಿಗೆ ಉಚಿತವಾಗಿ ಪ್ರವೇಶಾತಿ ನೀಡಿರುವುದು ಲೆಕ್ಕತನಿಖೆಯ ವೇಳೆ ಕಂಡುಬಂದಿದ್ದು, ಈ ಸಂಬಂಧ ಎರಡು ಕೋರ್ಸುಗಳಿಂದ ಬರಬೇಕಾದ ಪ್ರವೇಶಾತಿ ಶುಲ್ಕದ ಮೊತ್ತ ರೂ.1,94,850/–ಗಳಾಗಿದ್ದು, ಸದರಿ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆ SC/ST Cell ನಿಂದ ಭರಿಸಿ, ವಿದ್ಯಾರ್ಥಿವೇತನದ ರೂಪದಲ್ಲಿ ಪಡೆದು ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಬೇಕಿರುತ್ತದೆ. ಈ ಸಂಬಂಧದ ಹೊಂದಾಣಿಕೆ ಕಡತ/DCB ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:02/2018–19/10.09.2018ರಲ್ಲಿ ಕೋರಲಾಗಿತ್ತು. ಆದರೆ, ಇಲ್ಲಿಯವರೆಗೂ ಯಾವುದೇ ವಿವರಣೆ/ಮಾಹಿತಿ ಲಭ್ಯವಿಲ್ಲದ ಕಾರಣ, ಸದರಿ ಮೊತ್ತ **ರೂ.1,94,850/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರವನ್ನು **ಅನುಬಂಧ–14ರಲ್ಲಿ** ಒದಗಿಸಲಾಗಿದೆ. | ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ 2016–17ನೇ ಸಾಲನಲ್ಲಿ ಪಿ.ಜಿ. ಡಿಪ್ಲೋಮೊ ಮತ್ತು ಸರ್ಟಿಫಿಕೆಟ್ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಪ.ಜಾ/ಪ.ಪಂಗಡದ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು ಈ ಎರಡು ಕೋರ್ಸ್‌ಗಳಿಂದ ಬರಬೇಕಾದ ಪ್ರವೇಶಾತಿ ಶುಲ್ಕ ಒಟ್ಟು ಮೊತ್ತ **ರೂ.1,94,850/–ಗಳು** ಎಂಬುದಾಗಿ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.<br><br>ಮೈಸೂರು ವಿಶ್ವವಿದ್ಯಾನಿಲಯ 2016–17ನೇ ಸಾಲಿನಲ್ಲಿ ಸಾಮಾನ್ಯ ಡಿಪ್ಲೋಮೊ/ಪಿ.ಜಿ.ಡಿಪ್ಲೋಮೊ ಕೋರ್ಸ್‌ಗೆ ವಿವಿಧ ವಿಭಾಗಗಳಲ್ಲಿ ದಾಖಲಾಗಿ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆದ ಪ.ಜಾ/ಪ.ಪಂಗಡದ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಭಾಗಗಳ ಪ್ರವೇಶಾತಿ ಶುಲ್ಕ ಮತ್ತು ವಿದ್ಯಾರ್ಥಿನಿಲಯಗಳಿಗೆ ಸಂಬಂಧಿಸಿದ ಭೋಜನಾ ಶುಲ್ಕವನ್ನು ಮಂಜೂರು ಮಾಡಿಕೊಡುವಂತೆ ಸಮಾಜ ಕಲ್ಯಾಣ ಇಲಾಖೆಗೆ ಅನೇಕ ಬಾರಿ ಪತ್ರ ವ್ಯವಹಾರ ಮಾಡಲಾಗಿದ್ದರೂ ಸಹ ಯಾವುದೇ ಶುಲ್ಕವನ್ನು (ವಿದ್ಯಾರ್ಥಿ ವೇತನ) ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲವಾಗಿ ತಿಳಿಸಿರುತ್ತಾರೆ. ಆದಕಾರಣ ಸದರಿ ವಿಷಯವನ್ನು ದಿನಾಂಕ:04.08.2017, 02.12.2018 ಹಾಗೂ ದಿನಾಂಕ:01.07.2019 ರಂದು ನಡೆದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಶಿಫಾರಸ್ಸು, ಮತ್ತು ದಿನಾಂಕ:28.12.2018 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿ.ಕ್ಷೇ.ಪಾ1/1(ಬಿ)/610/2017–18 ದಿನಾಂಕ:05.08.2019 ರಂದು 2016–17ನೇ ಸಾಲಿನಲ್ಲಿ ಸ್ನಾತಕ/ಸ್ನಾತಕೋತ್ತರ ಡಿಪ್ಲೋಮೊಗಳಿಗೆ ವಿವಿಧ ವಿಭಾಗಗಳಲ್ಲಿ ದಾಖಲಾಗಿ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆದು ವಿದ್ಯಾರ್ಥಿ ವೇತನಕ್ಕೆ ಅರ್ಹರಾದ ಪ.ಜಾ/ಪ.ಪಂಗಡ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಪ್ರವೇಶಾತಿ ಶುಲ್ಕ ರೂ.14,07,795/–ಗಳು (ಇದರಲ್ಲಿ **ಕಂಡಿಕೆಯ ಆಕ್ಷೇಪಣೆ ಮೊತ್ತ** |

| | | |
|---|---|---|
| | | **ರೂ.1,94,850/–ಗಳು ಸೇರಿರುತ್ತದೆ.**) ಹಾಗೂ ಭೋಜನಾ ಶುಲ್ಕ **ರೂ.17,26,951/**–ಗಳು ಸೇರಿದಂತೆ ಒಟ್ಟು ಮೊತ್ತ **ರೂ.31,34,746/–ಗಳನ್ನು** ವಿಶ್ವವಿದ್ಯಾನಿಲಯದಿಂದಲೇ ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿಯನ್ನು ನೀಡಲಾಗಿದೆ ಹಾಗೂ ಸದರಿ ವಿದ್ಯಾರ್ಥಿಗಳಿಗೆ ಬೇಬಾಕಿ ಪತ್ರವನ್ನು ನೀಡುವುದರೊಂದಿಗೆ ಅಂಕಪಟ್ಟಿಯನ್ನು ವಿತರಿಸಲು ಸಹ ಆದೇಶಿಸಿಲಾಗಿದೆ. ಅದರಂತೆ ಈ ವಿಭಾಗದ ಪಿ.ಜಿ. ಡಿಪ್ಲೋಮೊ ಮತ್ತು ಸರ್ಟಿಫಿಕೆಟ್ ಕೋರ್ಸ್‌ಗಳಲ್ಲಿ ಪ್ರವೇಶಾತಿ ಪಡೆದು ವಿದ್ಯಾರ್ಥಿ ವೇತನಕ್ಕೆ ಅರ್ಹರಿರುವ ಪ.ಜಾ/ಪ.ಪಂಗಡದ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಿರುವುದರಿಂದ ಪ್ರವೇಶ ಶುಲ್ಕ ಪಾವತಿಯಾಗಿರುವುದಿಲ್ಲ ಎಂದು ನಿವೇದಿಸಿದೆ.<br><br>ದಿನಾಂಕ:22.12.2018 ಮತ್ತು ದಿನಾಂಕ:01.07.2019ರ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ನಡಾವಳಿ, ದಿನಾಂಕ:28.12.2018 ಸಿಂಡಿಕೇಟ್ ಸಭೆಯ ತೀರ್ಮಾನ ಮತ್ತು ದಿನಾಂಕ:05.08.2019ರ ವಿಶ್ವವಿದ್ಯಾನಿಲಯದ ಆದೇಶದ ಪ್ರತಿ ಹಾಗೂ ದಿನಾಂಕ:06.08.2019ರ ಆಡಳಿತಾಧಿಕಾರಿಗಳ ಪತ್ರದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ ರೂ.1,94,850/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ. |

| | | |
|---|---|---|
| 44 | **<u>2016–17 ನೇ ಸಾಲಿನಲ್ಲಿ ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಗೆ ಮಂಜೂರಾದ ಹುದ್ದೆಗಳು, ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ತಾತ್ಕಾಲಿಕ ಹುದ್ದೆಗಳ ವಿವರಗಳು:– (ಮಾನಸ ಗಂಗೋತ್ರಿ ಶಿಕ್ಷಣ ಸಂಸ್ಥೆ)</u>**<br>ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, 2016–17ನೇ ಸಾಲಿಗೆ ಮಾನಸಗಂಗೋತ್ರಿ ಶಿಕ್ಷಣಸಂಸ್ಥೆಗೆ ಮಂಜೂರಾದ ಹುದ್ದೆಗಳು, ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ತಾತ್ಕಾಲಿಕ ಹುದ್ದೆಗಳ ವಿವರಗಳು ಕೆಳಕಂಡಂತಿದೆ. | ಕಂಡಿಕೆ 44 ರಲ್ಲಿ ಪ್ರಸ್ತಾಪಿಸಿರುವ ಶಿಕ್ಷಣ ಸಂಸ್ಥೆಗೆ ಮಂಜೂರಾದ ಹುದ್ದೆಗಳು ಹಾಗೂ ತಾತ್ಕಾಲಿಕ ಹುದ್ದೆಗಳ ವಿವರಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಕ್ರಮ ವಹಿಸಲಾಗಿದೆ ಸಂಬಂಧ ಪಟ್ಟ ದಾಖಲಾತಿಗಳನ್ನು ಮುಂದಿನ ಲೆಕ್ಕ ತಪಾಸಣೆ ಸಮಯದಲ್ಲಿ ಹಾಜರು ಪಡಿಸಲಾಗುವುದು. |

| ಕ್ರ.ಸಂ | ವಿವರಗಳು | ಬೋಧಕವರ್ಗದವರು | ಬೋಧಕೇತರ ವರ್ಗದವರು |
|---|---|---|---|
| 1 | ಖಾಯಂ ಹುದ್ದೆಗಳ ವಿವರ: ಮಂಜೂರಾದ ಹುದ್ದೆ | 14 | 04 |
| 2 | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | 13 | 04 |
| 3 | ತಾತ್ಕಲಿಕ ಹುದ್ದೆಗಳು: ತಾತ್ಕಲಿಕವಾಗಿ ಕರ್ತವ್ಯನಿರ್ವಹಿಸುತ್ತಿರುವ ಹುದ್ದೆಗಳ ವಿವರಗಳು | 08 | 03 |

| | | |
|---|---|---|
| 45 | **<u>ಶ್ರೀಮತಿ ಕುಮಾರಿ ಎಸ್. ಸಹಶಿಕ್ಷಕಿ ಶಿಶುವಿಹಾರ ವಿಭಾಗ ಇವರನ್ನು ಖಾಯಂಗೊಳಿಸಿರುವ ಬಗ್ಗೆ:–(ಮಾನಸ ಗಂಗೋತ್ರಿ ಶಿಕ್ಷಣ ಸಂಸ್ಥೆ)</u>**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿದ ಶ್ರೀಮತಿ ಕುಮಾರಿ.ಎಸ್ ಸಹಶಿಕ್ಷಕಿ ಶಿಶುವಿಹಾರ ವಿಭಾಗ ರವರ ಸೇವಾ ಪುಸ್ತಕವನ್ನು ಪರಿಶೀಲಿಸಿದಾಗ ಇವರು 14 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಖಾಯಂಗೊಳಿಸಲಾಗಿದೆ. ಆದರೆ ವಿಶ್ವವಿದ್ಯಾನಿಲಯದ ನಿಯಮ 57 ರಲ್ಲಿ ತಾತ್ಕಾಲಿಕ ನೌಕರರನ್ನು ಒಂದು ವರ್ಷದ ಅವಧಿಗೆ ಮಾತ್ರ ನೇಮಕ ಮಾಡಿಕೊಳ್ಳಬಹುದು. ಆದರೆ ಇವರನ್ನು 14 ವರ್ಷಗಳ ನಿರಂತರ ಸೇವೆಯನ್ನು ಹೇಗೆ ಪರಿಗಣಿಸಲಾಗಿದೆ ಇದಕ್ಕೆ ಸ್ಪಷ್ಟೀಕರಣ ನೀಡಬೇಕೆಂದು ವಿಚಾರಣೆ ಪತ್ರ ಸಂಖ್ಯೆ:04/08.12.18 ನೀಡಲಾಗಿತ್ತು. ಆದರೆ ಉತ್ತರ ಸಲ್ಲಿಸಿರುವುದಿಲ್ಲ.<br><br>ಸಹಶಿಕ್ಷಕಿಯ ಹುದ್ದೆಯ ನೇಮಕವನ್ನು ಮಾಡಿಕೊಳ್ಳುವಾಗ ದಿನಪತ್ರಿಕೆಯಲ್ಲಿ ಪ್ರಕಟಣೆಗೊಂಡಿರುವ ಪ್ರತಿ ಅರ್ಜಿ ಸಲ್ಲಿಸಿರುವ ವಿವರ ಅರ್ಹತೆ ವಿವರ ಅನುಚ್ಛೇದ 16(4) ರಂತೆ ರೋಸ್ಟರ್ ನಿಯಮ ಪಾಲಿಸಿರುವ ಬಗ್ಗೆ ಮಾಹಿತಿಯನ್ನು ಒದಗಿಸಿರುವುದಿಲ್ಲ.<br><br>ಅದರಂತೆ ಸದರಿ ವಿಷಯಕ್ಕೆ ಸಂಬಂಧಿಸಿರುವ ವಿವರಣೆಯನ್ನು ಅನುಪಾಲನೆ ವರದಿಯಲ್ಲಿ ನೀಡುವಂತೆ ತಿಳಿಸಿದೆ. | ಮಾನಸಗೊಂಗೋತ್ರಿಯ ಶಿಕ್ಷಣ ಸಂಸ್ಥೆಯಲ್ಲಿ ಶ್ರೀಮತಿ ಎಸ್.ಕುಮಾರಿ ಸಹ ಶಿಕ್ಷಕಿ ಶಿಶು ವಿಹಾರ ಹಿರಿಯ ಪ್ರಾಥಮಿಕ ಶಾಲೆ ಇವರು ಹದಿನಾಲ್ಕು ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದು; ಇವರನ್ನು ಖಾಯಂಗೊಳಿಸುವ ಬಗ್ಗೆ ದಿನಾಂಕ:23.05.2016 ರಂದು ಮಾನ್ಯ ಕುಲಪತಿಗಳ ಕೊಠಡಿಯಲ್ಲಿ ನಡೆದ, ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸಭಾ ನಡಾವಳಿಯ ಕ್ರಮ ಸಂಖ್ಯೆ–4ರಲ್ಲಿ ತಗೆದುಕೊಂಡ ನಿರ್ಣಯವನ್ನು ದಿನಾಂಕ;07.07.2016 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ ಸಭೆಯು ಇದನ್ನು ಅನುಸಮರ್ಥಿಸಿರುತ್ತದೆ.<br><br>ಇದಕ್ಕನುಸಾರವಾಗಿ ಗೌರವ ಕಾರ್ಯದರ್ಶಿಗಳು ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆರವರ ಆದೇಶ ಸಂಖ್ಯೆ:ಮ.ಶಿ.ಸಂ/28ಎ/2016–17 ದಿನಾಂಕ:07.07.2016 ರಂತೆ ಶ್ರೀಮತಿ.ಕುಮಾರಿ ಎಸ್. ಸಹ ಶಿಕ್ಷಕಿ ಇವರನ್ನು ದಿನಾಂಕ:07.07.2016 ರಿಂದ ಜಾರಿಗೆ ಬಂದಂತೆ ಖಾಯೊಗೊಳಿಸಿ ವೇತನ ಶ್ರೇಣಿ 1250–250–13000–300–14200–350–15600–400–17200–450–19000–500–2100–600–24000 ರಲ್ಲಿ ಇವರ ವೇತನವನ್ನು ನಿಗಧಿಗೊಳಿಸಲಾಗಿದೆ.<br><br>ದಿನಾಂಕ:23.05.2016ರ ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸಭಾ ನಡಾವಳಿ ಮತ್ತು ದಿನಾಂಕ:07.07.2016 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ ಹಾಗೂ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಗೌರವ ಕಾರ್ಯದರ್ಶಿಗಳ ಆದೇಶದ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಿದೆ. |

**46** <u>ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪ್ರವೇಶ ಶುಲ್ಕದ ವಸೂಲಾತಿ ವಿವರಗಳ ಪರಿಶೀಲನೆ:–</u>

**(ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್)**

2016–17ನೇ ಸಾಲಿನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (BIMS) ಮಾನಸ ಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ವ್ಯವಹಾರ ಅಧ್ಯಯನ ವಿಭಾಗದಲ್ಲಿ ಸ್ನಾತಕೋತ್ತರ ನಿರ್ವಹಣೆ (ಎಂ.ಬಿ.ಎ) ಹಾಗೂ ಸ್ನಾತಕೋತ್ತರ ಡಿಪ್ಲೋಮಾ (Post graduation in human resource management) ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಬೋಧನಾ ಶುಲ್ಕದ ಜೊತೆ ಇನ್ನಿತರೆ ಶುಲ್ಕಗಳ ವಿವರಗಳನ್ನು ಮೂಲ ಚಲನ್‌ಗಳು ಹಾಗೂ ಪ್ರವೇಶಾತಿ ವಹಿಯೊಂದಿಗೆ ಪರಿಶೀಲಿಸಲಾಗಿದ್ದು, ಎರಡೂ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

## I. ಸ್ನಾತಕೋತ್ತರ ವ್ಯವಹಾರ ಅಧ್ಯಯನ (MBA)

### ಎಂ.ಬಿ.ಎ (MBA)

| Sl.No | Category | I$^{st}$ Year | | I$^{nd}$ Year | | Total No of Students Admission |
|---|---|---|---|---|---|---|
| | | Scheme 'A' | Scheme 'B' | Scheme 'A' | Scheme 'B' | |
| 1 | SC | 19 | - | 16 | - | 35 |
| 2 | ST | 02 | - | 03 | - | 05 |
| 3 | Cat-I | 04 | - | 05 | - | 09 |
| 4 | II A | 18 | - | 15 | - | 33 |
| 5 | II B | 06 | - | 04 | - | 10 |
| 6 | III A | 05 | - | 04 | - | 09 |
| 7 | III B | 06 | - | 07 | - | 13 |
| 8 | GM | 57 | - | 71 | - | 128 |
| 9 | Hyderabad Karnataka (HK) | 02 | - | 01 | - | 03 |
| 10 | Sports | 01 | - | 01 | - | 02 |

2016–17ನೇ ಸಾಲಿನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (BIMS) ಅಧ್ಯಯನ ವಿಭಾಗದಲ್ಲಿ 2016–17ನೇ ಸಾಲಿನಲ್ಲಿ ಪ್ರಥಮ ವರ್ಷದ ಎಂ.ಬಿ.ಎ ಮತ್ತು ದ್ವಿತೀಯ ವರ್ಷದ ಎಂ.ಬಿ.ಎ ಹಾಗೂ ಸ್ನಾತಕೋತ್ತರ ದಿಪ್ಲೋಮೊ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ರೂ.18,93,000/–ಗಳು ಬಾಕಿ ಉಳಿದಿರುವುದಾಗಿ ಕಂಡಿಕೆಯಲ್ಲಿ (ಅನುಬಂಧ–15) ಪ್ರಸ್ತಾಪಿಸಲಾಗಿರುತ್ತದೆ.

ಕಂಡಿಕೆಯ ಅನುಬಂಧದಲ್ಲಿ ಪ್ರಸ್ತಾಪಿಸಿರುವಂತೆ ಪ್ರಥಮ ವರ್ಷದ ಎಂ.ಬಿ.ಎ ಮತ್ತು ದ್ವಿತೀಯ ವರ್ಷದ ಎಂ.ಬಿ.ಎ ಹಾಗೂ ಸ್ನಾತಕೋತ್ತರ ದಿಪ್ಲೋಮೊ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಂದ ಬಾಕಿ ಉಳಿದಿರುವ ಪ್ರವೇಶಾತಿ ಶುಲ್ಕ ರೂ.18,93,000/–ಗಳಿಗೆ ಪ್ರತಿಯಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಬರಬೇಕಾಗಿದ್ದ ಉಳಿಕೆ ಮೊತ್ತ ರೂ.19,37,270/–ಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆ ಸಂಖ್ಯೆ:54007591471 ಕ್ಕೆ ದಿನಾಂಕ:05.01.2017 ರಂದು ರೂ.15,50,000/–ಗಳು ಮತ್ತು ದಿನಾಂಕ:17.06.2017 ರಂದು ರೂ.3,87,270/–ಗಳು ಸೇರಿದಂತೆ ಒಟ್ಟು ಮೊತ್ತ ರೂ.19,37,270/–ಗಳನ್ನು ವರ್ಗಾವಣೆ ಮೂಲಕ ಪಾವತಿಸಲಾಗಿದ್ದು; ಸದರಿ ಮೊತ್ತಗಳು ಜಿ.ಆರ್.ಎ ಖಾತೆಗೆ ದಿನಾಂಕ:05.01.2017 ಮತ್ತು 17.06.2017 ರಂದು ಜಮೆ ಆಗಿರುತ್ತದೆ. ಈ ಮೊತ್ತಗಳನ್ನು ದಿನಾಂಕ:05.01.2017 ರಂದು ಮತ್ತು ದಿನಾಂಕ:17.06.2017 ರಂದು ನಗದು ಪುಸ್ತಕದ ಸ್ವೀಕೃತಿ ಕಲಂನಲ್ಲಿ ಜಮೆ ತೆಗೆದುಕೊಳ್ಳಲಾಗಿದೆ.

ಜಿ.ಆರ್.ಎ ಖಾತೆಯ ಬ್ಯಾಂಕ್ ಸ್ಟ್ರೋಲ್ ಪ್ರತಿ ಹಾಗೂ ನಗದು ಪುಸ್ತಕದ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯ ಆಕ್ಷೇಪಣೆಯ ಮೊತ್ತ ರೂ.18,93,000/–ಗಳನ್ನು ಆಕ್ಷೇಪಣೆಯನ್ನು ತೀರುವಳಿಗೊಳಿಸುವಂತೆ ಕೋರಿದೆ.

| | | | | | | |
|---|---|---|---|---|---|---|
| 11 | Donors | 09 | - | 09 | - | 18 |
| 12 | NSS | 01 | - | - | - | 01 |
| 13 | NCC | 01 | - | 01 | - | 01 |
| 14 | PH | 02 | - | 01 | - | 03 |
| 15 | Non Teaching | 02 | - | 02 | - | 04 |
| 16 | Foriegn | - | 34 | - | 34 | 68 |
| **MIÄÖ** | | **135** | **34** | **140** | **34** | **343** |

## II. ಸ್ನಾತಕೋತ್ತರ ಡಿಪ್ಲೋಮಾ (PG Diploma in HRM)

| Sl.No | Category | Scheme 'A' | Scheme 'B' | Number of Students |
|---|---|---|---|---|
| 1 | SC | 03 | - | 03 |
| 2 | ST | 01 | - | 01 |
| 3 | II A | 04 | - | 04 |
| 4 | III B | 01 | - | 01 |
| 5 | GM | 21 | - | 21 |
| 6 | Foriegn | – | 01 | 01 |
| **TOTAL** | | **30** | **01** | **31** |

*** MBA Admission table ಕೆಳಗಡೆ ಈ ಮುಂದೆ ನಮೂದಿಸಿರುವ ವಿವರ**

**ವಿವರಣೆ:** ಎಂ.ಬಿ.ಎ ವಿದ್ಯಾರ್ಥಿಗಳ ಪ್ರವೇಶಾತಿಯ ಒಟ್ಟು ಸಂಖ್ಯೆಯು 2016ನೇ ಸಾಲಿನಲ್ಲಿ (ಜುಲೈ/ಆಗಸ್ಟ್–2016) ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದಿರುವ ಹಾಗೂ 2015–16ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿದ್ದು, 2016ನೇ ಸಾಲಿನಲ್ಲಿ (ಜುಲೈ/ಆಗಸ್ಟ್–2016) ದ್ವಿತೀಯ ವರ್ಷಕ್ಕೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಒಳಗೊಂಡಿರುತ್ತದೆ. (169+174 = 343)

ಮುಂದುವರೆದಂತೆ, ಮೇಲ್ಕಂಡ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ನಿಗಧಿಪಡಿಸಿರುವ ಪ್ರವೇಶ ಶುಲ್ಕ ಹಾಗೂ ಇನ್ನಿತರೆ ಶುಲ್ಕಗಳ ರೂಪದಲ್ಲಿ ವಸೂಲಾತಿ ಮಾಡಿರುವ ಹಾಗೂ ಬಾಕಿ ಉಳಿದಿರುವ ಪ್ರವೇಶಾತಿ ಶುಲ್ಕದ ವಿವರ ಈ ಕೆಳಕಂಡಂತಿವೆ.

| ಕ್ರ. ಸಂ | ಕೋರ್ಸ್ ಹಾಗೂ ವರ್ಷ | ಬೇಡಿಕೆ (1) | ವಸೂಲಾತಿ (2) | ಬಾಕಿ (3) |
|---|---|---|---|---|
| 1 | ಎಂ.ಬಿ.ಎ ಪ್ರಥಮ ವರ್ಷ | 1,06,53,065 | 94,90,265 | 11,62,800 |
| 2 | ಎಂ.ಬಿ.ಎ ದ್ವಿತೀಯ ವರ್ಷ | 67,75,175 | 62,75,175 | 5,00,000 |
| 3 | ಸ್ನಾತಕೋತ್ತರ ಡಿಪ್ಲೋಮಾ | 5,04,915 | 2,74,715 | 2,30,200 |
| | **ಒಟ್ಟು** | **1,79,33,155** | **1,60,40,155** | **18,93,000** |

ಸ್ನಾತಕೋತ್ತರ ವ್ಯವಹಾರ ನಿರ್ವಹಣೆ ಅಧ್ಯಯನ (ಎಂ.ಬಿ.ಎ) ಹಾಗೂ ಸ್ನಾತಕೋತ್ತರ ಡಿಪ್ಲೋಮಾ (PG Diploma in HRM) ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಿರುವ ಶುಲ್ಕಕ್ಕೆ ಸಂಬಂಧಿಸಿದಂತೆ ನಿರ್ವಹಿಸಬೇಕಾಗಿರುವ ಪ್ರವೇಶ ಶುಲ್ಕ ವಹಿ (ಡಿ.ಸಿ.ಬಿ) ಯನ್ನು ಪರಿಶೋಧನೆಗೆ ಹಾಜರುಪಡಿಸುವಂತೆ, ವಿಚಾರಣಾ ಪತ್ರಸಂಖ್ಯೆ:04/2018–19 ದಿನಾಂಕ:11.10.2018 ರಂದು ಕೋರಲಾಗಿತ್ತು, ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಹಾಜರುಪಡಿಸಿರುವ ಲೆಕ್ಕಪತ್ರ ದಾಖಲೆ/ವಹಿಗಳ ಆಧಾರದ ಮೇಲೆ 2016–17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳಿಂದ ವಸೂಲಾತಿಯಾಗಿರುವ ಪ್ರವೇಶ ಶುಲ್ಕದ ಬೇಡಿಕೆ– ವಸೂಲಾತಿ–ಬಾಕಿ (ಡಿ.ಸಿ.ಬಿ) ವಿವರದ ತಃಖ್ತೆಯನ್ನು ತಯಾರಿಸಲಾಗಿದ್ದು, ಪ್ರವೇಶ ಶುಲ್ಕದ ಬೇಡಿಕೆ ಮೊತ್ತ ರೂ. 1,79,33,155/– ವಸೂಲಾತಿ ಮೊತ್ತ ರೂ.1,60,40,155/– ಹಾಗೂ ಬಾಕಿ ಮೊತ್ತ **ರೂ.18,93,000**/–ಗಳಾಗಿವೆ. ಬಾಕಿ ಉಳಿದಿರುವ ಪ್ರವೇಶ ಶುಲ್ಕದ ಮೊತ್ತಕ್ಕೆ ಸಂಬಂಧಪಟ್ಟಂತೆ ಸಮಾಜಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ರವರಿಂದ ಬಾಕಿ ಉಳಿದಿರುವ ಶುಲ್ಕಗಳನ್ನು ಮರುಭರಿಕೆ ಮಾಡಿಕೊಂಡು ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸುವವರೆಗೂ ಸದರಿ ಬಾಕಿ ಮೊತ್ತ **ರೂ.18,93,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು **ಅನುಬಂಧ–15** ರಲ್ಲಿ ಒದಗಿಸಲಾಗಿದೆ.

| | | |
|---|---|---|
| 47 | **ಬಾಕಿ ಉಳಿದಿರುವ ಪರೀಕ್ಷಾ/ ಮರುಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಕುರಿತು:- (ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್)**<br>2016-17ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ವ್ಯವಹಾರ ನಿರ್ವಹಣೆ (ಎಂ.ಬಿ.ಎ) ಹಾಗೂ ಸ್ನಾತಕೋತ್ತರ ಡಿಪ್ಲೋಮಾ (PG Diploma in HRM) ಪರೀಕ್ಷೆಗೆ ಹಾಜರಾಗಿರುವ ವಿದ್ಯಾರ್ಥಿಗಳಿಂದ ವಸೂಲಾದ ಪರೀಕ್ಷಾ/ ಮರುಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದಂತೆ, ನಿರ್ವಹಿಸುವ ಬೇಡಿಕೆ-ವಸೂಲಾತಿ-ಬಾಕಿ (ಡಿ.ಸಿ.ಬಿ) ವಹಿ ಹಾಗೂ ವಿವರಣಾ ಪಟ್ಟಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರದ ಸಂಖ್ಯೆ:07/2018-19 ದಿ:12.10.2018 ರಲ್ಲಿ ಕೋರಲಾಗಿತ್ತು. ಆದರೆ, ಯಾವುದೇ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸಿದಿರುವ ಕಾರಣ, ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಆನ್‌ಲೈನ್ ಪರೀಕ್ಷಾ ಶುಲ್ಕ ಪಾವತಿಯ ಚಲನ್ ದಾಖಲೆಗಳನ್ವಯ ಡಿ.ಸಿ.ಬಿ ತಃಖ್ತೆಯನ್ನು ತಯಾರಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ. | ಬಾಕಿ ಉಳಿದಿರುವ ಪರೀಕ್ಷಾ ಮರು ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದ ಲೆಕ್ಕ ಪತ್ರ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲವೆಂದು ಆಕ್ಷೇಪಿಸಿ ವರದಿಯ ಕಂಡಿಕೆ 47 ರಲ್ಲಿ ಆಕ್ಷೇಪಿಸಲಾಗಿದ್ದು ಈ ಬಗ್ಗೆ ಕ್ರಮವಹಿಸಲಾಗಿದ್ದು ಪೂರ್ಣ ಮಾಹಿತಿಯನ್ನು ಮುಂದಿನ ಲೆಕ್ಕ ತನಿಖಾ ಸಮಯಕ್ಕೆ ಹಾಜರು ಪಡಿಸಲಾಗುವುದೆಂದು ನಿವೇದಿಸಲಾಗಿದೆ. |

| ಕ್ರ.ಸಂ | ಕೋರ್ಸ್ | ಬೇಡಿಕೆ (ಡಿ) (ರೂ) | ವಸೂಲಾತಿ (ಸಿ) (ರೂ.) | ಬಾಕಿ (ಬಿ) (ರೂ.) |
|---|---|---|---|---|
| 1 | ಎಂ.ಬಿ.ಎ | 12,09,440 | 6,99,035 | 5,10,405 |
| 2 | PGD in HRM | 66,350 | 59,010 | 7,340 |
| **ಒಟ್ಟು ಮೊತ್ತ (ರೂ.)** | | **12,75,790** | **7,58,045** | **5,17,745** |

ಮೇಲೆ ವಿವರಿಸಿರುವಂತೆ, ಬಾಕಿ ಉಳಿದಿರುವ ಪರೀಕ್ಷಾ/ಮರುಪರೀಕ್ಷಾ ಶುಲ್ಕಕ್ಕೆ ಸಂಬಂಧಪಟ್ಟಂತೆ, ಸಮಾಜ ಕಲ್ಯಾಣ ಇಲಾಖೆಯವರಿಂದ ಶಿಷ್ಯವೇತನ (scholarship) ರೂಪದಲ್ಲಿ ಬಾಕಿ ಉಳಿದಿರುವ ಶುಲ್ಕವನ್ನು ಮರುಭರಿಕೆ ಮಾಡಿಕೊಂಡು ವಿಶ್ವವಿದ್ಯಾನಿಲಯದ ಸಂಬಂಧಿಸಿದ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸುವವರೆಗೂ ಸದರಿ ಮೊತ್ತ **ರೂ.5,17,745/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರವನ್ನು ಅನುಬಂಧ-16 ರಲ್ಲಿ ಒದಗಿಸಲಾಗಿದೆ.

| | | |
|---|---|---|
| **48** | **ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿನ ವಾಣಿಜ್ಯ ಸಂಕೀರ್ಣಗಳು, ಎಸ್.ಟಿ.ಡಿ ಬೂತ್‌ಗಳು ಮತ್ತು ಕ್ಯಾಂಟೀನ್‌ಗಳಿಂದ ಬಾಕಿಯಿರುವ ಶುಲ್ಕ ವಸೂಲಾತಿ ಬಗ್ಗೆ:- (ಇಂಜಿನಿಯರಿಂಗ್)**<br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ವಾಣಿಜ್ಯ ಸಂಕೀರ್ಣ ಮಳಿಗೆಗಳು, ಎಸ್.ಟಿ.ಡಿ ಬೂತ್‌ಗಳು ಮತ್ತು ಕ್ಯಾಂಟೀನ್‌ಗಳ ಬಾಡಿಗೆಗೆ ಸಂಬಂಧಿಸಿದಂತೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ತಃಖ್ತೆ (ಡಿ.ಸಿ.ಬಿ)ಯನ್ನು ಪರಿಶೀಲಿಸಲಾಗಿ 27 ವಾಣಿಜ್ಯ ಮಳಿಗೆಗಳು, 08 ಎಸ್.ಟಿ.ಡಿ ಬೂತ್‌ಗಳು ಹಾಗೂ 03 ಕ್ಯಾಂಟೀನ್‌ಗಳು ಇದ್ದು ಏಪ್ರಿಲ್-2016 ಮತ್ತು ಜುಲೈ-2016 ರಲ್ಲಿ ಭಾಗಶಃ ವಾಣಿಜ್ಯ ಮಳಿಗೆಗಳನ್ನು ಬಾಡಿಗೆದಾರರಿಂದ ತೆರವುಗೊಳಿಸಲಾಗಿದೆ. ಉಳಿದ ವಾಣಿಜ್ಯ ಮಳಿಗೆಗಳು ಎಸ್.ಟಿ.ಡಿ ಬೂತ್‌ಗಳು ಹಾಗೂ ಕ್ಯಾಂಟೀನ್‌ಗಳಿಂದ ಹಾಗೂ ತೆರವುಗೊಂಡಿರುವ ಮಳಿಗೆಗಳಿಂದ ದಿನಾಂಕ:31.03.2017 ರ ಅಂತ್ಯಕ್ಕೆ ವಸೂಲಿಯಾಗಬೇಕಾಗಿರುವ ಬಾಡಿಗೆ ಶುಲ್ಕಕ್ಕೆ ಸಂಬಂಧಿಸಿದಂತೆ ಡಿ.ಸಿ.ಬಿ ವಹಿಯನ್ನು ಪರಿಶೀಲಿಸಲಾಗಿ ಒಟ್ಟು ರೂ.4,15,649/-ಗಳು ಬಾಕಿ ಇರುವುದು ಕಂಡು ಬಂದಿರುತ್ತದೆ.<br>ಬಾಕಿ ಇರುವ ಶುಲ್ಕವು ವಸೂಲಿಯಾಗಿದೆಯೇ ಅಥವಾ ಆಗಿಲ್ಲವೇ? ವಸೂಲಿ ಆಗಿಲ್ಲವೆಂದರೆ ವಸೂಲಾತಿ ಮಾಡುವುದಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಣೆ ನೀಡಬೇಕೆಂದು ವಿಚಾರಣಾ ಪತ್ರ ಸಂಖ್ಯೆ:27/26.09.2018 ರಲ್ಲಿ ಕೋರಲಾಗಿ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಆದಕಾರಣ ಬಾಕಿ ಇರುವ ರೂ.**4,15,649**/- ಬಾಡಿಗೆ ಶುಲ್ಕವನ್ನು ಸಂಬಂಧಪಟ್ಟ ಬಾಡಿಗೆದಾರರಿಂದ **ವಸೂಲಿಸಿ** (ವಿ.ವಿ ಖಾತೆಗೆ) ಜಮೆ ಮಾಡಲು ಸೂಚಿಸಿದೆ.<br>ಬಾಕಿ ಇರುವ ಶುಲ್ಕದ ವಿವರವನ್ನು ಅನುಬಂಧ-17ರಲ್ಲಿ ನೀಡಲಾಗಿದೆ. | 2016-17 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಕಂಡಿಕೆ ಸಂಖ್ಯೆ 48ರಲ್ಲಿ ರೂ.4,15,649/-ಗಳನ್ನು ವಸೂಲಾತಿಗೆ ಸೂಚಿಸಲಾಗಿದ್ದು ಈ ಮೊತ್ತದಲ್ಲಿ ಅಂದರೆ ರೂ.4,15,649/-ಗಳಲ್ಲಿ ಪ್ರಸ್ತುತ ರೂ.10,80,003/-ಗಳನ್ನು 2017-18 ನೇ ಸಾಲಿನಲ್ಲಿ ಸದರಿ ಮೊತ್ತವನ್ನು ವಸೂಲಿಸಿದ್ದು ಜಿ.ಆರ್.ಎ ಖಾತೆಗೆ ಜಮೆ ಮಾಡಲಾಗಿದೆ (ವಿವರದ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ) ಹಾಗೂ ರೂ.13,000/- ರೂ7,986/- ಮತ್ತು ರೂ.1600/- ಒಟ್ಟು ರೂ 22,586/-ಗಳನ್ನು 2018-19 ನೇ ಸಾಲಿನಲ್ಲಿ ವಸೂಲಿಸಲಾಗಿದೆ ಅಂದರೆ ರೂ.1,08,003+22,586=1,30,589 ಗಳನ್ನು ವಸೂಲಿಸಿ ಸಂಬಂಧಪಟ್ಟ ಖಾತೆಗೆ ಜಮೆ ಮಾಡಲಾಗಿದೆ ಉಳಿಕೆ ಮೊತ್ತ ರೂ.2,85,060/-ಗಳ ಬಗ್ಗೆ ಮುಂದಿನ ಆದೇಶ ಕೋರಿ ಮಾನ್ಯ ಕುಲಸಚಿವರಿಗೆ ಪತ್ರ ಸಂ: ಯು,ಇ,ಡಿ,ಎಸಿ3/409/2019-20 ದಿನಾಂಕ:29.06.2019 ರಂದು ಪತ್ರ ಬರೆಯಲಾಗಿದೆ<br>ಹಾಗೂ ಪ್ರಸ್ತುತ ಕಟಾಯಿಸಿರುವ ಮೊತ್ತದ (ಪಟ್ಟಿ) ವಿವರಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆಯೆಂದು ಪ್ರಸ್ತಾಪಿಸಿ ರೂ.1,30,589/-ಗಳಿಗೆ ತೀರುವಳಿ ನೀಡುವಂತೆ ನಿವೇದಿಸಲಾಗಿದೆ. |

**49**

**<u>ಸ್ನಾತಕೋತ್ತರ ಕೇಂದ್ರಗಳ ಆಡಳಿತ ಚಟುವಟಿಕೆಗಳು, ಅವುಗಳ ಕಾರ್ಯನಿರ್ವಹಣೆ ಮತ್ತು ವೆಚ್ಚಗಳು :–</u>**

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೂರು ಸ್ನಾತಕೋತ್ತರ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅವುಗಳಲ್ಲಿ ಶೈಕ್ಷಣಿಕ ಕೋರ್ಸ್‌ಗಳಾದ – ಎಂ.ಎ, ಎಂ.ಕಾಂ, ಎಂ.ಎಸ್.ಡಬ್ಲ್ಯೂ ನಡೆಸಲಾಗುತ್ತಿದ್ದು, ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ಬೋಧನಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಸ್ವೀಕರಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಲಾಗುತ್ತಿದೆ. ಹಾಗೂ ಬೋಧಕ/ಬೋಧಕೇತರ ವೇತನ ಮತ್ತು ಭತ್ಯೆಗಳು, ಸ್ವಚ್ಛತಾ ಕಾರ್ಯ, ಇತರೆ ಶೈಕ್ಷಣಿಕ ಪ್ರಯೋಗಾಲಯದ ರಾಸಾಯನಿಕ ಸಲಕರಣೆಗಳ ಖರೀದಿ ವೆಚ್ಚವನ್ನು ಭರಿಸಲಾಗುತ್ತಿದ್ದು, ಈ ಸಂಬಂಧ ಪಾವತಿ ಓಚರ್‌ಗಳನ್ನು ಲೆಕ್ಕಪರಿಶೋಧನಾ ಸಂದರ್ಭದಲ್ಲಿ ಪರಿಶೀಲಿಸಲಾಗಿದೆ.

**<u>ಸ್ನಾತಕೋತ್ತರ ಕೇಂದ್ರಗಳ ವಿವರಗಳು ಹಾಗೂ ಸಂಸ್ಥೆಗಳ 2016–17ನೇ ಸಾಲಿನ ಸ್ವೀಕೃತಿ ಮತ್ತು ವೆಚ್ಚದ ವಿವರ ಕೆಳಕಂಡಂತಿದೆ.</u>**

1. ಸ್ನಾತಕೋತ್ತರ ಕೇಂದ್ರ ಮಂಡ್ಯ
2. ಸ್ನಾತಕೋತ್ತರ ಕೇಂದ್ರ ಚಾಮರಾಜನಗರ
3. ಸ್ನಾತಕೋತ್ತರ ಕೇಂದ್ರ ಹಾಸನ

| **ಸ್ನಾತಕೋತ್ತರ ಕೇಂದ್ರ** | **ದಿನಾಂಕ:01.04.2016ರ ಪ್ರಾರಂಭಿಕ ಶಿಲ್ಕು** | **ಸ್ವೀಕೃತಿ** | **ಒಟ್ಟು** | **ವೆಚ್ಚ** | **ದಿನಾಂಕ: 31.03.2017 ರ ಅಂತಿಮ ಶಿಲ್ಕು** |
|---|---|---|---|---|---|
| ಹಾಸನ | 9,36,625 | 90,26,998 | 99,63,623 | 80,11,631 | 18,98,651 |
| ಚಾಮರಾಜನಗರ | 74,25,133 | 66,06,970 | 1,40,32,103 | 32,00,570 | 1,08,31,533 |

2016–17 ನೇ ಸಾಲಿನ ಲೆಕ್ಕ ಪರಿಶೋಧನಾವರದಿಯ ಕಂಡಿಕೆ 49 ರಲ್ಲಿ ಸೂಚಿಸಿರುವ ಸಲಹೆ ಸೂಚನೆಗಳನ್ನು ನಿರ್ವಹಿಸಲು ಕ್ರಮವಹಿಸಿದ್ದು ಮಾಹಿತಿಯನ್ನು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರು ಪಡಿಸಲಾಗುವುದು.

50 **<u>ಪರೀಕ್ಷಾ ಖಾತೆಯ ಸಂಖ್ಯೆ:54007591200 ರಲ್ಲಿ ವೆಚ್ಚ ಮಾಡಿರುವುದಕ್ಕೆ ಸಂಬಂಧಿಸಿದ ಬೋಧಕೇತರ ಸಿಬ್ಬಂದಿಗಳ ಸಂಭಾವನೆ ಹಾಗೂ ಮೌಲ್ಯಮಾಪನ ಭತ್ಯೆ ಪಾವತಿಸಿರುವುದು:– (ಹಣಕಾಸು ವಿಭಾಗ)</u>**

ವಾರ್ಷಿಕ ಲೆಕ್ಕಪತ್ರದ ಅಧ್ಯಾಪಕೇತರ ನೌಕರರಿಗೆ ಹಾಗೂ ಇತರೆ ಗೌರವ ಸಂಭಾವನೆ ಪಾವತಿ ಲೆಕ್ಕಶೀರ್ಷಿಕೆ 266 ರೂ.58,70,857/– ಪಾವತಿಸದೆ ಹಾಗೂ ಲೆಕ್ಕಶೀರ್ಷಿಕೆ ವಹಿವಾಟು ಸಂಖ್ಯೆ 183 ಹಾಗೂ 184 ಮೌಲ್ಯಮಾಪಕರ ಮೌಲ್ಯಮಾಪನ ಭತ್ಯೆ, ಪ್ರಯಾಣ ಭತ್ಯೆ, ನೌಕರರ ಸಂಭಾವನೆ ಸ್ಥಳೀಯ ಭತ್ಯೆ, ಸಭಾ ಭತ್ಯೆ ಇತ್ಯಾದಿ ರೂ.56,32,915/– ವಿವಿಧ ಬಿಲ್ಲುಗಳಲ್ಲಿ ಪಾವತಿಸಿದೆ. ಇದಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯವಾಗಿ ಸರ್ಕಾರದ ಅನುಮೋದನೆಯ ಆದೇಶದ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸಬೇಕೆಂದು ವಿಚಾರಣೆ ಸಂಖ್ಯೆ:201/2018–19 ದಿನಾಂಕ:21.08.2018ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಯಾವುದೇ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಪಾವತಿ ಕೋಡ್ ಸಂಖ್ಯೆ 266 ಹಾಗೂ 183 ಸಂಭಾವನೆ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. Discountincance of Examination Remuneration under Section 289 Karnataka Education Act 1983 discharge of Examination works mandtory not with standing anything contined in any thing of contined inany lawor contract of Judgement by court there has not been any provision for the payment of any extra remunration to carry out the Examination related works of university and college lectures shall discharges there examination related deelited including valuation and tabalation work at part of their academic function and will notbe entitled to payment of any extra remaneration however they shall be entiled to TA/DA and admisible under KCSR for the Journerl per formed by them examination work ವೆಚ್ಚ ಮಾಡಿರುವ ಪರೀಕ್ಷೆ ಸಂಭಾವನೆಯನ್ನು ಮಾನ್ಯ

| ಕ್ರ ಸಂ | ಆದೇಶ ಸಂಖ್ಯೆ / ದಿನಾಂಕ | ವಿಷಯ | ಪ್ರಾಧಿಕಾರ |
|---|---|---|---|
| 1 | ಕ್ರಮಾಂಕ ಇ,ಡಿ,30,ಯು,ಎನ್,ಇ2000 ದಿನಾಂಕ:19.05.2003 | Discountincance of Examination Remuneration payable to the teachers other staff in university and collage | ಕರ್ನಾಟಕ ಸರ್ಕಾರ |
| 2 | ಆದೇಶ ಸಂ, ಜಿ,ಎಲ್5/ಯು,ಎ–1 318//92–93 ದಿನಾಂಕ:27.03.2010 | ಪರೀಕ್ಷಾ ಕಾರ್ಯಗಳಲ್ಲಿ ಭಾಗವಹಿಸುವ ಶಿಕ್ಷಕರು ಮತ್ತು ಆಕ್ಷಕೇತರರಿಗೆ ಸಂಭಾವನೆ ನೀಡುವ ಬಗ್ಗೆ | ಕುಲಸಚಿವರು ಮೈಸೂರು ವಿಶ್ವವಿದ್ಯಾನಿಲಯ |
| 3 | ಆದೇಶ ಸಂ, ಜಿ,ಎಲ್5/ಯು,ಎ–1 318//92–93 ದಿನಾಂಕ:12.12.2011 | ಕೇಂದ್ರ ಮೌಲ್ಯಮಾಪನ ಪರೀಕ್ಷಾ ಕಾರ್ಯದಲ್ಲಿ ಭಾಗವಹಿಸುವ ಸಂಯೋಜಕರಿಗೆ ಮತ್ತು ಸಹಾಯಕರಿಗೆ ಸಂಭಾವನೆ ನೀಡುವ ಬಗ್ಗೆ | ಕುಲಸಚಿವರು ಮೈಸೂರು ವಿಶ್ವವಿದ್ಯಾನಿಲಯ |
| 4 | ಆದೇಶ ಸಂ,ಜಿ,ಎಲ್–5/142/2012–13 ದಿನಾಂಕ:2012.2013 | ಪರೀಕ್ಷಾ ಕಾರ್ಯ ನಿರ್ವಹಿಸುವ ಅಧ್ಯಾಪಕ ಅಧ್ಯಾಪಕೇತರ ನೌಕರರಿಗೆ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ | ಕುಲಸಚಿವರು ಮೈಸೂರು ವಿಶ್ವವಿದ್ಯಾನಿಲಯ |
| 5 | Order No,UA1/85/2005-06 date:13.05.2014 | Revision of rates for supply of lunch Breakfast, coffee tee, etc. | ಕುಲಸಚಿವರು ಮೈಸೂರು ವಿಶ್ವವಿದ್ಯಾನಿಲಯ |
| 6 | office of the seyndicate | ಪರೀಕ್ಷಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಪ್ರತಿ ವರ್ಷವೂ ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷಾ ಕಾರ್ಯಗಳ ಸಂಬಂಧವಾಗಿ ವಿತರಿಸಲಾಗುವ ಸಾಮಾನ್ಯ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ | ಸಿಂಡಿಕೇಟ್ ಸಭೆ ನಿರ್ಣಯ |
| 7 | ಆದೇಶ ಸಂಖ್ಯೆ, ಪ,ವಿ/ ಮಾ,ವಿ–12/2012–13 ದಿನಾಂಕ:08.01.2015 | ಪದವಿ ಪರೀಕ್ಷೆಗಳ ಕೇಂದ್ರ ಮೌಲ್ಯ ಮಾಪನ ಕಾರ್ಯಗಳ ಸಮನ್ವಯ ಸಮಿತಿ ಅಧಿಕಾರಿಗಳ ಸಿಬ್ಬಂದಿ ವರ್ಗದವರಿಗೆ ಸಂಭಾವನೆ ನೀಡುವ ಬಗ್ಗೆ | ಕುಲಸಚಿವ (ಪರೀಕ್ಷಾಂಗ) |
| 8 | ಆದೇಶ ಸಂಖ್ಯೆ, ಜಿ,ಎಲಲ್–5/142 2012–13 ದಿನಾಂಕ:27.01.2016 | ಜಾಗೃತ ಸದಸ್ಯರಿಗೆ ಸಂಭಾವನೆಯನ್ನು ಹೆಚ್ಚಿಸಿರುವ ಬಗ್ಗೆ | ಸಹಾಯಕ ಕುಲಸಚಿವ (ಸಾಮಾನ್ಯ) |

ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಆದೇಶದ ಪ್ರತಿ ಹಾಜರುಪಡಿಸುವವರೆಗೆ ಹಾಗೂ ಕಂಡಿಕೆಗೆ ಪಾಲನವರದಿ ನೀಡುವ ತನಕ ಮೊಬಲಗು **ರೂ. 1,15,03,772/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ವಿಚಾರಣೆ ಸಂಖ್ಯೆ:206/2018–19 ದಿನಾಂಕ:21.08.2018ರಂದು ವಿಚಾರಣೆ ನೀಡಲಾಗಿದ್ದರೂ ವಿವರಣೆ ನೀಡದೆ ಹಾಗೂ ಸರ್ಕಾರದ ಪರಿಷ್ಕೃತ ಆದೇಶ ಪ್ರತಿಯನ್ನು ಹಾಜರುಪಡಿಸದೆ ಇರುವುದರಿಂದ ವಾರ್ಷಿಕ ಲೆಕ್ಕಪತ್ರದ ವಹಿವಾಟು ಸಂಖ್ಯೆ:184ರಲ್ಲಿ ರೂ.4,38,979/– ಪ್ರಯೋಗ ಪರೀಕ್ಷಕರ ಸಂಭಾವನೆ Remuneration of Practical Examiners ಇವರ ಬಿಲ್ಲುಗಳಲ್ಲಿ ಪಾವತಿಸಲಾಗಿದೆ. ಬೋಧಕ ಸಿಬ್ಬಂದಿಗಳಿಗೆ ಮೌಲ್ಯಮಾಪನ ಭತ್ಯೆ, ಪ್ರಯೋಗಾಲಯ ಪರೀಕ್ಷೆ ಭತ್ಯೆ ನೀಡಲು ಬರುವುದಿಲ್ಲ.

| ಕ್ರ. ಸಂ | ಕೋಡ್ ಸಂಖ್ಯೆ | ಮೊತ್ತ | ವಿವರ |
|---|---|---|---|
| 1 | 266 | 58,70,857 | Remuneration of Non teaching squad |
| 2 | 183 | 56,32,915 | Remuneration of Examination |
| 3 | 184 | 4,38,979 | Remuneration of Practical Examiners |
| ಒಟ್ಟು | | **1,19,42,751** | |

ಈ ರೀತಿ ನಿಯಮಬಾಹಿರವಾಗಿ ಪಾವತಿಸಿರುವ ಒಟ್ಟು ಮೊಬಲಗು **ರೂ.1,19,42,751/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| | | | |
|---|---|---|---|
| 9 | ಆದೇಶ ಸಂಖ್ಯೆ, ಪ.ವಿ–1,4/2015–16 ದಿನಾಂಕ:24.03.2016 | ಪರೀಕ್ಷಾ ವಿಭಾಗದ ಅಧಿಕಾರಿಗಳು ಸಿಬ್ಬಂದಿ ವರ್ಗದವರುಗಳಿಗೆ ವಾರ್ಷಿಕ ಸಾಮಾನ್ಯ ಸಂಭಾವನೆ ಮಂಜೂರು ಮಾಡುವ ಬಗ್ಗೆ | ಉಪಕುಲಸಚಿವ (ಪರೀಕ್ಷಾಂಗ) |
| 10 | ವಿ.ವಿ ಆದೇಶ ಸಂಖ್ಯೆ: ಪವಿ 8.6/17/2014–15 ದಿನಾಂಕ:01.08.2016 | ಸ್ನಾತಕೋತ್ತರ ಪದವಿ ಪರೀಕ್ಷೆಗಳ ಮೌಲ್ಯ ಮಾಪನ ಸಂಯೋಜಕರಾಗಿ ಕಾರ್ತನಿರ್ವಹಿಸುವ ಅಧ್ಯಾಪಕೇತರ ಸಿಬ್ಬಣದಿ ವರ್ಗದವರಿಗೆ ಸಂಭಾವನೆಯನ್ನು ಪಾವತಿಸುವ ಬಗೆಗೆ | ಕುಲಸಚಿವ (ಪರೀಕ್ಷಾಂಗ) |
| 11 | ದಿನಾಂಕ:05.07.2016 | ಪರೀಕ್ಷಾ ಮೌಲ್ಯ ಮಾಪನ ಕಾರ್ಯನಿರ್ವಹಿಸುವ ಅಧ್ಯಾಪಕರುಗಳಿಗೆ ಸಂಭಾವನೆಯನ್ನು ಪರಿಷ್ಕರಿಸಿರುವ ಬಗ್ಗೆ | ಕುಲಸಚಿವ (ಪರೀಕ್ಷಾಂಗ) |

ವಿಶ್ವವಿದ್ಯಾನಿಲಯದಲ್ಲಿ ಪ್ರತಿ ವರ್ಷ ಪರೀಕ್ಷೆಗಳು ನಡೆಯುವುದು ಸಾಮಾನ್ಯಸಂಗತಿಯಾಗಿದ್ದು ಅದರಂತೆ ಪ್ರತಿ ವರ್ಷವೂ ಪರೀಕ್ಷಾ ಕಾರ್ಯಗಳಿಗೆ ಅಧ್ಯಾಪಕರು ಹಾಗೂ ಅಧ್ಯಾಪಕೇತರ ಸಿಬ್ಬಂಧಿಯನ್ನು ನೇಮಿಸಿಕೊಳ್ಳುವುದು ಹಾಗೂ ಅವರುಗಳಿಗೆ ಗೌರವಧನ ಮತ್ತು ಭತ್ಯೆಗಳನ್ನು ಪಾವತಿಸಬೇಕಾಗಿರುತ್ತದೆ, ಈ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣಕ್ಕು ಸ್ಥಗಿತಗೊಳಿಸುವಂತಹಜ ಕಾರ್ಯ ಕ್ರಮವಾಗಿರುವುದಿಲ್ಲ ಆ ಮೇರೆಗೆ ಪ್ರತಿ ವರ್ಷ ಪರೀಕ್ಷೆಗಳು ನಡೆಯುವಾಗ ಹಾಗೂ ನಡೆದ ನಂತರ ಈ ಕಾರ್ಯದಲ್ಲಿ ತೊಡಗಿಸಿಕೊಂಡ ನೌಕರರಿಗೆ ಗೌರವ ಧನ ಮತ್ತು ಭತ್ಯೆಯನ್ನು ನೀಡಬೇಕಾಗಿದ್ದು ಇದರಂತೆ ಸಿಂಡಿಕೇಟ್ ಸಭೆಯ ಅನುಮೋಧನೆ ಹಾಗೂ ಕುಲಪರಿಗಳು ಹಾಗೂ ಲುಲಸಚಿವರುಗಳ ಆದೇಶದಂತೆ ಗೌರವ ಧನ ಮತ್ತು ಭತ್ಯೆಯನನು ಭರಿಸಲಾಗಿದ್ದು ಈ ನಿಟ್ಟಿನಲ್ಲಿ ಕೋಡ್ ಸಂಖ್ಯೆ 266 ಹಾಗೂ 283 ರಡಿಯಲ್ಲಿ ರೂ.1,15,03,772/–ಗಳನ್ನು ಪಾವತಿಸಿದ್ದು ಈ ಪಾವತಿಯನ್ನು ಮೇಲ್ಕಾಣಿಸಿರುವ ಕ್ರಮ ಸಂಖ್ಯೆ ರ ಸರ್ಕಾರದ ಆದೇಶದ ಸೂಚನೆಯಂತೆ ವಿಶ್ವವಿದ್ಯಾನಿಲಯದ ನಿದಿಯಿಂದ ಸಿಂಡಿಕೇಟ್ ಸಭೆಯ ನಿರ್ಣಯಗಳು ಹಾಗೂ ವಿಶ್ವವಿದ್ಯಾನಿಲಯದ ಕಾಲಾನು ಕ್ರಮಗಳ ಆಧೇಶದ ಮೇರೆಗೆ ಗೌರವ ಧನ ಮತ್ತು ಭತ್ಯೆಗಳನ್ನು ಭರಿಸಲಾಗಿರುತ್ತದೆ ಇದರ ಪೂರ್ಣ ವಿವರಗಳನ್ನು ಮೇಲಿನ ಆದೇಶಗಳನ್ನು ಪರಾಂಬರಿಸಲು ಕೇಳಿಕೊಳ್ಳತ್ತ ರೂ.1,15,03,772/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.

| | | |
|---|---|---|
| | | ಮುಂದುವರಿದು ಕಂಡಿಕೆ 50 ರ ಎರಡನೆ ಹಂತದಲ್ಲಿ ಪ್ರಸ್ತಾಪಿಸಿ ರೂ.1,19,42,751/–ಗಳನ್ನು ಆಕ್ಷೇಪಣೆಯಲ್ಲಿಟ್ಟಿರುವ ಬಗ್ಗೆ ಪ್ರಸ್ತಾಪಿಸುತ್ತ ಪ್ರಯೋಗ ಪರೀಕ್ಷಕರ ಸಂಭಾವನೆ ಮತ್ತು ಬೋಧಕ ಸಿಬ್ಬಂಧಿಗಳಿಗೆ ಮೌಲ್ಯ ಮಾಪನ ಭತ್ಯೆ ಹಾಗೂ ಪ್ರಯೋಗಾಲಯಗಳ ಪರೀಕ್ಷೆ ಭತ್ಯೆಗಳನ್ನು ಸಿಂಡಿಕೇಟ್ ಸಭೆಯ ನಿರ್ಣಯ ಹಾಗೂ ಕುಲಪತಿಗಳು ಮತ್ತು ಕುಲಸಚಿವರುಗಳ ಆದೇಶದನ್ವಯ ವಿಶ್ವವಿದ್ಯಾನಿಲಯದ ನಿಯಮಗಳ ಮಿತಿಯಲ್ಲಿ ವಿಶ್ವವಿದ್ಯಾನಿಲಯದ ನಿಧಿಯಿಂದ ಸಂಭಾವನೆ ಮತ್ತು ಗೌರವಧನ ಭತ್ಯೆ ಮತ್ತಿತರೆ ವೆಚ್ಚಗಳನ್ನು ಭರಿಸಲಾಗಿದ್ದು ಇದು ಅನಿವಾರ್ಯ ಮತ್ತು ಅವಶ್ಯಕವಾಗಿರುತ್ತದೆಂಬ ಅಂಶವನ್ನು ಆದ್ಯ ಗಮನಕ್ಕೆ ತರುತ್ತ ಕಂಡಿಕೆ 50ರಲ್ಲಿ ಆಕ್ಷೇಪಿಸಿ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.1,15,03,772/– ಮತ್ತು ರೂ.1,19,42,751/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವಥದಿಸಲಾಗಿದೆ. |

| | | |
|---|---|---|
| **51** | **ಈಜು ತರಬೇತಿ ಶಿಬಿರದಲ್ಲಿ ಭಾಗವಹಿಸಿದ ನೌಕರರಿಗೆ ಹೆಚ್ಚುವರಿ ಕೆಲಸವೆಂದು ಸಂಭಾವನೆ ಪಾವತಿಸಿರುವುದು:– (ಹಣಕಾಸು ವಿಭಾಗ)**<br>2016–17ನೇ ಸಾಲಿನ ನವೆಂಬರ್–2016 ರ ಮಾಹೆಯ ವೋಚರ್ ಬಿಲ್ಲಿನ ಚೆಕ್ ನಂ:178110 ದಿ:15.11.16 ರಂದು ರೂ.3,95,325/–ಗಳನ್ನು (ವಾರ್ಷಿಕ ಲೆಕ್ಕಪತ್ರದಂತೆ ರೂ.4,74,275/–) ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ರವರಿಗೆ ದಿನಾಂಕ:13.04.2016 ರಿಂದ 05.07.2016 ರವರೆಗೆ ಈಜು ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿರುವ ನೌಕರರಿಗೆ, ಅಂದರೆ ಖಾಯಂ ನೌಕರರಿಗೆ ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸಿದರೆ ಎಂದು, ಬೇಸಿಗೆ ಈಜು ತರಬೇತಿ ಶಿಬಿರದ ವಸೂಲಾದ ಶುಲ್ಕದಿಂದ ಒಟ್ಟು ಅಂದಾಜು ಶೇ.25% ರಷ್ಟು ಮೊತ್ತವನ್ನು ಮೈಸೂರು ವಿಶ್ವವಿದ್ಯಾನಿಲಯದ ಖಾಯಂ ನೌಕರರಿಗೆ ಪಾವತಿಸಲಾಗಿರುತ್ತದೆ. ಇದು ಯಾವ ನಿಯಮದಲ್ಲಿ ಖಾಯಂ ನೌಕರರಿಗೆ ಹೆಚ್ಚುವರಿ ಕೆಲಸಕ್ಕೆ ವೇತನವನ್ನು ಪಾವತಿ ಮಾಡಬಹುದು ಎಂದು ಇರುತ್ತದೆ.<br>ವಿಚಾರಣೆ ಪತ್ರ ಸಂಖ್ಯೆ:167 ದಿನಾಂಕ:06.08.18 ರಲ್ಲಿ ವಿವರಣೆ ನೀಡಲು ಕೋರಲಾಗಿತ್ತು. ಆದರೆ ವಿವರಣೆ ನೀಡಿರುವುದಿಲ್ಲ, ಆದ್ದರಿಂದ **ಮೊತ್ತ ರೂ.3,95,325/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸುವುದು ಇಲ್ಲವೆ ಸಿಂಡಿಕೇಟ್ ನಿರ್ಣಯವನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವವರೆಗೂ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ಇನ್ನು ಮುಂದೆ ಇಂತಹ ಸಂಭಾವನೆ ಭತ್ಯೆಗಳನ್ನು ನೀಡದಿರಲು ಸೂಚಿಸಿದೆ.** | ಮೈಸೂರು ವಿಶ್ವವಿದ್ಯಾನಿಲಯದ ಈಜು ಕೊಳದಲ್ಲಿ ದಿನಾಂಕ:13.4.2016 ರಿಂದ ದಿನಾಂಕ:5.7.2016 ರವರೆಗೆ ಹೊಸದಾಗಿ ಈಜು ಕಲಿಯುವವರಿಗೆ ಹಾಗೂ ಪರಿಣಿತ ಈಜುತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು ಈಜು ತರಬೇತಿ ಶಿಬಿರದಲ್ಲಿ ಹೊಸದಾಗಿ ಈಜು ಕಲಿತವರು ಒಟ್ಟು489 ಮಂದಿ ಇದರಲ್ಲಿ.<br>ಸಾರ್ವಜನಿಕರು–456ಮಂದಿ*260=1185600/–<br>ವಿ.ವಿ.ನೌಕರರ ಮಕ್ಕಳು–33ಮಂದಿ*1300=42900/–<br>ಅಡ್ವಾನ್ಸ್ ಬ್ಯಾಚ್<br>ಸಾರ್ವಜನಿಕರು–97ಮಂದಿ*3600=349200/–<br>ವಿ.ವಿ.ನೌಕರರ ಮಕ್ಕಳು–2ಮಂದಿ*1800=3600/–<br>ಒಟ್ಟು–1581300<br>ಈ ಸಂಬಂಧ ಒಟ್ಟು ಮೊತ್ತ ರೂ.15,81,300,/–ಗಳು ವಿಶ್ವವಿದ್ಯಾನಿಲಯದಕ್ಕೆ ಸಂದಾಯವಾಗಿರುತ್ತದೆ.<br>ಈಜು ಕೊಳದಲ್ಲಿ ಕಾರ್ಯ ನಿರ್ವಹಿಸಿದ ನೌಕರರು ಬೆಳಿಗ್ಗೆ 5.45 ರಿಂದ 10 ಗಂಟೆವರೆಗೆ ಮತ್ತು ಮದ್ಯಾಹ್ನ 2 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕಾರ್ಯನಿರ್ವಹಿಸಿರುತ್ತಾರೆ.<br>ಹಾಗೂ ಬೇಸಿಗೆ ತರಬೇತಿ ಶಿಬಿರವು ಬೆಳಗ್ಗೆ 10 ಗಂಟೆಯಿಂದ ಮದ್ಯಾಹ್ನ 1 ಗಂಟೆವರೆಗೆ ಮತ್ತು ಸಂಜೆ 6 ರಿಂದ 8 ಗಂಟೆವರೆಗೆ ಬಿಡುವಿನ ವೇಳೆಯಲ್ಲಿ ಸಾರ್ವಜನಿಕರಿಗೆ ಮತ್ತು ಮಕ್ಕಳಿಗೆ ಹೆಚ್ಚುವರಿಯಾಗಿ ಈಜು ಶಿಬಿರವನ್ನು ನಡೆಸಲಾಗಿದೆ<br>ಇದರಿಂದಾಗಿ ವಿಶ್ವವಿದ್ಯಾನಿಲಯಕ್ಕೆ ರೂ.15,81,300/–ಗಳ ಆದಾಯ ಬಂದಿರುವುದರಿಂದ ಇದರ ಶೇಖಡ25ರಷ್ಟು ಮೊತ್ತವನ್ನು 60 ದರೆ ರೂ3.95.325/–ಗಳನ್ನು ವಿಶ್ವವಿದ್ಯಾನಿಲಯದ ಆಧೇಶ ಸಂಖ್ಯೆ ಜಿ.ಎಲ್.3/614/92–93 ದಿನಾಂಕ:30.3.2009ರ ಅನ್ವಯದಂತೆ ಈಜು ತರಬೇತಿ ಶಿಬಿರದಲ್ಲಿ ಕಾರ್ಯನಿರ್ವಹಿಸಿದ ನೌಕರರಿಗೆ ಪಾವತಿಸಿದೆ.<br>ಈಜು ತರಬೇತಿ ಶಿಬಿರದಲ್ಲಿ ತರಬೇತಿ ನೀಡುವ ಕಾರ್ಯಕ್ಕೆ ಹೆಚ್ಚಿನ |

| | | |
|---|---|---|
| | | ಕಾಲಾವಕಾಶ ಮತ್ತು ಹೆಚ್ಚುತ್ರಾಸದಾಯಕವಾಗಿರುವುದರಿಂದ ಹಾಗೂ ರಜಾ ದಿನಗಳಲ್ಲೂ ಕೆಲಸ ಮಾಡುವ ಸನ್ನಿವೇಶಗಳನ್ನು ಗಮನದಲ್ಲಿರಿಸಿಕೊಂಡು ಮತ್ತು ನೌಕರರನ್ನು ಹೆಚ್ಚು ಪ್ರೋತ್ಸಾಹಿಸಲು ವಿಶ್ವವಿದ್ಯಾನಿಲಯದ ಆಧೇಶದಂತೆ ಸಂಭಾವನೆಗಳನ್ನು ಪಾವತಿಸಿದೆ.<br>ಇನ್ನು ಮುಂದೆ ಸಂಭಾವನೆ ಎಂಬ ಪದವನ್ನು, ಪ್ರೋತ್ಸಾಹ ಧನ ಎಂಬುದಾಗಿ ಮಾರ್ಪಾಡು ಮಾಡಿಕೊಳ್ಳಲಾಗುತ್ತದೆ ಎಂಬ ಅಂಶವನ್ನು ತಮ್ಮ ಅವಗಾಹನೆಗಾಗಿತರುತ್ತಾ ರೂ.3,95,325/–ಗಳ ವಸೂಲಾತಿಯನ್ನು ಕೈ ಬಿಡುವಂತೆ ಕೋರಿದೆ. |

<table>
<tr>
<td>52</td>
<td><u>ವಯೋ ನಿವೃತ್ತಿ ಹೊಂದಿರುವ ಡಾ॥ ಕೆ.ವಿ.ಅಯ್ಯಣ್ಣ, ನಿವೃತ್ತ ಪ್ರಾಧ್ಯಾಪಕರು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು :– (ಹಣಕಾಸು ವಿಭಾಗ)</u><br><br>2016–17ನೇ ವರ್ಷದ ತಪಾಸಣೆಯ ಅವಧಿಯಲ್ಲಿ ಹಾಜರುಪಡಿಸಿರುವ ವೇತನ ಬಿಲ್ಲುಗಳನ್ನು ಪರಿಶೀಲಿಸಿದಾಗ ಆದೇಶ ಸಂಖ್ಯೆ:ET7/192/2011–12 ದಿನಾಂಕ:19.10.2016 ರಂದು ದಿನಾಂಕ:31.08.2016 ರಂದು ವಿಶ್ವವಿದಯಾನಿಲಯದ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರ ಹುದ್ದೆಯ ಸೇವೆಯಿಂದ ವಯೋನಿವೃತ್ತಿ ಹೊಂದಿರುವ ಡಾ॥ ಕೆ.ವೈ.ಅಯ್ಯಣ್ಣನವರು 2016–17ನೇ ಶೈಕ್ಷಣಿಕ ಸಾಲಿನ ವಿಷಯ 1 ಮತ್ತು 3 ಚರ್ತುಮಾಸ ಅಂತ್ಯದವರೆಗೆ ಬೋಧನಾ ಕಾರ್ಯನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ವೇತನ ಪಾವತಿಸಿದೆ. ಆದರೆ ನೇಮಕಾತಿ ಮಾಡಿಕೊಳ್ಳುವ ಮುನ್ನ ಸರ್ಕಾರದ ಅನುಮತಿ ಪಡೆದು ವೇತನ ನಿಗದಿಪಡಿಸಿ ಪಾವತಿಸಬೇಕಾಗಿರುತ್ತದೆ. ಹಾಗೂ ನಿಯಮಬಾಹಿರವಾಗಿ ನೇಮಕಾತಿ ಮಾಡಿಕೊಂಡು ವೇತನ ಪಾವತಿಸಿರುವುದರಿಂದ ಮೊಬಲಗು ರೂ.55,644/– ಅಕ್ಷೇಪಣೆಯಲ್ಲಿಡಲಾಗಿದೆ.<br><br><u>Professor retired</u><br>1) October — 10 days — 8064<br>2) November 16 — 30 days — 25000<br>3) Decembir 2016 — 28 days — <u>22580</u><br>Total — <u>55644</u></td>
<td>ಸರ್ಕಾರದ ಆದೇಶ ಸಂಖ್ಯೆ ಇಡಿ4/ಯು,ಎ,ಎಸ್2014 ದಿನಾಂಕ;11.5.2015 ರ ಮುಖಾಂತರ ಅನುಮೋಧನೆಗೊಂಡಿರುವ ವಿಶ್ವವಿದ್ಯಾನಿಲಯದ ಪರಿನಿಯಮ 19&4 ರ ಕ್ರಮ ಸಂಖ್ಯೆ 3 ರ ಟಿಪ್ಪಣಿ(3) ರ ಅನುಸಾರವಾಗಿ ಯಾವುದೇ ಭೋಧಕ ಸಿಬ್ಬಂದಿ ಶೈಕ್ಷಣಿಕ ವರ್ಷದ ಮಧ್ಯೆ ಭಾಗದಲ್ಲಿ ನಿವೃತ್ತಿ ಹೊಂದಿದರೆ ಅವರನ್ನು ಅವಶ್ಯಕವೆನಿಸಿದರೆ ಶೈಕ್ಷಣಿಕ ವರ್ಷದ ಕೊನೆವರೆಗೂ ಮುಂದುವರಿಸ ಬಹುದೆಂದು ಸೂಚನೆ ಇರುತ್ತದೆ.<br><br>ಇದರನ್ವಯ ಅಭಿವೃದ್ದಿ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಡಾ॥ ಕೆ.ವಿ.ಅಯ್ಯಣ್ಣ ಇವರು ದಿನಾಂಕ;31.8.2016ರಂದು ವಯೋನಿವೃತ್ತಿ ಹೊಂದಿದ್ದು ಇವರ ಸೇವೆಯು ಅವಶ್ಯಕವಿದ್ದುದರಿಂದ ಇವರನ್ನು 1 ಮತ್ತು 3 ನೇ ಚಾತುರ್ಮಾಸದ ಅಂತ್ಯದವರೆಗೆ ಮಾಹೆಯಾನ ರೂ.25,000/–ಗಳ ಸಂಭಾವನೆಯೊಂದಿಗೆ ನೇಮಕಾತಿ ಮಾಡಿಕೊಳ್ಳಲಾಗಿತ್ತು ಅವಧಿ ಮುಗಿದ ಕೂಡಲೆ ಇವರನ್ನು ಸೇವೆಯಿಂದ ವಿಮುಕ್ತಿಗೊಳಿಸಲಾಗಿದೆ.<br><br>ಸರ್ಕಾರದ ದಿನಾಂಕ:11.5.2015ರ ಪ್ರತಿ ಹಾಗೂ ವಿ.ವಿ ನಿಲಯದ ಪರಿನಿಯಮ1984ರ ಪ್ರತಿಗಳನ್ನು ಈ ಕೂಡ ಲಗತ್ತಿಸುತ್ತಾ ಕಂಡಿಕೆಯ ಆಕ್ಷೇಪಣೆ ಮೊತ್ತ ರೂ.55,644/–ಗಳನ್ನು ತೀರುವಳಿಗೊಳಿಸಲು ಕೋರಿದೆ.</td>
</tr>
</table>

53

**<u>ನಿವೃತ್ತಿ ಪ್ರಾಧ್ಯಾಪಕರಾದ ಡಾ||TBBSV ರಮಣಯ್ಯ ಎಂಬುವವರ ಬೋಧನಾ ಕಾರ್ಯ ನಿರ್ವಹಿಸಲು ಸಂದರ್ಶಕ ಪ್ರಾಧ್ಯಾಪಕರಾಗಿ ವೇತನ ನಿಗದಿಪಡಿಸಿ ವೇತನ ಪಾವತಿಸಿರುವುದು :- (ಹಣಕಾಸು ವಿಭಾಗ)</u>**

ದಿನಾಂಕ:30.06.2015 ರಂದು ನಿವೃತ್ತಿ ಹೊಂದಿದ 2015-16ನೇ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ ಸಮಾಜಕಾರ್ಯ ಅಧ್ಯಯನ ವಿಭಾಗ ಮಾನಸ ಗಂಗೋತ್ರಿ ಮೈಸೂರು ಬೋಧನಾ ಕಾರ್ಯನಿರ್ವಹಿಸಲು ಸಂದರ್ಶಕ ಪ್ರಾಧ್ಯಾಪಕರಾಗಿ ಮಾಹೆಯಾನ ರೂ.25,000/- ರಂತೆ ಆದೇಶದ ಸಂಖ್ಯೆ:ET7/594/2012-13 ದಿನಾಂಕ:02.09.2015ರ ಆದೇಶದ ಮೇರೆಗೆ ವೇತನ ಪಾವತಿಸಿರುವುದು ಕಂಡುಬಂದಿರುತ್ತದೆ. ಆದರೆ 2016-17ನೇ ಪರಿಷ್ಕೃತ ಮಂಜೂರಾತಿ ಆದೇಶವನ್ನು ನೀಡದೆ ಹಳೇ ಆದೇಶದ ಮೇಲೆ ವೇತನ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. ಈ ಬಗ್ಗೆ ವಿವರಣೆ ನೀಡುವತನಕ ಮೊಬಲಗು **ರೂ.80,833/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**ಧನಾದೇಶ ಸಂಖ್ಯೆ: 176197 – 3 ತಿಂಗಳು**

**ರೂ.25000 ಥ 3 = 75000**

**7 ದಿನಗಳು = <u>5833</u>**

**ಒಟ್ಟು = <u>80833</u>**

| | |
|---|---|
| 2)ಡಾ॥ ಬಿ.ಎನ್.ಶಿವಲಿಂಗಪ್ಪ, ನಿವೃತ್ತಿ ಪ್ರಾಧ್ಯಾಪಕರು, 2015-16ನೇ ಶೈಕ್ಷಣಿಕ ಗುತ್ತಿಗೆ ಆಧಾರದ ಮೇಲೆ ಅಧ್ಯಾಪಕ ವೇತನ ಪಾವತಿ 01.06.2016 | 25000 |
| 3) ಡಾ॥ ಎಂ.ಚಂದ್ರಕುಮಾರ್, ಸಂದರ್ಶಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ಗೌರವಧನ ತಿಂಗಳಿಗೆ ಚೆಕ್ ನಂ.174806/12.05.2016 | 25000 |
| 4) ಡಾ॥ಕೆ.ಬಿ. ಕೆಂಪೇಗೌಡ, ನಿರ್ದೇಶಕರು ಧನಾದೇಶ ಸಂಖ್ಯೆ:174482/07.04.2016 ಆದೇಶ ಸಂಖ್ಯೆ:ET9/122/2006-07/26.10.2015 ದಿನಾಂಕ:08.10.2015 ರಂದು ಜರುಗಿದ ಸಿಂಡಿಕೇಟ್ ಸಭೆಯ ಅನುಮೋದನೆ ಮೇರೆಗೆ ಡಾ॥ ಕೆ.ಬಿ. ಕೆಂಪೇಗೌಡ, ಪ್ರಾಂಶುಪಾಲರು, ವಿವೇಕಾನಂದ ಕಾನೂನು ಕಾಲೇಜು, ಬೆಂಗಳೂರು ಇವರನ್ನು ನಿಯೋಜನೆ ಆಧಾರದ ಮೇಲೆUniversity of Mysore School of law ಒಂದು ವರ್ಷದ ಅವಧಿಗೆ ನಿಯೋಜನೆಯ ಆಧಾರದ ಮೇಲೆ ಪಡೆಯುತ್ತಿರುವ ವೇತನವನ್ನು ಸಂರಕ್ಷಿಸಿ ಅಹ್ವಾನಿತ ಅಧ್ಯಾಪಕರಾಗಿ ನೇಮಕ ಮಾಡಲಾಗಿದೆ. | 99181 |
| 5) ಪ್ರೊ.ಹೆಚ್.ಪಿ ದೇವಕಿ, ನಿರ್ದೇಶಕರು, ಏಪ್ರಿಲ್-2016 ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಧನಾದೇಶ ಸಂಖ್ಯೆ:174496/03.04.2016, 174763/07.05.2016, 176347/11.08.2016 | 25000<br>25000 |

ಸರ್ಕಾರದ ಆಧೇಶ ಸಂಖ್ಯೆ ಇಡಿ4/ ಯು,ಎಂ,ಎಸ್2014 ದಿನಾಂಕ;11.5.2015 ರಲ್ಲಿ ಅನುಮೋಧನೆಗೊಂಡಿರುವ ವಿಶ್ವವಿದ್ಯಾನಿಲಯದ ಪರಿನಿಯಮ 19&4 ರ ಕ್ರಮ ಸಂಖ್ಯೆ 3 ರ ಟಿಪ್ಪಣಿ(3) ರ ಅನುಸಾರವಾಗಿ ಯಾವುದೇ ಭೋಧಕ ಸಿಬ್ಬಂದಿ ಶೈಕ್ಷಣಿಕ ವರ್ಷದ ಮಧ್ಯೆ ಭಾಗದಲ್ಲಿ ನಿವೃತ್ತಿ ಹೊಂದಿದರೆ ಮತ್ತು ಅವರ ಸೇವೆ ಅಗತ್ಯವೆನಿಸಿದರೆ ಆಯಾಯ ಶೈಕ್ಷಣಿಕ ವರ್ಷದ ಕೊನೆಯವರೆಗೂ ಅವರನ್ನು ಮುಂದುವರಿಸ ಬಹುದೆಂದು ಸೂಚನೆ ಇರುತ್ತದೆ.

ಇದಕ್ಕನುಸಾರವಾಗಿ ಈ ಕೆಳ ಕಾಣಿಸಿದ ಭೋಧಕ ವರ್ಗದವರನ್ನು ಆಯಾಯ ಶೈಕ್ಷಣಿಕ ಅವಧಿ ಮುಗಿಯುವವರೆಗೆ ಮಾಸಿಕ ಸಂಭಾವನೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿತ್ತು.

(1) ಡಾ॥TBBSV ರಮಣಯ್ಯ, ಪ್ರಾಧ್ಯಾಪಕರು(ನಿವೃತ್ತಿ)
(2) ಡಾ॥ ಬಿ.ಎನ್.ಶಿವಲಿಂಗಪ್ಪ, ಪ್ರಾಧ್ಯಾಪಕರು(ನಿವೃತ್ತಿ)
(3) ಡಾ॥ ಎಂ.ಚಂದ್ರಕುಮಾರ್, ಪ್ರಾಧ್ಯಾಪಕರು(ನಿವೃತ್ತಿ)

ಇವರುಗಳನ್ನು ಅವಧಿ ಮುಗಿದ ಕೂಡಲೇ ಇವರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಲಾಗಿರುತ್ತದೆ.

ಡಾ॥ಕೆ.ಬಿ. ಕೆಂಪೇಗೌಡ, ನಿರ್ದೇಶಕರು ಇವರನ್ನು ದಿನಾಂಕ:8.10.2015ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ ಒಂದು ವರ್ಷದ ಅವಧಿಗೆ ಅಹ್ವಾನಿತ ಪ್ರಾಧ್ಯಾಪಕರನ್ನಾಗಿ ನೇಮಕಾತಿ ಮಾಡಿಕೊಳ್ಳಲಾಗಿದೆ.

ಪ್ರೊ.ಹೆಚ್.ಪಿ ದೇವಕಿ ನಿವೃತ್ತಿ ಪ್ರಾಧ್ಯಾಪಕಿ ಸಂಸ್ಕೃತ ವಿಭಾಗ ಇವರನ್ನು ವಿಶ್ವವಿದ್ಯಾನಿಲಯದ ಆಧೇಶ ಸಂಖ್ಯೆ ET2/331/1997-98 ದಿನಾಂಕ;8.1.2014ರ ಅನ್ವಯದಂತೆ ಮೂರು ವರ್ಷಗಳ ಅವಧಿಗೆ ಓರಿಯಂಟಲ್ ರೀಸರ್ಚ ಇನ್

| | |
|---|---|
| | |
| 6) ಡಾ॥ ಟಿ.ವಿ. ಸತ್ಯನಾರಾರಣ ಗೌರವ ಸಲಹೆಗಾರರು, ಪ್ರಾಚ್ಯವಿದ್ಯಾ ಸಂಶೋಧನಾಲಯ, ಧನಾದೇಶ ಸಂಖ್ಯೆ:176348/11.08.2016 ಮತ್ತು 174477/13.04.2016 | 15000<br>15000 |
| 7) ಪಿ.ಬಿ. ಪ್ರಭು,Special Officer Writ pettion cellಧನಾದೇಶ ಸಂಖ್ಯೆ:174726/06.05.2016 | 60000 |
| 8) B.K. Jagadish, P.S to the Horible VC ಧನಾದೇಶ ಸಂಖ್ಯೆ:174726/06.05.2016 | 70000 |
| ಒಟ್ಟು | **3,59,181** |
| 9) ಡಾ॥TBBSV ರಮಣಯ್ಯ, ನಿವೃತ್ತ ಪ್ರಾಧ್ಯಾಪಕರು (2016–17ನೇ ಸಾಲು) | 80833 |
| ಒಟ್ಟು ಮೊತ್ತ | **4,40,014** |

ಹಿಂದಿನ 2015–16ನೇ ಸಾಲಿನ ಆಡಿಟ್ ವರದಿಯಲ್ಲಿನ ಪ್ರಸ್ತಾಪಿಸಿರುವಂತೆ ವಿಚಾರಣೆಯ ಅವಧಿಯಲ್ಲಿ ಸಂಬಂಧಿಸಿದ ಕಡತ ಹಾಜರುಪಡಿಸಿರುವುದಿಲ್ಲ. ಹಾಗೂ ವಿಚಾರಣೆಗೆ ವಿವರಣೆ ನೀಡುವವರೆಗೂ ಸದರಿ ಮೊತ್ತ **ರೂ.4,40,014/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಸ್ಟಿಟ್ಯೂಟ್ ಇಲ್ಲಿಗೆ ನಿರ್ದೇಶಕರನ್ನಾಗಿ ಮಾಹೆಯಾನ ರೂ.25,000/–ಗಳ ಸಂಭಾವನೆಯಲ್ಲಿ ನೇಮಕಾತಿ ಮಾಡಲಾಗಿದೆ.

ಡಾ॥ ಟಿ,ವಿ. ಸತ್ಯನಾರಾರಣ ನಿವೃತ್ತ ಸಂಶೋಧನಾ ಸಹಾಯಕರು ಇವರನ್ನು ಒಂದು ವರ್ಷದ ಅವಧಿಗೆ ಮಾಸಿಕ ಸಂಭಾವನೆ ರೂ.15,000/–ಗಳಲ್ಲಿ ಗೌರವ ಸಲಹೆಗಾರರನ್ನಾಗಿ ವಿಶ್ವವಿದ್ಯಾನಿಲಯದ ಆಧೇಶ ಸಂಖ್ಯೆ ET2/69/1990–91 ದಿನಾಂಕ:24.11.2015ರ ಅನ್ವಯದಂತೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಪಿ.ಬಿ. ಪ್ರಭು ಮತ್ತು ಶ್ರೀ.ಬಿ.ಕೆ.ಜಗದೀಶ್ ಇವರನ್ನು ಕ್ರಮವಾಗಿ ರಿಟ್ ಪಿಟಿಶನ್ ಸೆಲ್ ಮತ್ತು ಮಾನ್ಯ ಕುಲಪತಿಗಳ ಆಪ್ತ ಸಹಾಯಕರನ್ನಾಗಿ ನೇಮಕ ಮಾಡಲಾಗಿತ್ತು. ಆದರೆ ಇವರನ್ನು ಸೇವೆಯಿಂದ ವಿಮುಕ್ತಿಗೊಳಿಸಲಾಗಿದೆ.

ಆದ್ದರಿಂದ ಈ ಸಂಬಂಧದ ಆಕ್ಷೇಪಣೆ ಮೊತ್ತ ರೂ.4,40,014/–ಗಳನ್ನು ತೀರುವಳಿಗೊಳಿಸಲು ಕೋರಿದೆ.

54

**2016–17ನೇ ಸಾಲಿನ ಎಸ್.ಪಿ.ಎ ಖಾತೆ ಸಂಖ್ಯೆ:64098950735 ರಲ್ಲಿ ತಾತ್ಕಾಲಿಕ ಬೋಧಕೇತರ ಉದ್ಯೋಗಿಗಳನ್ನು ಮರುನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು:– (ಹಣಕಾಸು ವಿಭಾಗ)**

2016–17ನೇ ಸಾಲಿನ ತಪಾಸಣಾ ಅವಧಿಯಲ್ಲಿ ಹಾಜರುಪಡಿಸಿರುವ ನಗದು ಪುಸ್ತಕ ಹಾಗೂ ವೇತನ ಬಿಲ್ಲುಗಳನ್ನು ಪರಿಶೀಲಿಸಿದಾಗ School of Design ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳ್ನು 1 ವರ್ಷದ ಅವಧಿಗೆ ನೇಮಕ ಮಾಡಿಕೊಂಡು ವೇತನ ಪಾವತಿಸಲಾಗಿರುತ್ತದೆ. ವೇತನ ಪಾವತಿಸಿರುವ ಮುನ್ನ ಮಂಜೂರಾತಿಯಾದ ಖಾಲಿ ಹುದ್ದೆಗಳ ಎದುರಾಗಿ ನೇಮಕ ಮಾಡಿಕೊಂಡಿರುವ ಹಾಗೂ ರೋಸ್ಟರ್ ಪದ್ಧತಿಯನ್ನು ಅನುಸರಿಸಿರುವ ಮತ್ತು ಸರ್ಕಾರದಿಂದ ಪೂರ್ವಾನುಮತಿ ಪಡೆದಿರುವ ಆದೇಶದ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಹಾಗೂ ನೇಮಕಾತಿ ಹೊಂದಿದ ಅವಧಿಯಲ್ಲಿ 1 ವರ್ಷದ ವರೆಗೆ ಮರು ಆದೇಶ ಪಡೆಯದೇ ಹಾಗೂ ವೇತನ ನಿಗಧಿಪಡಿಸಿ ನಿಯಮ ಬಾಹಿರವಾಗಿ ಅಧಿಸೂಚನೆ ಹೊರಡಿಸದೆ ಪಾವತಿಸಿರುವುದರಿಂದ ಮೊಬಲಗು **ರೂ.10,20,231/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| ಕ್ರ.ಸಂ | ತಾತ್ಕಾಲಿಕ ಉದ್ಯೋಗಿ ಹೆಸರು | ಪದನಾಮ | ನಿಗಧಿಪಡಿಸಿರುವ ವೇತನ P/M |
|---|---|---|---|
| 1 | ಪದ್ಮ | TCC | 11,500 |
| 2 | ಮಧು.ಬಿ.ಪಿ | SDC | 11,090 |
| 3 | ರಾಧಾ.ಎಸ್ | SDC | 8,000 |
| 4 | ವಿನೋದ್‌ಕುಮಾರ್ | SDC | 8,000 |
| 5 | ಶ್ವೇತಾ | SDC | 8,000 |
| 6 | ಚೈತ್ರ | SDC | 11,090 |
| 7 | ಕುಮಾರ್ | Peon | 12,600 |
| 8 | ನಾರಾಯಣ | Peon | 12,600 |
| 9 | ಮಂಜುನಾಥ್ | Sweeper | 12,600 |

ಆದೇಶ ಸಂಖ್ಯೆ:ಇಟಿ2/399/2014–15 ದಿ:11.01.2016 ರಂದು ಆದೇಶಿಸಿರುವಂತೆ ಸದರಿ ನೌಕರರಿಂದ ಯಾವುದೇ ಮುಚ್ಚಳಿಕೆ ಪ್ರಪತ್ರ ಪಡೆಯದೇ ನೇಮಕಾತಿ ಆದೇಶವನ್ನು ಹೊರಡಿಸಲಾಗಿದೆ. ಇದರಲ್ಲಿ ಯಾವುದೇ ರೀತಿಯ ಅಕ್ರಮತೆ ಕಂಡು ಬಂದಲ್ಲಿ ಕ್ರಮ

ವಿಶ್ವವಿದ್ಯಾನಿಯವು ಇತ್ತೀಚಿಗೆ ಅಭಿವೃದ್ಧಿ ಹೊಂದಿದ ಶೈಕ್ಷಣಿಕ ಸಂಸ್ಥೆಯಾಗಿದ್ದು ಅನೇಕ ಹೊಸ ಕೋರ್ಸ್‌ಗಳೂ ಪ್ರಾರಂಭವಾಗಿರುತ್ತದೆ ಈ ಪೈಕಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ನವ ದೆಹಲಿ ಇವರ ಸಹ ಯೋಗದೊಂದಿಗೆ ಸೆಲ್ಫ್ ಫೈನಾನ್ಸಿಯಲ್ ಯೋಜನೆಯಡಿ School of Design ಪ್ರಾರಂಭಿಸಲಾಗಿದೆ ಇದಕ್ಕಾಗಿ ಅಗತ್ಯವಿರುವ ಬೋಧಕೇತರ ಸಿಬ್ಬಂದಿಯನ್ನು ಸಧ್ಯಕ್ಕೆ ಮಾನ್ಯ ಕುಲಪತಿಯವರ ಅಧಿಕಾರ ವ್ಯಾಪ್ತಿಯಲ್ಲಿ ತಾತ್ಕಾಲಿಕವಾಗಿ ಸಂಚಿತ ವೇತನದಲ್ಲಿ ಒಂದು ವರ್ಷದ ಅವಧಿಗೆ ನೆಮಕಾತಿ ಮಾಡಿಕೊಂಡು ಮುಂದುವರಿಸಲಾರುಗಿತ್ತದೆ ಇದು ಸೆಲ್ಫ್ ಫೈನಾನ್ಸಿಯಲ್ ಯೋಜನೆ ಆಗಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಹುದ್ದೆಗಳಿಗೆ ಎದುರಾಗಿ ನೇಮಕಾತಿಗಳನ್ನು ಮಾಡಿಕೊಂಡಿರುವುದಿಲ್ಲ ಮತ್ತು ವಿಶ್ವವಿದ್ಯಾನಿಲಯದಿಂದ ಯಾವುದೇ ವೆಚ್ಚ ಭರಿಸಲಾಗುತ್ತಿಲ್ಲ

ವಿಶ್ವವಿದ್ಯಾನಿಲಯದ ಆಧೇಶ ಸಂಖ್ಯೆ ಇ ಟಿ2/399/2014–15 ದಿನಾಂಕ 11.1.2016ರಂತೆ ಅಗತ್ಯ ನೌಕರರನ್ನು ನೇಮಕಾತಿ ಮಾಡಿಕೊಳ್ಳಲು ನಿರ್ದೇಕರು ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ಮಾನಸ ಗಂಗೋತ್ರಿ ಮೈಸೂರು ಇವರಿಗೆ ಅನುಮತಿ ನೀಡಲಾಗಿದೆ ಹಾಗೂ ಈ ಸಂಬಂಧ ರೂ.10,20,231/–ಗಳ ವೆಚ್ಚ ಭರಿಸಲಾಗಿದೆ

ಕೇಂದ್ರ ಸರ್ಕಾರದ ಕೌನ್ಸಿಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ನವದೆಹಲಿ ಇವರ ಗೈಡ್ ಲೈನ್ಸ್ ಪ್ರತಿ ಮತ್ತು ವಿಶ್ವವಿದ್ಯಾನಿಲಯದ ದಿನಾಂಕ 11.1.2016ರ ಪತ್ರಗಳನ್ನು ಈ ಕೂಡ ಲಗತ್ತಿಸಿದೆ.

ಈ ವೆಚ್ಚಗಳನ್ನು ಸೆಲ್ಫ್ ಫೈನಾನ್ಸ್ ಸ್ಕೀಂ ಅಡಿಯ ಖಾತೆಯಲ್ಲಿ ಭರಿಸಲಾಗದ್ದು, ವಿಶ್ವವಿದ್ಯಾನಿಲಯದ ನಿಧಿಯಿಂದ ಯಾವುದೇ ವೆಚ್ಚಗಳನ್ನು

| | | |
|---|---|---|
| | ಕೈಗೊಳ್ಳಲು ಸೂಚಿಸಿದೆ.<br>**<u>2016–17ನೇ ಸಾಲಿನ ಬೋಧಕೇತರ ಸಿಬ್ಬಂದಿಗಳ ವೇತನ ಪಾವತಿಸಿರುವ ವಿವರ ಹೀಗಿದೆ:</u>**<br>(see table below)<br>ವಿವರದಲ್ಲಿ ತಿಳಿಸಿರುವಂತೆ ನಿಯಮಾನುಸಾರ ಸೂಕ್ತ ಸಮಜಾಯಿಷಿ ನೀಡುವವರೆಗೂ ಹಾಗೂ ವೇತನ ಶ್ರೇಣಿ ನಿಗದಿಪಡಿಸುವವರೆಗೂ ಮೊತ್ತ ರೂ.**10,20,231/–ಗಳನ್ನು** ಆಕ್ಷೇಪಣೆಯಲ್ಲಿಡಲಾಗಿದೆ. ವಿಚಾರಣೆ ಸಂಖ್ಯೆ:173/ ದಿನಾಂಕ:18.08.2018. | ಭರಿಸಲ್ಲದಾಗಿರುವುದರಿಂದ ರೂ.10,20,231/–ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. |

| ಕ್ರ.ಸಂ | ದಿನಾಂಕ | ಚೆಕ್ ನಂ | ಮೊತ್ತ |
|---|---|---|---|
| 1 | 08.06.2016 | 546083 | 1,03,480 |
| 2 | 04.07.2016 | 546085 | 1,03,480 |
| 3 | 09.08.2016 | 546091 | 1,04,980 |
| 4 | 17.08.2016 | 546094 | 1,984 |
| 5 | 14.09.2016 | 546107 | 1,04,622 |
| 6 | 18.10.2016 | 546114 | 1,04,980 |
| 7 | 10.11.2016 | 546123 | 1,04,980 |
| 8 | 06.12.2016 | 546140 | 1,04,980 |
| 9 | 25.01.2017 | 546169 | 94,821 |
| 10 | 04.02.2017 | 546172 | 96,980 |
| 11 | 15.03.2017 | 546192 | 94,944 |
| | | **ಒಟ್ಟು** | **10,20,231** |

| | | |
|---|---|---|
| 55 | **School of planning and architecture ವಿಭಾಗದಲ್ಲಿ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ ವೇತನ ಪಾವತಿಸಿರುವ ವಿಚಾರ ಕುರಿತು:– (ಹಣಕಾಸು ವಿಭಾಗ)**<br><br>2016–17ನೇ ಸಾಲಿನ ಬ್ಯಾಂಕ್ ಖಾತೆ ಸಂಖ್ಯೆ:64098950735 ರಲ್ಲಿ ಬೋಧಕ ಸಿಬ್ಬಂದಿಗಳಿಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇಟಿ2/248/2016–17 ದಿ:07.07.2016 ರಂದು ರೂ.37,400+ AGP per month with aran allowance admisable as per rule in UGC scale of 37400–67000 ವೇತನ ಶ್ರೇಣಿಯಲ್ಲಿ 8 ಬೋಧಕ ಸಿಬ್ಬಂದಿಗಳಿಗೆ ಪ್ರತಿ ಮಾಹೆ ವೇತನ ನಿಗದಿಪಡಿಸಿ ಪಾವತಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಜುಲೈ 2016 ರಿಂದ ಫೆಬ್ರವರಿ 2017 ರವರೆಗೆ ರೂ.50,64,862/–ಗಳನ್ನು ಪಾವತಿಸಲಾಗಿದೆ. ಆದರೆ ವೇತನ ನಿಗದಿಪಡಿಸುವ ಮುನ್ನ ಸರ್ಕಾರದಿಂದ ಪೂರ್ವಾನುಮತಿ ಪಡೆದು (ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ) ಹಾಗೂ ಯು.ಜಿ.ಸಿ ಗೈಡ್‌ಲೈನ್ಸ್‌ಗಳ ಪ್ರಕಾರ ಅರ್ಹತೆ ಇರುವ ಬೋಧಕ ಸಿಬ್ಬಂದಿಗಳ ನೇಮಕಾತಿ ಮಾಡಿಕೊಂಡಿರುವ ವಿವರವನ್ನು ಹಾಜರುಪಡಿಸಬೇಕಾಗಿ ವಿಚಾರಣಾ ಸಂಖ್ಯೆ:144 ದಿನಾಂಕ:31.07.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಹಾಗೂ ಈ ಕೆಳಕಂಡ ದಾಖಲಾತಿ ಹಾಜರುಪಡಿಸದೆ ಇರುವುದರಿಂದ ಮೊಬಲಗು **ರೂ.50,64,862/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**<br>1) ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಹಾಜರುಪಡಿಸಿರುವುದಿಲ್ಲ.<br>2) ಯು.ಜಿ.ಸಿ ಆಯೋಗದಿಂದ ಪಡೆದಿರುವ ಅನುಮತಿ ಆದೇಶದ ಪ್ರತಿ.<br>3) ಸರ್ಕಾರದ ಉನ್ನತಿ ಶಿಕ್ಷಣ ಇಲಾಖೆ ವತಿಯಿಂದ ಅನುಮೋದನೆ ಪಡೆದಿರುವ ಪ್ರತಿ.<br>4) ಸಿಂಡಿಕೇಟ್ ಸಭೆಯಲ್ಲಿ ಒಪ್ಪಿಗೆ ಪಡೆದು ರಾಜ್ಯಪಾಲರಿಂದ ಮಂಜೂರಾತಿ ಆಗಿರುವ ಪರಿನಿಯಮ ಆದೇಶ ಪ್ರತಿ.<br>5) ವೇತನ ಬಿಲ್ಲುಗಳಲ್ಲಿ ಕಟಾಯಿಸಿರುವ ಆದಾರ ತೆರಿಗೆ ಲೆಕ್ಕಶೀರ್ಷಿಕೆಗೆ ಜಮಾ ಮಾಡಿರುವ ಚಲನ್ ಸ್ವೀಕೃತಿ ದಾಖಲಾತಿ ಹಾಜರುಪಡಿಸಿರುವುದಿಲ್ಲ.<br>6) ಯು.ಜಿ.ಸಿ ವೇತನ ನಿಗದಿಪಡಿಸುವಲ್ಲಿ ಹಾಗೂ ನೇಮಕಾತಿಗೆ ಅರ್ಹತೆ ಇರುವ ಪಿ.ಹೆಚ್.ಡಿ, ಅವಾರ್ಡ್ ಆಗಿರುವ ಅಧಿಸೂಚನೆ ಪತ್ರ. SLET, NET ಉತ್ತೀರ್ಣತೆ | ವಿಶ್ವವಿದ್ಯಾನಿಲಯವು ಇತ್ತೀಚೆಗೆ ಪ್ರಗತಿಹೊಂದಿದ ಶೈಕ್ಷಣಿಕ ಸಂಸ್ಥೆಯಾಗಿದ್ದು ಅನೇಕ ಹೊಸ ಕೋರ್ಸಗಳನ್ನು ಪ್ರಾರಂಭಿಸಿದೆ ಈ ಪೈಕಿ School of planning and architecture ವಿಭಾಗವನ್ನು council of planning and architectureನವದೆಹಲಿ ಇವರ ಸಹ ಯೋಗದೊಂದಿಗೆ self finaincial schemeಅಡಿ ಪ್ರಾರಂಭಿಸಲಾಗಿದೆ.<br><br>ಈ ವಿಭಾಗಕ್ಕೆ ಅವಶ್ಯಕವಿರುವ ಪ್ರಾಧ್ರಾಪಕರು, ಸಹಪ್ರಾಧ್ರಾಪಕರು, ಮತ್ತು ಸಹಾಯಕ ಪ್ರಾಧ್ರಾಪಕರು ಹುದ್ದೆಗಳ ಪೈಕಿ ಈಗಾಗಲೇ ಅಭಿವೃದ್ದಿ ಅಧ್ಯಯನ ಸಂಸ್ಥೆಯಲ್ಲಿ urban and reginal planning ವಿಭಾಗಕ್ಕೆ ಮಂಜೂರಾತಿಯಾಗಿ ಕಾರ್ಯ ನಿರ್ವಹಿಸುತ್ತಿರುವರನ್ನು ಹೊರತು ಪಡಿಸಿ ಅಂದರೆ ಅವರ ಸೇವೆಯನ್ನು ಪ್ರಸ್ತುತ ವಿಭಾಗಕ್ಕೆ ವರ್ಗಾಯಿಸಿಕೊಂಡು ಉಳಿದ ಹುದ್ದೆಗಳನ್ನು ಸೆಲ್ಪ್ ಪೈನಾನ್ಸ್ ಸ್ಕೀಂ ಅಡಿ ಮಂಜೂರಾತಿ ನೀಡಿ ಈ ಹುದ್ದೆಗಳಿಗೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ ಎಂಬ ಷರತ್ತಿನೊಂದಿಗೆ ಹುದ್ದೆಗಳಿಗೆ ಮಂಜೂರಾತಿ ನೀಡಿ ಪರಿನಿಯಮಕ್ಕೆ ಮಾನ್ಯ ಕುಲಾಧಿಪತಿಗಳು ಅನುಮೋಧನೆ ನೀಡಿರುತ್ತಾರೆ ಪರಿನಿಯಮದ ಪ್ರತಿ ಲಗತ್ತಿಸಿದೆ.<br><br>ಇದರನ್ವಯ ಈ ಹುದ್ದೆಗಳಿಗೆ ನಿಯಾಮಾನುಸಾರ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ಅಹ್ವಾನಿಸಿ ನೇಮಕಾತಿ ಸಮಿತಿ (B.O.A) ಮೂಲಕ ಸಂದರ್ಶನ ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಇವರುಗಳಿಗೆ ಯು.ಜಿ.ಸಿ ವೇತನವನ್ನು ಯು.ಜಿ.ಸಿ ಗೈಡ್ ಲೈನ್ಸ್ ಪ್ರಕಾರವಾಗಿ ನೀಡಲಾಗಿದೆ. PHD/NET/SLET ಪದವಿ ಆಗದವರಿಗೆ ಐದು ವರ್ಷದ ಒಳಗೆ ಇವುಗಳನ್ನು ಪೂರೈಸಿಕೊಳ್ಳಬೇಕೆಂದು ಷರತ್ತು ವಿಧಿಸಿ ನೇಮಕಾತಿ ಆಧೇಶಗಳನ್ನು ನೀಡಿದೆ ಇವರುಗಳು ಕೆಲಸಕ್ಕೆ ವರದಿ ಮಾಡಿಕೊಳ್ಳುವ ಸಂದರ್ಭದಲ್ಲಿ ಷರತ್ತುಗಳನ್ನು ಒಪ್ಪಿ ಸಹಿ ಮಾಡಿರುತ್ತಾರೆ. |

ಆಗಿರುವ ಇತರೇ ಸಂಬಂಧಿಸಿದ ದಾಖಲಾತಿ ಹಾಜರುಪಡಿಸದಿರುವುದು.

7) ನೇಮಕಾತಿ ಹೊಂದಿದ 2 ವರ್ಷ ಅವಧಿಯೊಳಗೆ ಘೋಷಣೆ ಆಗಿರುವ ಕುಲಸಚಿವರ ಆದೇಶದ ಪ್ರತಿ.

ಈ ಕೆಳಕಂಡ ಬೋಧಕ ಸಿಬ್ಬಂದಿಗಳಿಗೆ self financial technical faculty ಜುಲೈ 2016 ರಿಂದ ಫೆಬ್ರವರಿ 2018 ರವರೆಗೆ.

ಮೂಲ ವೇತನ 37,400, ಡಿ.ಎ 47,400, ಎ.ಜಿ.ಪಿ 10,000, ಹೆಚ್.ಆರ್.ಎ 9,480 ಸಿ.ಸಿ.ಎ 300

**2016–17ನೇ ಸಾಲಿನ ಯು.ಜಿ.ಸಿ ವೇತನ ಪಾವತಿಸಿರುವ ಸಿಬ್ಬಂದಿಗಳ ವಿವರ**

| ಕ್ರ.ಸಂ | ಬೋಧಕ ಸಿಬ್ಬಂದಿ ಹೆಸರು | ವೇತನ |
|---|---|---|
| 1 | ಚಿದಂಬರ ಸ್ವಾಮಿ | 9,01,360 |
| 2 | ಪ್ರಮೋದ.ಎಂ.ಗೌರಿ | 8,93,616 |
| 3 | ಮೊನಾಲಿಸಾ ದಾಸ್ | 8,71,119 |
| 4 | ಶೋಭಾ.ಆರ್ | 8,89,712 |
| 5 | ಶ್ರೀವಲಿ | 4,12,597 |
| 6 | ಯಶಸ್ವಿನಿ.ಎಸ್ | 4,12,835 |
| 7 | ಉಮಾ.ಎಸ್.ಎಂ | 4,07,447 |
| 8 | ಶ್ರೀಕಾಂತ್.ಕೆ.ಎಸ್ | 2,76,175 |
| ಒಟ್ಟು | | **50,64,862** |

ಈ ವಿಭಾಗವನ್ನು ಪ್ರಾರಂಭಿಸಿರುವುಕ್ಕೆ ಮತ್ತು ಬೋಧಕ ವರ್ಗದವರನ್ನು ನೇಮಕಾತಿ ಮಾಡಿಕೊಳ್ಳುವ ಸಂಬಂಧ ಕೇಂದ್ರ ಸರ್ಕಾರದ council of planning and architecture ದೆಹಲಿ ಹಾಗೂ ಕರ್ನಾಟಕ ಸರ್ಕಾರದ ಮಾನ್ಯ ಕುಲಾಧಿಪತಿಗಳಿಂದ ಅನುಮೋಧನೆ ದೊರೆತಿರುವುದರಿಂದ ಇದಕ್ಕೆ ಮತ್ತೊಮ್ಮೆ ಯು.ಜಿ.ಸಿ ಹಾಗೂ ಕರ್ನಾಟಕ ಸರ್ಕಾರದ ಅನುಮೋಧನೆಗಳ ಅಗತ್ಯತೆ ಇರುವುದಿಲ್ಲ ಎಂಬುದಾಗಿ ನಿವೇಧಿಸಲಾಗಿದೆ.

ಇವರ ಮಾಸಿಕ ಸಂಬಳದ ಬಿಲ್ಲಿನಲ್ಲಿ ಆದಾಯ ತೆರಿಗೆಗಳನ್ನು ಕಟಾಯಿಸಿರುವ ಬಗ್ಗೆ ಹಾಗೂ ಆಯಾಯ ಬೋಧಕ ವರ್ಗಾದವರು 2016–17 ನೇ ಸಾಲಿನಲ್ಲಿ ಆದಾಯ ತೆರಿಗೆಗಳನ್ನು ಜಮೆ ಮಾಡಿದ ಬಗ್ಗೆ ನಮೂನೆ 16ರ ಪ್ರತಿಗಳನ್ನು ಲಗತ್ತಿಸಿದೆ.

ಇವರುಗಳ ಸೇವಾ ಪುಸ್ತಕಗಳು ಹಾಗೂ ಇವರುಗಳು ಎರಡು ವರ್ಷಗಳ ಪ್ರೊಭೆಷನರಿ ಅವಧಿಯನ್ನು ಪೂರ್ಣಗೊಳಿಸಿದ ಬಗ್ಗೆ ಘೋಷಣೆಗಳನ್ನು ಮಾಡಿ ಆಧೇಶ ಹೊರಡಿಸುವದರ ಕುರಿತು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ವಿವರಗಳನ್ನು ಒದಗಿಸಲಾಗುತ್ತದೆ.

ಕೌನ್ಸಿಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ನವದೆಹಲಿ ಇವರ ಗೈಡ್ ಲೈನ್ಸ್ ಪ್ರತಿ ಸರ್ಕಾರದ ಪತ್ರ ಸಂಖ್ಯೆ. ಇಡಿ4 ಯು ಎಂ ಎಸ್ 2015 ದಿನಾಂಕ:6.4.2016ರ ನೇಮಕಾತಿ ಪ್ರಕಟಣೆ ಪ್ರತೆ ದಿನಾಂಕ:7.7.2016ರ ಸಿಂಡಿಕೇಟ್ ನಿರ್ಣಯದ ಪ್ರತಿ ದಿನಾಂಕ:6.7.2016 ಸಭೆಯ ನಿರ್ಣಯದ ಪ್ರತಿ ಹಾಗೂ ಆದಾಯ ತೆರಿಗೆ ಜಮೆ ಸಂಬಂಧ ನಮೂನೆ 16ರ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಲಾಗಿದೆ.

ಮುಂದುವರಿದು ವಿಶ್ವವಿದ್ಯಾನಿಲಯದಲ್ಲಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗವನ್ನು ಸೆಲ್ಫ್ ಫೈನಾನ್ಸ್ ಯೋಜನೆಯಡಿ ಸ್ಥಾಪಿಸಲಾಗಿರುವುದರಿಂದ ಈ ಎಲ್ಲಾ ವೆಚ್ಚಗಳನ್ನು ವಿದ್ಯಾರ್ಥಿಗಳು ಪಾವತಿಸುವ ಶುಲ್ಕ ಆದಾಯದಿಂದ ಭರಿಸಲಾಗುತ್ತಿದ್ದು ವಿಶ್ವವಿದ್ಯಾನಿಲಯದ ನಿಧಿಯಿಂದ ಈ ಸಂಬಂಧ ಯಾವುದೇ ವೆಚ್ಚಗಳನ್ನು ಭರಿಸಲಾಗುತ್ತಿಲ್ಲ ಎಂಬುದಾಗಿ ನಿವೇಧಿಸುತ್ತಾ ರೂ.50,64,862/–ಗಳ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.

| | | |
|---|---|---|
| **56** | **<u>2006ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಬೋಧಕವರ್ಗದವರಿಗೆ ಯು.ಜಿ.ಸಿ ಹಿಂಬಾಕಿಯಲ್ಲಿ ಪಡೆದಿರುವ ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳನ್ನು ಪಾವತಿಸಿರುವುದು :–</u>**<br>2016–17ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬೋಧಕ ವೃಂದದವರಿಗೆ 2006ರ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:24.12.2009 ರಿಂದ ಇತರೆ ಎಲ್ಲಾ ಸೌಲಭ್ಯ ಮತ್ತು ಭತ್ಯೆಗಳನ್ನು ಭವಿಷ್ಯಾವರ್ತಿಯಾಗಿ ವಿಸ್ತರಿಸುವಂತೆ<br>1. ಸರ್ಕಾರಿ ಆದೇಶ ಸಂಖ್ಯೆ:ಇಡಿ/37/ಯುಎನ್ಇ/2009/ದಿನಾಂಕ:24.12.2009<br>2. ಸರ್ಕಾರದ ಪತ್ರ ಸಂಖ್ಯೆ:ಇಡಿ/37/ಯುಎನ್ಇ/2009/ದಿನಾಂಕ:08.04.2010<br>ಈ ಮೇಲಿನ ಆದೇಶಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ:ಕಾಶಿಆ/65/ಸುತ್ತೋಲೆ/ಆಯವ್ಯಯ/2017–18/ದಿನಾಂಕ:12.09.2017ರ ಆದೇಶದಲ್ಲಿಯೂ ಸಹ 2006ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಗಳನ್ನು ದಿನಾಂಕ:01.01.2006ರಿಂದ ಜಾರಿಗೊಳಿಸಿ ದಿನಾಂಕ:24.12.209 ರಿಂದ ಇತರೆ ಎಲ್ಲಾ ಸೌಲಭ್ಯಗಳು ಮತ್ತು ಭತ್ಯೆಗಳನ್ನು ಭವಿಷ್ಯಾವರ್ತಿಯಾಗಿ ವಿಸ್ತರಿಸುವಂತೆ ತಿಳಿಸಲಾಗಿದ್ದರೂ, ಸರ್ಕಾರಿ ಆದೇಶವನ್ನು ಉಲ್ಲಂಘಿಸಿ 2006ರ ಪರಿಷ್ಕೃತ ಯು.ಜಿಸಿ ವೇತನ ಶ್ರೇಣಿಯಲ್ಲಿ ದಿನಾಂಕ:01.01.2006 ರಿಂದ 23.12.2009ರವರೆಗೆ 2016–17ನೇ ಸಾಲಿಗೆ ಯು.ಜಿ.ಸಿ ಹಿಂಬಾಕಿ ಮೊತ್ತವನ್ನು ಪಾವತಿಸುವಾಗ ತುಟ್ಟಿ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಒಳಗೊಂಡಂತೆ ಹಿಂಬಾಕಿ ಮೊತ್ತವನ್ನು ಪಾವತಿಸಿರುವ ಮೊತ್ತವನ್ನು ಬೋಧಕ ವರ್ಗದವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಬೋಧಕ ವರ್ಗದವರಿಗೆ 2006 ರ ಯು,ಜಿ,ಸಿ ಪರಿಷ್ಕೃತ ವೇತನ ಶ್ರೇಣಿಯಲ್ಲಿಯು,ಜಿ,ಸಿ ಹಿಂಬಾಕಿ ಪಡೆದಿರುವ ತುಟ್ಟಿ ಭತ್ಯೆ ಮತ್ತು ಇತರೆ ಭತ್ಯೆಗಳ ಪಾವತಿಸಿರುವ ಬಗ್ಗೆ 2016–17ನ್ನ ಸಾಲನ ಕಂಡಿಕೆ 56ರಲ್ಲಿ ಪ್ರಸ್ತಾಪಿಸಲಾಗಿದ್ದು ಕಂಡಿಕೆ 1,2,ರ ಸರ್ಕಾರಿ ಆದೇಶದನುಸಾರ ಬೋಧಕ ವೃಂದವರಿಗೆ ಪಾವತಿಸಿರುವ ಮಾಹಿತಿಯನ್ನು ಪರಿಶೀಲಿಸೆಗೆ ಕ್ರಮವಹಿಸಲಾಗಿದೆ.<br><br>ಕಾಲೇಜು ಶಿಕ್ಷಣ ಇಲಾಖೆಯ ದಿನಾಂಕ:12.09.2017ರ ಸುತ್ತೋಲೆಯಂತೆ ಪರಿಷ್ಕೃತ ಯು,ಜಿ,ಸಿ ವೇತನ ಶ್ರೇಣಿಗಳ ಬಗ್ಗೆ ಪರಿಶೀಲಿಸಿ ಯು,ಜಿ,ಸಿ ಹಿಂಬಾಕಿ ಮೊತ್ತವನ್ನು ಪಾವತಿಸುವಲ್ಲಿ ತುಟ್ಟಿ ಭತ್ಯೆ ಹಾಗೂ ಇತರೇ ಭತ್ಯೆಗಳನ್ನೊಳಗೊಂಡ ಹಿಂಬಾಕಿ ಮೊತ್ತವನ್ನು ನಿಯಮ ಬಾಹಿರವಾಗಿ ಪಾವತಿಸಿದ್ದಲ್ಲಿ ಸದರಿ ವಿಷಯವನ್ನು ಪರಿಶೀಲಿಸಿ ಪಾವತಿಸಿರುವ ಮೊತ್ತವನ್ನು ಬೋಧಕವರ್ಗದವರಿಂದ ವಸೂಲಿಸಿ ಮಾಹಿತಿಯನ್ನು ದಾಖಲಾತಿಗಳೊಂದಿಗೆ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಲಾಗುವುದೆಂದು ನಿವೇದಿಸಲಾಗಿದೆ. |

| 57 | **<u>ಭದ್ರತಾ ಠೇವಣಿ ಪಡೆಯದೆ ಗುತ್ತಿಗೆ ದಾರರೊಂದಿಗೆ ಕರಾರು ಮಾಡಿಕೊಂಡಿರುವುದು :– (ಆಡಳಿತ ವಿಭಾಗ)</u>**<br>2016–17ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ಒದಗಿಸುವ ಸಂಬಂಧ ಅಂದಾಜು ಮೊತ್ತ ರೂ.96.00 ಲಕ್ಷಗಳಿಗೆ ಗುತ್ತಿಗೆ ಕರಾರು ಮಾಡಿಕೊಳ್ಳಲಾದ ಮೆ॥ ಕೆನಾನ್ ಡಿಟೆಕ್ಟಿವ್ ಅಂಡ್ ಸೆಕ್ಯೂರಿಟಿ ಸರ್ವೀಸ್, ಬೆಂಗಳೂರು ಇವರಿಂದ ಭದ್ರತಾ ಠೇವಣಿಯನ್ನು ಪಡೆದುಕೊಳ್ಳದೆ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ:FD4PCL 2008 ಬೆಂಗಳೂರು ದಿನಾಂಕ:14.10.2008ರಂತೆ ಅಂದಾಜು ಮೊತ್ತದ ಶೇ 2.5%ರ ದರದಲ್ಲಿ ಇಒಆ ಹಾಗೂ ಗುತ್ತಿಗೆ ಕರಾರು ಮೊತ್ತದ ಶೇ 5% ರ ದರದಲ್ಲಿ ಭದ್ರತಾ ಠೇವಣಿಯನ್ನು ಗುತ್ತಿಗೆದಾರರಿಂದ ಪಡೆದು ಗುತ್ತಿಗೆ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.<br>ಮೇಲ್ಕಂಡ ಸರ್ಕಾರಿ ಆದೇಶದ ಕ್ರಮ ಸಂಖ್ಯೆ:9ರಲ್ಲಿನ KW2ರ ಕ್ಲಾಸ್ 25 ರಂತೆ ಅಂದಾಜು ಮೊತ್ತಕ್ಕೆ ಶೇ 5ರ ದರದಂತೆ ಒಟ್ಟು ರೂ.4,80,000/–ಗಳ ಭದ್ರತಾ ಠೇವಣಿಯನ್ನು ಪಡೆದು ಗುತ್ತಿಗೆ ಕರಾರು ಮಾಡಿಕೊಳ್ಳದೇ ಸದರಿ ಕೆಲಸದ ಸಂಬಂಧ ಸಲ್ಲಿಸಿರುವ ಇಒಆಯನ್ನೇ ಭದ್ರತಾ ಠೇವಣಿಯನ್ನಾಗಿ ಪರಿವರ್ತಿಸಿಕೊಳ್ಳಲಾಗುವುದೆಂದು ಗುತ್ತಿಗೆ ಷರತ್ತುಗಳು ಹಾಗೂ ನಿಬಂಧನೆಗಳ ಕ್ರಮ ಸಂಖ್ಯೆ 8 ರಲ್ಲಿ ತಿಳಿಸಿರುವುದು ಸರ್ಕಾರಿ ಆದೇಶದ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಹಾಗೂ ಗುತ್ತಿಗೆದಾರರಿಗೆ ಪರೋಕ್ಷವಾಗಿ ಲಾಭಮಾಡಿಕೊಟ್ಟಂತಾಗಿರುತ್ತದೆ. ಅಲ್ಲದೆ ಸದರಿ ಗುತ್ತಿಗೆದಾರರಿಗೆ ವಿಶ್ವವಿದ್ಯಾನಿಲಯಕ್ಕೆ ಭದ್ರತಾ ಸೇವೆಯನ್ನು ಒದಗಿಸುವ ಸಂಬಂಧ ಯಾವುದೇ ಹೊಣೆಗಾರಿಕೆಯನ್ನು ನಿಗದಿಪಡಿಸಲು ಸಾಧ್ಯವಾಗಿರುವುದಿಲ್ಲ. ಈ ಭದ್ರತಾ ಸೇವೆ ಒದಗಿಸುವ ಅಂದಾಜು ಮೊತ್ತ ರೂ.96.00 ಲಕ್ಷ ಗಳಿಗೆ ಶೇ 5 ರಂತೆ ರೂ. 4,80,000/–ಗಳನ್ನು ಭದ್ರತಾ ಠೇವಣಿಯಾಗಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿದ್ದಲ್ಲಿ ಗುತ್ತಿಗೆದಾರರಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸುವುದರ ಜೊತೆಗೆ ಭದ್ರತಾ ಠೇವಣಿ ಮೊತ್ತಕ್ಕೆ ಬರುತ್ತಿದ್ದ ಬಡ್ಡಿಯ ನಷ್ಟವನ್ನು ತಪ್ಪಿಸಬಹುದಾಗಿತ್ತು. ಈ ಸಂಬಂಧ ಆಡಳಿತಾತ್ಮಕ | 2016–17 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ಒದಗಿಸುವ ಸಂಬಂಧವಾಗಿ ಮೆ॥ಕೆನಾನ್ ಡಿಟೆಕ್ಟಿವ್ ಅಂಡ್ ಸೆಕ್ಯೂರಿಟಿ ಸರ್ವೀಸ್, ಬೆಂಗಳೂರು ರವರಿಂದ ಟೆಂಡರ್ ಮೊತ್ತ ರೂ.96.00 ಲಕ್ಷಗಳಿಗೆ ಶೇಕಡ 2.50 ರಂತೆ ಇ.ಎಂ.ಡಿ ಮೊತ್ತ ರೂ.2,40,000ವನ್ನು ಗುತ್ತಿಗೆ ಷರತ್ತುಗಳ ಹಾಗೂ ನಿಬಂಧನೆಗಳ ಕ್ರಮಾಂಕ–8ರಲ್ಲಿನ ಅಂಶವನ್ನು ಪರಿಗಣಿಸಿ ಸದರಿ ಮೊತ್ತವನ್ನು ಭದ್ರತಾ ಠೇವಣಿಯನ್ನಾಗಿ ಪರಿವರ್ತಿಸಿಕೊಂಡಿರುವುದಕ್ಕೆ ವಿಷಾದಿಸುತ್ತಾ, ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಸರ್ಕಾರಿ ಆದೇಶಗಳ ಅನ್ವಯ ಇ.ಎಂ.ಡಿ ಮತ್ತು ಭದ್ರತಾ ಠೇವಣಿಯನ್ನು ಪ್ರತ್ಯೇಕವಾಗಿ ಪಡೆದುಕೊಂಡು ಗುತ್ತಿಗೆ ಕರಾರು ನೀಡುವ ಬಗ್ಗೆ ಕ್ರಮವಹಿಸುತ್ತೇವೆ ಎಂದು ನಿವೇದಿಸುತ್ತಾ ಸದರಿ ಸಂಸ್ಥೆಯು ಗುತ್ತಿಗೆ ಕರಾರಿನ ಒಪ್ಪಂದದ ರೀತ್ಯಾ ಭದ್ರತಾ ಸೇವೆಯನ್ನು ತೃಪ್ತಿಕರವಾಗಿ ಒದಗಿಸಿ ತಮ್ಮ ಹೊಣೆಗಾರಿಕೆಯನ್ನು ಮತ್ತು ಅವಧಿಯನ್ನು ಪೂರ್ಣಗೊಳಿಸಿರುತ್ತಾರೆ. ಇದರಲ್ಲಿ ಯಾವುದೇ ಕುಂದುಕೊರತೆಗಳಿಲ್ಲದ ಪ್ರಯುಕ್ತ ರೂ.2.40 ಲಕ್ಷಗಳ ಇ.ಎಂ.ಡಿ ಮೊತ್ತವನ್ನು ಬಿಡುಗಡೆ ಮಾಡಲಾಗಿರುತ್ತದೆ.<br>ಇನ್ನು ಮುಂದೆ ತಮ್ಮ ಸಲಹೆ ಮತ್ತು ಸೂಚನೆಯ ಮೇರೆಗೆ ಸರ್ಕಾರದ ನಿಯಮಾನುಸಾರ ಕ್ರಮವಹಿಸುವುದಾಗಿ ನಿವೇದಿಸುತ್ತಾ ಸದರಿ ಪ್ರತಿಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಿದೆ. |
|---|---|---|

| | | |
|---|---|---|
| | ಕ್ರಮಕೈಗೊಂಡು ಸಂಬಂಧಿಸಿದವರಿಂದ ಆರ್ಥಿಕ ನಷ್ಟವನ್ನು ಲೆಕ್ಕಾಚಾರ ಮಾಡಿ ವಸೂಲಾತಿಗೆ ವಿವರಗಳನ್ನು ಹಾಜರುಪಡಿಸಲು ಸೂಚಿಸಿದೆ. | |

| | | |
|---|---|---|
| **58** | **<u>ಹಿರಿಯ ಸಹಾಯಕರುಗಳ ಮಂಜೂರಾತಿ ಹುದ್ದೆಗಳಿಗಿಂತ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಿ ಸ್ವತಂತ್ರ ಪ್ರಭಾರದ ಮೇಲೆ ನೇಮಕ ಮಾಡಿಕೊಂಡು ಪ್ರಭಾರ ಭತ್ಯೆ ನೀಡಿರುವುದು :- (ಆಡಳಿತ ವಿಭಾಗ)</u>**<br>ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಕಛೇರಿಗಳು, ಕಾಲೇಜುಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ವಿಭಾಗಗಳಿಗೆ ಸರ್ಕಾರದಿಂದ ಮಂಜೂರಾಗಿರುವ ಹಿರಿಯ ಸಹಾಯಕರುಗಳ ಒಟ್ಟು ಹುದ್ದೆಗಳು 29 ಹುದ್ದೆಗಳಾಗಿದ್ದು, ಪ್ರಥಮ ದರ್ಜೆ ಸಹಾಯಕರಿಂದ ನಿಯಮಾನುಸಾರ STATUTES CHAPTER-12.2 ರ SCHEDULE-2ರನ್ವಯ ಪದೋನ್ನತಿ ನೀಡಬೇಕಾಗಿರುತ್ತದೆ. ಆದರೆ ಹಿರಿಯ ಸಹಾಯಕರ ಮಂಜೂರಾದ 29 ಹುದ್ದೆಗಳಿಗೆ ಪದೋನ್ನತಿಯನ್ನು ನೀಡುವುದರ ಜೊತೆಗೆ 11 ಹಿರಿಯ ಸಹಾಯಕರ ಹುದ್ದೆಗಳಿಗೂ KCSR ನಿಯಮ 32ರನ್ವಯ ಸ್ವತಂತ್ರ ಪ್ರಭಾರ ನೀಡುವ ಮೂಲಕ ಪ್ರಭಾರ ಭತ್ಯೆ 7.5% ಅನ್ನು ನೀಡುತ್ತಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿದ್ದು, ಮೈಸೂರು ವಿಶ್ವವಿದ್ಯಾನಿಲಯದಿಂದ ಕರಡು ಅಧಿನಿಯಮವನ್ನು ರಚಿಸಿ ಸರ್ಕಾರದ ಅನುಮೋದನೆಗೆ ದಿನಾಂಕ:23.01.1999ರಲ್ಲಿ ಕಳುಹಿಸಲಾಗಿದ್ದು, ಸರ್ಕಾರದ ಅಧೀನಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ) ಇವರ ಪತ್ರ ಸಂಖ್ಯೆ:EDR/UMS99/ ಬೆಂಗಳೂರು/ ದಿನಾಂಕ:05.04.1999ರ ಪತ್ರದಲ್ಲಿ ಹುದ್ದೆಗಳನ್ನು ಸೃಜಿಸಲು ತಡೆಹಿಡಿಯಲಾಗಿದೆ. ಆದರೆ ಪುನಃ ವಿಶ್ವವಿದ್ಯಾನಿಲಯದಿಂದ ಹಿರಿಯ ಸಹಾಯಕರುಗಳ 11 ಹುದ್ದೆಗಳನ್ನು ಸೃಜಿಸಿರುವ ಕರಡು ಅಧಿನಿಯಮವನ್ನು ಸರ್ಕಾರದ ಅನುಮೋದನೆಗೆ ದಿನಾಂಕ:29.11.2002ರಲ್ಲಿ ಕಳುಹಿಸಿಕೊಡಲಾಗಿದ್ದು, ಸರ್ಕಾರದ ಅಧೀನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ–1) ರವರ ಪತ್ರ ಸಂಖ್ಯೆ:ಇಡಿ18/ಯು.ಎಂ.ಎಸ್/2003/ ಬೆಂಗಳೂರು, ದಿನಾಂಕ:23.07.2003ರ ಪತ್ರದಲ್ಲಿ ಹಿರಿಯ ಸಹಾಯಕರ 11 ಹುದ್ದೆಗಳ ಸೃಜಿಸಿರುವ ಅನುಶಾಸನ/ ಅಧಿನಿಯಮವನ್ನು (STATUTES) ಅನುಮೋದಿಸದೇ ಹಿಂದಿರುಗಿಸಿರುತ್ತಾರೆ. ವಿಶ್ವವಿದ್ಯಾನಿಲಯದಿಂದ ಮತ್ತೆ ಬೋಧಕೇತರ ವಿವಿಧ ಹುದ್ದೆಗಳನ್ನು ಉನ್ನತೀಕರಿಸಲು ಕರಡು ಪರಿನಿಯಮವನ್ನು ರಚಿಸಿ ಸರ್ಕಾರದ ಅನುಮೋದನೆಗೆ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ETS200/1998–99/ದಿನಾಂಕ:04.01.2010ರಲ್ಲಿ ಕಳುಹಿಸಲಾಗಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ | ಪ್ರಸ್ತಾವಿತ ಕಂಡಿಕೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ 2016–17 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಕಛೇರಿಗಳು ಕಾಲೇಜುಗಳು ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ವಿಭಾಗಗಳಿಗೆ ಸರ್ಕಾರದಿಂದ ಮಂಜೂರಾಗಿರುವ ಹಿರಿಯ ಸಹಾಯಕರುಗಳ ಒಟ್ಟು ಹುದ್ದೆಗಳು 29 ಹುದ್ದೆಗಳಾಗಿದ್ದು ಪ್ರಥಮದರ್ಜೆ ಸಹಾಯಕರಿಂದ ನಿಯಮನುಸಾರ STATUTES CHAPTER-12.2SCHEDULE-2ರ ಅನ್ವಯ ಪದೋನ್ನತಿ ನೀಡಬೇಕಾಗಿರುತ್ತದೆ.<br><br>ಅದರೆ ವಿಶ್ವವಿದ್ಯಾನಿಲಯದಲ್ಲಿನ ಎಲ್ಲಾ ಕಛೇರಿಗಳು ಕಾಲೇಜುಗಳು ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳಲ್ಲಿ ಸೇವೆಸಲ್ಲಿಸುತ್ತಿರುವ ಸಿಬ್ಬಂದಿಗೆ ಪದೋನ್ನತಿ ಅವಕಾಶವನ್ನು ಕಲ್ಪಿಸುವ ಸಲುವಾಗಿ ಅನುಮೋದಿತ ವಿವಿಧ ಹುದ್ದೆಗಳ 339 ಸಂಖ್ಯೆಯ ಮಿತಿಯನ್ನು ಮೀರದಂತೆಯೇ ಆಂತರಿಕವಾಗಿ 27 ಹುದ್ದೆಗಳನ್ನು ಉನ್ನತೀಕರಿಸಿ ಪದೋನ್ನತಿ ನೀಡಲು ಅವಕಾಶ ಕಲ್ಪಿಸಲಾಗಿದೆ ಮತ್ತು ಈ ರೀತಿ ಪದೋನ್ನತಿಯ ನೀಡುವ ಕ್ರಮದಿಂದದಾಗಿ ಉಂಟಾಗುವ ವೇತನ ಹೆಚ್ಚಳದಿಂದ ಭರಿಸಬೇಕಾದ ವ್ಯತ್ಯಾಸದ ಮೊತ್ತವನ್ನು ಲಭ್ಯವಿರುವ ವಿಶ್ವವಿದ್ಯಾನಿಲಯದ ಆಂತರಿಕ ನಿಧಿಯಲ್ಲಿಯೇ ಭರಿಸಲಾಗುವುದು ಎಂದು ಪತ್ರ ನಂ: ETS200/1998–99/ದಿನಾಂಕ:04.01.2010 ರ ಮಾನ್ಯ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿದೆ<br><br>ಸದರಿ ಪತ್ರದಲ್ಲಿ ಅನುಮೊದಿತವಾಗಿರುವ ಒಟ್ಟು ಹುದ್ದೆಗಳ ಮೀತಿಯಲ್ಲಿಯೇ ಹುದ್ದೆಗಳ ಮಿತಿಯನ್ನು ಮೀರದೆಯೇ ಒಟ್ಟು 339 ಹುದ್ದೆಗಳಲ್ಲಿ 27 ಭೋದಕೇತರ ಹುದ್ದೆಗಳ ಉನ್ನತೀಕರಿಸಿ, ಪದೋನ್ನತಿಗಾಗಿ ಅವಕಾಶ ಕಲ್ಪಿಸುವ ಪ್ರಸ್ತಾವನೆಯು |

| | | |
|---|---|---|
| | ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು) ಪತ್ರ ಸಂಖ್ಯೆ:ED07/UMS/2010/ಬೆಂಗಳೂರು, ದಿನಾಂಕ:27.05.2010ರಲ್ಲಿ ಪರಿನಿಯಮವನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಹಿಂದಿರುಗಿಸಲಾಗಿದ್ದರೂ ಹಾಗೂ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:FD3/SRP/98/ಬೆಂಗಳೂರು, ದಿನಾಂಕ:14.02.1998ರ ಸುತ್ತೋಲೆಯನ್ವಯ ಆರ್ಥಿಕ ಮಿತವ್ಯಯ ಚಾಲ್ತಿಯಲ್ಲಿರುವುದರಿಂದ ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಹುದ್ದೆಗಳನ್ನು ಸೃಜಿಸಲು ಅಥವಾ ಆರ್ಥಿಕ ಹೊರೆಯಾಗುವಂತಹ ಯಾವುದೇ ಕಾರ್ಯಗಳನ್ನು ಕೈಗೊಳ್ಳುವಂತಿಲ್ಲವೆಂದು ಸುತ್ತೋಲೆಯಲ್ಲಿ ಕಡ್ಡಾಯವಾಗಿ ತಿಳಿಸಿದ್ದರು ಸುಮಾರು 3 ಬಾರಿ ಸರ್ಕಾರದಿಂದ ಹಿರಿಯ ಸಹಾಯಕರ 11 ಹುದ್ದೆಗಳ ಸೃಜನೆಯ ಕರಡು ಅಧಿನಿಯಮವನ್ನು ಅನುಮೋದಿಸದೇ ಹಿಂದಿರುಗಿಸಿದ್ದರು (ತಿರಸ್ಕರಿಸಿದ್ದರೂ) 1999 ರಿಂದ 2016–17ನೇ ಸಾಲುಗಳವರೆಗೂ 11 ಹಿರಿಯ ಸಹಾಯಕರುಗಳ ಹುದ್ದೆಗಳಿಗೆ ಪ್ರಥಮ ದರ್ಜೆ ಸಹಾಯಕರುಗಳ ಹುದ್ದೆಗಳಿಂದ ಕೆ.ಸಿ.ಎಸ್.ಆರ್ ನಿಯಮ 32ರನ್ವಯ ಸ್ವತಂತ್ರ ಪ್ರಭಾರದ ಮೇಲೆ ಪದೋನ್ನತಿ ನೀಡಿ ಪ್ರಭಾರ ಭತ್ಯೆಯನ್ನು ಪಾವತಿಸಲಾಗಿರುತ್ತದೆ. ಈ ಕುರಿತು ವಿವರಣೆಯನ್ನು ನೀಡುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:36/ದಿನಾಂಕ:20.07.2018ರಲ್ಲಿ ಕೋರಲಾಗಿದ್ದರೂ ಯಾವುದೇ ಉತ್ತರವನ್ನು/ವಿವರಣೆಯನ್ನು ನೀಡಿರುವುದಿಲ್ಲ. ಹಿರಿಯ ಸಹಾಯಕರ 11 ಹುದ್ದೆಗಳು ಮಂಜೂರಾಗದಿದ್ದರೂ 2016–17ನೇ ಸಾಲಿನಲ್ಲಿ ಸ್ವತಂತ್ರ ಪ್ರಭಾರದ ಮೇಲೆ ನೇಮಕಾತಿ ಮಾಡಿ ಪ್ರಭಾರ ಭತ್ಯೆಯನ್ನು ನೀಡಿರುವ ಮೊತ್ತ **ರೂ.2,50,072/–ಗಳನ್ನು**<u>**ಅನುಬಂಧ–18ರಲ್ಲಿ**</u> ವಿವರಿಸಿರುವಂತೆ ಸಂಬಂಧಪಟ್ಟವರಿಂದ ವಸೂಲಿ ಮಾಡುವುದು ಇಲ್ಲವೇ ಸದರಿ ಹುದ್ದೆಗಳು ಸರ್ಕಾರದ ಅನುಮೋದನೆಯೊಂದಿಗೆ ಸೃಜನೆಯಾಗಿ ನಿಯಮಾನುಸಾರ ವೇತನ ಶ್ರೇಣಿಯನ್ನು ಹೊಂದಿರುವಂತಹ ದಾಖಲೆಗಳನ್ನು ಸಲ್ಲಿಸುವವರೆಗೂ ಸದರಿ ಮೊತ್ತವನ್ನು **ಆಕ್ಷೇಪಣೆಯಲ್ಲಿಡಲಾಗಿದೆ**. ಹಾಗೂ 1999 ರಿಂದ 2015–16ನೇ ಸಾಲುಗಳವರೆಗೆ ಸ್ವತಂತ್ರ ಪ್ರಭಾರದ ಮೇಲೆ ಹಿರಿಯ ಸಹಾಯಕರ 11 ಹುದ್ದೆಗಳಿಗೆ ನೇಮಕ ಮಾಡಿ ಪ್ರಭಾರ ಭತ್ಯೆ ಪಾವತಿಸಿದ್ದಲ್ಲಿ ಅವರ ಮೇಲೂ ಇದೆ ಮಾದರಿಯ ಕ್ರಮವನ್ನು ಅನುಸರಿಸುವುದು. | 24/10/2009, 28/10/2009 ಮತ್ತು ಅರ್ಥಿಕ ಸಮಿತಿಯ ಸಭೆಯಲ್ಲಿ ಅನುಮೋದಿತವಾಗಿರುತ್ತದೆ ಅಂಶವನ್ನು ಉಲ್ಲೇಖಿಸಲಾಗಿದೆ.<br><br>ಅಲ್ಲದೇ ಈ ಬಗ್ಗೆ ವಿಶ್ವವಿದ್ಯಾನಿಲಯದ ಪರಿನಿಯಮದಲ್ಲಿ ಭೋದಕೇತರ ಸಿಬ್ಬಂದಿಗೆ ಪದೋನ್ನತಿ ಕಲ್ಪಿಸುವ ಪರಿನಿಯಮಕ್ಕೆ ಅನುಮೋದನೆ ನೀಡಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ ಇಲಾಖೆ) ಬಹುಮಹಡಿ ಕಟ್ಟಡ ಬೆಂಗಳೂರು ಇವರಿಗೆ ಪತ್ರ ನಂ: ETS200/1998–99/ದಿನಾಂಕ:26.09.2016 ಪತ್ರ ಬರೆಯಲಾಗಿದೆ.<br><br>ಸದರಿ ಪತ್ರದಲ್ಲಿ ಭೋದಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡಬೇಕಾದ ಅವಶ್ಯಕತೆಯನ್ನು ಸಮರ್ಥಿಸುವ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೇಂದ್ರಗಳು, ಸ್ನಾತಕೋತ್ತರ ಡಿಪಾರ್ಟ್‌ಮೆಂಟ್‌ಗಳಲ್ಲಿ, ವಸತಿ ನಿಲಯಗಳಲ್ಲಿ ಗಣನೀಯವಾಗಿ ಹೆಚ್ಚಳ ಅಗಿರುವ ವಿದ್ಯಾರ್ಥಿಗಳ ಸಂಖ್ಯೆ, ಇದರಿಂದಾಗಿ ಅಡಳಿತಾತ್ಮಕ ಹೆಚ್ಚಳವಾಗಬೇಕಾದ ಹುದ್ದೆಗಳ ಅನಿವಾರ್ಯತೆ ಅಂಶವನ್ನು ಪ್ರಸ್ತಾಪಿಸಲಾಗಿದೆ.<br><br>ಅಲ್ಲದೇ ಈ ರೀತಿಯಾಗಿ ಪದೋನ್ನತಿ ನೀಡಿವುದರಿಂದ ಪದೋನ್ನತಿ ಪಡೆಯುವ ಸಿಬ್ಬಂದಿಯ ಒಂದು ವಾರ್ಷಿಕ ವೇತನ ಬಡ್ತಿಯ ಹೆಚ್ಚಳವನ್ನು ಮಾತ್ರ ಪಡೆಯುವುದರಿಂದ ಸರ್ಕಾರದಿಂದ ಹೆಚ್ಚುವರಿ ಅನುದಾನ ಕೋರಿಕೆ ಪ್ರಸ್ತಾವನೆ ಇರುವುದಿಲ್ಲ ಎಂಬ ಅಂಶವನ್ನು ಉಲ್ಲೇಖಿಸಲಾಗಿದೆ.<br><br>ಸದರಿ ಪತ್ರದಲ್ಲಿನ ಅಂಶವನ್ನು ಸಮರ್ಥಿಸಲು ವಿವರಣಾ ಪತ್ರವನ್ನು ಸಲ್ಲಿಸಲಾಗಿದೆ ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿರುವ ಪರಿನಿಯಮಕ್ಕೆ (STATUTES)ಅನುಮೋದನೆ ನಿರೀಕ್ಷೆಯಲ್ಲಿ 2016–17 ನೇ ಸಾಲಿನಲ್ಲಿ ಭೋದಕೇತರ ಸಿಬ್ಬಂದಿಗೆ ಪಾವತಿಸಲಾಗಿರುವ ಸ್ವತಂತ್ರ ಪ್ರಭಾರಭತ್ಯೆ, ಪಾವತಿ ಆಕ್ಷೇಪಣೆ ಮೊತ್ತ ಒಟ್ಟು ರೂ.2,50,072/– ಗಳನ್ನು ಕೈ ಬಿಡಲು ಕೋರಿದೆ. |

| | | |
|---|---|---|
| **59** | **<u>ಉಪಕುಲಸಚಿವರುಗಳ ಹುದ್ದೆಗಳಿಗೆ ಪರಿನಿಯಮಕ್ಕೆ (STATUTES) ವಿರುದ್ಧವಾಗಿ ಸ್ವತಂತ್ರ ಪ್ರಭಾರದ ಮೇಲೆ ಬಡ್ತಿ ನೀಡಿ ಪ್ರಭಾರ ಭತ್ಯೆಯನ್ನು ಪಾವತಿಸಿರುವುದು :– (ಆಡಳಿತ ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯಕ್ಕೆ ಉಪಕುಲಸಚಿವರುಗಳ ಹುದ್ದೆಗಳು ಸರ್ಕಾರದಿಂದ ಒಟ್ಟು 8 ಹುದ್ದೆಗಳು ಮಂಜೂರಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಇಡಿ01/ಯು.ಎಂ.ಎಸ್/2010/04.05.2012ರಲ್ಲಿ ಶೇ 75 ರಷ್ಟು ಹುದ್ದೆಗಳನ್ನು ಸಹಾಯಕ ಕುಲಸಚಿವರುಗಳ ಹುದ್ದೆಗಳಿಂದ ಮುಂಬಡ್ತಿಯನ್ನು ಹಾಗೂ ಬೋಧಕವರ್ಗದವರಿಂದ ಶೇ 25ರಷ್ಟನ್ನು ನಿಯೋಜನೆ ಮಾಡಿಕೊಳ್ಳುವಂತೆ ಪರಿನಿಯಮವನ್ನು ಮಾನ್ಯ ಕುಲಾಧಿಪತಿಗಳು ಅನುಮೋದಿಸಲಾಗಿದ್ದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 29 (2) 41 (1) (2)ರನ್ವಯ ಪರಿನಿಯಮವನ್ನು (STATUTES) ರಚಿಸಿ ದಿನಾಂಕ:28.04.2012ರಲ್ಲಿ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ಅದರನ್ವಯ ಉಪಕುಲಸಚಿವರ ಹುದ್ದೆಗಳಿಗೆ ಮುಂಬಡ್ತಿ ನೀಡುವಾಗ 6 ಹುದ್ದೆಗಳನ್ನು ಸಹಾಯಕ ಕುಲಸಚಿವರುಗಳಿಗೆ ಪದೋನ್ನತಿಯನ್ನು ನೀಡಿದ್ದು, 2 ಹುದ್ದೆಗಳಿಗೆ ಸಹಾಯಕ ಕುಲಸಚಿವರುಗಳಿಗೆ ಕೆ.ಸಿ.ಎಸ್.ಆರ್ ನಿಯಮ 32ರನ್ವಯ ಸ್ವತಂತ್ರ ಪ್ರಭಾರದ ಮೇಲೆ ಪದೋನ್ನತಿಯನ್ನು ನೀಡಲಾಗಿದ್ದು, ಶೇ 7.5 ರಷ್ಟು ಪ್ರಭಾರ ಭತ್ಯೆಯನ್ನು ಪಾವತಿಸಿರುವುದಕ್ಕೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:33/19.07.2018ರಲ್ಲಿ ಕೋರಲಾಗಿದ್ದು, ದಿನಾಂಕ:31.07.2018ರಲ್ಲಿ ನೀಡಲಾಗಿರುವ ಅನುಪಾಲನೆಯಲ್ಲಿ ಕೋರಿರುವ ಎಲ್ಲಾ ಮಾಹಿತಿಗಳಿಗೆ ಉತ್ತರಿಸದಿರುವುದರಿಂದ ಮಂಜೂರಾತಿ ಹುದ್ದೆಗಳ ಅನುಪಾತಕ್ಕಿಂತ (ಶೇ75 : ಶೇ25 ರ ಅನುಪಾತ) ಹೆಚ್ಚುವರಿ ಹುದ್ದೆಗಳಿಗೆ ಸ್ವತಂತ್ರ ಪ್ರಭಾರದ ಮೇಲೆ ಪದೋನ್ನತಿ ನೀಡಿ ಪ್ರಭಾರ ಭತ್ಯೆಯನ್ನು ಶೇ7.5 ರಂತೆ **ರೂ.1,77,872/–ಗಳನ್ನು** ನಿಯಮ ಉಲ್ಲಂಘಿಸಿ ಪಾವತಿಸಲಾಗಿರುವ ಮೊತ್ತವನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡುವುದು ಇಲ್ಲವೇ ಸದರಿ ಹುದ್ದೆಗಳು ಸರ್ಕಾರದ ಅನುಮೋದನೆಯೊಂದಿಗೆ ಸೃಜನೆಯಾಗಿ ನಿಯಮಾನುಸಾರ ವೇತನ ಶ್ರೇಣಿಯನ್ನು | ಪ್ರಸ್ತುತ ಕಂಡಿಕೆಯಲ್ಲಿ ವಿಶ್ವವಿದ್ಯಾನಿಲಯದ ಉಪಕುಲಸಚಿವ ಹುದ್ದೆಗೆ ಪರಿನಿಯಮ ವಿರುದ್ದವಾಗಿ ಸ್ವತಂತ್ರ ಪ್ರಭಾರದ ಮೇಲೆ ಬಡ್ತಿ ನೀಡಿ ಪ್ರಭಾವ ಭತ್ಯೆಯನ್ನು ನೀಡಿರುವುದರ ಬಗ್ಗೆ ಪಾವತಿ ಮೊತ್ತ ರೂ.1,77,872/– ಆಕ್ಷೇಪಿಸಲಾಗಿದೆ<br><br>ಆದರೆ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲ ಸಚಿವ, /ಉಪಕುಲ ಸಚಿವ(ಪರೀಕ್ಷಾಂಗ), ಮತ್ತು ಸಹಾಯ ಕುಲಸಚಿವ, ಸಹಾಯಕ ಕುಲಸಚಿವ(ಪರೀಕ್ಷಾಂಗ) ಇವರುಗಳ ನೇಮಕಾತಿ ಪದೋನ್ನತಿ ನೀಡಿರುವ ಅಧಿನಿಯಮಕ್ಕೆ ಸರ್ಕಾರದ ಅಧೀನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು ಕರ್ನಾಟಕ ಸರ್ಕಾರದ ಸಚಿವಾಲಯ ಬೆಂಗಳೂರು) ಇವರ ಪತ್ರಸಂಖ್ಯೆ:ಇಡಿ01/ಯು.ಎಂ.ಎಸ್/2010/04.05.2012ರಲ್ಲಿ ಘನತವೆತ್ತ ಕುಲಾಧಿಪತಿಗಳಿಂದ (ಮಾನ್ಯ ರಾಜ್ಯ ಪಾಲರಿಂದ) ಮನವಿಯನ್ನು ಸಲ್ಲಿಸಲಾಗಿದೆ.<br><br>ಏಕಕಾಲದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಉಪಕುಲ ಸಚಿವ, ಉಪಕುಲ ಸಚಿವ (ಪರೀಕ್ಷಾಂಗ), ಸಹಾಯಕ ಕುಲಸಚಿವ (ಪರೀಕ್ಷಾಂಗ) ಹುದ್ದೆಗಳು ನಿವೃತ್ತಿಯ ಕಾರಣದಿಂದ ತೆರವಾಗಿರುವ ಸಂಧರ್ಭಗಳಲ್ಲಿ ಮಾತ್ರ ಜ್ಯೇಷ್ಠತೆಯನ್ನು ಅನುಸರಿಸಿ ವಿಶ್ವವಿದ್ಯಾನಿಲಯದ ಆಡಳಿತ ಕಾರ್ಯಗಳು ಸೂಸೂತ್ರವಾಗಿ ನಡೆಯಲೇಬೇಕಾದ ತುರ್ತು ಅವಶ್ಯಕತೆಗಳನ್ನು ಪರಿಗಣಿಸಿ ಪ್ರಭಾರ ಭತ್ಯೆ ಅಧಾರಿತ ಪದೋನ್ನತಿಯನ್ನು ನೀಡಲಾಗಿದೆ.<br><br>ಈ ಸಂಬಂಧಿತ ಪ್ರಸ್ತಾವನೆಗೆ ಕುಲಾಧಿಪತಿಗಳ ಅನುಮೋದನೆ ನಿರೀಕ್ಷೆಯಲ್ಲಿದೆ ಈ ವಿವರವನ್ನು ಮುಂದಿನ ಲೆಕ್ಕಾತನಿಖೆಗೆ ಹಾಜರುಪಡಿಸಲಾಗುವುದು<br><br>ಅದ್ದರಿಂದ ಸದರಿ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ ಅಲ್ಲದೇ ಕಳೆದ 3 |

| | | |
|---|---|---|
| | ಹೊಂದಿರುವಂತಹ ದಾಖಲೆಗಳನ್ನು ಸಲ್ಲಿಸುವವರೆಗೂ ಸದರಿ ಮೊತ್ತವನ್ನು **ಆಕ್ಷೇಪಣೆಯಲ್ಲಿಡಲಾಗಿದೆ.** ಹಾಗೂ ಇಂತಹ ಹುದ್ದೆಗಳು ಪ್ರತಿ ವರ್ಷ ಎಷ್ಟು ಸೃಜನೆಯಾಗುತ್ತಿವೆ ಮತ್ತು ಇದಕ್ಕೆ ಅನುಮೋದನೆ ನೀಡುವ ಪ್ರಾಧಿಕಾರದ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ–19ರಲ್ಲಿ** ನೀಡಲಾಗಿದೆ. | ವರ್ಷಗಳಿಂದ ಪ್ರಭಾರ ಭತ್ಯೆ ಆಧಾರಿತ ಪದೋನ್ನತಿ ನೀಡಲಾಗಿಲ್ಲ ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ. |

| | | |
|---|---|---|
| **60** | **ಪ್ರೊ॥ ಶಿವಬಸವಯ್ಯ ರವರಿಗೆ ಹೆಚ್ಚುವರಿ ಮನೆ ಬಾಡಿಗೆ ಭತ್ಯೆಯ ಪಾವತಿಸಿರುವ ಬಗ್ಗೆ:– (ಆಡಳಿತ ವಿಭಾಗ)**<br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪ್ರೊ॥ ಶಿವಬಸವಯ್ಯ, ನಿರ್ದೇಶಕರು, ಡಾ॥ಬಿ.ಆರ್. ಅಂಬೇಡ್ಕರ್, ಸ್ನಾತಕೋತ್ತರ ಪ್ರಾದೇಶಿಕ ಕೇಂದ್ರ, ಚಾಮರಾಜನಗರದಲ್ಲಿ ದಿನಾಂಕ:23.01.2012 ರಿಂದ 2016–17ನೇ ಸಾಲುಗಳವರೆಗೂ ಕಾರ್ಯ ನಿರ್ವಹಿಸುತ್ತಿದ್ದು, ಇವರಿಗೆ ವೇತನ ಭತ್ಯೆಗಳನ್ನು ಪಾವತಿಸುವಾಗ ಮನೆ ಬಾಡಿಗೆ ಭತ್ಯೆಗಳನ್ನು ಶೇ 16% ರಷ್ಟು ಮೂಲವೇತನಕ್ಕೆ ಪಾವತಿಸಿರುವುದನ್ನು (40890 + 10000) ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ:ಈಆ 14/ಖಖಕ/2013/02.09.2013ರನ್ವಯ 'ಸಿ' ದರ್ಜೆ ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರುಗಳಿಗೆ ಶೇಕಡ 7% ರಷ್ಟು ಮತ್ತು ದಿನಾಂಕ:01.10.2013 ರಿಂದ ಶೇ 10% ರಷ್ಟನ್ನು ಮನೆ ಬಾಡಿಗೆ ಭತ್ಯೆಯನ್ನು ಪಾವತಿಸಬೇಕಾಗಿರುತ್ತದೆ.<br>ಆದರೆ ದಿನಾಂಕ:01.02.2012 ರಿಂದ 31.03.2017ರವರೆಗೆ ಚಾಮರಾಜನಗರದ ಪ್ರಾದೇಶಿಕ ಕೇಂದ್ರದಲ್ಲಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರೊ॥ ಶಿವಬಸವಯ್ಯರವರಿಗೆ ಮನೆ ಬಾಡಿಗೆ ಭತ್ಯೆಯನ್ನು ಶೇ 7 ಮತ್ತು ಶೇ 10ರ ದರದಲ್ಲಿ ಪಾವತಿಸದೆ ಬಿ–2 ದರ್ಜೆಯ ನಗರಗಳ ಮನೆ ಬಾಡಿಗೆ ಭತ್ಯೆ ಶೇ 16 ಮತ್ತು ಶೇ 20ರ ದರದಲ್ಲಿ ಪಾವತಿಸಿರುವುದು ಸರ್ಕಾರದ ಆದೇಶವನ್ನು ಉಲ್ಲಂಘಿಸಲಾಗಿರುವುದಕ್ಕೆ ಸೂಕ್ತ ವಿವರಣೆಯನ್ನು ನಿಡುವಂತೆ ಕೋರಿ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:61/ದಿನಾಂಕ:07.08.2018 ರಂದು ಕೋರಲಾಗಿದ್ದು, ಕೋರಲಾಗಿರುವ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿ ದಿನಾಂಕ:01.02.2012 ರಿಂದ 31.03.2017ರವರೆಗೆ ಹೆಚ್ಚುವರಿಯಾಗಿ ರೂ.2,08,647/–ಗಳನ್ನು ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ಚಾಮರಾಜ ನಗರದಲ್ಲಿ ಪೂರ್ಣಾವಧಿಗೆ ಕಾರ್ಯ ನಿರ್ವಹಿಸುತ್ತಿರುವ ಪ್ರೊ॥ ಶಿವಬಸವಯ್ಯ ರವರಿಗೆ ಮೈಸೂರು ಜಿಲ್ಲೆಗೆ ನಿಗದಿಯಾಗಿರುವ ಮನೆ ಬಾಡಿಗೆ ಭತ್ಯೆಯನ್ನು ಪಾವತಿಸಲು ಸಿಂಡಿಕೇಟ್ ಅನುಮೋದನೆ ಪಡೆದಿರುವುದನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41(5), (6), (7)ರನ್ವಯ ಸರ್ಕಾರ ಹಾಗೂ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ ಪ್ರೊ॥ ಶಿವಬಸವಯ್ಯ ನಿರ್ದೇಶಕರು ಡಾ॥ಬಿ.ಆರ್. ಅಂಬೇಡ್ಕರ್, ಸ್ನಾತಕೋತ್ತರ ಪ್ರಾದೇಶಿಕ ಕೇಂದ್ರ, ಚಾಮರಾಜನಗರ ಇವರಿಗೆ ಹೆಚ್ಚುವರಿಯಾಗಿ ಪಾವತಿಯಾಗಿರುವ ಮನೆ ಬಾಡಿಗೆ ಭತ್ಯೆ ಗೆ ಸಂಬಂಧಿಸಿದ್ದಾಗಿರುತ್ತದೆ<br>ಈ ಸಂಬಂಧ ವಿವರಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗುವುದು. |

| | | |
|---|---|---|
| | ಹೆಚ್ಚುವರಿ ಪಾವತಿಸಿರುವ ಮನೆಬಾಡಿಗೆ ಭತ್ಯೆ **ರೂ.2,08,647/–ಗಳನ್ನು** ಪ್ರೊ॥ ಶಿವಬಸವಯ್ಯ ರವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡುವುದು ಇಲ್ಲವೇ ಸದರಿ ಹುದ್ದೆಗಳು ಸರ್ಕಾರದ ಅನುಮೋದನೆಯೊಂದಿಗೆ ಸೃಜನೆಯಾಗಿ ನಿಯಮಾನುಸಾರ ವೇತನ ಶ್ರೇಣಿಯನ್ನು ಹೊಂದಿರುವಂತಹ ದಾಖಲೆಗಳನ್ನು ಸಲ್ಲಿಸುವವರೆಗೂ ಸದರಿ ಮೊತ್ತವನ್ನು **ಆಕ್ಷೇಪಣೆಯಲ್ಲಿಡಲಾಗಿದೆ.** ಪ್ರತಿ ಸ್ನಾತಕೋತ್ತರ ಕೇಂದ್ರಗಳಲ್ಲಿ ಈ ಮಾದರಿಯ ಹುದ್ದೆಗಳು ಎಷ್ಟು ಸೃಜನೆಯಾಗಿರುತ್ತದೆ ಎಂದು ವಿವರಣೆ ನೀಡಲು ಸೂಚಿಸಿದೆ. ವಿವರಗಳನ್ನು **ಅನುಬಂಧ–20ರಲ್ಲಿ** ವಿವರಿಸಲಾಗಿದ್ದು, ವರದಿಗೆ ಲಗತ್ತಿಸಿದೆ. | |

| | | |
|---|---|---|
| **61** | <u>**ಸ್ನಾತಕೋತ್ತರ ಪ್ರಾದೇಶಿಕ ಕೇಂದ್ರದ ನಿರ್ದೇಶಕರುಗಳಿಗೆ ಸಂಭಾವನೆ ಪಾವತಿಸಿರುವುದು :–**</u><br><u>**(ಆಡಳಿತ ವಿಭಾಗ)**</u><br>ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಪ್ರಾದೇಶಿಕ ಕೇಂದ್ರಗಳಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕರುಗಳಿಗೆ ಮಾಹೆಯಾನ ರೂ.2,000/–ಗಳಂತೆ ಗೌರವ ಸಂಭಾವನೆ ಪಾವತಿಸಲಾಗಿರುವುದನ್ನು 2016–17ನೇ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿದ್ದು, ಕೆ.ಸಿ.ಎಸ್.ಆರ್ ನಿಯಮಾವಳಿಯ ನಿಯಮ 28 (ಎ), 28 (ಬಿ), 28 (ಸಿ), 28 (E)ಗಳನ್ವಯ ನಿರ್ದೇಶಕರ ಹುದ್ದೆಯು ಸಹ ಸರದಿ ರೂಪದಲ್ಲಿ 2 ವರ್ಷಕ್ಕೊಮ್ಮೆ ಬದಲಾವಣೆ ಮಾಡುವ ಮೂಲಕ ಬೋಧಕ ವೃಂದದವರನ್ನು ನೇಮಕ ಮಾಡಲಾಗುವುದರಿಂದ ಯು.ಜಿ.ಸಿ ವೇತನ ಪಡೆಯತ್ತಿರುವ ಬೋಧಕವೃಂದದವರಿಗೆ ಗೌರವ ಸಂಭಾವನೆ ಪಾವತಿಸಲು ನಿಯಮಾವಳಿಯಲ್ಲಿ ಅವಕಾಶವಿಲ್ಲದಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಪ್ರಾದೇಶಿಕ ಕೇಂದ್ರಗಳ ನಿರ್ದೇಶಕರುಗಳಿಗೆ ಪಾವತಿಸಲಾದ **ರೂ.70,000/–ಗಳನ್ನು** ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡುವುದು ಇಲ್ಲವೇ ಸದರಿ ಹುದ್ದೆಗಳು ಸರ್ಕಾರದ ಅನುಮೋದನೆಯೊಂದಿಗೆ ಸೃಜನೆಯಾಗಿ ನಿಯಮಾನುಸಾರ ವೇತನ ಶ್ರೇಣಿಯನ್ನು ಹೊಂದಿರುವಂತಹ ದಾಖಲೆಗಳನ್ನು ಸಲ್ಲಿಸುವವರೆಗೂ ಸದರಿ ಮೊತ್ತವನ್ನು **ಆಕ್ಷೇಪಣೆಯಲ್ಲಿಡಲಾಗಿದೆ.** ವಿವರಗಳನ್ನು <u>**ಅನುಬಂಧ–21ರಲ್ಲಿ**</u> ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ ಸ್ನಾತಕೋತ್ತರ ಪ್ರಾದೇಶಿಕ ಕೇಂದ್ರದ ನಿರ್ದೇಶಕರುಗಳಿಗೆ ಸಂಭಾವನೆ ಪಾವತಿಸಿರುವುದಕ್ಕೆ ಸಂಬಂಧಿಸಿದ್ದಗಿರುತ್ತದೆ.<br><br>ಈ ಸಂಬಂಧ ವಸೂಲಾತಿ ವಿವರಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗುವುದು. |

| | | |
|---|---|---|
| **62** | **<u>ಪರೀಕ್ಷಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಖಾಯಂ ನೌಕರರನ್ನು ಜಾಗೃತದಳದ ಸದಸ್ಯರನ್ನಾಗಿ ನೇಮಕ ಮಾಡಿಕೊಂಡು ನಿಯಮಬಾಹಿರವಾಗಿ ಸಂಭಾವನೆಯನ್ನು ಪಾವತಿ ಮಾಡಿರುವುದು :– (ಪರೀಕ್ಷಾ ವಿಭಾಗ)</u>**<br>2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಓಚರ್‌ಗಳನ್ನು ಪರಿಶೀಲಿಸಲಾಗಿ, ಬಿ.ಆರ್ ಸಂಖ್ಯೆ:228/2016–17 ದಿನಾಂಕ:21.12.2016ರಲ್ಲಿ ಪರೀಕ್ಷಾ ವಿಭಾಗದ ಖಾಯಂ ಅಧಿಕಾರಿಗಳು ಹಾಗೂ ನೌಕರರನ್ನು ನವೆಂಬರ್, ಡಿಸೆಂಬರ್–2016ರ ಪದವಿ ಪರೀಕ್ಷೆಗಳಿಗೆ ವಿಶೇಷ ಜಾಗೃತದಳದ ಸದಸ್ಯರನ್ನಾಗಿ ನೇಮಕ ಮಾಡಿಕೊಂಡು ದಿನವೊಂದಕ್ಕೆ ರೂ.700/– ರಂತೆ ಒಟ್ಟು ರೂ.29,400/– ಗಳನ್ನು ಸಂಭಾವನೆಯನ್ನಾಗಿ ಪಾವತಿ ಮಾಡಲಾಗಿದೆ.<br>ಪರೀಕ್ಷಾ ಕರ್ತವ್ಯವು ನೌಕರರ ದಿನನಿತ್ಯ ಕರ್ತವ್ಯದ ಒಂದು ಭಾಗವಾಗಿರುತ್ತದೆ. ಕೆ.ಸಿ.ಎಸ್.ಆರ್ ನಿಯಮ 28 (ಸಿ) ಗೆ ರನ್ವಯ ವಿಶೇಷ ಕರ್ತವ್ಯಗಳಿಗೆ ಸರ್ಕಾರದ ವಿಶೇಷ ಆದೇಶದ ಮೂಲಕ ಅನ್ಯತಾ ಉಪಬಂಧಿಸಿದ್ದನ್ನು ಬಿಟ್ಟು ವಿಶೇಷ ಅನುಮತಿಯಿಲ್ಲದೇ ಯಾವುದೇ ಸಂಭಾವನೆಯನ್ನು ಪಾವತಿಸುವಂತಿಲ್ಲ. ಸದರಿ ಸಂಭಾವನೆಗೆ ಸಂಬಂಧಿಸದಿಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41(5) (6) (7) ರನ್ವಯ ಆದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರ/ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆದಿರುವ/ಪರಿನಿಯಮ ಮಾಡಿಕೊಂಡಿರುವ ಆದೇಶದ ಪ್ರತಿಗಳನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:25/2018–19 ದಿನಾಂಕ:01.10.2018ರಲ್ಲಿ ಕೋರಲಾಗಿ, ಯಾವುದೇ ಉತ್ತರವನ್ನು ಹಾಜರುಪಡಿಸಿರುವುದಿಲ್ಲ.<br>ಕೆ.ಸಿ.ಎಸ್.ಆರ್ ನಿಯಮ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ ಉಲ್ಲಂಘಿಸಿ, ಪಾವತಿಸಲಾಗಿರುವ ಸಂಭಾವನೆಯ ಒಟ್ಟು ಮೊತ್ತ **ರೂ.29,400/–ಗಳನ್ನು ಆಕ್ಷೇಪಣೆಗೆ** ಸೂಚಿಸಿದ್ದು, ವಿವರಗಳನ್ನು **<u>ಅನುಬಂಧ–22ರಲ್ಲಿ</u>** ವಿವರಿಸಿದೆ. | ದಿನಾಂಕ.26.12.2015ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯವನ್ನನುಸರಿಸಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ.ಎಲ್.5/142/2012–13 ದಿನಾಂಕ.27.1.2016ರ ಅನ್ವಯದಂತೆ ಜಾಗೃತ ದಳದ ಸದಸ್ಯರಾಗಿ ನೇಮಕಗೊಂಡು ಕಾರ್ಯನಿರ್ವಹಿಸಿದವರಿಗೆ ದಿನ ಒಂದಕ್ಕೆ ರೂ.700/– ರಂತೆ ಸಂಭಾವನೆಗಳನ್ನು ಪಾವತಿಸದೆ ನಿಯಾಮಾನುಸಾರ ಖಾಯಮ ನೌಕರರಿಗೆ ಸಂಬಾವನೆ ಪಾವತಿಸುವುದು ಬರುವುದಿಲ್ಲವಾಗಿದ್ದರೂ ಸಹ ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆದು ಬಂದಿರುವಂತೆ ಸಂಭಾವನೆಗಳನ್ನು ಪಾವತಿಸುವ ಅನಿವಾರ್ಯ ಇರುತ್ತದೆ.<br>ಈ ಸಂಬಂಧ ಸರ್ಕಾರದ ಆದೇಶ ಸಂಖ್ಯೆ.ಇ.ಡಿ30 ಯು.ಎನ್.ಇ.2000 ದಿನಾಂಕ.19.5.2003ರ ಅನ್ವಯದಂತೆ ಸಂಭಾವನೆ ಪಾವತಿಗಳನ್ನು ವಿಶ್ವವಿದ್ಯಾನಿಲಯದ ಅಂತರಿಕ ಸಂಪನ್ಮೂಲದಿಂದಲೇ ಭರಿಸಲಾಗುತ್ತಿದ್ದು ಸರ್ಕಾರದಿಂದ ಸಂಬಂಧ ಅನುದಾನಕೋರಲಾಗುತ್ತಿರುವುದಿಲ್ಲ ದಿನಾಂಕ.19.5..2003ರ ಸರ್ಕಾರಿ ಆಧೇಶದ ಪ್ರತಿಯನ್ನು ಲಗತ್ತಿಸಿ ಸಲ್ಲಿಸುತ್ತಾ ರೂ.29,400/–ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |

| | | |
|---|---|---|
| 63 | **ಪರೀಕ್ಷಾ ಕಾರ್ಯಗಳಿಗೆ ಹಾಜರಾದ ಪ್ರಾಧ್ಯಾಪಕರುಗಳಿಗೆ/ಅಧಿಕಾರಿಗಳಿಗೆ ದಿನಭತ್ಯೆ/ಪ್ರಯಾಣ ಭತ್ಯೆಗಳ ಜೊತೆಗೆ ಹೆಚ್ಚುವರಿ ಸಂಭಾವನೆಯನ್ನು ಪಾವತಿಸಿರುವುದು :– (ಪರೀಕ್ಷಾ ವಿಭಾಗ)**<br>2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಓಚರ್‌ಗಳನ್ನು ಪರಿಶೀಲಿಸಲಾಗಿ 2016–17ನೇ ಸಾಲಿನ ಪರೀಕ್ಷಾ ಕಾರ್ಯ ನಡೆಸಲು ವಿವಿಧ ಔಟ್‌ರೀಚ್ ಪರೀಕ್ಷಾ ಕೇಂದ್ರಗಳಿಗೆ ಚೀಫ್ ಸೂಪರಿಡೆಂಟ್ ಆಗಿ ನೇಮಕ ಮಾಡಿಕೊಂಡಿರುವ ಪ್ರಾಧ್ಯಾಪಕರು ಹಾಗೂ ಅಧಿಕಾರಿಗಳಿಗೆ ಪ್ರಯಾಣ ಭತ್ಯೆ, ದಿನ ಭತ್ಯೆಯ ಜೊತೆಗೆ ಸಂಭಾವನೆಯನ್ನು ಪಾವತಿಸಿದ್ದು, ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:27/2018–19 ದಿನಾಂಕ:04.10.2018ರಲ್ಲಿ ನೀಡಲಾಗಿದೆ.<br>ಯು.ಜಿ.ಸಿ ವೇತನ ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ 6ನೇ ಯು.ಜಿ.ಸಿ ವೇತನ ಪರಿಷ್ಕರಣೆ ನಿಯಮಾವಳಿಗಳಲ್ಲಿ ಯಾವುದೇ ಸಂಭಾವನೆ ಪಾವತಿಸಲು ಅವಕಾಶವಿರುವುದಿಲ್ಲ. ಹಾಗೂ ಕೆ.ಸಿ.ಎಸ್.ಆರ್ ನಿಯಮ 498 ರಿಂದ 516ರ ನಿಯಮಗಳನ್ವಯ ವಾಸ್ತಾವಿಕ ತಂಗುವಿಕೆಗೆ ವೇತನ ಶ್ರೇಣಿ ಅನುಗುಣವಾಗಿ ಲೆಕ್ಕಚಾರ ಮಾಡಿ, ಪ್ರವಾಸದ ದಿನಭತ್ಯೆಯನ್ನು ಪಾವತಿಸಬೇಕಾಗಿರುತ್ತದೆ. ಕೆ.ಸಿ.ಎಸ್.ಆರ್ ನಿಯಮ 28ರನ್ವಯ, ಖಾಯಂ ಸರ್ಕಾರಿ ನೌಕರನು ಪ್ರತಿನಿತ್ಯ ತಾನು ನಿರ್ವಹಿಸುವ ಕರ್ತವ್ಯದ ಹೆಚ್ಚುವರಿ ಕೆಲಸಕ್ಕೆ ಯಾವುದೇ ಸಂಭಾವನೆಯನ್ನು ಪಡೆಯಲು ಅವಕಾಶವಿರುವುದಿಲ್ಲ, ದಿನಭತ್ಯೆ ಮತ್ತು ಪ್ರಯಾಣಭತ್ಯೆಯನ್ನು ಪಾವತಿಸಲು ನಿಯಾಮವಳಿಯಲ್ಲಿ ಅವಕಾಶವಿದ್ದು, ಸಂಭಾವನೆಯನ್ನು ಪಾವತಿಸಲು ಅವಕಾಶವಿಲ್ಲದಿರುವುದರಿಂದ ಹಾಗೂ ಈ ಪಾವತಿ ಕ್ರಮವು ಕೆ.ಸಿ.ಎಸ್.ಆರ್ ನಿಯಮ 28 (ಎ) (ಬಿ) (ಸಿ) ಮತ್ತು (ಇ)ಗಳನ್ವಯ ನಿಯಮಗಳ ಉಲ್ಲಂಘನೆಯಾಗಿರುತ್ತದೆ. ಮೊತ್ತ **ರೂ.1,94,200/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸುವುದು ಇಲ್ಲವೆ** ಸಿಂಡಿಕೇಟ್ ನಿರ್ಣಯವನ್ನುಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7) ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯುವವರೆಗೂ **ಆಕ್ಷೇಪಣೆಯಲ್ಲಿಡಲಾಗುತ್ತದೆ** ವಿವರಗಳನ್ನು **ಅನುಬಂಧ–23ರಲ್ಲಿ** ವಿವರಿಸಿದೆ. | 2016–17ನೇ ಸಾಲಿನಲ್ಲಿ ವಿವಿಧ ಜಾಟ್‌ರೀಚ್ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಕಾರ್ಯಕ್ಕಗಿ ನಿಯೋಜನೆಗೊಂಡ ಬೋಧಕ ಮತ್ತು ಬೋಧಕಕೇತರ ನೌಕರರಿಗೆ ವಿಶ್ವವಿದ್ಯಾನಿಲಯವು ನಿಗಧಿ ಪಡಿಸಿದ ದರದಲ್ಲಿ ಪ್ರಯಾಣ ಭತ್ಯೆ ದಿನ ಭತ್ಯೆ ಮತ್ತು ಸಂಭಾವನೆಗಳನ್ನು ಪಾವತಿ ಮಾಡಿದೆ ಈ ಕಂಡಿಕೆಯಲ್ಲಿ ತಿಳಿಸಿರುವಂತೆ ಯಾವುದೇ ಕಾಯಂ ಸರ್ಕಾರಿ ನೌಕರರು ದಿನ ನಿತ್ಯ ತಾನು ನಿರ್ವಹಿಸುವ ಕರ್ತವ್ಯದ ಹೆಚ್ಚುವರಿ ಕೆಲಸಕ್ಕೆ ಯಾವುದೇ ಸಂಭಾವನೆ ಪಡೆಯಲು ಅವಕಶವಿರುವುದಿಲ್ಲ ಆದರೆ ಪರೀಕ್ಷಾ ಕಾರ್ಯಕ್ಕೆಂದು ಹೊರ ಸ್ಥಳದಿಂದ ಬಮದವರಿಗೆ ಮ್ತು ಹೊರಸ್ಥಳಕ್ಕೆ ಹೋದವರಿಗೆ ನಿಯಾಮಾನುಸಾರ ಪ್ರಯಾನ ಭತ್ಯೆ ಮತ್ತು ದಿನ ಭತ್ಯೆಗಳನ್ನು ನೀಡಬಹುದಾಗಿರುತ್ತದೆ ಪ್ರಸ್ತುತ ಕಂಡಿಕೆಯಲ್ಲಿನ ನೌಕರು ವಿವಿಧ ಜಾಟ್‌ರೀಚ್ ಪರೀಕ್ಷಾ ಕೇಂದ್ರಗಳಿಗೆ ನಿಯೋಜಿಸಲ್ಪವರಾಗಿದ್ದು ಅವರಿಗೆ ಪ್ರಯಾಣ ಭತ್ಯೆ ತಂಗು ಭತ್ಯೆಗಳನ್ನು ಪಾವತಿಸದೆ ಸಂಭಾವನೆ ಪಾವತಿಗಳಿಗೆ ಅವಕಾಸ ಇಲ್ಲದಿದ್ದರೂ ಪರೀಕ್ಷಾ ಕಾರ್ಯಗಳ ಹಿತ ದೃಷ್ಟಿಯಿಂದ ಮತ್ತು ಗಿಂದಿನಿಂದಲೂ ಈ ಪದ್ದತಿ ಅನುಸರುಸುತ್ತಿರುವುದರಿಂದ ಸಂಭಾವನೆಯನ್ನು ಪಾವತಿಸಲಾಗಿರುತ್ತದೆ.<br>ಆದರೆ ಸರ್ಕಾರದ ಆಧೇಶ ಸಂಖ್ಯೆ.ಇ.ಡಿ30 ಯು,ಎನ್.ಇ.2000 ದಿನಾಂಕ 19.5.2003ರ ಅನ್ವಯದಂತೆ ಈ ವೆಚ್ಚಗಳನ್ನು ವಿಶ್ವವಿದ್ಯಾನಿಲಯದ ಅಂತರಿಕ ಸಂಪನ್ಮೂಲದಿಂದಲೇ ಭರಿಸಲಾಗುತ್ತಿದೆ. ಇದಕ್ಕಾಗಿ ಸರ್ಕಾರದಿಂದ ಯಾವುದೇ ಅನುದಾನ ಕೋರಲಾಗುತ್ತಿಲ್ಲ ಎಂಬುದಾಗಿ ನಿವೇಧಿಸಿದೆ ಸರ್ಕಾರದ ದಿನಾಂಕ.19.5.2003ರ ಆಧೇಶದ ಪ್ರತಿತನ್ನು ಲಗತ್ತಿಸುತ್ತಾ ಈ ಸಂಬಂಧದ ಪಾವತಿ ಮೊತ್ತ ರೂ.1,94,200/–ಗಳ ಆಕ್ಷೇಪಣೆತನ್ನು ತಿರುವಳಿಗೊಳಿಸಲು ಕೋರಿದೆ. |

| | | |
|---|---|---|
| **64** | **<u>ಉತ್ತರ ಪತ್ರಿಕೆಗಳ ಕೇಂದ್ರ ಮೌಲ್ಯಮಾಪನ ಕಾರ್ಯಕ್ಕಾಗಿ ಸಂಯೋಜಕರಿಗೆ ಸ್ಥಳೀಯ ಭತ್ಯೆ ಮತ್ತು ಹೆಚ್ಚುವರಿ ಸಂಭಾವನೆಯನ್ನು ಪಾವತಿ ಮಾಡಿರುವುದು :– (ಪರೀಕ್ಷಾ ವಿಭಾಗ)</u>**<br>2016–17ನೇ ಸಾಲಿನಲ್ಲಿ ನಡೆದ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಕೇಂದ್ರ ಮೌಲ್ಯಮಾಪನ ಕಾರ್ಯಕ್ಕೆ ಪರೀಕ್ಷಾ ವಿಭಾಗದ ಖಾಯಂ ನೌಕರರನ್ನು ಸಂಯೋಜಕರು, ಸಹಾಯಕರಾಗಿ ನೇಮಕ ಮಾಡಿಕೊಂಡು ಸ್ಥಳೀಯ ಭತ್ಯೆ, ದಿನಭತ್ಯೆ ಹಾಗೂ ಸಂಭಾವನೆಯನ್ನು ಪಾವತಿ ಮಾಡಲಾಗಿರುತ್ತದೆ.<br>ಕೆ.ಸಿ.ಎಸ್.ಆರ್ ನಿಯಮ 28 (ಎ), (ಬಿ), (ಸಿ) ಮತ್ತು (ಇ) ಗಳನ್ವಯ ಸಂಭಾವನೆಯನ್ನು ಪಾವತಿಸಲು ಅವಕಾಶವಿರುವುದಿಲ್ಲ. ಕೆ.ಸಿ.ಎಸ್.ಆರ್ ನಿಯಮ 498 (ಎ) ರನ್ವಯ, ದಿನಭತ್ಯೆಯು ಕೇಂದ್ರ ಕಾರ್ಯಸ್ಥಳದಿಂದ ಗೈರುಹಾಜರಾಗುವ ಪ್ರತಿ ದಿನಕ್ಕೆ ಕೊಡುವ ಒಂದು ಏಕರೂಪ ಭತ್ಯೆಯಾಗಿರುತ್ತದೆ. ಹಾಗೂ ಕೇಂದ್ರ ಕಾರ್ಯ ಸ್ಥಾನದಲ್ಲಿ ಮಾಡುವ ಕೆಲಸಕ್ಕೆ ಯಾವುದೇ ಸ್ಥಳೀಯ ಭತ್ಯೆ, ದಿನಭತ್ಯೆ ಹಗೂ ಸಂಭಾವನೆಯನ್ನು ಪಾವತಿಸಲು ಅವಕಾಶವಿರುವುದಿಲ್ಲ. ಆದರೆ ಪರೀಕ್ಷಾ ವಿಭಾಗದ ಅಧಿಕಾರಿ ಮತ್ತು ನೌಕರರಿಗೆ ಕೇಂದ್ರ ಸ್ಥಾನದಲ್ಲಿ ನಿರ್ವಹಿಸುವ ಕರ್ತವ್ಯಕ್ಕೆ ಸಂಭಾವನೆಯನ್ನು ಪಾವತಿಸಿದ್ದು, ಈ ಸಂಬಂಧ ಸೂಕ್ತ ಸ್ಪಷ್ಟೀಕರಣವನ್ನು ನೀಡುವಂತೆ ಲೆಕ್ಕಪರಿಶೋಧನೆ ವಿಚಾರಣಾ ಪತ್ರ ಸಂಖ್ಯೆ:33/2018–19 ದಿನಾಂಕ:05.10.2018ರಲ್ಲಿ ನೀಡಲಾಗಿ ಈ ಸಂಬಂಧ ಯಾವುದೇ ಉತ್ತರವನ್ನು ಹಾಜರುಪಡಿಸಿರುವುದಿಲ್ಲ.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000ರ ನಿಯಮ 41(5) (6) ಮತ್ತು (7)ರನ್ವಯ ಯಾವುದೇ ಆದೇಶಗಳು/ಆಧ್ಯಾದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರ/ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೇ ಸಂಭಾವನೆ ಹಾಗೂ ಕೆ.ಸಿ.ಎಸ್.ಆರ್ ನಿಯಮ ಉಲ್ಲಂಘಿಸಿ ವಿಶೇಷ ಭತ್ಯೆ, ದಿನಭತ್ಯೆಯನ್ನು ಪಾವತಿಸಿರುವ ಮೊತ್ತ **ರೂ.26,382/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸುವುದು ಇಲ್ಲವೆ** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7) ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯುವವರೆಗೂ **ಆಕ್ಷೇಪಣೆಯಲ್ಲಿಡಲಾಗುತ್ತದೆ.** ವಿವರಗಳನ್ನು **<u>ಅನುಬಂಧ–24ರಲ್ಲಿ</u>** | ಉತ್ತರ ಪತ್ರಿಕೆಗಳ ಕೇಂದ್ರ ಮೌಲ್ಯಮಾಪನ ಕಾರ್ಯಕ್ಕಾಗಿ ನಿಯೋಜನೆಗೊಂಡ ಸಂಯೋಜಕರಿಗೆ ವಿಶ್ವವಿದ್ಯಾನಿಲಯವು ನಿಗಧಿ ಪಡಿಸಿದ ದರದಲ್ಲಿ ಸ್ಥಳೀಯ ಭತ್ಯೆ ಮತ್ತು ಹೆಚ್ಚುವರಿ ಸಂಭಾವನೆಯನ್ನು ಪಾವತಿಸಿದೆ ವಿವಿಧ ಸಂಯೋಜಿತ ಕಾಲೇಜುಗಳಿಗೆ ಉತ್ತರ ಪತ್ರಿಕೆಗಳ ಮೌಲ್ಯ ಮಾಪನಕ್ಕೆ ನಿಯೋಜನೆಗೊಂಡವರಿಗೆ ಸ್ಥಳೀಯ ಭತ್ಯೆ ಮತ್ತು ಸಂಭಾವನೆಗಳನ್ನು ಪಾವತಿ ಮಾಡದಿದ್ದರೆ ಅವರು ಮೌಲ್ಯ ಮಾಪನ ಕಾರ್ಯಕ್ಕೆ ಏನಾದರೊಂದು ಕಾರಣ ನೀಡಿ ತಪ್ಪಿಸಿಕೊಳ್ಳುತ್ತಾರೆ ಇದರಿಂದ ಮೌಲ್ಯ ಮಾಪನ ಕಾರ್ಯಕ್ಕೆ ಅಡ್ಡಿ ಉಂಟಾಗಿ ನಿಗಧಿತ ಸಮಯಕ್ಕೆ ಫಲಿತಾಂಶಗಳನ್ನು ಪ್ರಕಟಿಸಲು ಸಾಧ್ಯಾವಾಗುವುದಿಲ್ಲ<br>ಸರ್ಕಾರದ ಆಧೇಶ ಸಂಖ್ಯೆ ಇ.ಡಿ30 ಯು,ಎನ್.ಇ2000 ದಿನಾಂಕ.19.5.2003ರ ಅನ್ವಯದಂತೆ ಈ ವೆಚ್ಚಗಳನ್ನು ವಿಶ್ವವಿದ್ಯಾನಿಲಯದ ಅಂತರಿಕ ಸಂಪನ್ಮೂಲ ಅಂದರೆ ಪರೀಕ್ಷಾ ಖಾತೆಗೆ ಸಂಬಂಧಿಸಿದ ಮೊತ್ತದಿಂದ ಪಾವತಿಸಲಾಗುತ್ತದೆ ಸರ್ಕಾರದಿಂದ ಈ ಸಂಬಂಧ ಯಾವುದೇ ಅನುದಾನ ಕೋರಲಾಗುತ್ತಿಲ್ಲ ಎಂಬುದಾಗಿ ನಿವೇಧಿಸುತ್ತಾ ರೂ.26,382/–ಗಳ ಕೋರಿದೆ.<br>ಸರ್ಕಾರದ ದಿನಾಂಕ19.5.2003ರ ಪ್ರತಿಯನ್ನು ಲಗತ್ತಿಸಿದೆ. |

| | | |
|---|---|---|
| | ವಿವರಿಸಿದೆ. | |

| 65 | **<u>ಗ್ರಂಥಾಲಯ ಯೋಜನಾ ಸಹಾಯಕರು ಹಾಗೂ ತಾತ್ಕಾಲಿಕ ಗ್ರಂಥಾಲಯ ಸಹಾಯಕರುಗಳನ್ನು ನಿಯಮಬಾಹಿರವಾಗಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವ ವಿಚಾರ ಕುರಿತು :– (ಸ್ನಾತಕ ಗ್ರಂಥಾಲಯ ಮಹಾರಾಜ ಕಾಲೇಜು ಆವರಣ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ ಗ್ರಂಥಾಲಯ ತಪಾಸಣೆಗೆ ಹಾಜರುಪಡಿಸಿರುವ ಗ್ರಂಥಾಲಯ ಯೋಜನಾ ಸಹಾಯಕರು ಹಾಗೂ ತಾತ್ಕಾಲಿಕ ಗ್ರಂಥಾಲಯ ಸಹಾಯಕರುಗಳ ವೇತನ ಬಿಲ್ಲುಗಳನ್ನು ಪರಿಶೀಲಿಸಿದಾಗ ಹಿಂದಿನ ಆಡಿಟ್ ಕಂಡಿಕೆ ಸಂಖ್ಯೆ:06ರಲ್ಲಿ (2015–16)ನೇ ಸಾಲಿನ ಆಡಿಟ್ ವರದಿಯಲ್ಲಿ ಪ್ರಸ್ತಾಪಿಸಿರುವಂತೆ ಗ್ರಂಥಾಲಯ ಯೋಜನಾ ಸಹಾಯಕರುಗಳ ಹಾಗೂ ತಾತ್ಕಾಲಿಕ ಗ್ರಂಥಾಲಯ ಸಹಾಯಕರುಗಳನ್ನು ನೇಮಕಾತಿ ಮಾಡಿಕೊಂಡು ವೇತನ ನಿಗದಿಪಡಿಸಿ ಪಾವತಿಸಿರುವುದು ದಿನಾಂಕ:05.12.2015 ಹಾಗೂ 07.12.2016 ಹಾಗೂ 03.08.2016ರಂದು ಜಾರಿಗೆ ಬರದಂತೆ ಒಂದು ವರ್ಷದ ಅವಧಿಗೆ ಅಥವಾ ಅದಕ್ಕೆ ಮುಂಚೆ ನೀಡಬಹುದಾದ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಅವರುಗಳ ಹೆಸರಿನ ಮುಂದೆ ಸಂಚಿತ ವೇತನದಲ್ಲಿ ಮರುನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. ಹಾಗೂ ಹುದ್ದೆಗಳ ಮಂಜೂರಾತಿಯಾಗಿರುವ ಆದೇಶ ಕಡತವನ್ನು ಪರಿಶೀಲನೆಗೆ ಹಾಜರುಪಡಿಸಬೇಕೆಂದು ವಿಚಾರಣೆ ಸಂಖ್ಯೆ:06/2018–19 ದಿನಾಂಕ:10.10.2018ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ವಿವರಣೆ ನೀಡದೆ ಯಾವುದೇ ಹುದ್ದೆಗಳ ಮಂಜೂರಾತಿ ಆದೇಶದ ಕಡತವನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಪಾವತಿಸಿರುವ ಮೊಬಲಗು **ರೂ.10,29,452/– ಆಕ್ಷೇಪಣೆಯಲ್ಲಿಡಲಾಗಿದೆ.** | ವಿಶ್ವವಿದ್ಯಾನಿಲಯದ ಸ್ನಾತಕ ಗ್ರಂಥಾಲಯಕ್ಕೆ ಅವಶ್ಯಕವಿದ್ದ ಗ್ರಂಥ ಸಹಾಯಕರು ಮತ್ತು ಯೋಜನಾ ಸಹಾಯಕರುಗಳನ್ನು ವಿಶ್ವವಿದ್ಯಾನಿಲಯದ ಕಾಯ್ದೆ 2000 ರಲ್ಲಿ ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರದನ್ವಯ ತಾತ್ಕಾಲಿಕವಾಗಿ ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿಮಾಡಿಕೊಳ್ಳಲು ನಿಯಾನುಸಾರ ಪತ್ರ ಸಂಖ್ಯೆ:ಇಟಿ4/115/2009–10, ದಿನಾಂಕ:13.01.2010 ರಲ್ಲಿ ಪ್ರಕಟಣೆ ಹೊರಡಿಸಿ ದಿನಪತ್ರಿಕೆಗಳಲ್ಲಿ ಪ್ರಕಟಿಸುವುದರ ಮೂಲಕ ಆಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಸ್ವೀಕೃತಗೊಂಡ ಅರ್ಜಿ ಪೈಕಿ; ಸಂದರ್ಶನ ನಡೆಸಿ ಈ ಕೆಳಕಂಡ ಗ್ರಂಥ ಸಹಾಯಕರು ಮತ್ತು ಯೋಜನಾ ಸಹಾಯಕರನ್ನು ಒಂದು ವರ್ಷದ ಅವಧಿಗೆ ಮಾತ್ರ ಆಯ್ಕೆ ಮಾಡಿ ಸ್ನಾತಕ ಗ್ರಂಥಾಲಯ ಮಹಾರಾಜ ಕಾಲೇಜು ಆವರಣ ಇಲ್ಲಿಗೆ ನಿಯೋಜಿಸಲಾಗಿದ್ದು ತದನಂತರ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಇಟಿ4/363/2014–15, ದಿನಾಂಕ:01.01.2016 ಹಾಗೂ ದಿನಾಂಕ:01.01.2017ರ ಅನ್ವಯ ಮತ್ತು ಆದೇಶ ಸಂಖ್ಯೆ: ಇಟಿ4/750/2012–13, ದಿನಾಂಕ:11.1.2016ರ ಹಾಗೂ ದಿನಾಂಕ:10.01.2017ರಅನ್ವಯ ದಿನಾಂಕ:5.12.2015 ರಿಂದ ಮತ್ತು 07.12.2016 ರಿಂದ ಜಾರಿಗೆ ಬಂದಂತೆ ಒಂದು ವರ್ಷದ ಅವಧಿಗೆ ಅಥವಾ ಅದಕ್ಕಿಂತ ಮುಂಚೆ ನೀಡಬಹುದಾದ ಆದೇಶದ ಮೇರೆಗೆ ಯಾವುದು ಮೊದಲು ಘಟಿಸುವುದೊ ಅಲ್ಲಿಯವರೆಗೆ ಸಂಚಿತ ವೇತನದಲ್ಲಿ ನೇಮಕಾತಿ ಮಾಡಿ ಆದೇಶ ಹೊರಡಿಸಲಾಗಿದೆ.<br><br>ಸದರಿ ನೌಕರರುಗಳ ವೇತನದ ವೆಚ್ಚವನ್ನು ತಾತ್ಕಾಲಿಕ ಅಧ್ಯಾಪಕೇತರ ನೌಕರರ ವೇತನ–229ರ ಲೆಕ್ಕ ಶೀರ್ಷಿಕೆಯಿಂದ ಭರಿಸಲಾಗಿರುತ್ತದೆ. ಕಂಡಿಕೆಯ ಆಡಿಟ್ ವಿಚಾರಣ ಸಂಖ್ಯೆ:2/2018–19 ದಿನಾಂಕ:05.10.2018ರ ಕ್ರಮಾಂಕ(3)ರಲ್ಲಿ ಕೇಂದ್ರ/ರಾಜ್ಯ ಸರ್ಕಾರಗಳ ಅಂಗ ಸಂಸ್ಥೆಗಳಿಂದಾಗಲ್ಲಿ ಇತರೆ ಸಂಸ್ಥೆಗಳ ಯೋಜನೆ |
|---|---|---|

**1. Library Assistant**

**1. ಆದೇಶ ಸಂಖ್ಯೆ: ET 4/150/2012–13 ದಿನಾಂಕ:11.01.2016**

**2. ಆದೇಶ ಸಂಖ್ಯೆ: ET 4/150/2012–13 ದಿನಾಂಕ:10.01.2017**

| ಕ್ರ.ಸಂ | ನೌಕರರ ಹೆಸರು ಶ್ರೀ/ಶ್ರೀಮತಿ | ಮೊತ್ತ |
|---|---|---|
| 1 | ಸುಶೀಲ.ಎಂ | 1,00,500 |
| 2 | ಚಿಕ್ಕನಾಯಕ | 67,984 |

| | | |
|---|---|---|
| 3 | ನಾಗವೇಣಿ | 91,000 |
| | **ಒಟ್ಟು** | **2,59,484** |
| **2. Library Project Assistant** | | |
| 4 | ಎಂ.ಭೈರಪ್ಪ | 144000 |
| 5 | ಬೀನಾ ಸೋಮಶೇಖರನ್ | 144000 |
| 6 | ಕವಿತಾ.ಎನ್ | 120000 |
| 7 | ಆರ್.ಹರೀಶ್ | 97000 |
| 8 | ಧರ್ಮಪಾಲ್.ಹೆಚ್.ಎಲ್ | 1,20,000 |
| | **ಒಟ್ಟು** | **769968** |
| | **(1) + (2) ಒಟ್ಟು ಮೊತ್ತ** | **10,29,452** |

ವಿವರದಂತೆ ಸಂಬಂಧಿಸಿದಂತೆ ವಿಚಾರಣೆ ಸಂಖ್ಯೆ: 2/2018–19 ದಿನಾಂಕ:05.10.2018ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆ ಅವಧಿಯಲ್ಲಿ ಮಾಹಿತಿ ಒದಗಿಸದೆ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

1. ಮಾನ್ಯ ಕುಲಾಧಿಪತಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ರವರಿಂದ ಅನುಮೋದನೆಗೊಂಡಿರುವ ಮಂಜೂರಾತಿ ಆದೇಶದ ಪ್ರತಿ ಹಾಗೂ ಪರಿನಿಯಮ ಆದೇಶದ ಪ್ರತಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ.
2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾರ್ಯ 2000ರ ನಿಯಮ 55 ರಿಂದ 57ರನ್ವಯ ಯೋಜನೆ ಸಹಾಯಕ ಹಾಗೂ ಗ್ರಂಥಾಲಯ ಸಹಾಯಕರನ್ನು ನೇಮಕಾತಿ ಮಾಡಿಕೊಂಡಿರುವ ವೃಂದ ನೇಮಕಾತಿ ನಿಯಮಗಳ ಷರತ್ತುಗಳ ವಿದ್ಯಾರ್ಹತೆ ಇತ್ಯಾದಿ ದಾಖಲಾತಿಯೊಂದಿಗೆ ವಿವರ ಹಾಜರುಪಡಿಸಿರುವುದಿಲ್ಲ.
3. ಕೇಂದ್ರ/ರಾಜ್ಯ ಸರ್ಕಾರಗಳ ಅಂಗ ಸಂಸ್ಥೆಗಳಿಂದ ಇತರೆ ಸಂಸ್ಥೆಗಳಿಂದ ಯೋಜನೆಯ ಅನುದಾನದಲ್ಲಿ ನೇಮಕಾತಿ ಮಾಡಿಕೊಂಡ ವೇತನ ಪಾವತಿಗೆ ಸಂಬಂಧಿಸಿದ ಸಹಯೋಗ ಸಂಸ್ಥೆ ಮಾರ್ಗಸೂಚಿ ವಿವರ ಹಾಜರುಪಡಿಸಿರುವುದಿಲ್ಲ.
4. ಆದೇಶ ಸಂಖ್ಯೆ:ET4/363/2014–15 ದಿನಾಂಕ:01.01.2016 ಹಾಗೂ ಆದೇಶ

ಅನುದಾನದಲ್ಲಿ ನೇಮಕಾತಿಮಾಡಿಕೊಂಡು ವೇತನ ಪಾವತಿಸಿರುವುದಿಲ್ಲ. ವಿಶ್ವವಿದ್ಯಾನಿಲಯದ ಆಂತರಿಕ ಆರ್ಥಿಕ ಸಂಪನ್ಮೂಲದಿಂಧ ವೇತನದ ವೆಚ್ಚ ಭರಿಸಲಾಗಿರುತ್ತದೆ.

ಕ್ರಮಾಂಕ (4) ರಲ್ಲಿ ಸದರಿ ನೌಕರರುಗಳಿಂದ ನೇಮಕಾತಿಯು ತಾತ್ಕಾಲಿಕವಾಗಿರುತ್ತದೆ ಎಂಬುದಾಗಿ ತಿಳಿದಿರುತ್ತೇನೆ ಮತ್ತು ಯಾವುದೇ ವೇಳೆಯಲ್ಲಾದರೂ ಮುನ್ಸೂಚನೆ ಇಲ್ಲದೆ ನನ್ನ ಸೇವೆಯನ್ನು ರದ್ದು ಪಡಿಸಬಹುದೆಂದು ಒಪ್ಪಿ ಬರೆಸಿಕೊಂಡಿರುವ ಮುಚ್ಚಳಿಕೆ ಪ್ರಮಾಣ ಪತ್ರದ ಪ್ರತಿ ಮತ್ತು ತಾತ್ಕಾಲಿಕ ನೇಮಕಾತಿ ಆದೇಶದ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯಲ್ಲಿನ ಆಕ್ಷೇಪಣೆಯ ಮೊತ್ತ ರೂ.10,29,452/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.

| | | |
|---|---|---|
| | ಸಂಖ್ಯೆ:ET4/363/2014–15 ದಿನಾಂಕ:11.01.2017, ಮೈಸೂರು ವಿಶ್ವವಿದ್ಯಾನಿಲಯದ ಆದೇಶದ ಪ್ರಕಾರ ನೇಮಕಾತಿ ಕೇವಲ ತಾತ್ಕಾಲಿಕವಾಗಿದ್ದು, ಮುಚ್ಚಳಿಕೆ ಬರೆಯಿಸಿಕೊಂಡಿರುವ ಮುಚ್ಚಳಕೆ ಪ್ರಮಾಣ ಪತ್ರವನ್ನು ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. | |

| | | |
|---|---|---|
| **66** | **<u>ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ಬೋಧಕೇತರ ನೌಕರರನ್ನು ನೇಮಕಾತಿ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು :- (ಆಡಳಿತ ವಿಭಾಗ)</u>**<br>ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಎಲ್ಲಾ ಕಛೇರಿಗಳು, ಸಂಸ್ಥೆಗಳು, ಪ್ರಾದೇಶಿಕ ಕೇಂದ್ರಗಳು, ಕಾಲೇಜುಗಳಿಗೆ 1994-95 ರಿಂದ 2016-17ನೇ ಸಾಲುಗಳವರೆಗೆ ತಾತ್ಕಾಲಿಕ/ಸಂಚಿತವೇತನದಡಿಯಲ್ಲಿ ಬೋಧಕೇತರ ನೌಕರರುಗಳನ್ನು ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು, ಲೆಕ್ಕಪರಿಶೋಧನೆಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬೋಧಕೇತರ ನೌಕರರುಗಳ ಮಂಜೂರಾತಿ ಹುದ್ದೆಗಳ ವಿವರಗಳನ್ನು ಹಾಗೂ ಮಂಜೂರಾತಿ ಹುದ್ದೆಗಳಿಗೆ ಎದುರಾಗಿ ಖಾಯಂ ನೌಕರರುಗಳ ವಿವರಗಳು, ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕ ನೌಕರರನ್ನು 1994-95 ರಿಂದ 2016-17ನೇ ಸಾಲುಗಳವರೆಗೆ ನೇಮಕಾತಿ ಪ್ರಕ್ರಿಯೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000ರ ನಿಯಮ 56 ಮತ್ತು 57ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:01/03.07.2018, 41/24.07.2018, 47/26.07.2018ರ ಒಟ್ಟು 4 ವಿಚಾರಣಾ ಪತ್ರಗಳಲ್ಲಿ ಕೋರಿರುವ ಕತಡಗಳನ್ನು ಹಾಜರುಪಡಿಸುವಂತೆ ಕೋರಲಾಗಿ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಆದುದರಿಂದ 1994-95 ರಿಂದ 2016-17ನೇ ಸಾಲುಗಳ ವರೆಗೆ ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ನೌಕರರುಗಳನ್ನು ನೇಮಕಾತಿ ಮಾಡಿಕೊಂಡು ರೂ.7,83,99,943/-ಗಳನ್ನು ಪಾವತಿಸಲಾಗಿದ್ದು, ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕಾತಿ ಮಾಡಿಕೊಂಡು ವೇತನ ಪಾವತಿಸಿರುವ ಕಡತಗಳನ್ನು ಹಾಜರುಪಡಿಸುವವರೆಗೆ **ರೂ.7,83,99,943/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಕಂಡಿಕೆಯ ಸೂಚಿತವಾಗಿರುವ ಆಕ್ಷೇಪಣೆ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸದರಿ ವಿಶ್ವವಿದ್ಯಾನಿಲಯದಲ್ಲಿ 2016-17 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿನ<br><br>ದೈನಂದಿನ ಕೆಲಸ ಕಾರ್ಯಗಳು ಸುಗಮವಾಗಿ ಮುಂದುವರೆಯಲು ಸದರಿ ವಿಭಾಗಗಳಲ್ಲಿ ನೌಕರರ (ವಿವಿಧ ದರ್ಜೆಯ) ನಿವೃತ್ತಿಯಿಂದ ತೆರೆವಾಗಿರುವ ಹುದ್ದೆಗಳಿಗೆ ವಿಶ್ವವಿದ್ಯಾನಿಲಯದ ಸುಗಮ ಕಾರ್ಯ ನಿರ್ವಹಣೆಯ ತುರ್ತು ಅವಶ್ಯಕತೆಯನ್ನು ಪರಿಗಣಿಸಿ ತಾತ್ಕಾಲಿಕವಾಗಿ 11 - ತಿಂಗಳ ಅವಧಿಯ ನೇಮಕಾತಿ ಷರತ್ತಿನೊಂದಿಗೆ ತಾತ್ಕಾಲಿಕವಾಗಿ ಸಂಚಿತ ವೇತನದಡಿಯಲ್ಲಿ ವಿಶವಿದ್ಯಾನಿಲಯಗಳ ಕಾಯಿದೆ 2000 ರಡಿಯಲ್ಲಿನ ಸೆಕ್ಷನ್ 55,56,ಕರ್ನಾಟಕ ರಲ್ಲಿ ಸೂಚಿತವಾದ ಷರತ್ತುಗಳ ಪೂರ್ಣಪಾಲನೆಯೊಂದಿಗೆ ತಾತ್ಕಾಲಿಕ ನೇಮಕಾತಿಗೆ ಕ್ರಮವಹಿಸಲಾಗಿದೆ.<br><br>ಈ ರೀತಿಯ ನೇಮಕಾತಿಯ ಸಂದರ್ಭದಲ್ಲಿ "ಸಂಪೂರ್ಣ ತಾತ್ಕಾಲಿಕ ಸ್ವರೂಪದ" ನೇಮಕಾತಿಯಾಗಿದೆ ಎಂಬ ಅಂಶವನ್ನು ಸ್ವಷ್ಟಪಡಿಸಿ ಸಂಬಂಧಿಸಿದ ನೌಕರರು ಈ ನೇಮಕಾತಿಯ ಖಾಯಂ ಸಲುವಾಗಿ ನ್ಯಾಯಲಯಕ್ಕೆ ಅಪೀಲು ಸಲ್ಲಿಸುವುದಿಲ್ಲ ಎಂಬ ಮುಚ್ಚಳಿಕೆಯನನು ಪಡೆಯಲಾಗಿದೆ.<br><br>ಈ ನೇಮಕಾತಿಗಳು (ಬೋಧಕೇತರ ಮತ್ತು ಲಿಪಿಕ ಸಿಬ್ಬಂದಿಯ ನೇಮಕಾತಿಗಳು ವಿಶ್ವವಿದ್ಯಾನಿಲಯದ ಕಾಯ್ದೆ 2000 ರ ಸೆಕ್ಷನ್ 57 ರಲ್ಲಿ ಸೂಚಿತವಾಗಿರುವ ನೇಮಕಾತಿಯ ಸದಸ್ಯರನ್ನು ಪೂರ್ಣ ಒಳಗೊಂಡಿದೆ ಮತ್ತು ಈ ರೀತಿಯ ಮಂಡಳಯಿಂದ, ಒಪ್ಪಿತವಾಗಿ ಸಲ್ಲಿಸಲ್ಪಟ್ಟಿರುವ ಪಟ್ಟಿಯು ತಾತ್ಕಾಲಿಕ ಬೋಧಕೇತರ ಮತ್ತು ಲಿಪಿಕ ನೌಕರರ ಪಟ್ಟಿಯು ಸಿಂಡಿಕೇಟ್ ಸಭೆಯಲ್ಲಿ ಅನುಮೋದಿತವಾಗಿದೆ. |

| | | |
|---|---|---|
| | | ಅಲ್ಲದೇ ಸದರಿ ವಿಶ್ವವಿದ್ಯಾನಿಲಯದಲ್ಲಿ ರಿಂದ ತಹಲ್ ವರೆಗೆ ಭೋಧಕೇತರ ಸಿಬ್ಬಂದಿಗೆ ಮಂಜೂರಾಗಿರುವ ಹುದ್ದೆಗಳ ನಿವೃತ್ತಿ ಅನ್ಸಾನ್ಯ ಕಾರಣದಿಂದ ತೆರವಾಗಿರುವ ಪ್ರಕರಣಗಳಲ್ಲಿ ನೇರ ನೇಮಕಾತಿ ಪ್ರಕ್ರಿಯೆಯ ಮೂಲಕ ಅಥವಾ ಲಿಖಿತ ಪರೀಕ್ಷೆ ಮೂಲಕ ಅದರಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ನೇಮಕಾತಿ ನಡೆಯದೇ ಇರುವುದರಿಂದ ತಾತ್ಕಾಲಿಕ ಭೋಧಕೇತರ, ಲಿಪಿಕ ಸಿಬ್ಬಂದಿಯನ್ನು ಸಂಚಿತ ವೇತನ ಅಧಾರದಲ್ಲಿ ನೇಮಕಾತಿಗೆ ಕ್ರಮವಹಿಸಲಾಗಿದೆ ಎಂಬ ಅಂಶವನ್ನು ಲೆಕ್ಕ ಪರಿಶೋಧನೆ ಅವಗಾಹನೆಗೆ ತರಲಾಗಿದೆ. |

| | | |
|---|---|---|
| 67 | **<u>ಅತಿಥಿ ಉಪನ್ಯಾಸಕರುಗಳ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು :– (ಆಡಳಿತ ವಿಭಾಗ)</u>**<br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಎಲ್ಲಾ ಅಧ್ಯಯನ ಸಂಸ್ಥೆಗಳು, ಕಾಲೇಜುಗಳು, ಮತ್ತು ಪ್ರಾದೇಶಿಕ ಕೇಂದ್ರಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಂಡು ರೂ.9,95,81,981/–ಗಳ ವೆಚ್ಚ ಭರಿಸಲಾಗಿದ್ದು, ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಬೋಧಕ ವರ್ಗದ ಹುದ್ದೆಗಳ ವಿವರಗಳು, ಮಂಜೂರಾತಿ ಹುದ್ದೆಗಳಿಗೆ ಮಾಡುತ್ತಿರುವ ವಿವರಗಳು ಖಾಲಿಯಿರುವ ಬೋಧಕ ವರ್ಗದ ವಿವರಗಳು, ಖಾಲಿಯಿರುವ ಬೋಧಕ ವರ್ಗದ ಬೋಧನ ಅವಧಿಗಳಿಗೆ ಪಠ್ಯಕ್ರಮ ರಚನಾ ತಜ್ಞರು ಸಮಿತಿಯು ನಿಗಧಿಪಡಿಸಿರುವ ವಿಷಯವಾರು ಬೋಧನ ಅವಧಿಗಳಿಗೆ ಅನುಗುಣವಾಗಿ ವರ್ಷವಾರು, ತರಗತಿವಾರು, ವಿಷಯವಾರು ಬೋಧನಾ ಅವಧಿಗಳನ್ನು ಲೆಕ್ಕಾಚಾರ ಮಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ–2000ರ ನಿಯಮ 55:56ರನ್ವಯ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಲೆಕ್ಕಪತ್ರ ಹಾಜರುಪಡಿಸುವಂತೆ ಕೋರಿ ವಿಚಾರಣೆ ಪತ್ರ ಸಂಖ್ಯೆ:01/03.07.2018, 17/11.07.2018, 59/03.08.2018, 64/07.08.2018 ರಲ್ಲಿ ಒಟ್ಟು 4 ವಿಚಾರಣೆ ಪತ್ರಗಳಲ್ಲಿ ಕೋರಲಾಗಿ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿರುವ ನೇಮಕಾತಿ ಆದೇಶಗಳನ್ನು ಹಾಗೂ ವೇತನ ಪಾವತಿ ವಿವರಗಳನ್ನು ಹಾಜರುಪಡಿಸದೆ ಹಾಗೂ ವಿಷಯ ತಜ್ಞರಿಂದ ಪಠ್ಯಕ್ರಮ ರಚನಾ ಸಮಯದಲ್ಲಿ ವಿಷಯವಾರು ಬೋಧನ ಅವಧಿಗಳನ್ನು ನಿಗದಿಪಡಿಸಿರುವ ಕಡತಗಳನ್ನು ಹಾಗೂ ನಿಯಮಾನುಸಾರ ನೇಮಕಾತಿ ಪ್ರಕ್ರಿಯೆ ಕೈಗೊಂಡ ಕಡತಗಳು ಹಾಗೂ 6ನೇ ಯು.ಜಿಸಿ ವೇತನ ಪರಿಷ್ಕರಣೆಯ ನಿಯಮಾವಳಿಯನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡ ಪೂರ್ಣ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೆಯಿರುವುದರಿಂದ ಮೇಲೆ ಕೋರಿರುವ ನೇಮಕಾತಿ ಪ್ರಕ್ರಿಯೆ ಪೂರ್ಣ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೂ ವಾರ್ಷಿಕ ಲೆಕ್ಕಪತ್ರದನ್ವಯ ವೆಚ್ಚ ಭರಿಸುವ **ರೂ.9,95,81,981/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ಕಛೇರಿ ಮುಖ್ಯಸ್ಥರು ಸೂಕ್ತ | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ವಿಶ್ವವಿದ್ಯಾನಿಲಯದಲ್ಲಿ 2016–17 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಎಲ್ಲಾ ಅಧ್ಯಯನ ಸಂಸ್ಥೆಗಳು ಕಾಲೇಜುಗಳು ಮತ್ತು ಪ್ರಾದೇಶಿಕ ಕೇಂದ್ರಗಳಲ್ಲಿನ ಉಪನ್ಯಾಸಕ ಹುದ್ದೆಗಳು ವಯೋನಿವೃತ್ತಿ ರಾಜಿನಾಮೆ ಮತ್ತು ಅನ್ಯಾನ್ಯ ಕಾರಣಗಳಿಂದ ತೆರವಾಗಿರುವ ಸಂಧರ್ಭಗಳಲ್ಲಿ ಆಯಾ ಅಧ್ಯಯನ ಸಂಸ್ಥೆಗಳ, ಕಾಲೇಜುಗಳ, ಮತ್ತು ಪ್ರಾದೇಶಿಕ ಕೇಂದ್ರಗಳಲ್ಲಿನ ಶೈಕ್ಷಣಿಕ ಕಾರ್ಯಕ್ರಮಗಳು ಪಾಠಪ್ರವಚನಗಳು ನಿಲ್ಲದೇ ಸಂಬಂಧಪಟ್ಟ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಗಳನ್ನು ನಿರಂತರ ಮುಂದುವರೆಸುವ ಉದ್ದೇಶದಿಂದಲೇ ಅತಿಥಿ ಉಪನ್ಯಾಸಕರನ್ನು ಈ ಸಂಬಂಧ ವಿಶ್ವವಿದ್ಯಾನಿಲಯದ ಕಛೇರಿ ಆದೇಶ ಸಂಖ್ಯೆ, ದಿನಾಂಕ:06.04.2014 ಮತ್ತು ದಿನಾಂಕ:01.12.2014 ರ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಹೊರಡಿಸಿರುವ ಆದೇಶ ಸಂಖ್ಯೆ:ಇಟಿ11/152/2013–14 ದಿನಾಂಕ:24.06.2014 ರ ಅನ್ವಯ 2014–15 ಸಾಲಿನಲ್ಲಿನ ಆದೇಶದನ್ವಯ 2016–17 ಸಾಲಿನಲ್ಲಿಯೂ ಸೇವೆಯನ್ನು ಪಡೆದು ಸಂಭಾವನೆ ಪಾವತಿಗೆ ಕ್ರಮವಹಿಸಲಾಗಿದೆ<br><br>ಅತಿಥಿ ಉಪನ್ಯಾಸಕರನನು ತಾತ್ಕಾಲಿಕವಾಗಿ ಅಹ್ವಾನಿಸುವ ಪೂರ್ವದಲ್ಲಿ ಈ ಸಂಬಂಧದ ಮೇಲಿನ ಆದೇಶದ ಮಾರ್ಗಸೂಚಿಯಲ್ಲಿ ಸೂಚಿತವಾಗಿರು ಯಾವುದೇ ಅಧ್ಯಯನ ವಿಭಾಗ ಸ್ನಾತಕೋತ್ತರ ಕೇಂದ್ರ ಅಥವಾ ಕಾಲೇಜಿನ ವಿವಿಧ ವಿಭಾಗಗಳಲ್ಲಿ ಖಾಯಂ ಅಧ್ಯಪಕರಗಳಿಗೆ ಯು.ಜಿ.ಸಿ ನಿಯಮಾನುಸಾರ ಹಂಚಿಕೆ ಮಾಡಿದ ನಂತರ ಹೆಚ್ಚುವರಿಯಾಗಿ ಕನಿಷ್ಟ 8 ಗಂಟೆ ಭೋದನಾ ಕಾರ್ಯಭಾರ ಉಳಿಂದ್ದಲ್ಲಿ ಮಾತ್ರ ಈ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರನ್ನು ಅಹ್ವಾನಿಸಲು ಕ್ರಮವಹಿಸಿಲಾಗಿದೆ<br><br>8 ಗಂಟೆಗಿಂತ ಕಡಿಮೆ ಭೋದನಾ ಕಾರ್ಯಭಾರ ಇದ್ದಲ್ಲಿ ಅಯಾಯ ವಿಭಾಗಗಳಲ್ಲಿನ ಅಧ್ಯಾಪಕರಿಗೆ ವಿಭಾಗ ಮಂಡಳಿ/ಕಾಲೇಜು ಮಂಡಳಿಗಳು ಹಂಚಿಕೆ |

| | | |
|---|---|---|
| | ಕ್ರಮವಹಿಸಿ ಮೇಲೆ ಕೋರಿರುವ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಮಾಡಿ ಲಭ್ಯವಿರುವ ಉಪನ್ಯಾಸಕರ ಮಿತಿಯಲ್ಲಿಯೇ ಭೋದನಾ ಕಾರ್ಯ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ.<br><br>ಅಲ್ಲದೇ ಅತಿಥಿ ಉಪನ್ಯಾಸಕರ ಸೇವೆಯನ್ನು ಶೈಕ್ಷಣಿಕ ವರ್ಷದ ಪ್ರಾರಂಭದಿಂದ ತರಗತಿಗಳ ಅಂತ್ಯದವರೆಗೂ ಪಡೆಯಲು ಕ್ರಮವಹಿಸಲಾಗದೆ ಈ ರೀತಿಯ ಸೇವೆಯನ್ನು ಪಡೆಯುವ ಸಂಧರ್ಭದಲ್ಲಿ ಅಯಾಯ ವಿಭಾಗಗಳ ಸ್ನಾತಕೋತ್ತರ ಕೇಂದ್ರಗಳ ಎಲ್ಲಾ ಅಧ್ಯಯನ ಸಂಸ್ಥೆಗಳ ಮುಖ್ಯಸ್ಥರು ನೀಡಿರುವ ಬೇಡಿಕೆಯ ಪಟ್ಟಿಯ ಆಧಾರದಲ್ಲಯೇ ಕ್ರಮವಹಿಸಲಾಗಿದೆ ಅದ್ದರಿಂದ ಈ ಸಂಬಂಧ ಅಕ್ಷೇಪಣೆ ಮೊತ್ತ ರೂ.9,95,81,981/- ಕಂಡಿಕೆಯನ್ನು ಕೈ ಬಿಡಲು ಕೋರಿದೆ. |

| | | |
|---|---|---|
| **68** | <u>**ಮೈಸೂರು ವಿಶ್ವವಿದ್ಯಾಲಯಕ್ಕೆ ಮಂಜೂರಾದ ಹುದ್ದೆಗಳಲ್ಲಿ ದೂರ ಶಿಕ್ಷಣ ವಿಭಾಗ ವಿಂಗಡಣೆಯಾದಾಗ ವಿವಿಧ ಶ್ರೇಣಿಯ ಹುದ್ದೆಗಳ ಹಂಚಿಕೆ ವಿವರಗಳನ್ನು ಹಾಜರುಪಡಿಸದಿರುವುದು :– (ಆಡಳಿತ ವಿಭಾಗ)**</u><br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ವಿಭಾಗವು ಒಂದು ಅಂಗ ಸಂಸ್ಥೆಯಾಗಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸಂಸ್ಥೆಗಳಿಗೆ ಒಟ್ಟಾರೆಯಾಗಿ ಮಂಜೂರಾಗಿರುವ ವೃಂದವಾರು ಹುದ್ದೆಗಳ ವಿವರಗಳನ್ನು ಹಾಗೂ ಒಟ್ಟು ವೃಂದವಾರು ಮಂಜೂರಾದ ಹುದ್ದೆಗಳಲ್ಲಿ 1995ರಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ವಿಭಾಗವನ್ನು ವಿಂಗಡಿಸಿ ಹೊಸದಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿದ್ದು, ದೂರ ಶಿಕ್ಷಣ ವಿಭಾಗವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ವಿಲೀನಗೊಳಿಸಿರುವುದರಿಂದ ದೂರ ಶಿಕ್ಷಣ ವಿಭಾಗಕ್ಕೆ ಮಂಜೂರಾಗಿರುವ ಹುದ್ದೆಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ವಿಲೀನಿಕರಿಸಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಒಟ್ಟು ವಿವಿಧ ವೃಂದ ಮತ್ತು ಶ್ರೇಣಿಯ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ವಿಲೀನಗೊಳಸಲಾಗಿರುವ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:35/20.07.2018ರಲ್ಲಿ ಕೋರಲಾಗಿ ಕೋರಲಾಗಿರುವ ಕತಡಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರಿಂದ ಸರ್ಕಾರದಿಂದ ಮಂಜೂರಾದ ಹುದ್ದೆಗಳಲ್ಲಿ ವಾಸ್ತವವಾಗಿ ಉಳಿದಿರುವ ಹುದ್ದೆಗಳ ವಿವರವನ್ನು ತಿಳಿಯಲು ಸಾಧ್ಯವಾಗದಿರುವುದರಿಂದ ಕಾಲಕಾಲಕ್ಕೆ ಪದೋನ್ನತಿ ನೀಡುವಾಗ ಮಂಜೂರಾಗಿರುವ ಹುದ್ದೆಗಳಲ್ಲಿ ವಾಸ್ತವಿಕವಾಗಿ ಉಳಿದಿರುವ ಹುದ್ದೆಗಳಿಗೆ ಪದೋನ್ನತಿಯನ್ನು ನೀಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲು ಸಾಧ್ಯವಾಗದಿರುವುದರಿಂದ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಕೋರಿರುವ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ವಿಭಾಗವನ್ನು ಪ್ರತ್ಯೇಕಿಸಿ 1995 ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಥಾಪನೆಯಾದ ಸಂಧರ್ಭದಲ್ಲಿ ಹೊಸ ವಿಶ್ವವಿದ್ಯಾನಿಲಯಕ್ಕೆ ಹಂಚಿಕೆಯಾದ ಹುದ್ದೆಗಳಿಗೆ ಸಂಬಂಧಿಸಿದ ವಿವರಗಳನ್ನು ಆದೇಶವನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗುವುದು. |

| | | |
|---|---|---|
| 69 | **<u>ಬೋಧಕೇತರ ನೌಕರರುಗಳನ್ನು ಮೈಸೂರು ವಿಶ್ವವಿದ್ಯಾನಿಲಯ STATUTES (ಪರಿನಿಯಮ) ಅನ್ವಯ ಪದೋನ್ನತಿ ನೀಡಿರುವ ಕಡತಗಳನ್ನು ಹಾಜರುಪಡಿಸದಿರುವುದು :- (ಆಡಳಿತ ವಿಭಾಗ)</u>**<br>ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಎಲ್ಲಾ ಕಛೇರಿಗಳು, ಪ್ರಾದೇಶಿಕ ಕೇಂದ್ರಗಳು, ಅಧ್ಯಯನ ವಿಭಾಗಗಳು, ಕಾಲೇಜುಗಳಿಗೆ ವಿವಿಧ ಶ್ರೇಣಿಯ ತಾಂತ್ರಿಕ, ತಾಂತ್ರಿಕೇತರ ಅಧಿಕಾರಿಗಳು/ನೌಕರರುಗಳ ಮಂಜೂರಾತಿಯ ಹುದ್ದೆಗಳನ್ವಯ ಮೈಸೂರು ವಿಶ್ವವಿದ್ಯಾನಿಲಯದ ಅನುಮೋದಿತ STATUTES (ಪರಿನಿಯಮ) ನ Part 'A' Chapter–122ರ Schedule 3ರನ್ವಯ ದ್ವಿತೀಯ ದರ್ಜೆ ಸಹಾಯಕರಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಶೇ 50 ರಷ್ಟು ಹುದ್ದೆಗಳನ್ನು ನಿಯಮಾನುಸಾರ ನೇರ ನೇಮಕಾತಿ ಮೂಲಕ ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ. ಅದೇ ರೀತಿ 'ಡಿ' ದರ್ಜೆ ನೌಕರರಿಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡುವಾಗ ಶೇ 25ರಷ್ಟನ್ನು ಮುಂಬಡ್ತಿ ನೀಡುಬೇಕಾಗಿದ್ದು, ಉಳಿಕೆ ಶೇ 75 ರಷ್ಟು ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ನಿಯಮಾನುಸಾರ ನೇರ ನೇಮಕಾತಿ ಮಾಡಿಕೊಳ್ಳಬೇಕಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ STATUTES ರನ್ವಯ ಪದೋನ್ನತಿ ನೀಡಿರುವ ಕಡತಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಿವಿಧ ಶ್ರೇಣಿಯ ದರ್ಜೆಯ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿರುವ ಕಡತಗಳು, ಶ್ರೇಣಿವಹಿಯನ್ನು ಹಾಗೂ ವಿವಿಧ ವೃಂದದಲ್ಲಿ ಪದೋನ್ನತಿ ನೀಡಿರುವ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆಗಳು : (1) 01/03.07.2018, (2) 18/11.07.2018, (3) 21/12.07.2018, (4) 44/24.07.2018, (5) 47/26.07.2018 ಕೋರಲಾಗಿ ಯಾವುದೇ ಕಡತಗಳನ್ನು ಹಾಜರುಪಡಿಸಿರುವುದಿಲ್ಲ.<br>ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಿವಿಧ ವೃಂದ/ಶ್ರೇಣಿಯ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳಲ್ಲಿ STATUTES (ಪರಿನಿಯಮ) ಅನ್ವಯ ಪದೋನ್ನತಿಯನ್ನು ನೀಡಿರುವುದನ್ನು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ | ಪ್ರಸ್ತಾವಿತ ಕಂಡಿಕೆಯಲ್ಲಿ ನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕೊಳ್ಳಪಡುವ ಎಲ್ಲಾ ಕಛೇರಿಗಳು ಪ್ರಾದೇಶಿಕ ಕೇಂದ್ರಗಳು, ಅಧ್ಯಾಯನ ವಿಭಾಗಗಳು, ಕಲೇಜುಗಳ ವಿವಿಧ ಶ್ರೇಣಿಯ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳ ನೇರನೇಮಕಾತಿ ಸಂಧರ್ಭದಲ್ಲಿ ವಿಶ್ವವಿದ್ಯಾನಿಲಯದ STATUTES (ಪರಿನಿಯಮ) ಅನ್ವಯ ವಹಿಸಿರುವ ಕ್ರಮದ ಬಗ್ಗೆ ಪ್ರಸ್ಥಾಪಿತವಾಗಿದ್ದು ಈ ಸಂಬಂಧದ ಎಲ್ಲಾ ವಿವರಗಳನ್ನು ಮುಂದಿನ ಲೆಕ್ಕ ಪರಿಶೋಧನೆಗಳಿಗೆ ಹಾಜರು ಪಡಿಸಲು ಕ್ರಮವಹಿಸಲಾಗುವುದು. |

| | | |
|---|---|---|
| | ಕಾಯ್ದೆ–2000ರ ನಿಯಮ 57ರನ್ವಯ ನೇರನೇಮಕಾತಿಗೆ ಮೀಸಲಿರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಪ್ರಕ್ರಿಯೆ ಕೈಗೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಬೋಧಕೇತರ ನೌಕರರ ಹುದ್ದೆಗಳ ವಿವರಗಳನ್ನೊಳಗೊಂಡ ಶ್ರೇಣಿವಹಿ, ಪದೋನ್ನತಿ ನೀಡಿರುವ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕಛೇರಿ ಮುಖ್ಯಸ್ಥರುಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ. | |

| | | |
|---|---|---|
| 70 | **<u>ಮೈಸೂರು ವಿಶ್ವವಿದ್ಯಾನಿಲಯದ ಬೋಧಕ/ಬೋಧಕೇತರ ನೌಕರರುಗಳಿಗೆ ವಸತಿಗೃಹಗಳನ್ನು ಹಂಚಿಕೆ ಮಾಡಿ ಮನೆ ಬಾಡಿಗೆ ಭತ್ಯೆ ಕಟಾಯಿಸಿರುವ ಕಡತಗಳನ್ನು ಹಾಜರುಪಡಿಸದಿರುವುದು :– (ಆಡಳಿತ ವಿಭಾಗ)</u>**<br>2016–17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಬೋಧಕ, ಬೋಧಕೇತರ ನೌಕರರುಗಳಿಗೆ ವಸತಿಗೃಹಗಳನ್ನು ಹಂಚಿಕೆಮಾಡಿ ಮನೆ ಬಾಡಿಗೆ ಭತ್ಯೆಗಳನ್ನು ಕಟಾಯಿಸಲಾಗಿರುವ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ:41/18–19, ದಿನಾಂಕ:26.06.2018ರಂದು ಕೋರಿರುವುದಕ್ಕೆ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಿಂದ ಉತ್ತರವನ್ನು ಸಲ್ಲಿಸಿ ವಿಶ್ವವಿದ್ಯಾನಿಲಯದ ಎಲ್ಲಾ ವಸತಿ ಗೃಹಗಳನ್ನು ಜೇಷ್ಠತಾ ಪಟ್ಟಿಯ ಅನ್ವಯ ಬೋಧಕ, ಬೋಧಕೇತರ ನೌಕರರುಗಳಿಗೆ ವಸತಿ ಗೃಹಗಳ ನಿರ್ವಹಣಾ ಮತ್ತು ಮನೆ ಬಾಡಿಗೆ ಭತ್ಯೆ ಕಟಾಯಿಸುವ ಕರ್ತವ್ಯವು ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭೀಯಂತರರ ಕರ್ತವ್ಯವಾಗಿದ್ದು, ಆ ವಿಭಾಗದ ಕಛೇರಿಯ ಲೆಕ್ಕಪರಿಶೋಧನಾ ಸಮಯದಲ್ಲಿ ಕಡತಗಳನ್ನು ಹಾಜರುಪಡಿಸಲಾಗುವುದೆಂದು ಉತ್ತರವನ್ನು ನೀಡಿರುತ್ತಾರೆ. ಆದ ಕಾರಣ ಸದರಿ ಕಡತಗಳ ಕಾರ್ಯಪಾಲಕ ಅಭಿಯಂತರರ ಕಛೇರಿ ತಪಾಸಣೆಯ ಸಮಯದಲ್ಲಿ ಕಡತಗಳನ್ನು ಹಾಜರುಪಡಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ. | ವಿಶ್ವವಿದ್ಯಾನಿಲಯದ ಬೋಧಕ/ಬೋಧಕೇತರ ನೌಕರರುಗಳಿಗೆ ವಸತಿ ಗೃಹಗಳನ್ನು ಹಂಚಿಕೆ ಮಾಡಿ ಮನೆ ಬಾಡಿಗೆಯನ್ನು ಕಟ್ಟಿಸುವ ಬಗ್ಗೆ ವಿವರಗಳನ್ನು ಇಂಜಿನಿಯರಿಗೆ ವಿಭಾಗದ ಲೆಕ್ಕ ತನಿಖಾ ಸಮಯದಲ್ಲಿ ಹಾಜರು ಪಡಿಸಲಾಗುತ್ತದೆ. |

| | | |
|---|---|---|
| 71 | **<u>ವೇತನ ಶ್ರೇಣಿ ವಹಿಯನ್ನು ಹಾಜರುಪಡಿಸದಿರುವುದು :– (ಆಡಳಿತ ವಿಭಾಗ)</u>**<br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸೇವಾ ವಹಿಗಳು ಮತ್ತು ವೇತನ ಬಟವಾಡೆ ವಹಿಯನ್ನು ಪರಿಶೀಲಿಸಲಾಗಿ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಅಧ್ಯಯನ ವಿಭಾಗಗಳು, ಪ್ರಾದೇಶಿಕ ಕೇಂದ್ರಗಳು, ಎಲ್ಲಾ ಕಛೇರಿಗಳು ಮತ್ತು ಕಾಲೇಜುಗಳಿಗೆ ವಿವಿಧ ವೃಂದಗಳ/ವಿವಿಧ ಶ್ರೇಣಿಗಳಿಗೆ ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳು, ಮಂಜೂರಾದ ಹುದ್ದೆಗಳಿಗೆ ಎದುರಾಗಿ ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರರು/ಅಧಿಕಾರಿಗಳ ವಿವರಗಳು, ಖಾಲಿ ಇರುವ ಹುದ್ದೆಗಳ ವಿವರಗಳನ್ನೊಳಗೊಂಡ ವಿವರಗಳನ್ನು ನಮೂದಿಸಿ ಶ್ರೇಣಿವಹಿಯನ್ನು ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್/ಸಿಎಸ್‌ಎಲ್/ಹೆಚ್86/ಬೆಂಗಳೂರು/ದಿನಾಂಕ:12.03.1987 ರನ್ವಯ ಪ್ರತಿಯೊಂದು ಕಛೇರಿಯಲ್ಲಿ ಪೂರ್ಣ ವಿವರಗಳನ್ನೊಳಗೊಂಡ ಶ್ರೇಣಿವಹಿಯನ್ನು ನಿರ್ವಹಿಸಬೇಕಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಶಾಖೆಯಲ್ಲಿ ಶ್ರೇಣಿವಹಿಯನ್ನು ನಿರ್ವಹಿಸಿರುವುದನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:01/03.07.2018 ಮತ್ತು ಲೆಕ್ಕಪರಿಶೋಧನೆ ವಿಚಾರಣಾ ಸಂಖ್ಯೆ:47/26.07.2018ರಲ್ಲಿ ಎರಡು ಲೆಕ್ಕಪರಿಶೋಧನಾ ವಿಚಾರಣಾ ಪತ್ರಗಳನ್ನು ನೀಡಲಾಗಿದ್ದರೂ ಸಹ ಕೋರಿರುವ ವಿವರಗಳನ್ನೊಳಗೊಂಡ ಶ್ರೇಣಿವಹಿಯನ್ನು ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮವಹಿಸಿ ಕಛೇರಿ ಮುಖ್ಯಸ್ಥರು ಲೆಕ್ಕಪರಿಶೋಧನೆಗೆ ಹಾಜರುಪಡಿಸದೆ ಇರುವುದರಿಂದ ವೃಂದಗಳವಾರು ಮಂಜೂರಾತಿಯಾಗಿರುವ ಹುದ್ದೆಗಳ ವಿವರಗಳ ಅಂಕಿ ಅಂಶಗಳನ್ನು ಖಚಿತವಾಗಿ ಲೆಕ್ಕಪರಿಶೋಧನೆಯಲ್ಲಿ ತಿಳಿದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕುರಿತು ಕ್ರಮಕೈಗೊಂಡು ವರದಿ ಸಲ್ಲಿಸಲು ಸೂಚಿಸಲಾಗಿದೆ. | ಈ ಕಂಡಿಕೆಯಲ್ಲಿನ ಸೂಚನೆ ಸಲಹೆಗಳನ್ವಯ ವಿಶ್ವವಿದ್ಯಾನಿಲಯದ ಎಲ್ಲಾ ಅಂಗ ಸಂಸ್ಥೆಗಳೂ ಸೇರಿದಂತೆ "ಶ್ರೇಣಿ ವಹಿಯನ್ನು" ನಿರ್ವಹಿಸಿ ಅಗತ್ಯ ಮಾಹಿತಿಗಳೊಂದಿಗೆ ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರು ಪಡಿಸಲಾಗುತ್ತದೆ. |

| | | |
|---|---|---|
| **72** | **<u>ಶ್ರೀಮತಿ ನಗೀನ್ ತಾಜ್ ಗ್ರೂಪ್ ಹೆಡ್ ಇವರಿಗೆ ನಿಯಮ ಉಲ್ಲಂಘಿಸಿ ಹೊಸ ಪಿಂಚಣಿ ಯೋಜನೆ ಬದಲಾಗಿ ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸಿರುವುದು :- (ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ)</u>**<br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಶ್ರೀಮತಿ ನಗೀನ್ ತಾಜ್ ಗ್ರೂಪ್ ಹೆಡ್ ಇವರ ಸೇವಾವಹಿಯನ್ನು ಪರಿಶೀಲಿಸಲಾಗಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:FD(SPL)04/PET/2005/ದಿನಾಂಕ:31.03.2006 ರ ಆದೇಶದನ್ವಯ ದಿನಾಂಕ:01.04.2006ರ ನಂತರ ಕೆಲಸಕ್ಕೆ ವರದಿ ಮಾಡಿಕೊಳ್ಳುವ ನೌಕರರು ಮತ್ತು ಖಾಯಂ ನೇಮಕಾತಿ ಹೊಂದುವ ನೌಕರರುಗಳಿಗೆ ನೂತನ ಯೋಜನೆಯನ್ನು ಜಾರಿಗೊಳಿಸಬೇಕಾಗಿರುತ್ತದೆ.<br>ನಗೀನ್ ತಾಜ್ ಗ್ರೂಪ್ ಹೆಡ್ ಇವರ ಸೇವಾವಹಿಯನ್ನು ಪರಿಶೀಲಿಸಲಾಗಿ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಇಖಿ1/355 (01 ಖಿಔ 35)/2003-04, ದಿನಾಂಕ:01.08.2000ರ ಆದೇಶದನ್ವಯ ದಿನಾಂಕ:01.08.2006 ರಂದು ನೇಮಕಾತಿ ಹೊಂದಿ ಕೆಲಕಸಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಇವರಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದ್ದು, ತದನಂತರ ವಿಶ್ವವಿದ್ಯಾನಿಯಲ ಆದೇಶ ಸಂಖ್ಯೆ:ಇಟಿ1/355/2003-04, ದಿನಾಂಕ:05.06.2014 ಹಾಗೂ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಇಟಿ1/355/2003-04 ದಿನಾಂಕ:04.07.2017ರ ಆದೇಶಗಳನ್ವಯ ಸದರಿ ಉದ್ಯೋಗಿಯನ್ನು ನೂತನ ಪಿಂಚಣಿ ಯೋಜನೆಯಿಂದ ಹಳೆಯ ಪಿಂಚಣಿ ಯೋಜನೆಗೆ ಮಾರ್ಪಾಡಿಸಿ ನೂತನ ಪಿಂಚಣಿ ಯೋಜನೆಯನ್ವಯ ಪ್ರತಿ ಮಾಹೆಯಾನ ಓಕಖ ವಂತಿಗೆ ಕಟಾಯಿಸಿರುವ ಮೊತ್ತ ರೂ.1,05,708/-ಗಳನ್ನು ಸದರಿ ನೌಕರರಿಗೆ ಹಿಂತಿರುಗಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ:ಈಆ(SPL/04/PET/2005, ಬೆಂಗಳೂರು ದಿನಾಂಕ:31.03.2006ರ ಆದೇಶವನ್ನು ಉಲ್ಲಂಘಿಸಿ ಹಳೆಯ ಪಿಂಚಣಿ ಯೋಜನೆಗೆ ಒಳಪಡಿಸಿರುವ ಬಗ್ಗೆ ಸಿಂಡಿಕೇಟ್ ಸಭೆಯ ನಿರ್ಣಯ ಕೈಗೊಂಡು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000ರ ನಿಯಮ 41(5)ರನ್ವಯ ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡಿರುವ | ಶ್ರೀಮತಿ ನಗೀನ್ ತಾಜ್ ಪ್ರಿಂಟರ್ ಗ್ರೇಡ್ 2 ಇವರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 28.6.1992ರಲ್ಲಿ ತಾತ್ಕಾಲಿಕವಾಗಿ ನೇಮಕಾತಿ ಹೊಂದಿ ದಿನಾಂಕ 27.6.2002ಕ್ಕೆ ಹತ್ತು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವುದರಿಂದ ದಿನಾಂಕ 10.1.2013ರ ಕರ್ನಾಟಕ ಆಡಳಿತ ಟ್ರಿ ಬ್ಯೂನಲ್ ನವರ ತೀರ್ಪು ದಿನಾಂಕ3.7.2013ರ ಉಚ್ಚನ್ಯಾಯಲಯದ ತಿರ್ಪು ಹಗೂ ದಿನಾಂಕ 25.11.2013ರ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ವಯ ಇವರನ್ನು ಸೇವೆಯಲ್ಲಿ ಸಕ್ರಮಗೊಳಿಸಿ ಇವರಿಗೆ ಕಾಲ್ಪನಿಕ ವೇತನ ನಿಗಧಿ ಪಡಿಸಲಾಗಿದೆ.<br>ಈ ಸಂಬಂಧ ಕೆಲವು ಸರ್ಕಾರಿ ನೌಕರರು ಸರ್ಕಾರದ ವಿರುದ್ದ ಕರ್ನಾಟಕ ಆಡಳಿತ ಟ್ರಿ ಬ್ಯೂನಲ್ ನಲ್ಲಿ ಮೊಕದ್ದಮೆ ದಾಖಲು ಮಾಡಿದ್ದು ನೌಕರರು ಹತ್ತು ವರ್ಷಗಳೂ ಪೂರೈಯಿಸಿದ ಮರುದಿನದಿಂದಲೇ ಜೇಷ್ಠತೆ ಸೌಲಭ್ಯವನ್ನು ನೀದಬೇಕೆಂದು ಮಾನ್ಯ ಟ್ರಿ ಬ್ಯೂನಲ್ ಆಧೇಶಿಸರುತ್ತದೆ ಈ ಆಧೇಶವನ್ನು ಕರ್ನಾಟಕ ಉಚ್ಚನ್ಯಾಯಾಲಯವು ಮತ್ತು ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯ ಆಧೇಶ ಸಂಖ್ಯೆ ಇ ಟಿ1/355 2003-04 ದಿನಾಂಕ 18.1.2019ರ ಅನ್ವಯದಂತೆ ಶ್ರೀ ಮತಿ ನಗೀನ್ ತಾಜ್ ಪ್ರಿಂಟರ್ ಇವರಿಗೆ ಕಾಲ್ಪನಿಕ ವೇತನ ನಿಗಧಿ ಪಡಿಸಿ ಹಳೆಯ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಲಾಗಿದೆ.<br>ಕರ್ನಾಟಕ ಆಡಳಿತ ಟ್ರಿ ಬ್ಯೂನಲ್ ಬೆಂಗಳೂರುರವರ ದಿನಾಂಕ 10.1.2013ರ ತೀರ್ಪಿನ ಪ್ರತಿ ಕರ್ನಾಟಕ ಉಚ್ಚನ್ಯಾಯಾಲ ದಿನಾಂಕ 3.7.2013ರ ಪ್ರತಿ ವಿಶ್ವವಿದ್ಯಾನಿಲಯದ ಆಧೇಶ ಸಂಖ್ಯೆ ಇ ಟಿ1/355 2003-04 ದಿನಾಮಕ 15.4.2014ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರತಿಗಳನ್ನು ಈ ಕೂಡ ಲಗತ್ತಿ ಸಲ್ಲಿಸುತ್ತಾ ವಸೂಲಾತಿ ಮೊತ್ತ ರೂ.1,05,708/-ಗಳನ್ನು ತೀರುವಳಿಗೊಳಿಸಲು |

| | | |
|---|---|---|
| | ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಿ ನಿಯಮ 41 (6)ರನ್ವಯ ಸಿಂಡಿಕೇಟ್ ಸಭೆಯ ನಿರ್ಣಯದ ಪರಿನಿಯಮಾವಳಿಗಳಿಗೆ ಸರ್ಕಾರ ತಿದ್ದುಪಡಿಗಳೊಂದಿಗೆ ಘನತವೆತ್ತ ಸನ್ಮಾನ್ಯ ಕುಲಾಧಿಪತಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ನಿಯಮ-41(7)ರನ್ವಯ ಸರ್ಕಾರದ ತಿದ್ದುಪಡಿಗಳೊಂದಿಗೆ ಸಲ್ಲಿಸಲಾದ ಸಿಂಡಿಕೇಟ್ ಸಭೆಯ ನಿರ್ಣಯಗಳು/ಪರಿನಿಯಮಗಳಿಗೆ ಘನತವೆತ್ತ ಸನ್ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಸಿಂಡಿಕೇಟ್ ಸಭೆಯ ನಿರ್ಣಯವನ್ನು ಜಾರಿಗೊಳಿಸಬೇಕಾಗಿರುತ್ತದೆ. ಆದರೆ ಸದರಿ ನೌಕರರು ಹಾಗೂ ಇನ್ನಿತರೇ ನೌಕರರುಗಳಿಗೆ ದಿನಾಂಕ:01.08.2006ರಲ್ಲಿ ಖಾಯಂ ನೌಕರರಾಗಿ ನೇಮಕಾತಿ ಹೊಂದಿದ್ದು, ಇವರಿಗೆ ಸರ್ಕಾರಿ ಆದೇಶ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ-2000ರ ನಿಯಮ 41(5), 41(6), 41(7) ನ್ನು ಉಲ್ಲಂಘಿಸಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿರುವುದಕ್ಕೆ ಸರ್ಕಾರದ ಆದೇಶ ಮತ್ತು ಮಾನ್ಯ ಘನತವೆತ್ತ ಕುಲಾಧಿಪತಿಯವರಿಂದ ಅನುಮೋದನೆಯಾಗಿರುವ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:11/28.09.2018ರಲ್ಲಿ ಕೋರಲಾಗಿ, ಕೋರಲಾಗಿರುವ ಸರ್ಕಾರದ ಆದೇಶಗಳು/ಮಾನ್ಯ ಘನತವೆತ್ತ ರಾಜ್ಯಪಾಲರ ಅನುಮೋದಿತ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರಿಂದ ನೂತನ ಪಿಂಚಣಿ ಯೋಜನೆಯಿಂದ (NPS) ಹಳೆಯ ಪಿಂಚಣಿ ಯೋಜನೆಗೆ (OPS) ಒಳಪಡಿಸಿರುವುದನ್ನು ಆಕ್ಷೇಪಿಸಲಾಗಿದ್ದು, ಸದರಿ ಉದ್ಯೋಗಿಯನ್ನು ಹಾಗೂ ಇನ್ನಿತರೇ ಇಂತಹ ಉದ್ಯೋಗಿಗಳಿಗೆ ಜಾರಿ ಮಾಡಿದ್ದಲ್ಲಿ ಹಳೆಯ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ನೂತನ ಪಿಂಚಣಿ ಯೋಜನೆಗೆ ಒಳಪಡಿಸುವಂತೆ ಸೂಚಿಸಿದೆ. ಹಾಗೂ ಎನ್.ಪಿ.ಎಸ್ ವಂತಿಗೆ ಹಿಂದಿರುಗಿಸಿರುವ ಮೊತ್ತ **ರೂ.1,05,708/-ಗಳನ್ನು ನೌಕರರಿಂದ ವಸೂಲಿಸಿ** ಎನ್.ಪಿ.ಎಸ್ ನಿಧಿಗೆ ಜಮಾ ಮಾಡುವುದು. ಹಾಗೂ ಅವರನ್ನು ಎನ್.ಪಿ.ಎಸ್‌ರಡಿ ಪರಿಗಣಿಸುವುದು. | ಕೋರಲಾಗಿದೆ. |

| | | |
|---|---|---|
| **73** | <u>**ಕಂಪೋಜಿಟರ್ ಮತ್ತು ಬೈಂಡರ್ ಹುದ್ದೆಗಳ ವಿಶ್ವವಿದ್ಯಾನಿಲಯದ ಪರಿನಿಯಮ (Statutes)ಗಳನ್ನು ಹಾಜರುಪಡಿಸದಿರುವುದು :– (ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ)**</u><br>2016–17ನೇ ಸಾಲಿನ ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ ಕಛೇರಿಯ ನೌಕರರುಗಳ ಸೇವಾವಹಿಗಳನ್ನು ಪರಿಶೀಲಿಸಲಾಗಿ ಕಂಪೋಜೀಟರ್ ಗ್ರೇಡ್–II, ಬೈಂಡರ್ ಗ್ರೇಡ್–II ಹುದ್ದೆಗಳಿಂದ ಕಂಪೋಜೀಟರ್ ಗ್ರೇಡ್–I, ಬೈಂಡರ್ ಗ್ರೇಡ್– I ಹುದ್ದೆಗಳಿಗೆ ಪದೋನ್ನತಿ/ಮುಂಬಡ್ತಿಯನ್ನು ನೀಡಿದ್ದು, ಮುಂಬಡ್ತಿ ಹೊಂದಲು ವಿದ್ಯಾರ್ಹತೆ, ಇಲಾಖಾ ಪರೀಕ್ಷೆಗಳ ತೇರ್ಗಡೆ ಹಾಗೂ ಬೈಂಡರ್ ಗ್ರೇಡ್–I ಮತ್ತು ಕಂಪೋಜೀಟರ್ ಗ್ರೇಡ್–I ಹುದ್ದೆಗಳ ಮಂಜೂರಾತಿಗೆ ಎದುರಾಗಿ ಪದೋನ್ನತಿಯನ್ನು ನೀಡಿರುವುದನ್ನು ಪರಿಶೀಲಿಸಲು ಕಂಪೋಜೀಟರ್ ಮತ್ತು ಬೈಂಡರ್ ಹುದ್ದೆಗಳ ಪರಿನಿಯಮ (Statutes)ಗಳನ್ನು ಹಾಗೂ ಅವು ಕುಲಾಧಿಪತಿಗಳಿಂದ ಅಂಗೀಕಾರವಾಗಿರುವುದನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:03/17.09.2018ರಲ್ಲಿ ಕೋರಲಾಗಿ ಕೋರಲಾಗಿರುವ ಪರಿನಿಯಮಗಳ ಕಡತಗಳನ್ನು ಹಾಜರುಪಡಿಸದಿರುವುದರಿಂದ ಸದರಿ ಪದೋನ್ನತಿಯ ಕಡತಗಳನ್ನು ಪರಿಶೀಲಿಸಲು ಸಾಧ್ಯವಾಗದಿರುವುದರಿಂದ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಲೆಕ್ಕಪರಿಶೋಧನೆಗೆ ಕೋರಿರುವ ಪರಿನಿಯಮಗಳನ್ನು ಹಾಜರುಪಡಿಸುವಂತೆ ಸೂಚಿಸಿದೆ. ಅಲ್ಲಿಯವರೆವಿಗೆ ಈ ಪದೋನ್ನತಿ ನೀಡಿರುವುದನ್ನು ಆಕ್ಷೇಪಿಸಲಾಗಿದೆ. | ಮಾನ್ಯ ಅಫರ ನಿರ್ದೇಶಕರು ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಪ್ರಾಂತೀಯ ಕಛೇರಿ ಮೈಸೂರು ವಿಭಾಗ ಮಯಸೂರುರವರು ತಮ್ಮ ಪತ್ರ ಸಂಖ್ಯೆ ಅನಿ/ಪ್ರಾ ಕ ಮೈ/ ಲೆಡರ್ ಅನಿಪಾಲನೆ/2019–20/1782–84 ದಿನಾಂಕ 11.10.2019ರ ಅನ್ವಯದಂತೆ ಕಂಪೋಜಿಟರ್ ಮತ್ತು ಬೈಂಡರ್ ಹುದ್ದೆಗಳಿಗೆ ರಚಿಸಲದ ಪರಿನಿಯಮವನ್ನು ಕೂಲಂಕಶಚಾಗಿ ಪರಿಶಿಲಿಸಿದ ನಂತರ ಈ ಕಂಡಿಕೆಯ ಆಕ್ಷೇಪಣೆಯನ್ನು ತೀರುವಲಿ ಗೊಳಿಸಿರುತ್ತಾರೆ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ. |

| | | |
|---|---|---|
| **74** | **<u>ಇ.ಎಂ.ಎಂ.ಆರ್.ಸಿ ಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಮಕ್ಕಳಿಗೆ ಶೈಕ್ಷಣಿಕ ಭತ್ಯೆಯನ್ನು ಪಾವತಿಸಿರುವುದು:– (ಶೈಕ್ಷಣಿಕ ಬಹುಮಾದ್ಯಮ ಸಂಶೋಧನಾ ಕೇಂದ್ರ)</u>**<br>2016–17ನೇ ಸಾಲಿನ ಇ.ಎಂ.ಎಂ.ಆರ್.ಸಿ ಸಂಸ್ಥೆಯ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಲಾದ ವೋಚರ್‌ಗಳನ್ನು ಪರಿಶೀಲಿಸಲಾಗಿ ಸಂಸ್ಥೆಯಲ್ಲಿನ ನೌಕರರ ಮಕ್ಕಳಿಗೆ ಶೈಕ್ಷಣಿಕ ಭತ್ಯೆಯನ್ನು ಪಾವತಿಸಿರುವುದನ್ನು ಪರಿಶೀಲಿಸಲಾಯಿತು. (O.M No:12011/03/2008 estt (Allowance) ದಿನಾಂಕ:02.09.2008). Govt of India (ministry of personnel, public grievances and pensions ರ ಆದೇಶದಂತೆ ಪ್ಯಾರಾ 2 (ಎ) ರಲ್ಲಿ ತಿಳಿಸಲಾಗಿರುವಂತೆ ಪ್ರತಿ ಮಗುವಿಗೆ ರೂ.18,000/– ರಂತೆ ಪಾವತಿಸಲಾಗಿದೆ. ಸದರಿ ಶೈಕ್ಷಣಿಕ ಭತ್ಯೆಯು 10+2 ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವವರಿಗೆ ಪಾವತಿಸಬೇಕಾಗಿದ್ದು, ಈ ಸಂಬಂಧ ಸದರಿ ಸಾಲಿನಲ್ಲಿ ಪಾವತಿಸಲಾಗಿರುವ ಮಕ್ಕಳು ಯಾವ ಕಾಲೇಜು/ಶಾಲೆ ಹಾಗೂ ಯಾವ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆಂದು ದೃಢೀಕರಿಸುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:10/2018–19 ದಿನಾಂಕ:09.11.2018 ರಲ್ಲಿ ಕೋರಲಾಗಿಯೂ ಸಹ ಯಾವುದೇ ಪ್ರಮಾಣ ಪತ್ರ/ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಕೋರಲಾದ ಪ್ರಮಾಣ ಪತ್ರ/ ದಾಖಲಾತಿಗಳನ್ನು ಹಾಜರುಪಡಿಸುವವರೆಗೂ **<u>ಅನುಬಂಧ–25ರಲ್ಲಿ</u>** ವಿವರಿಸಲಾಗಿರುವಂತೆ ಒಟ್ಟು ಮೊತ್ತ **ರೂ.3,06,000/– ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** | ಕೇಂದ್ರ ಸರ್ಕಾರದ ಠಿಜಡಿಠಟಿಟಿಜಟ & Trainnin ರ ಇಲಾಖೆಯ ಜ್ಞಾಪನಾ ಪತ್ರ ಸಂಖ್ಯೆ:12011/03/2008,estt (Allowance) ದಿನಾಂಕ:02.09.2008 ಮತ್ತು ಪತ್ರ ಸಂಖ್ಯೆ: 27012/1/2014,estt(Allowance) ದಿನಾಂಕ:28.04.2014ರ ಅನ್ವಯದಂತೆ ವಿಶ್ವವಿದ್ಯಾನಿಲಯದ ಇ.ಎಂ.ಆರ್.ಸಿ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಮಕ್ಕಳಿಗೆ ಶೈಕ್ಷಣಿಕ ಭತ್ಯೆಯನ್ನು ಪಾವತಿಸುವ ಸಂಬಂಧವಾಗಿ ಇ.ಎಂ.ಆರ್.ಸಿ ಕಛೇರಿ ಆದೇಶ ಸಂಖ್ಯೆ:928–930/2015–16, ದಿನಾಂಕ:08.03.2017ರಲ್ಲಿ 2016–17ನೇ ಸಾಲಿನಲ್ಲಿ ವ್ಯಾಸಂಗ ಮಾಡಿತ್ತಿರುವ ನೌಕರರ ಮಕ್ಕಳಿಗೆ ಶೈಕ್ಷಣಿಕ ಭತ್ಯೆಯ ಒಟ್ಟು ಮೊತ್ತ **ರೂ.3,06,000/–ಗಳನ್ನು** ಪಾವತಿಸಿದ್ದು ಸದರಿ ನೌಕರರ ಮಕ್ಕಳು 2016–17ನೇ ಸಾಲಿನಲ್ಲಿ ವ್ಯಾಸಂಗ ಮಾಡಿದ ಶಾಲೆ/ಕಾಲೇಜು ಹಾಗೂ ಯಾವ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ಆಯಾಯ ಶಾಲೆಯ/ಕಾಲೇಜುಗಳ ಮುಖ್ಯೋಪಾಧ್ಯಾಯರು/ ಪ್ರಾಂಶುಪಾಲರುಗಳಿಂದ ಪಡೆದ ಪ್ರಮಾಣ ಪತ್ರದ ಧೃಢೀಕೃತ ಪ್ರತಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ **ರೂ.3,06,000/–ಗಳನ್ನು** ತೀರುವಳಿಗೊಳಿಸುವಂತೆ ಕೋರಿದೆ. |

| | | |
|---|---|---|
| 75 | **ವಿದ್ಯಾರ್ಥಿ ಕ್ಷೇಮಾ ಪಾಲನಾ ವಿಭಾಗದ ನಿಲಯದ ಸಹಾಯಕರು ಹಾಗೂ ಆಫೀಸ್ ಸ್ಟಾಫ್‌ಗಳ ನೇಮಕಾತಿ ಮಾಡಿಕೊಂಡು ಸಂಭಾವನೆ ಪಾವತಿಸಿರುವುದು:– (ವಿದ್ಯಾರ್ಥಿ ಕ್ಷೇಮಪಾಲನಾ)**<br>2016–17ನೇ ಸಾಲಿನ ಲೆಕ್ಕಪರಿಶೋಧನೆ ವಿದ್ಯಾರ್ಥಿ ಕ್ಷೇಮಾಪಾಲನಾ ವಿಭಾಗದ ನಿಲಯದ ಸಹಾಯಕರು/ ಆಫೀಸ್ ಸ್ಟಾಫ್‌ಗಳ ನೇಮಕಾತಿ ಮಾಡಿಕೊಂಡು ಮಾರ್ಚಿ 2016 ರಿಂದ ಫೆಬ್ರವರಿ 2017 ವೇತನ ಪಾವತಿಸದ ಆದರೆ ಮೇಲೆ ವೇತನ ನಿಗದಿಪಡಿಸಿ ಪ್ರತಿ ಮಾಹೆಯಲ್ಲಿ ಸಂಭಾವನೆ ಪಾವತಿಸದೆ ಪಾವತಿಸಿರುವ ಬಿಲ್ಲಿನ ಮೊಬಲಗು ಒಂದು ಲಕ್ಷಕ್ಕಿಂತ ಹೆಚ್ಚಿಗೆ ಹಾಗೂ 5 ಲಕ್ಷಕ್ಕಿಂತ ಹೆಚ್ಚಾಗಿ ಪಾವತಿಸಿರುವುದರಿಂದ ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಬೇಕಾಗಿರುತ್ತದೆ. ಟೆಂಡರ್ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ನೀಡಿ ಪಾರದರ್ಶಕತೆ ನಿಯಮ ಉಲ್ಲಂಘಿಸಿ ಸಂಭಾವನೆ ಪಾವತಿಸಿರುವುದು 2016–17ನೇ ಸಾಲಿಗೆ ಪರಿಷ್ಕೃತ ಆದೇಶ ಪಡೆಯದೆ 2015–16ನೇ ಸಾಲಿನಲ್ಲಿ ದಿನಾಂಕ:01.04.2015 ರಂದು ಜಾರಿಗೆ ಬಂದ ಆದೇಶದ ಮೇರೆಗೆ ಆಡಿಟ್ ಸಂಖ್ಯೆ:ಇಟಿ10/643/2012–13 ದಿನಾಂಕ:16.06.2015 ಕುಲಸಚಿವರ ಆದೇಶ ಮೇರೆಗೆ ವೇತನ ಪಾವತಿಸಿರುವುದು ಪಾರದರ್ಶಕತೆ ನಿಯಮ ಉಲ್ಲಂಘಿಸಿ ಹಾಗೂ 2016–17ನೇ ಸಾಲಿಗೆ ಪರಿಷ್ಕೃತ ಆದೇಶ ಪಡೆಯದೆ ಹಿಂದಿನ ಆದೇಶದ ಮೇರೆಗೆ ನಿಯಮಬಾಹಿರವಾಗಿ ವೇತನ ಪಾವತಿಸಿರುವ ವಿಚಾರದಲ್ಲಿ ವಿಚಾರಣೆ ಸಂಖ್ಯೆ2/2018–19 ದಿನಾಂಕ:15.10.2018 ರಂದು ವಿಚಾರಣೆ ನೀಡಲಾಗಿದ್ದು ವಿಚಾರಣೆಗೆ ವಿವರಣೆ ನೀಡದೆ ಪರಿಷ್ಕೃತ ಆದೇಶ ಕಡತ ಹಾಜರುಪಡಿಸದೆ ಟೆಂಡರ್ ಕರೆಯದೆ ಇರುವುದರಿಂದ ಮೊಬಲಗು **ರೂ.14,46,893/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**<br>ದಿನಾಂಕ:2/2018–19 ದಿನಾಂಕ:13.10.2018 ನೀಡಿರುವ ವಿಚಾರಣೆಗೆ ಸಲ್ಲಿಸಿರುವ ಪಾಲನಾ ವರದಿ (15.10.2018) ಕೆ.ಟಿ.ಪಿ.ಪಿ ನಿಯಮ ಉಲ್ಲಂಘನೆಯಾಗಿರುವುದರಿಂದ ಕಂಡಿಕೆ ಆಕ್ಷೇಪಣೆಯಲ್ಲಿಡಲಾಗಿದೆ. | ಮಾನ್ಯ ಕುಲಪತಿಗಳ ಅನುಮೋಧನೆ ಮೇರೆಗೆ ವಿಶ್ವವಿದ್ಯಾಲಯದ ಆಧೇಶ ಸಂಖ್ಯೆ: ಇಟಿ10/643/2012–13 ದಿನಾಂಕ:16.06.2015ರ ಅನ್ವಯದಂತೆ ವಿದಾರ್ಥಿನಿಲಯಗಳಲ್ಲಿ ಹಿಂದಿನ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 20 ಮಂದಿ ಹಾಸ್ಟೆಲ್ ಅಸಿಸ್ಟೆಂಟ್/ಆಫೀಸ್ ಸ್ಟಾಪ್ ಗಳಿಗೆ ದಿನ ಬಂದಕ್ಕೆ ನೀಡಲಾಗುತ್ತಿದ್ದ ಲೋಕೋಪಯೋಗಿ ಇಲಾಖೆ ಎಸ್ ಆರ್ ದರ ರೂ.183–24ಗಳನ್ನು ಪರಿಷ್ಕರಿಸಿ ದಿನಾಂಕ 1.4.2015ರಿಂದ ಜಾರಿಗೆ ಬಂದಂತೆ ಪ್ರಸ್ತುತ ಚಾಲ್ತಿಯಲ್ಲಿರುವ ಎಸ್ ಆರ್ ದರ ದಿನ ಒಂದಕ್ಕೆ ರೂ.225.91ಗಳನ್ನು ನೀಡಲು ಮಂಜೂರಾತಿ ನೀಡಲಾಗಿರುತ್ತದೆ ಇವರುಗಳಿಗೆ ಎಸ್ ಆರ್ ದರ ನಿಗಧಿ ಮಾಡಿರುವುದುರಿಂದ ಟೆಂಡರ್ ಕರೆದಿರುವುದಿಲ್ಲ ಪರಿಷ್ಕತ ಎಸ್ ಆರ್ ದರವು ದಿನಾಂಕ 1.4.2015ರಿಂದ ಜಾರಿಗೆ ಬಂದಿರುವುದರಿಂದ ಪರಿಷ್ಕೃತ ವ್ಯತ್ಯಾಸದ ದರವೂ ಸೇರಿದಂತೆ ಒಟ್ಟು ಮೊತ್ತ ರೂ.14,46,895/–ಗಳ ವೆಚ್ಚ ಭರಿಸಲಾಗಿದೆ<br>ವಿಶ್ವವಿದ್ಯಾನಿಲಯದ ದಿನಾಂಕ 16.6.2015ರ ಆಧೇಶದ ಪ್ರತಿಯನ್ನ ಲಗತ್ತಿಸಿದೆ. |

| | | |
|---|---|---|
| **76** | <u>**ಸಿಬ್ಬಂದಿ/ಹೌಸ್ ಕೀಪಿಂಗ್ ನೌಕರರ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು:–**</u><br><u>**(ವಿದ್ಯಾರ್ಥಿ ಕ್ಷೇಮಪಾಲನ)**</u><br>2016–17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಾ ಪಾಲನಾ ವಿಭಾಗದಲ್ಲಿ ಮಾರ್ಚಿ 2016 ರಿಂದ ಫೆಬ್ರವರಿ 2017 ವರೆಗೆ ಲೆಕ್ಕಶೀರ್ಷಿಕೆ 262 ರಲ್ಲಿ ವಾರ್ಷಿಕ ಲೆಕ್ಕಪತ್ರದಂತೆ ಸ್ವಚ್ಛತಾ ಸಿಬ್ಬಂದಿಗಳ ವೇತನ ವೆಚ್ಚ ಮಾಡಿರುವಂತೆ ಆದೇಶದ ಸಂಖ್ಯೆ:ಇಟಿ1/130/2010–11 ದಿನಾಂಕ:23.09.2016 ರಂದು ಕುಲಸಚಿವರ ಆದೇಶದ ಮೇರೆಗೆ ಎಸ್.ಆರ್ ದರದಂತೆ ವೇತನ ಪಾವತಿಸಿದೆ. ಆದರೆ ಪಾವತಿಸಿರುವ ಮೊಬಲಗು 5 ಲಕ್ಷಕ್ಕಿಂತ ಹೆಚ್ಚಿಗೆ ಪಾವತಿಸಿರುವುದರಿಂದ ಪ್ರೊಕ್ಯೂರ್‌ಮೆಂಟ್ ಟೆಂಡರ್ ಮುಖಾಂತರ ಪ್ಯಾಕೇಜ್ ಸಿಸ್ಟಂ ಟೆಂಡರ್ ಕರೆದು ಮುಖಾಂತರ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ಟೆಂಡರ್ ಕರೆಯದೇ ವೇತನ ಪಾವತಿಸಿರುವುದು ಹಾಗೂ ಲೆಕ್ಕಪರಿಶೋಧನೆಗೆ ಯಾವುದೇ ಕಡತ ಹಾಜರುಪಡಿಸದೆ ಇರುವುದರಿಂದ ಹಾಗೂ ಈ ಕೆಳಕಂಡಂತೆ ವಿಚಾರಣೆಗಳನ್ನು ನೀಡಲಾಗಿದ್ದರೂ ವಿವರಣೆ ನೀಡದೆ ಇರುವುದರಿಂದ ಪಾವತಿಸಿರುವ ಮೊಬಲಗು **ರೂ.57,16,015/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಆಕಂಖ/02/ಇಕಖ/2011(3) ದಿ:29.07.2011<br><br>**All procurement:** Notification No:DPAR 2 EPR 2009 Dtd:09.10.2012 Government of Karnataka here by specify that all procurement entities in respect of every procurement under the said act value of which exceeds rupees 5 lakhs shall procure their procurements through e procurement plat form with effect from the third day of December 2012.<br>5 ಲಕ್ಷಕ್ಕೆ ಮೀರಿದ ಟೆಂಡರ್ ಪ್ರಕ್ರಿಯೆಯನ್ನು ವಿದ್ಯುನ್ಮಾನ ಸಂಗ್ರಹಣಾ – ಮೂಲಕ (ಇ–ಪ್ರೊಕ್ಯೂರ್‌ಮೆಂಟ್) ಮೂಲಕವೇ ಡಿಸೆಂಬರ್ 2012 ರಿಂದ ಅನುಷ್ಠಾನಗೊಳಿಸಬೇಕಾಗಿದೆ.<br><br>**ವಿಚಾರಣಾ ಸಂಖ್ಯೆ:** | ಮಾನ್ಯ ಕುಲಪತಿಗಳ ಅನುಮೋಧನೆ ಮೇರೆಗೆ ವಿಶ್ವವಿದ್ಯಾಲಯದ ಆಧೇಶ ಸಂಖ್ಯೆ:ಇಟಿ10/643/2012–13 ದಿನಾಂಕ:16.06.2015 ರ ಅನ್ವಯದಂತೆ ವಿದಾರ್ಥಿನಿಲಯಗಳಲ್ಲಿ ಹಿಂದಿನ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 54 ಮಂದಿ ಸಿಬ್ಬಂದಿ ಮತ್ತು ಹೌಸ್ ಕೀಪಿಂಗ್ ನೌಕರರಿಗೆ ಹಿಂದೆ ದಿನ ಒಂದಕ್ಕ ನೀಡಲಾಗುತ್ತಿದ್ದ<br>ದರ ರೂ.183–24ಗಳನ್ನು ಪರಿಷ್ಕರಿಸಿ ದಿನಾಂಕ 1.4.2015ರಿಂದ ಜಾರಿಗೆ ಬಂದಂತೆ ಪ್ರಸ್ತುತ ಚಾಲ್ತಿಯಲ್ಲಿರುವ ದರ ದಿನ ಒಂದಕ್ಕೆ ರೂ.225.91ಗಳನ್ನು ನೀಡಲು ಮಂಜೂರಾತಿ ನೀಡಲಾಗಿರುತ್ತದೆ ಇವರುಗಳಿಗೆ ಎಸ್ ಆರ್ ಪರಿಷ್ಕೃತ ದರ ದಿನಾಂಕ 1.4.2015ರಿಂದ ಜಾರಿಗೆ ಬಂದಿರುವುದರಿಂದ ವ್ಯತ್ಯಾಸದ ದರವೂ ಸೇರಿದಂತೆ ಒಟ್ಟು ಮೊತ್ತ ರೂ.571615/–ಗಳ ವೆಚ್ಚ ಭರಿಸಲಾಗಿದೆ .ಇವರುಗಳಿಗೆ ದರದಲ್ಲಿ ಸಂಭಾವನೆ ನೀಡುತ್ತಿರುವುದರಿಂದ ಟೆಂಡರ್ ಕರೆದಿರುವುದಿಲ್ಲ.<br>ವಿಶ್ವವಿದ್ಯಾನಿಲಯದ ದಿನಾಂಕ 16.6.2015ರ ಆಧೇಶದ ಪ್ರತಿಯನ್ನ ಲಗತ್ತಿಸಿದೆ. |

1) ವಿಚಾರಣೆ ಸಂಖ್ಯೆ:8/ 2018–19 ದಿ:15.10.2018

2) ವಿಚಾರಣೆ ಸಂಖ್ಯೆ:11/ 2018–19 ದಿ:22.10.2018

3) ವಿಚಾರಣೆ ಸಂಖ್ಯೆ:12/ 2018–19 ದಿ:22.10.2018

4) ವಿಚಾರಣೆ ಸಂಖ್ಯೆ:9/ 2018–19 ದಿ:20.10.2018

5) ವಿಚಾರಣೆ ಸಂಖ್ಯೆ:2/ 2018–19 ದಿ:15.10.2018, ವಿವರದಲ್ಲಿ ತಿಳಿಸಿರುವಂತೆ ವಿಚಾರಣೆ ನೀಡಲಾಗಿದ್ದರೂ ವಿಚಾರಣೆಗೆ ಅನುಪಾಲನಾ ವರದಿ, ಟೆಂಡರ್ ಕಡತ, ಹಾಜರಾತಿ ವಿವರ ಇ.ಪಿ.ಎಫ, ಪಿ.ಎಫ್, ಇ.ಎಸ್.ಐ ಕಟಾಯಿಸಿ ಜಮೆ ಮಾಡಿರುವ ಲೆಕ್ಕಶೀರ್ಷಿಕೆ ವಿವರ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ವೇತನ ವ್ಯತ್ಯಾಸ ಪಾವತಿಸಿರುವುದನ್ನು ಸಂಬಂಧಿಸಿ ಪರಿಷ್ಕೃತ ಪಿ.ಡ.ಬ್ಲ್ಯೂ ಎಸ್.ಆರ್ ಆದೇಶ ಪ್ರತಿ ಸಿಂಡಿಕೇಟ್ ಸಭೆ ಅನುಮೋದನೆ ಆದೇಶ ಪ್ರತಿ ವೇತನ ವ್ಯತ್ಯಾಸ ಜಣಾಜ ಜಡಿಚಿತಿಟಿ ಣಚಿಣಜಟಜಟಣ ಬ್ಯಾಂಕ್ ಖಾತೆಯ ಪಾವತಿ ಹಾಜರಾತಿ ಹಾಜರುಪಡಿಸದೆ ಇರುವುದರಿಂದ ಒಟ್ಟು ಮೊಬಲಗು (ರೂ.48,26,060 ಮತ್ತು ರೂ.8,89,955 ಒಟ್ಟು ರೂ.57,16,015) ಪಾವತಿಸಿರುವುದು ಸದರಿ ಸಾಲಿನಲ್ಲಿ ಕಂಡು ಬಂದಿರುತ್ತದೆ ಮತ್ತು ಈ ಬಗ್ಗೆ ಕ್ರಮ ಕೈಗೊಂಡು ಟೆಂಡರ್ ಕಡತ ಮುಂದಿನ ತಪಾಸಣೆ ಅವಧಿಯಲ್ಲಿ ಹಾಜರುಪಡಿಸಿ ಕಂಡಿಕೆಗೆ ಪಾಲನಾ ವರದಿ ನೀಡಲು ತಿಳಿಸಿದೆ. ವಿವರವನ್ನು **ಅನುಬಂಧ–26** ರಲ್ಲಿ ತಿಳಿಸಿದೆ.

ಮೇಲಿನ ವಿವರದಂತೆ ನೀಡಿರುವ ವಿಚಾರಣೆಗಳಿಗೆ ದಿನಾಂಕ:31.10.2018 ರಂದು ತಾವು ಸಲ್ಲಿಸಿರುವ ಪಾಲನಾ ವರದಿಯನ್ನು ಪರಿಶೀಲಿಸಿದಾಗ ಪಾವತಿಸಿರುವ ಮೊಬಲಗು ಮೇಲಿನ ಸರ್ಕಾರಿ ಅಧಿ ಸೂಚನೆಯಂತೆ ರೂ.5 ಲಕ್ಷಗಳಿಗಿಂತ ಹೆಚ್ಚಿಗೆ ಪಾವತಿಸಿರುವುದರಿಂದ ಇ–ಪ್ರೊಕ್ಯೂರ್‌ಮೆಂಟ್ ಪ್ಯಾಕೇಜ್ ಸಿಸ್ಟಂ ಆಫ್ ಟೆಂಡರ್ ಕರೆಯಬೇಕಾಗಿದ್ದು, ಟೆಂಡರ್ ಕರೆಯದೇ ಬಿಲ್ಲುಗಳನ್ನು ಪಾವತಿಸಿರುವುದು ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆಯಾಗಿರುವುದರಿಂದ ನೀಡಿರುವ ಪಾಲನಾ ವರದಿಯನ್ನು ಪರಿಗಣಿಸಲು ಸಾಧ್ಯವಿಲ್ಲದ ಕಾರಣ ಆಡಿಟ್ ವರದಿಯಲ್ಲಿ ಆಕ್ಷೇಪಿಸಲಾಗಿದೆ.

| | | |
|---|---|---|
| | ವಿಚಾರಣೆ ಸಂಖ್ಯೆ: /20.10.2018 ಸೂಕ್ತ ದಾಖಲಾತಿಗಳು ಪಾಲನಾ ವರದಿಯಲ್ಲಿ ಲಗತ್ತಿಸದೆ ಇರುವುದರಿಂದ ಕಂಡಿಕೆಗೆ ಅನುಪಾಲನಾ ವರದಿ ನೀಡಬೇಕಾಗಿದೆ. | |

| | | |
|---|---|---|
| **77** | **<u>ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕಾತಿ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನನು ಹಾಜರುಪಡಿಸದಿರುವುದು :- (ಯುವರಾಜ ಕಾಲೇಜು)</u>**<br>2016-17ನೇ ಸಾಲಿನ ಯುವರಾಜ ಕಾಲೇಜಿನ ಲೆಕ್ಕಪರಿಶೋಧನೆಯಲ್ಲಿ ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ನೌಕರರುಗಳನ್ನು ನೇಮಕ ಮಾಡಿಕೊಂಡು ವೇತನ ಭತ್ಯೆಗಳನ್ನು ಪಾವತಿಸಿರುವ ವೇತನ ಬಟವಾಡೆ ವಹಿಯನ್ನು ಪರಿಶೀಲಿಸಲಾಗಿ 2016-17ನೇ ಸಾಲಿಗೆ ರೂ.50,56,885/-ಗಳನ್ನು ಪಾವತಿಸಲಾಗಿದ್ದು, ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕಾತಿ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:01/2018-19 ದಿನಾಂಕ:01.07.2018, 04/2018-19 ದಿನಾಂಕ:03.09.2018 ಹಾಗೂ 26/2018-19 ದಿನಾಂಕ:19.09.2018ರಲ್ಲಿ ಕೋರಲಾಗಿದ್ದರೂ ಸಹ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.<br>ತಾತ್ಕಾಲಿಕ/ಸಂಚಿತ ವೇತನ ನೌಕರರ ನೇಮಕಾತಿ ಪ್ರಕ್ರಿಯೆಯು ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ನಿಯಮ 56, 57ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗೂ ಮಂಜೂರಾತಿ ಹುದ್ದೆಗಳಲ್ಲಿ ಖಾಯಂ ನೌಕರರನ್ನು ಒಟ್ಟು ಉಳಿಕೆ, ಖಾಲಿ ಹುದ್ದೆಗಳಿಗೆ ಎದುರಾಗಿ ನಿಯಮಾನುಸಾರ ನೇಮಕ ಪ್ರಕ್ರಿಯೆ ಕೈಗೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲು ಸಾಧ್ಯವಾಗಿರದ ಕಾರಣ ತಾತ್ಕಾಲಿಕ/ಸಂಚಿತ ವೇತನ ನೌಕರರ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸುವವರೆಗೂ **ರೂ.50,56,885/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** ವಿವರಗಳನ್ನು<u>**ಅನುಬಂಧ-27ರಲ್ಲಿ ನೀಡಲಾಗಿದ್ದು,**</u> ವರದಿಗೆ ಲಗತ್ತಿಸಿದೆ. | ಕಂಡಿಕೆಯಲ್ಲಿನ ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಯುವರಾಜ ಕಾಲೇಜಿನಲ್ಲಿ 2016-17 ನೇ ಸಾಲಿನಲ್ಲಿ ತಾತ್ಕಾಲಿಕ ವೇತನದಡಿಯಲ್ಲಿ ನೌಕರರನ್ನು ನೇಮಕ ಮಾಡಿಕೊಂಡು ವೇತನ ಪಾವತಿಸಲು ಯುವರಾಜ ಕಾಲೇಜಿನ 16ನೇ ಅಡಳಿತ ಮಂಡಳಿಯ ದಿನಾಂಕ:15.10.2016 ರ ಸಭೆಯ (ಉಲ್ಲೇಖ.UOM/YCM/179/2016-17 ದಿನಾಂಕ 13.10.2016) ನಿರ್ಣಯದ ಅನ್ವಯ 2016/10/4.2 ಸದರಿ ಕಾಲೇಜಿನಲ್ಲಿ ಸುಗಮ ಆಡಳಿತಾತ್ಮಕ ಕಾರ್ಯಗಳ ನಿರ್ವಹಣೆಯ ಸಲುವಾಗಿ ತಾತ್ಕಾಲಿಕವಾದ ವೇತನದಡಿಯಲ್ಲಿ ಸಿಬ್ಬಂಧಿಯನ್ನು ನೇಮಕ ಮಾಡಿಕೊಳ್ಳಬೇಕಾದ ತುರ್ತು ಅವಶ್ಯಕತೆಯ ಪ್ರಸ್ತಾವನೆಯು ಪ್ರಾಂಶುಪಾಲರು ಯುವರಾಜ ಕಾಲೇಜು ಪ್ರಿನ್ಸಿಪಾಲ್ ಮತ್ತು ಏಕ್ಸ್ ಅಫಿಶಿಯಾ ಮೆಂಬರ್ ಸೆಕ್ರಟರಿ ಇವರಿಂದ ಮಂಡಿತವಾಗಿ ಸಭೆಯಲ್ಲಿ ಸರ್ವಾನುಮತದಿಂದ ಈ ನಿರ್ಣಯವು ಪ್ರಸ್ತಾವಿತವಾಗಿ ಮಾನ್ಯ ಕುಲಸಚಿವರಿಂದ ಅನುಮೋದಿತವಾಗಿರುತ್ತದೆ. (ಈ ಸಂಬಂಧದ ಆದೇಶದ ಪ್ರತಿ ಲಗತ್ತಿಸಿದೆ.)<br>ಸದರಿ ಸಭೆಯಲ್ಲಿ ಒಟ್ಟು 61 ಸಂಖ್ಯೆ ಭೋದಕೇತರ ಸಿಬ್ಬಂಧಿಯನ್ನು ನೇಮಕ ಮಾಡಿಕೊಳ್ಳಲು ಅನುಮೋದಿವಾಗಿರುವ ಮತ್ತು ಇದರಡಿಯಲ್ಲಿ ತಾತ್ಕಾಲಿಕ ವೇತನ ಪಡೆದಿರುವ (ಪ್ರಾಂಶುಪಾಲರು ಯುವರಾಜ ಕಾಲೇಜು ಇವರಿಂದ ಧೃಢೀಕರಣ ಆಗಿರುವ ಪತ್ರದ ಪ್ರತಿಯನ್ನು ಲಗತ್ತಿಸಿದೆ)<br>2016-17 ನೇ ಸಾಲಿನಲ್ಲಿ ಭೋದಕೇತರ ಸಿಬ್ಬಂದಿಗೆ ಸಂಚಿತ ವೇತನ ರೂಪದಲ್ಲಿ ಪಾವತಿಯಾಗಿರುವ ಒಟ್ಟು ಮೊತ್ತ ರೂ.50,56,885/- ಸಂಬಂಧಿಸಿದ ಪ್ರತಿ ಲಗತ್ತಿಸಿದೆ<br>ಅದ್ದರಿಂದ ಸದರಿ ಕಂಡಿಕೆಯನ್ನು ಕೈ ಬಿಡಲು ಕೊರಿದೆ. |

| 78 | **<u>ಆಯ್ಕೆ ಸಮಿತಿ ಸದಸ್ಯರುಗಳು ಹಾಗೂ ಶೈಕ್ಷಣಿಕ ಮತ್ತು ಆಡಳಿತ ಮಂಡಳಿಗಳ ಸಭೆಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸಭಾ ಭತ್ಯೆಯನ್ನು ಪಾವತಿಸಿರುವುದು :– (ಯುವರಾಜ ಕಾಲೇಜು)</u>**<br>2016–17ನೇ ಸಾಲಿನ ಯುವರಾಜ ಕಾಲೇಜಿನ ಲೆಕ್ಕ ಪರಿಶೋಧನೆಯಲ್ಲಿ ಜಿ.ಆರ್.ಎ ಖಾತೆಗೆ ಸಂಬಂಧಿಸಿದ ಓಚರ್‌ಗಳನ್ನು ಪರಿಶೀಲಿಸಲಾಗಿ ಗುತ್ತಿಗೆ ಆಧಾರಿತ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಸಂದರ್ಶನ ನಡೆಸಿ ಆಯ್ಕೆ ಮಾಡಲು ರಚಿಸಿದ್ದ ಆಯ್ಕೆ ಸಮಿತಿ ಸದಸ್ಯರುಗಳಿಗೆ ಹಾಗೂ ಶೈಕ್ಷಣಿಕ ಮತ್ತು ಆಡಳಿತ ಮಂಡಳಿಗಳ ಸಭೆಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಒಟ್ಟು ರೂ.1,23,000/–ಗಳನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. 6ನೇ ಯು.ಜಿ.ಸಿ ಪರಿಷ್ಕೃತ ವೇತನದ ನಿಯಮಾವಳಿಗಳನ್ವಯ ಯಾವುದೇ ಆಯ್ಕೆ ಸಮಿತಿ/ಶೈಕ್ಷಣಿಕ/ಆಡಳಿತ ಮಂಡಳಿಗಳ ಕೆಲಸ ಕಾರ್ಯಗಳು ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಒಂದು ಭಾಗವಾಗಿರುವುದರಿಂದ ಇಂತಹ ಯಾವುದೇ ಕಾರ್ಯದ ನಿಮಿತ್ತ ಸಭೆಗಳಲ್ಲಿ ಭಾಗವಹಿಸಲು ಸಭಾ ಭತ್ಯೆಗಳನ್ನು ಪಾವತಿಸಲು ಅವಕಾಶವಿರುವುದಿಲ್ಲ. ಹಾಗೂ ಕೆ.ಸಿ.ಎಸ್.ಆರ್ ನಿಯಮ 28 (a), (b), (c) & (e) ಗಳನ್ವಯ ಆಯ್ಕೆ ಸಮಿತಿ/ಶೈಕ್ಷಣಿಕ/ಆಡಳಿತ ಮಂಡಳಿಗಳ ಕಾರ್ಯಚಟುವಟಿಕೆಗಳು ದಿನ ನಿತ್ಯ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಯಾವುದೇ ಭತ್ಯೆಗಳನ್ನು ಪಾವತಿಸಲು ಅವಕಾಶವಿರುವುದಿಲ್ಲ. ಆದರೆ ಮಾನ್ಯ ಕುಲಪತಿಗಳ ಅನುಮೋದನೆಯನ್ನು ಪಡೆದು ಆಯ್ಕೆ ಸಮಿತಿ ಶೈಕ್ಷಣಿಕ ಮತ್ತು ಆಡಳಿತ ಮಂಡಳಿಗಳ ಸಭೆಗಳಿಗೆ ಹಾಜರಾಗುವುದಕ್ಕೆ ಸಭಾಭತ್ಯೆಯನ್ನು ಪಾವತಿಸಲು ಆದೇಶ ಮಾಡಿಕೊಂಡು ಅದರಂತೆ ಸಭಾಭತ್ಯೆ ಮತ್ತು ಇನ್ನಿತರೆ ಭತ್ಯೆಗಳನ್ನು ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸಭಾಭತ್ಯೆಗಳನ್ನು ಪಾವತಿಸಲಾಗುತ್ತಿದೆ.<br>ಮಾನ್ಯ ಕುಲಪತಿಗಳು ಮತ್ತು ಕುಲಸಚಿವರು ಯಾವುದೇ ಆದೇಶಗಳನ್ನು/ಅಧ್ಯಾದೇಶಗಳನ್ನು ಜಾರಿಗೆ ತರುವ ಮುನ್ನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7) ರನ್ವಯ | ಬೋಧಕ ವರ್ಗದವರನ್ನು ಆಯ್ಕೆ ಸಮಿತಿ ಹಾಗೂ ಇತ್ಯಾಧಿ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಅವರು ನುರಿತ ತಃಜ್ಞರಾಗಿರುವುದರಿಂದ ಅವರುಗಳನ್ನು ಸಮಿತಿಗಳ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ ಏಕೆಂದರೆ ಆಯಾ ವಿಷಯಗಳಲ್ಲಿ ಅವರುಗಳು ಪರಿಣತಿ ಹೊಂದಿರುತ್ತಾರೆ ಹಾಗೂ ಆಯಾ ವಿಷಯಗಳಲ್ಲಿ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುತ್ತಾರೆ ಇತರೇ ಸದಸ್ಯರುಗಳಂತೆ ಯು.ಜಿ.ಸಿ ವೇತನ ಪಡೆಯುವ ಬೋಧಕ ವರ್ಗದವರೂ ಸಭೆಯ ಸದಸ್ಯರಾಗಿ ನೇಮಕಗೊಳ್ಳುವುದರಿಂದ ಮತ್ತು ಸಭೆಗೆ ಹಾಜರಾತಿಯಾಗಿ ಸಲಹೆ ಸೂಚನೆಗಳ್ಳನ್ನು ನೀಡುವುದರಿಂದ ಇವರಿಗೆ ಸಭಾ ಭತ್ಯೆ ಪಾವತಿಸುವುದು ಅನಿವಾರ್ಯವಾಗಿರುತ್ತದೆ.<br>ಸರ್ಕಾರದ ಆಧೇಶ ಸಂಖ್ಯೆ.ಇ.ಡಿ30 ಯು,ಎನ್.ಇ.2000 ದಿನಾಂಕ. 19.5.2003ರ ಅನ್ವಯದಂತೆ ಈ ರೀತಿಯ ಸಂಭಾವನೆ ಹಾಗೂ ಭತ್ಯೆಗಳ ಪಾವತಿಗಳಿಗೆ ಸರ್ಕಾರದಿಂದ ಯಾವುದೇ ಅನುದಾನ ಕೋಡಲಾಗುತ್ತಿಲ್ಲ ವಿಶ್ವವಿದ್ಯಾನಿಲಯದ ಅಂತರಿಕ ಸಂಪನ್ಮೂಲದಿಂದಲೇ ಇವುಗಳನ್ನು ಭರಿಸಲಾಗುತ್ತಿದೆ.<br>ಆದ್ದರಿಂದ ರೂ.4,32,463/–ಗಳ ಆಕ್ಷೇಪಣೆ ಮೊತ್ತವನ್ನು ತೀರುವಳಿಗೊಳಿಸಲು ಕೋರಲಾಗಿದೆ. |
|---|---|---|

| | | |
|---|---|---|
| | ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ. ಆದರೆ ಸರ್ಕಾರದಿಂದ ಯಾವುದೇ ಅನುಮೋದನೆಯನ್ನು ಪಡೆಯದೇ ಕುಲಸಚಿವರ ಆದೇಶದನ್ವಯ ಸಭಾ ಭತ್ಯೆಯನ್ನು ಪಾವತಿಸಿರುವುದು ಈ ಮೇಲೆ ತಿಳಿಸಿರುವ ನಿಯಮಗಳ ಉಲ್ಲಂಘನೆಯಾಗಿರುವುದರಿಂದ **ರೂ.1,23,000/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸುವುದು ಇಲ್ಲವೆ** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7) ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯುವವರೆಗೂ **ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು **ಅನುಬಂಧ–28ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ.<br>ಮೇಲ್ಕಂಡ ವಿಷಯದಂತೆ ಎಫ್&ಆರ್ ಖಾತೆಯಿಂದಲೂ ಸಹ ರೂ.3,09,468/–ಗಳನ್ನು ಬೋಧಕ ವರ್ಗದವರಿಗೆ ಸಭಾ ಭತ್ಯೆಯನ್ನು ಪಾವತಿಸಿರುವುದು ಕಂಡುಬಂದಿದ್ದು, ಮೇಲಿನಂತೆ ಕ್ರಮವಹಿಸಿವುದು.<br>ಒಟ್ಟಾರೆ ಉಖಂ ಮತ್ತು ಈ&ಖ ಖಾತೆಯಿಂದ ಬೋಧಕವರ್ಗದವರಿಗೆ ಸಭಾ ಭತ್ಯೆಯನ್ನು ಪಾವತಿಸಿರುವ ಒಟ್ಟು ಮೊತ್ತ **ರೂ.4,32,468/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | |

| | | |
|---|---|---|
| 79 | **<u>2016–17ನೇ ಸಾಲಿನ ಬಿ.ಓ.ಎ.ಇ ಸಭೆಗಳಿಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಯುವರಾಜ ಕಾಲೇಜಿನ ಬೋಧಕ ವರ್ಗದವರಿಗೆ ಸಭಾ ಭತ್ಯೆಯನ್ನು ಪಾವತಿಸಿರುವುದು :– (ಯುವರಾಜ ಕಾಲೇಜು)</u>**<br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಎಫ್&ಆರ್ ಖಾತೆಯಲ್ಲಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಬಿ.ಓ.ಎ.ಇ ಸಭೆಗಳಿಗೆ ಹಾಜರಾದ ಯುವರಾಜ ಕಾಲೇಜಿನ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವೃಂದದವರಿಗೆ ಸಭಾ ಭತ್ಯೆ ಪಾವತಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿ ಆರನೇ ಪರಿಷ್ಕೃತ ಯು.ಜಿ.ಸಿ ನಿಯಮಾವಳಿ ಅನ್ವಯ ಹಾಗೂ ಕೆ.ಸಿ.ಎಸ್.ಆರ್ ನಿಯಮಾವಳಿ (ಎ), (ಬಿ), (ಸಿ), (ಇ) ಗಳನ್ವಯ ಬಿ.ಓ.ಎ.ಇ ಸಭೆಗಳಿಗೆ ಹಾಜರಾದ ಯುವರಾಜ ಕಾಲೇಜಿನ ಬೋಧಕ ವರ್ಗದವರ ದಿನ ನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ (ಆದ್ಯ ಕರ್ತವ್ಯವಾಗಿರುತ್ತದೆ) ಸಭಾ ಭತ್ಯೆಯನ್ನು ಪಡೆಯಲು ಅವಕಾಶವಿರುವುದಿಲ್ಲ. ಹಾಗೂ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಆದೇಶಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7) ಗಳನ್ವಯ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಯು.ಜಿ.ಸಿ ವೇತನ ಪಡೆಯುತ್ತಿರುವ ಖಾಯಂ ಬೋಧಕರುಗಳು ಯುವರಾಜ ಕಾಲೇಜಿನಲ್ಲೇ ನಡೆದ ಬಿ.ಓ.ಎ.ಇ ಸಭೆಗಳಿಗೆ ಹಾಜರಾದ ಯು.ಜಿ.ಸಿ ವೇತನ ಪಡೆಯುತ್ತಿರುವ ಯುವರಾಜ ಕಾಲೇಜಿನ ಬೋಧಕ ವರ್ಗದವರಿಗೆ ಸಭಾ ಭತ್ಯೆ ಪಾವತಿಸಬಹುದಾಗಿದೆ. ಆದರೆ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆದಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ವಿಚಾರಣೆ ಪತ್ರ ಸಂಖ್ಯೆ:49 ದಿನಾಂಕ:09.10.2018ರಲ್ಲಿ ಕೋರಲಾಯಿತು. ಆದರೆ ಉತ್ತರವನ್ನು ನೀಡಿರುವುದಿಲ್ಲ.<br>ಅದರಂತೆ ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ), (ಇ) 6ನೇ ಯು.ಜಿ.ಸಿ ಪರಿಷ್ಕೃತ ವೇತನ ನಿಯಮಾವಳಿಗಳು ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7)ರ ನಿಯಮಗಳನ್ನು ಉಲ್ಲಂಘಿಸಿ ಸಭಾ ಭತ್ಯೆಯನ್ನು ನೀಡಿರುವ ಮೊತ್ತ **ರೂ.16,500/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸುವುದು ಇಲ್ಲವೆ** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ | ಕಂಡಿಕೆ 78 ರಲ್ಲಿ ವಿವರಿಸಿರುವಂತೆ ಬೋಧಕ ವರ್ಗದವರು ಆಯಾ ವಿಷಯಗಳಲ್ಲಿ ನುರಿತ ತಃಜ್ಞರಾಗಿರುವುದರಿಂದ ಅವರುಗಳನ್ನು ಆಯಾ ಸಭೆಗಳಿಗೆ ಸದ್ಯಸರನ್ನಾಗಿ ನೇಮಕಾತೆ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ, ಹಾಗೂ ಅವರ ಸಲಹೆ ಸೂಚನೆಗಳನ್ನು ಪರಿಗಣಿಸುವುದು ಅನಿರ್ವಾಯ ಅವರುಗಳು ಯು.ಜಿ.ಸ ವೇತನ ಪಡೆಯುತ್ತಿದ್ದರೂ ಸಹ ಇತರೆ ಸದಸ್ಯರುಗಳಂತೆ ಅವರಿಗೂ ಸಭಾ ಭತ್ಯೆ ಪಾವತಿಸುವುದು ವಿಶ್ವವಿದ್ಯಾನಿಲಯದ ಗೌರವದ ಪ್ರಶ್ನೆಯಾಗಿರುತ್ತದೆ. ಈ ಸಂಬಂಧ ಸರ್ಕಾರದ ಆಧೇಶ ಸಂಖ್ಯೆ:ಇ,ಡಿ,30/ಯು.ಎನ್.ಇ,2000 ದಿನಾಂಕ: 19.5.2003ರಲ್ಲಿ ಸೂಚಿಸಿರಿವಂತೆ ಇಂತಹ ಸಂಭಾವನೆ ಮತ್ತು ಭತ್ಯೆಗಳನ್ನು ವಿಶ್ವವಿದ್ಯಾನಿಲಯದ ಅಂತರಿಕ ಸಂಪನ್ಮೂಲದಿಂದಲೇ ಭರಿಸಲಾಗುತ್ತಿದೆ, ಸರ್ಕಾರದಿಂದ ಇದಕ್ಕಾಗಿ ಅನುದಾನ ಕೋರಲಾಗುತ್ತಿಲ್ಲ ಎಂಬುದಾಗಿ ನಿವೇಧಿಸುತ್ತಾ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |

| | | |
|---|---|---|
| | ಕಾಯ್ದೆ 2000ರ ನಿಯಮ 41 (5) (6) (7) ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯುವವರೆಗೂ **ಆಕ್ಷೇಪಣೆಯಲ್ಲಿಡಲಾಗುತ್ತದೆ**. ವಿವರಗಳನ್ನು **ಅನುಬಂಧ–29ರಲ್ಲಿ** ನೀಡಿದೆ. | |

| | | |
|---|---|---|
| **80** | **<u>ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸ್ಥಳಿಯ ಭತ್ಯೆ, ದಿನಭತ್ಯೆ, ಹಾಗೂ ಪ್ರಾಯೋಗಿಕ ಪರೀಕ್ಷೆ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಪ್ರಶ್ನೆಪತ್ರಿಕೆಗಳನ್ನು ಸಿದ್ದಪಡಿಸಿದ ಕಾರ್ಯಕ್ಕೆ ಸಂಭಾವನೆಯನ್ನು ಪಾವತಿಸಿರುವುದು :– (ಯುವರಾಜ ಕಾಲೇಜು)</u>**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಎಫ್&ಆರ್ ಖಾತೆಯ ವೋಚರ್‌ಗಳನ್ನು ಪರಿಶೀಲಿಸಲಾಗಿ ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಯು.ಜಿ.ಸಿ ವೇತನ ಪಡೆಯುತ್ತಿರುವ ಬೋಧಕ ವರ್ಗದವರಿಗೆ ಸ್ಥಳಿಯ ಭತ್ಯೆ, ದಿನಭತ್ಯೆ, ಪ್ರಯಾಣ ಭತ್ಯೆ, ಹಾಗೂ ಪ್ರಾಯೋಗಿಕ ಪರೀಕ್ಷೆ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿದ ಕಾರ್ಯಕ್ಕೆ ಸಂಭಾವನೆಯನ್ನು ಪಾವತಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿ ಆರನೇ ಪರಿಷ್ಕೃತ ಯು.ಜಿ.ಸಿ ನಿಯಮಾವಳಿಯ ಅನ್ವಯ ಹಾಗೂ ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ), (ಇ) ಗಳನ್ವಯ ಪ್ರಾಯೋಗಿಕ ಪರೀಕ್ಷೆಗಳು ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಗಳು ಹಾಗೂ ಸ್ಥಳೀಯ ಭತ್ಯೆಗಳು ಸ್ನಾತಕ, ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆ ಸಿದ್ದಪಡಿಸುವಿಕ ಮತ್ತು ಇನ್ನಿತರ ಪರೀಕ್ಷಾ ಕಾರ್ಯಗಳಿಗೆ ಯಾವುದೇ ಸಂಭಾವನೆ ಪಡೆಯಲು ಅವಕಾಶ ಇರುವುದಿಲ್ಲ. ಪರೀಕ್ಷಾ ಕಾರ್ಯಗಳು ಬೋಧಕ ವರ್ಗದವರ ಕರ್ತವ್ಯದ ಒಂದು ಭಾಗವಾಗಿರುವುದರಿಂದ (ಆಧ್ಯ ಕರ್ತವ್ಯವಾಗಿರುತ್ತದೆ) ಸಂಭಾವನೆಯನ್ನು ಪಡೆಯಲು ಅವಕಾಶವಿರುವುದಿಲ್ಲ. ಹಾಗೂ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಆದೇಶಗಳು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7)ಗಳನ್ವಯ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಯು.ಜಿ.ಸಿ ವೇತನ ಪಡೆಯುತ್ತಿರುವ ಖಾಯಂ ಬೋಧಕರುಗಳಿಗೆ ಸಂಭಾವನೆಯನ್ನು ಪಾವತಿಸಬಹುದಾಗಿದೆ. ಆದರೆ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆದಿರುವುದಿಲ್ಲ.<br><br>ಯುವರಾಜ ಕಾಲೇಜಿನ ಪರೀಕ್ಷಾ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುವ ಪ್ರಾಧ್ಯಾಪಕರುಗಳಿಗೆ ನಿಯಮಾನುಸಾರ ದಿನಭತ್ಯೆ, ಪ್ರಯಾಣ ಭತ್ಯೆಗಳ ಜೊತೆಗೆ | ವಿಶ್ವವಿದ್ಯಾನಿಯದಲ್ಲಿ ಪರೀಕ್ಷಾ ನಡೆಸುವುದು ಒಂದು ಪ್ರಮುಕ ಕಾರ್ಯವಾಗಿದ್ದು ಬೋಧಕ ವರ್ಗದವರು ಯು.ಜಿ.ಸಿ ವೇತನ ಪಡೆಯುತ್ತಿದ್ದರಾಗಿದ್ದರೂ ಸಹ ಹೊರ ಸ್ಥಳದಿಂದ ಅವರನ್ನು ನಿಯೋಜಿಸಿಕೊಂಡ ಸಂದರ್ಭಗಳಲ್ಲಿ ಸ್ಥಳೀಯ ಭತ್ಯೆ ದಿನ ಭತ್ಯೆ ಹಾಗೂ ಪ್ರಯೋಗಿಕ ಪರೀಕ್ಷೆ ಮತ್ತು ಉತ್ತರ ಪ್ರತಿಕೆಗಳ ಮೌಲ್ಯ ಮಾಪನ ಕಾರ್ಯಕ್ಕೆ ಸಂಭಾವನೆಗಳನ್ನು ಪಾವತಿಸುವುದು ಅನಿವಾರ್ಯವಾಗಿರುತ್ತದೆ.ಇವುಗಳನ್ನು ಪಾವತಿಸದ ಹೊರತು ಪರೀಕ್ಷೆಕಾರ್ಯಗಳನ್ನು ಸುಸೂತ್ರವಾಗಿ ನಡೆಸಲು ಕಷ್ಟ ಸಾದ್ಯವಾಗುತ್ತದೆ. ಈ ಪಾವತಿಗಳು ನಿಯಮಾನುಸಾರವಾಗಿಲ್ಲದಿದ್ದರೂ ಸಃ ಇವುಗಳನ್ನು ಪಾವಯಿಸದಿದ್ದರೆ ಈ ಕಾರ್ಯಗಳಿಗೆ ಯಾರೂ ಮುಂದೆ ಬಾರದೇ ಬಂದಲ್ಲಿ ಬಂದು ಕಾರಣ ನೀಡಿ ಇದರಿಂದ ತಪ್ಪಿಸಿಕೊಳ್ಳುತ್ತಾರೆ.<br><br>ಹಾಗಾಗಿ ಸರ್ಕಾರದ ಆಧೇಶ ಸಂಖ್ಯೆ ಇ ಡಿ 30 ಯು ಎನ್ ಇ 2000 ದಿನಾಂಕ 19.5.2003ರ ಅನ್ವಯದಂತೆ ಮೇಲಿನ ಸಂಭಾವನೆ ಪಾವತಿಗಳನ್ನು ವಿಶ್ವವಿದ್ಯಾನಿಲಯದ ಅಂತರಿಕ ಮೂಲದಿಂದಲೇ ಭರಿಸಲಾಗುತ್ತಿದೆ.<br><br>ಸರ್ಕಾರದಿಂಧ ಈ ಸಂಬಂಧ ಯಾವುದೇ ಅನುದಾನ ಕೋರಲಾಗುತ್ತಿಲ್ಲ ಎಂಬುದಾಗಿ ನಿವೇದಿಸುತ್ತಾ ರೂ.8,14,700/–ಗಳ ಆಕ್ಷೇಪಣೆತನ್ನು ತೀರುವಳಿಗೊಳಿಸಲು ಕೋರಲಾಗಿದೆ. |

| | | |
|---|---|---|
| | ಸಂಭಾವನೆಯನ್ನು ಪಾವತಿಸಿರುವುದರಿಂದ ಯು.ಜಿ.ಸಿ ನಿಯಮಾವಳಿ ಹಾಗೂ ಕೆ.ಸಿಎಸ್.ಆರ್ ನಿಯಮ 514ರ ನಿಯಮಾವಳಿಯ ಉಲ್ಲಂಘನೆಯಾಗಿರುತ್ತದೆ. ಇದರ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ:47/09.10.2018ರಲ್ಲಿ ವಿವರಣೆಯನ್ನು ಕೋರಲಾಗಿದ್ದರೂ ಉತ್ತರವನ್ನು ನೀಡಿರುವುದಿಲ್ಲ.<br><br>ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ), (ಇ) 6ನೇ ಯು.ಜಿ.ಸಿ ಪರಿಷ್ಕೃತ ವೇತನ ನಿಯಮಾವಳಿಗಳನ್ನು ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ನಿಯಮ 41 (5) (6) (7)ರ ನಿಯಮಗಳನ್ನು ಉಲ್ಲಂಘಿಸಿ ಪರೀಕ್ಷಾ ಕಾರ್ಯಗಳಿಗೆ ಪಾವತಿಸಿರುವ ಮೊತ್ತ **ರೂ.8,14,700/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸುವುದು ಇಲ್ಲವೆ** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7) ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯುವವರೆಗೂ **ಆಕ್ಷೇಪಣೆಯಲ್ಲಿಡಲಾಗುತ್ತದೆ.** ವಿವರವನ್ನು **ಅನಬಂಧ–30ರಲ್ಲಿ** ನೀಡಿದೆ. | |

| | | |
|---|---|---|
| **81** | <u>**ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಖಾಯಂ ಬೋಧಕೇತರ ನೌಕರರುಗಳಿಗೆ ಸಂಭಾವನೆಯನ್ನು ಪಾವತಿಸಿರುವುದು :– (ಯುವರಾಜ ಕಾಲೇಜು)**</u><br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಎಫ್&ಆರ್ ಖಾತೆಯ ವೋಚರ್‌ಗಳನ್ನು ಪರಿಶೀಲಿಸಲಾಗಿ ಪರೀಕ್ಷಾ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಖಾಯಂ ಬೋಧಕೇತರ ನೌಕರರು (Non Teaching staff) ಗಳಿಗೆ ಸಂಭಾವನೆಯನ್ನು ಪವತಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಿದ್ದು, ಕೆ.ಸಿ.ಎಸ್.ಆರ್ ನಿಯಮಾವಳಿ 28 (ಎ), (ಬಿ), (ಸಿ) ಮತ್ತು (ಇ) ಗಳನ್ವಯ ಪರೀಕ್ಷಾ ಕರ್ತವ್ಯವು ಯುವರಾಜ ಕಾಲೇಜಿನ ನೌಕರರ ದಿನನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ ನಿಯಮಾನುಸಾರ ಸಂಭಾವನೆ ಪಾವತಿಸಲು ಅವಕಾಶವಿರುವುದಿಲ್ಲ. ಕೆ.ಸಿ.ಎಸ್.ಆರ್ ನಿಯಮ 514ರ ಅನ್ವಯ ಕರ್ತವ್ಯ ನಿರ್ವಹಿಸಿದ ಕೇಂದ್ರ ಸ್ಥಾನದಿಂದ 8 ಕಿ.ಮೀ ಮೀರುವ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದಲ್ಲಿ ದಿನಭತ್ಯೆಯನ್ನು ಪಾವತಿಸಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಆದರೆ ಯುವರಾಜ ಕಾಲೇಜಿನಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಿರುವ ನೌಕರರುಗಳಿಗೆ ಯಾವುದೇ ದಿನಭತ್ಯೆ ಸಂಭಾವನೆಯನ್ನು ಪಡೆಯಲು ಅವಕಾಶವಿರುವುದಿಲ್ಲ. ಆದರೆ ಕುಲಸಚಿವರ ಆದೇಶದಂತೆ ಕುಲಸಚಿವರ ಪರೀಕ್ಷಾಂಗ ಇವರು ಮಾಡಿಕೊಂಡಿರುವ ಆದೇಶದನ್ವಯ ಪಾವತಿಸಿರುತ್ತಾರೆ. ಆದರೆ ಸದರಿ ಆದೇಶವು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ನಿಯಮ 41 (5) (6) (7) ರ ನಿಯಮಗಳನ್ವಯ ಕುಲಸಚಿವರ ಆದೇಶಗಳು ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆಯನ್ನು ಪಡೆದ ನಂತರ ಸದರಿ ಆದೇಶದಂತೆ ಸಂಭಾವನೆಯನ್ನು ಪಾವತಿಸಬೇಕಾಗಿರುತ್ತದೆ. ಆದರೆ ಕೆ.ಸಿ.ಎಸ್.ಆರ್ ನಿಯಮ 28 (ಎ), (ಬಿ), (ಸಿ) (ಇ) ಗಳನ್ವಯ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 41 (5) (6) (7)ರ ನಿಯಮಗಳ ಉಲ್ಲಂಘನೆ ಮಾಡಿ ಖಾಯಂ ಬೋಧಕೇತರ ನೌಕರರುಗಳಿಗೆ ಸಂಭಾವನೆಯನ್ನು ಪಾವತಿಸಿರುವ ಒಟ್ಟು ಮೊತ್ತ **ರೂ.56,395/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸುವುದು ಇಲ್ಲವೆ** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7) ರನ್ವಯ ಸರ್ಕಾರದಿಂದ ಹಾಗೂ | <br><br>ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷ ಕಾರ್ಯವು ಪ್ರಮುಖವಾಗಿದ್ದು ಅಮಯಾನುಸಾರ ಪರೀಕ್ಷೆ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಿ ಫಲಿತಾಂಶಗಳನ್ನು ಪ್ರಕಟಿಸ ಭೇಕಾಗಿರುತ್ತದೆ ಈ ಕಾರ್ಯಗಳಿಗೆ ಭೋಧಕೇತರ ನೌಕೆರರನ್ನು ನಿಯೋಜಿಸಿದಲ್ಲಿ ಸಂಭಾವನೆ ಇಲ್ಲದೆ ಕಾರ್ಯನಿರ್ವಹಿಸಲು ಯಾರೂ ಮುಂದೆ ಬರುವುದಿಲ್ಲ ಏನದರೂ ಒಂದು ಕಾರಣ ನೀಡಿ ಪರೀಕ್ಷಾ ಕಾರ್ಯಗಳಿಂದ ತಪ್ಪಿಸಿಕೊಳ್ಳುತ್ತಾರೆ ಇದರಿಂದ ಪರೀಕ್ಷಾ ಕಾರ್ಯಗಳಿಗೆ ತೊಂದರೆ ಆಗುತ್ತದೆ ಇದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಸಂಭಾವನೆ ಪಾವತಿಗಳು ಅನಿವಾರ್ಯವಾಗಿರುತ್ತದೆ.<br>ಸರ್ಕಾರದ ಆಧೇಶ ಸಂಖ್ಯೆ:ಇ,ಡಿ,30,ಯು.ಎನ್.ಇ,2000 ದಿನಾಂಕ: 19.5.2003ರ ಅನ್ವಯದಂತೆ ಸಂಭಾವನೆ ಪಾವತಿಗಳನ್ನು ವಿಶ್ವವಿದ್ಯಾನಿಲಯದ ಅಂತರಿಕ ಸಂಪನ್ಮೊಲದಿಂದ ಭರಿಸಲಾಗುತ್ತಿದೆ ಇದಕ್ಕಾಗಿ ಸರ್ಕಾದಿಂದ ಅನುದಾನ ಕೋರಲಾಗುತ್ತಿಲ್ಲ ಎಂಬುದಾಗಿ ನಿವೇಧಿಸುತ್ತಾ<br>ರೂ.56,395/–ಗಳ ಆಕ್ಷೇಪಣೆ ಮೊತ್ತವನ್ನು ತೀರುವಳಿಗೊಳಿಸಲು ಕೋರಲಾಗಿದೆ. |

| | | |
|---|---|---|
| | ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯುವವರೆಗೂ **ಆಕ್ಷೇಪಣೆಯಲ್ಲಿಡಲಾಗುತ್ತದೆ**. ವಿವರಗಳನ್ನು **ಅನುಬಂಧ-31** ರಲ್ಲಿ ನೀಡಲಾಗಿದೆ. ಇದಕ್ಕೆ ಸಂಬಂಧಿಸದಿಂತೆ ವಿಚಾರಣೆ ಪತ್ರ ಸಂಖ್ಯೆ:45 ದಿನಾಂಕ:05.10.2018ರಲ್ಲಿ ಕೋರಲಾಗಿದ್ದು, ಉತ್ತರವನ್ನು ನೀಡಿರುವುದಿಲ್ಲ. | |

| | | |
|---|---|---|
| **82** | **ಸಂಚಿತ/ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳ ನೇಮಕ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು :– (ಯುವರಾಜ ಕಾಲೇಜು)**<br>2016–17ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಸಂಚಿತ/ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡು ವೇತನ ಭತ್ಯೆಗಳನ್ನು ಪಾವತಿಸಿರುವುದನ್ನು ವೇತನ ಬಟಾವಡೆ ವಹಿಯ ಪರಿಶೀಲನೆಯಲ್ಲಿ ಕಂಡುಬಂದಿದ್ದು, ತಾತ್ಕಾಲಿಕ/ಸಂಚಿತವೇತನ/ಅತಿಥಿ ಉಪನ್ಯಾಸಕರುಗಳ ನೇಮಕ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:05/05.09.2018ರಲ್ಲಿ ಕೋರಲಾಗಿರುವ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 55, 56ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಯುವರಾಜ ಕಾಲೇಜಿಗೆ ವಿಷಯವಾರು ಮಂಜೂರಾಗಿರುವ ಬೋಧಕ ಹುದ್ದೆಗಳಲ್ಲಿ ಖಾಯಂ ಬೋಧಕ ವರ್ಗದವರ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳನ್ನು ಬಿಟ್ಟು ಉಳಿಕೆ ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕ/ಸಂಚಿತ/ಅತಿಥಿ ಉಪನ್ಯಾಸಕರುಗಳನ್ನು ಯು.ಜಿ.ಸಿ ನಿಯಮಾವಳಿಗಳ ಅನುಸಾರ ನೇಮಕ ಮಾಡಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲು ಸಾಧ್ಯವಾಗಿಲ್ಲದಿರುವುದರಿಂದ **ರೂ.1,69,22,889/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸುವುದು ಇಲ್ಲವೆ** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7) ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯುವವರೆಗೂ **ಆಕ್ಷೇಪಣೆಯಲ್ಲಿಡಲಾಗುತ್ತದೆ**. ವಿವರಗಳನ್ನು **ಅನುಬಂಧ–32ರಲ್ಲಿ** ನೀಡಲಾಗಿದ್ದು, ವರದಿಗೆ ಲಗತ್ತಿಸಿದೆ.<br>ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಲಾದ ಆದೇಶದ ಪ್ರತಿಯನ್ನು ಪರಿಶೀಲಿಸಿದಾಗ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರ ಪತ್ರದ ಆದೇಶದ ಸಂಖ್ಯೆ:ಇಖಿ12/3/450/2009–10 ದಿನಾಂಕ:25.06.2018 ರಲ್ಲಿ ಯುವರಾಜ ಕಾಲೇಜಿಗೆ | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಯುವರಾಜ ಕಾಲೇಜು ಮೈಸೂರು 2016–17 ನೇ ಸಾಲಿನಲ್ಲಿ ವಿವಿಧ ಶೈಕ್ಷಣಿಕ ಕೋರ್ಸ್‌ಗಳ ಪಾಠ ಪ್ರವಚನಗಳ ಸಲುವಾಗಿ ಸಂಬಂಧಿಸಿದ ಕೋರ್ಸ್‌ಗಳಿಗೆ ನಿರಂತವಾಗಿರುವ ಭೋದಕ ವಿಷಯಗಳ ಭೋದಕ ಸಿಬ್ಬಂದಿಯ ವಯೋನಿವೃತ್ತಿ ಸ್ವಯಂ ನಿವೃತ್ತಿ ಮತ್ತು ಅನಾನ್ಯ ಕಾರಣಗಳಿಂದ ಖಾಲಿಯಾಗಿರುವ/ತೆರವಾಗಿರುವ ಕಾರಣದಿಂದ ನಿಗಧಿತವಾದ ಪಾಠ ಪ್ರವಚನಗಳು ನಿಲ್ಲದೇ ನಿರಂತರವಾಗಿ ಶೈಕ್ಷಣಿಕ ಚಟುವಟಿಕೆಗಳು ಮುಂದುವರೆಯಲು ಕೋರ್ಸ್‌ಗಳಿಗೆ ಸೇರ್ಪಡೆಯಾಗಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಗಳು ಕುಂಠಿತವಾಗ ಬಾರದು ಎಂಬ ಹಿನ್ನಲೆಯಲ್ಲಿ ಸದರಿ ಕಾಲೇಜಿನಲ್ಲಿ ಒಟ್ಟು 370 ಅತಿಥಿ ಉಪನ್ಯಾಸಕಾರ ಮತ್ತು 51 ಆಹಾನ್ವಿತ ಉಪನ್ಯಾಸಕರು ಸೇವೆಯನ್ನು (ತಾತ್ಕಾಲಿಕ ಸೇವೆ) ಅಡಿಯಲ್ಲಿ ಪಡೆಯಲಾಗಿದೆ, ಮತ್ತು ಈ ಸಂಬಂಧಿ ಅನುಕ್ರಮವಾಗಿ ರೂ.1,02,61,988+66,60,901=1,69,22,889/–ಗಳು ಉಪನ್ಯಾಸಭತ್ಯೆ ಪಾವತಿಸಲಾಗಿದೆ.<br>ಈ ಪಾವತಿಯ ಸಂಬಂಧ ಮೇಲೆ ಪ್ರಸ್ತಾಪಿಸಿರುವ ಅತಿಥಿ ಉಪನ್ಯಾಸಕರು ಮತ್ತು ಅಹ್ವಾನಿತ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ಸಂಚಿತ ವೇತನ ಅಧಾರದಲ್ಲಿ ನೇಮಕ ಮಾಡಿಕೊಳ್ಳಲು ದಿನಾಂಕ:15.10.2016 ರಂದು ಯುವರಾಜ ಕಾಲೇಜು ಮೈಸೂರುನಲ್ಲಿ ಪ್ರಾಂಶುಪಾಲರು ಯುವರಾಜ ಕಾಲೇಜು ಮತ್ತು ಸದಸ್ಯ ಕಾರ್ಯದರ್ಶಿಗಳು ಆಡಳಿತ ಮಂಡಳಿ ಸಭೆಯಲ್ಲಿ ಗುತ್ತಿಗೆ ಅಧಾರದಲ್ಲಿ ಕಾಲೇಜಿನ ಶೈಕ್ಷಣಿಕ ಚಟುವಟಿಕೆಗಳು ಪಾಠ ಪ್ರವಚನಗಳು ನಿರಂತರವಾಗಿ ಮುಂದುವರೆಯುವ ಸಲುವಾಗಿ ನಿವೃತ್ತಿಯಿಂದ ಮತ್ತು ಅನಾನ್ಯ ಕಾರಣಗಳಿಂದ ಖಾಲಿ ಇರುವ ಉಪನ್ಯಾಸಕರ ವಿಭಾಗಗಳ ಪಾಠ ಪ್ರವಚನಗಳನ್ನು ಮುಂದುವರೆಸಲು 66 ಸಂಖ್ಯೆಯ ಸಹಾಯಕ ಪ್ರಾಧ್ಯಾಪಕರನ್ನು ತಾತ್ಕಾಲಿಕವಾಗಿ ಸಂಚಿತವೇತನ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಮತ್ತು ಹೆಚ್ಚುವರಿಯಾದ |

| | | |
|---|---|---|
| | Sanctioned post ಗಳ ಸಂಖ್ಯೆ:79 ಇರುತ್ತದೆ (ಉಪನ್ಯಾಸಕರುಗಳ) ಅದರಂತೆ ಯುವರಾಜ ಕಾಲೇಜಿನಲ್ಲಿ ಖಾಯಂ ಅಧ್ಯಾಪಕರುಗಳ ಸಂಖ್ಯೆ:63 ಇರುತ್ತದೆ (ಹಾಜರುಪಡಿಸಲಾದ ಕಡತಗಳು ಪರಿಶೀಲಿಸಿದಾಗ) ಅಂದರೆ 16 ಅಧ್ಯಾಪಕರುಗಳ ಹುದ್ದೆ ಖಾಲಿ ಇರುತ್ತದೆ. ಆದರೆ ಯುವರಾಜ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರುಗಳನ್ನು (ಅವಶ್ಯಕತೆಗಿಂತ) ಶೇಕಡ 10%ಕ್ಕಿಂತಲು ಹೆಚ್ಚು ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡಿರುತ್ತಾರೆ. (ಹಾಜರುಪಡಿಸಲಾದ ದಾಖಲೆಗಳನ್ನು ಪರಿಶೀಲಿಸಿದಾಗ) ರೂ.1,69,22,889/–ಗಳನ್ನು ಅತಿಥಿ ಉಪನ್ಯಾಸಕರುಗಳಿಗೆ ವೇತನವನ್ನು ಪಾವತಿ ಮಾಡಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಹಾಗೂ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುವಾಗ ಯಾವುದೇ ನಿಯಮಗಳನ್ನು ಪಾಲಿಸದೆ ಇರುವುದು ಕಂಡುಬಂದಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದರಂತೆ ಮುಂದಿನ ಲೆಕ್ಕಪರಿಶೋಧನಾ ತಂಡಕ್ಕೆ ವಿವರಣೆಯನ್ನು ನೀಡಲು ಕೋರಿದೆ. | ಕಾರ್ಯಭಾರದಿಂದ ಉಂಟಾಗುವ ಶೈಕ್ಷಣಿಕ ಪಾಠ ಪ್ರವಚನಗಳ ಅವಶ್ಯಕತೆಯನ್ನು ಪೂರೈಸಲು ಹೆಚ್ಚುವರಿ ಶಿಕ್ಷಕರು ಸೇವೆಯನ್ನು ಹೊರಗುತ್ತಿಗೆ ಅಧಾರದಲ್ಲಿ ಸಂಚಿತ ವೇತನ ಅಧಾರದಲ್ಲಿ ಪಡೆಯುವ ಪ್ರಸ್ತಾಪನೆಯು ಕುಲಪತಿಗಳಿಂದ ಅನುಮೋದಿತವಾಗಿದೆ ಮತ್ತು ಈ ಸಂಬಂಧದ ವೆಚ್ಚವನ್ನು ಕಾಲೇಜಿನ ನಿಧಿಯಿಂದಲೇ ಭರಿಸಲು ತಿರ್ಮಾನಿಸಲಾಗಿದೆ.<br><br>ಅಲ್ಲದೇ ಸೂಚಿತವಾದ ಎಲ್ಲಾ ವೆಚ್ಚವೂ ಕಾಲೇಜು ಶೈಕ್ಷಣಿಕ ಗುಣಮಟ್ಟ ವಿದ್ಯಾರ್ಥಿಗಳ ನಿಗದಿತ ಪಾಠಪ್ರವಚನದ ಸಲುವಾಗಿ ಮತ್ತು ಉತ್ತಮ ಶೈಕ್ಷಣಿಕ ಗುಣಮಟ್ಟ ಫಲಿತಾಂಶದ ಹಿನ್ನಲೆಯಲ್ಲಿ ಈ ಪ್ರಸ್ತಾವನೆಯು ವಿಶ್ವವಿದ್ಯಾನಿಲಯದಿಂದ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲ್ಪಟ್ಟದ್ದು ಅನುಮೋದನೆ ನಿರೀಕ್ಷೆಯಲ್ಲಿದೆ ಆದ್ದರಿಂದ ಪ್ರಸ್ತಾವಿತ ರೂ.1,69,22,889/– ಕಂಡಕೆಯನ್ನು ಕೈ ಬಿಡಲು ಕೋರಿದೆ. |

| | | |
|---|---|---|
| **83** | **ತಾತ್ಕಾಲಿಕ / ಸಂಚಿತ ವೇತನ ನೌಕರರನ್ನು ಮಾಡಿಕೊಂಡು ವೇತನ ಪಾವತಿಸಿರುವುದು :–**<br>**(ಸ್ನಾತಕೋತ್ತರ ಗ್ರಂಥಾಲಯ)**<br>2016–17 ನೇ ಸಾಲಿನ ಸ್ನಾತಕೋತ್ತರ ಗ್ರಂಥಾಲಯ ವಿಭಾಗದ ಲೆಕ್ಕಪರಿಶೋಧನೆಯನ್ನು ತಾತ್ಕಾಲಿಕ/ಸಂಚಿತ ವೇತನ ನೌಕರರನ್ನು ನೇಮಕ ಮಾಡಿಕೊಂಡು ವೇತನ ಪಾವತಿಸಿರುವ ವೇತನ ಬಟವಾಡೆ ವಹಿಯನ್ನು ಪರಿಶೀಲಿಸಲಾಗಿ ತಾತ್ಕಾಲಿಕ ನೌಕರರನ್ನು ನೇಮಕ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ 07/2018–19 ದಿ: 29/8/2018 ರಲ್ಲಿ ಕೋರಲಾಗಿ ಯಾವುದೇ ಕಡತಗಳನ್ನು ಹಾಜರುಪಡಿಸಿರುವುದಿಲ್ಲ.<br>ಸ್ನಾತಕೋತ್ತರ ಗ್ರಂಥಾಲಯಕ್ಕೆ ತಾಂತ್ರಿಕೇತರ ನೌಕರರು/ಅಧಿಕಾರಿಗಳ ಮಂಜೂರಾತಿ ಹುದ್ದೆಗಳಿಗೆ ಎದುರಾಗಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಅಧಿಕಾರಿಗಳು/ನೌಕರರುಗಳ ವಿವರ, ಖಾಲಿ ಇರುವ ಹುದ್ದೆಗಳ ವಿವರ ಹಾಗೂ ಖಾಲಿ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕ ಅಧಿಕಾರಿ/ನೌಕರರನ್ನು ನೇಮಕ ಮಾಡಿಕೊಂಡಿರುವ ಕಡತಗಳು ಮತ್ತು ಖಾಲಿ ಹುದ್ದೆಗಳಿಗೆ ತಾತ್ಕಾಲಿಕ ನೌಕರರನ್ನು ನೇಮಕಾತಿ ಮಾಡುವಾಗ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ರ ನಿಯಮ 56, ನಿಯಮ 57, ರನ್ವಯ ನೇಮಕಾತಿ ಮಾಡಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಪರಿಶೀಲಿಸಲು ಸಾಧ್ಯವಾಗದಿರುವುದರಿಂದ ತಾತ್ಕಾಲಿಕ/ಸಂಚಿತ ವೇತನ ನೌಕರರಿಗೆ ವೇತನ ಪಾವತಿಸಿರುವ ಒಟ್ಟು ಮೊತ್ತ **ರೂ.81,9,736/– ಗಳನ್ನು ಆಕ್ಷೇಪಿಸಲಾಗಿದ್ದು**. ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಕೋರಲಾಗಿರುವ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ–33** ರಲ್ಲಿ ನೀಡಲಾಗಿದ್ದು ವರದಿಗೆ ಲಗತ್ತಿಸಿದೆ.<br>2016–17ನೇ ಸಾಲಿಗೆ ಹೊಸದಾಗಿ 6 ಜನ ಸಂಚಿತ ವೇತನ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿದ್ದು, ಅವರ ನೇಮಕಾತಿ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ 10/2018–19 ದಿ: 30/8/2018 ನೀಡಿದೆ ಮತ್ತು ಸಂಚಿತ ಸಿಬ್ಬಂದಿ ವರ್ಗದ ವೇತನಾ ಬಟಾವಡೆ ವಹಿಯನ್ನು ನಿರ್ವಹಿಸದೆ ಇರುವುದು ಮುಂದಿನ ಸಾಲಿಗೆ ವೇತನಾ ಬಟಾವಡೆ ವಹಿಯನ್ನು ನಿರ್ವಹಿಸುವಂತೆ | ವಿಶ್ವವಿದ್ಯಾನಿಲಯದಲ್ಲಿ ಸರ್ಕಾರದಿಂದ ಹಿಂದೆ ಮಂಜೂರಾತಿಯಾಗಿದ್ದ ಹುದ್ದೆಗಳಿಗೆ ಎದುರಾಗಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ನೌಕಕರುಗಳ ಪೈಕಿ; ಅನೇಕ ನೌಕರರು ಆಗಿಂದಾಗೆ ನಿವೃತ್ತಿ ಹೊಂದುತ್ತಿರುತ್ತಾರೆ. ನವೃತ್ತಿ ಹೊಂದಿದ ಖಾಲಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ಬದಲಿ ವ್ಯವಸ್ಥೆ ಮಾಡಬೇಕಾಗಿರುತ್ತದೆ. ಅಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಹೊಸ ಕೋರ್ಸ್‌ಗಳನ್ನು ತೆರೆಯುವುದು; ಅದಕ್ಕಾಗಿ ಹೊಸ ಅಧ್ಯಯನ ಕೇಂದ್ರಗಳ ಕಛೇರಿಯ ನಿರ್ವಹಣೆಗೆ; ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ನಿಯೋಜಿಸುವ ಯೋಜನೆ ಮತ್ತು ಕಾರ್ಯಕ್ರಮಗಳನ್ನುಅನಿಷ್ಠಾನಗೊಳಿಸುವ ನಿಟ್ಟಿನಲ್ಲಿ ಹಿಂದೆ ಮಂಜೂರಾತಿಯಾಗಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನೌಕಕರರಸ್ವರಲ್ಲಿಯೆ ಎಲ್ಲಾ ಕೆಲಸ ಕಾರ್ಯಗಳನ್ನೂ ಸಮರ್ಪಕವಾಗಿ ನಿರ್ವಹಿಸುವುದು ಕಷ್ಟಸಾಧ್ಯವಾಗಿರುತ್ತದೆ.<br>ಹೀಗಾಗಿ, ಕಾರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರಲ್ಲಿನ ಅವಕಾಶಗಳಡಿ ಕುಲಪತಿಗಳಿಗೆ ದತ್ತವಾಗಿರುವ ಅಧಿಕಾರ ವ್ಯಪ್ತಿಯಲ್ಲಿ ಅಗತ್ಯ ನೌಕರರ ವರ್ಗದವರನ್ನು ನೇಮಕಾತಿ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಈ ಕಾರಣದಿಂದಾಗಿ ಸ್ನಾತಕೋತ್ತರ ಗ್ರಂಥಾಲಯಕ್ಕೆ ಅವಶ್ಯಕವಿದ್ದ ನೌಕರ ವರ್ಗದವರನ್ನು ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇ.ಟಿ.–1/226/2015–16, ದಿನಾಂಕ:07.01.2017, ಇ.ಟಿ–4/150/2012–13, ದಿನಾಂಕ:10.01.2017 ಮತ್ತು ಇಟಿ–1/179/2016–17, ದಿನಾಂಕ:2017 ಹಾಗೂ ಇ.ಟಿ–1/244/2004–05, ದಿನಾಂಕ;05.01.2017ರ ಅನ್ವಯದಂತೆ ನೌಕಕರನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಸಂಚಿತ ವೇತನ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು ಮುಂದುವರಿಸಲಾಗಿದೆ ಮತ್ತು ಈ ಸಂಬಂಧ 2016–17ನೇ ಸಾಲಿನಲ್ಲಿ **ರೂ.8,19,736/–ಗಳ** ವೆಚ್ಚ ಭರಿಸಲಾಗಿರುತ್ತದೆ.<br>ಲೆಕ್ಕ ಪರಿಶೋಧನಾ ವದರಿಯಲ್ಲಿ ಸೂಚಿಸಿರುವಂತೆ ತಾತ್ಕಾಲಿಕ/ಸಂಚಿತ ನೌಕರರ |

| | | |
|---|---|---|
| | ಸೂಚಿಸಿದೆ. | ವೇತನದ ಸಿಬ್ಬಂದಿಯವರ ವೇತನಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಬಟವಾಡೆ ವಹಿಯನ್ನು ನಿರ್ವಹಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರ್‌ಪಡಿಸಲಾಗುವುದು. ತಾತ್ಕಾಲಿಕ/ಸಂಚಿತ ವೇತನದ ನೌಕರರ ನೇಮಕಾತಿ ಆದೇಶದ ಪ್ರತಿಯನ್ನು ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯ ಆಕ್ಷೇಪಣೆ ಮೊತ್ತ **ರೂ.8,91,736/–ಗಳನ್ನು** ತೀರುವಳಿಗೊಳಿಸಲು ಕೋರಿದೆ. |

| | | |
|---|---|---|
| **84** | **<u>ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ವಸತಿ ಗೃಹಗಳ ಬಾಡಿಗೆಯ ಬೇಡಿಕೆ, ವಸೂಲಾತಿ ಮತ್ತು ಬಾಕಿ (ಡಿ.ಸಿ.ಬಿ) ಕುರಿತು. ಡಿ.ಸಿ.ಬಿ ವಹಿಯಲ್ಲಿ 2016–17ನೇ ಸಾಲಿಗೆ ನಮೂದಿಸದೆ ಇರುವ ಬಗ್ಗೆ:– (ಇಂಜಿನಿಯರಿಂಗ್ ವಿಭಾಗ)</u>**<br>ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ವಸತಿ ಗೃಹಗಳ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರವನ್ನು ಒಳಗೊಂಡ ವಹಿಯನ್ನು (ಡಿ.ಸಿ.ಬಿ) 2016–17ನೇ ಸಾಲಿಗೆ ಪರಿಶೀಲಿಸಲಾಗಿ ವಸತಿ ಗೃಹ ಸೌಲಭ್ಯ ಹೊಂದಿದ ಖಾಯಂ ನೌಕರರಿಂದ ಪ್ರತಿ ಮಾಹೆ ಬಾಡಿಗೆಯನ್ನು ವಸೂಲಿಸಿ ಡಿ.ಸಿ.ಬಿ ವಹಿಯಲ್ಲಿ ದಾಖಲಿಸದಿರುವುದು ಕಂಡು ಬಂದಿರುತ್ತದೆ. ಇದರಿಂದ ವಸತಿ ಗೃಹಗಳಲ್ಲಿ ವಾಸ ಮಾಡುತ್ತಿರುವ ಖಾಯಂ ನೌಕರರಿಂದ 2016–17ನೇ ಸಾಲಿಗೆ ಬರಬೇಕಾಗಿರುವ ಬಾಡಿಗೆ ಮೊತ್ತ, ವಸೂಲಿಯಾಗಿರುವ ಮೊತ್ತ ಮತ್ತು ಬಾಕಿ ಉಳಿದಿರುವ ಮೊತ್ತದ ವಿವರಗಳನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ.<br>ಡಿ.ಸಿ.ಬಿ ವಹಿಯನ್ನು ನಿರ್ವಹಿಸದಿರುವುದಕ್ಕೆ ಕಾರಣವೇನು ಎಂಬುದಕ್ಕೆ ಸೂಕ್ತ ವಿವರಣೆಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:28/ ದಿ:27.09.2018 ರಲ್ಲಿ ಕೋರಲಾಗಿ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ ಈ ಹಿನ್ನೆಲೆಯಲ್ಲಿ ಸದರಿ ವಿಷಯದ ಬಗ್ಗೆ ಕಛೇರಿ ಮುಖ್ಯಸ್ಥರು ಕ್ರಮವಹಿಸಿ ಡಿ.ಸಿ.ಬಿ ವಹಿಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ವಿಶ್ವವಿದ್ಯಾನಿಲಯದ ಆಧೇಶ ಸಂಖ್ಯೆ ಜಿ ಎಲ್ 7/498 1996–97(1) ದಿನಾಂಕ 31.3.2015ರ ಅನ್ವಯದಂತೆ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ಉದ್ಯೋಗಿಗಳೆ ವೇತನದಲ್ಲಿನ ಲೆಕ್ಕಾಚಾರ ಮಾಡಿ ಸಂಬಂಧ ಪಟ್ಟವರಿಂದ ಆದಾಯ ತೆರಿಗೆಯನ್ನು ವಸೂಲಿಸುವ ಸಂಬಂಧ 2016–17 ನೇ ಸಾಲಿನಿಂದ ಮುಂದಿನ ವರ್ಷಗಳಲ್ಲಿ ಉದ್ಯೋಗಿಗಳ ವೇತನದೊಂದಿಗೆ ನೀಡುತ್ತಿರುವ ಮನೆ ಬಾಡಿಗೆ ಭತ್ಯೆಯನ್ನು ಸ್ಥಗಿತಗೊಳಿಸುವಂತೆ ಆಧೇಶಿಸಲಾಗಿದೆ ಇದರಿಂದಾಗಿ ಉದ್ಯೋಗಿಗಳ ವೇತನದಿಂದ ಕಡಿತಗೊಳಿಸಲಾಗುತ್ತಿದ್ದ ಮನೆ ಬಾಡಿಗೆ ಮೊತ್ತವನ್ನು ಸ್ಥಗಿತಗೊಳಿಸಲಾಗಿರುವುದರಿಂದ 2016–17ನೇ ಸಾಲಿನ ಡಿ.ಸಿ.ಬಿ ವಹಿಯಲ್ಲಿ ಬಾಡಿಗೆ ವಸೂಲಾತಿ ಮೊತ್ತಗಳನ್ನು ದಾಖಲಿಸಲಾಗುತ್ತಿಲ್ಲ.<br>ಮನೆ ಬಾಡಿಗೆ ಮೊತ್ತಗಳನ್ನು ವಸೂಲಿಸಿ ಹೊಂದಾಣಿಕೆ ಮಾಡಿದ ನಂತರವೇ ಡಿ.ಸಿ.ಬಿ. ವಹಿಯಲ್ಲಿ ನಮೂಧಿಸಿ ಬಾಕಿ ಮೊತ್ತಗಳ ವಿವರಗಳನ್ನು ದಾಖಲಿಸಲಾಗುವುದೆಂದೂ ನಿವೇದಿಸಲಾಗಿದೆ. |

| | | |
|---|---|---|
| **85** | <u>**ವಸತಿ ಗೃಹ ಹಂಚಿಕೆಯಾಗಿರುವ ಅಧಿಕಾರಿಗಳು/ ಸಿಬ್ಬಂದಿ ವರ್ಗದವರ ವೇತನದಲ್ಲಿ ವೇತನ ಭತ್ಯೆಯನ್ನು ಡ್ರಾ ಮಾಡದೆ ಇರುವುದು ಮತ್ತು ವಸತಿ ಗೃಹ ಬಾಡಿಗೆ ಬಾಬ್ತು ವೇತನದಲ್ಲಿ ಕಡಿತಗೊಳಿಸದೆ ಕೈಬಿಟ್ಟಿರುವುದು:–**</u> **(ಇಂಜಿನಿಯರಿಂಗ್ ವಿಭಾಗ)**<br>ಸರ್ಕಾರಿ ನೌಕರರ ಸೇವಾ ನಿರ್ವಹಣೆಗಾಗಿ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಯನ್ನು ರಚಿಸಲ್ಪಟ್ಟಿದೆ. ಇದರಲ್ಲಿ ಸೇವಾ ಸೌಲಭ್ಯಗಳ ಬಗ್ಗೆ ವಿವರಣೆಯನ್ನು ಸಹ ನೀಡಲಾಗಿದೆ. ಅಂತಹ ಸಂದರ್ಭದಲ್ಲಿ ವೇತನ ಮತ್ತು ಭತ್ಯೆಗಳು ಅವೆ ಮುಖ್ಯವಾಗಿದೆ. ವೇತನ, ವೇತನ ಬಡ್ತಿ, ಸ್ಥಗಿತ ವೇತನ ಬಡ್ತಿ ಪ್ರಭಾರ ಮತ್ತು ಜೀವನಾಧಾರದ ಭತ್ಯೆಗಳು ಸಂಕ್ಷಿಪ್ತ ವಿವರಣೆಗಳೊಡನೆ ಬಿಡಿಸಿದ ಉದಾಹರಣೆಗಳ ಮತ್ತು ವಸ್ತು ನಿಷ್ಠೆ ಪ್ರಶ್ನೋತ್ತರಗಳನ್ನು ಅಳವಡಿಸಲಾಗಿದೆ.<br>2016–17ನೇ ಸಾಲಿನ ಇಂಜಿನಿಯರಿಂಗ್ ವಿಭಾಗದಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ವೇತನ ಪಾವತಿಸಿರುವ ಬಟವಾಡೆ ರೋಲ್‌ಗಳ ಲೆಕ್ಕಪರಿಶೋಧಿಸುವಾಗ ವಸತಿ ಗೃಹ ಹಂಚಿಕೆಯಾಗಿರುವ ಅಧಿಕಾರಿಗಳ ಮತ್ತು ಸಿಬ್ಬಂದಿಗಳಿಗೆ ವೇತನವನ್ನು ಡ್ರಾ ಮಾಡುವಾಗ ಅವರವರ ಮೂಲ ವೇತನಕ್ಕೆ ನಿಯಮಾನುಸಾರವಾಗಿ ಮನೆ ಬಾಡಿಗೆ ಭತ್ಯೆಯನ್ನು ವಿಶ್ವವಿದ್ಯಾನಿಲಯದ ನಿಧಿಯಿಂದ ಡ್ರಾ ಮಾಡದೇ ಇರುವುದು ಹಾಗೂ ವಸೂಲಿಸಿದೆ ಎಂದು ಹೆಚ್.ಆರ್.ಎ ಬಾಬ್ತು ಲೆಕ್ಕದಲ್ಲಿ ಇಟ್ಟಿರುವುದು ಲೆಕ್ಕ ಪರಿಶೋಧನಾ ಅವಧಿಯಲ್ಲಿನ ಮಾರ್ಚ್–2016 ರಿಂದ ಫೆಬ್ರವರಿ–2017 ರ ಮಾಹೆಯಲ್ಲಿ ಕಂಡು ಬಂದಿರುವುದರಿಂದ ಈ ಬಗ್ಗೆ ವಿವರಣೆಯನ್ನು ನೀಡಲು ವಿಚಾರಣೆ ಸಂಖ್ಯೆ:6/ 2018–19 ದಿನಾಂಕ:07.09.2018 ರಲ್ಲಿ ಕೋರಲಾಗಿ ಈ ಬಗ್ಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. | ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ ಎಲ್ 7/498 1996–97(1) ದಿನಾಂಕ 31.3.2015ರ ಅನ್ವಯದಂತೆ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ಉದ್ಯೋಗಿಗಳ ವೇತನದಲ್ಲಿನಲೆಕ್ಕಾಚಾರ ಮಾಡಿ ಸಂಬಂಧ ಪಟ್ಟವರಿಂದ ಆದಾಯ ತೆರಿಗೆಯನ್ನು ವಸೂಲಿ ಮಾಡುವ ಸಂಬಂಧ 2016–17 ನೇ ಸಾಲಿನಿಂದ ಮುಂದಿನ ವರ್ಷಗಳಲ್ಲಿ ಉದ್ಯೋಗಿಗಳ ವೇತನದೊಂದಿಗೆ ನೀಡುತ್ತಿರುವ ಮನೆ ಬಾಡಿಗೆ ಭತ್ಯೆಯನ್ನು ಸ್ಥಗಿತಗೊಳಿಸುವಂತೆ ಆದೇಶಿಸಲಾಗಿದೆ<br>ಇದರನ್ವಯ 2016–17ನೇ ಸಾಲಿನಲ್ಲಿ ಸಿಬ್ಬಂದಿ ವರ್ಗದವರ ವೇತನದೊಂದಿಗೆ ನೀಡುತ್ತಿರುವ ಮನೆ ಬಾಡಿಗೆ ಭತ್ಯೆಯನ್ನು ಡ್ರಾ ಮಾಡಿರುವುದಿಲ್ಲ ಹಾಗೂ ವಸತಿ ಗೃಹಗಳ ಬಾಡಿಗೆಯನ್ನು ವೇತನದಲ್ಲಿ ಕಡಿತಗೊಳಿಸದೇ ಕೈ ಬಿಡಲಾಗಿದೆ ವಿಶ್ವವಿದ್ಯಾನಿಲಯದ ದಿನಾಂಕ 31.3.2015ರ ಆದೇಶದ ಪ್ರತಿಯನ್ನು ಲಗತ್ತಿಸಿದೆ. |

| | | |
|---|---|---|
| **86** | <u>**ಕಾಮಗಾರಿ ನಗದು ಪುಸ್ತಕದ ಪರಿಶೀಲನೆ ಬಗ್ಗೆ:– (ಇಂಜಿನಿಯರಿಂಗ್ ವಿಭಾಗ)**</u><br>2016–17ನೇ ಸಾಲಿನಲ್ಲಿ ಮೈಸೂರು ವಿ.ವಿ ಇಂಜಿನಿಯರಿಂಗ್ ವಿಭಾಗದಲ್ಲಿ ರೂ.68,70,86,181/–ಗಳ ಕಾಮಗಾರಿಗಳನ್ನು ನಿರ್ವಹಿಸಿದ್ದು ಆಡಿಟ್ ವಿಚಾರಣಾ ಪತ್ರ ಸಂಖ್ಯೆ:1/ ದಿನಾಂಕ:11.09.2018 ರಲ್ಲಿ ನೀಡಿ ಕಾಮಗಾರಿ ನಿರ್ವಹಣೆ ಬಗ್ಗೆ ಕಾಮಗಾರಿ ನಗದು ಪುಸ್ತಕವನ್ನು ಹಾಜರುಪಡಿಸುವಂತೆ ಕೋರಿ ನೀಡಲಾಗಿ ಇದಕ್ಕೆ ಕಾಮಗಾರಿ ನಗದು ಪುಸ್ತಕವನ್ನು ಹಾಜರುಪಡಿಸಿರುತ್ತಾರೆ. ಸದರಿ ನಗದು ಪುಸ್ತಕವನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನ್ಯತೆಗಳು ಇರುತ್ತದೆ.<br>1) ಕಾಮಗಾರಿ ನಗದು ಪುಸ್ತಕವನ್ನು ಕರ್ನಾಟಕ ಆರ್ಥೀಕ ಸಂಹಿತೆ ಅನುಚ್ಛೇದ 328 ರಿಂದ 331 ರಲ್ಲಿ ನಿಗಧಿಯಾಗಿರುವ ನಮೂನೆಯಲ್ಲಿ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ ಜಮೆ ಹಾಗೂ ಸಂದಾಯಗಳನ್ನು ವರ್ಗೀಕರಿಸಿ ನಮೂದು ಮಾಡಿರುವುದಿಲ್ಲ.<br>2) ಪ್ರಾರಂಭ ಶಿಲ್ಕು ಹಾಗೂ ಅಂತಿಮ ಶಿಲ್ಕು ನಮೂದಾಗಿರುವುದಿಲ್ಲ, ಲೆಕ್ಕ ತಾಳೆ ಹೊಂದಿರುವುದಿಲ್ಲ.<br>3) ಪ್ರತಿ ಮಾಹೆ ಅಂತ್ಯಕ್ಕೆ ತಿಂಗಳ ಘೋಷ್ವಾರೆ ಲೆಕ್ಕ ಸಮನ್ವಯ ಮಾಡಿರುವುದಿಲ್ಲ.<br>4) ಪ್ರತಿ ಮಾಹೆ ಅಂತ್ಯಕ್ಕೆ, ವರ್ಷದ ಅಂತ್ಯಕ್ಕೆ ನಗದು ಪುಸ್ತಕದ ಶಿಲ್ಕನ್ನು ಬ್ಯಾಂಕ್ ಪಾಸ್‌ಪುಸ್ತಕದ ಶಿಲ್ಕಿನೊಂದಿಗೆ ಲೆಕ್ಕ ಸಮನ್ವಯಗೊಳಿಸಿರುವುದಿಲ್ಲ.<br>5) ಪ್ರತಿ ಮಾಹೆ ಅಂತ್ಯಕ್ಕೆ ವರ್ಗವಾರು, ಲೆಕ್ಕ ಶೀರ್ಷಿಕೆವಾರು ಖರ್ಚಿನ ವಿವರವನ್ನು ನಮೂದಿಸಿರುವುದಿಲ್ಲ ಹಾಗೂ ವರ್ಷಾಂತ್ಯಕ್ಕೆ ಲೆಕ್ಕ ಶೀರ್ಷಿಕೆವಾರು ಖರ್ಚುಗಳನ್ನು ನಮೂದಿಸಿರುವುದಿಲ್ಲ.<br>ಮೇಲ್ಕಂಡ ನ್ಯೂನ್ಯತೆಗಳನ್ನು ಸರಿಪಡಿಸಿ ವಿವರ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವುದು. | 1) 2016–17ನೇ ಸಾಲಿನ ಕಾಮಗಾರಿ ನಗದು ಪುಸ್ತಕಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆರ್ಥಿಕ ಸಂಹಿತೆ ಅನುಮೇಧ 328 ರಿಂದ 331ರ ಸೂಚನೆಯಂತೆ ನಿಗಧಿತ ನಮೂನೆಯ ನಗದು ಪುಸ್ತಕದಲ್ಲಿ ವಿವರಗಳನ್ನು ನಮೂದಿಸಿ ನಿರ್ವಹಿಸಲಾಗಿರುತ್ತದೆ.<br>2) ನಗದು ಪುಸ್ತಕದ ಪ್ರಾರಂಭ ಶಿಲ್ಕು ಮತ್ತು ಅಂತಿಮ ಶಿಲ್ಕುಗಳಿಗೆ ಸಂಬಂಧಿಸಿದಂತೆ 2016–17ನೇ ಸಾಲಿನ ಆರ್ಥಿಕ ವಹಿವಾಟಿಗನುಗುಣವಾಗಿ ಖರ್ಚು ವೆಚ್ಚಗಳ ಆಧಾರದ ಮೇಲೆ ನಿಗಧಿತ ನಮೂನೆಯ ರಿಜಿಸ್ಟರ್ ನಲ್ಲಿ ನಿರ್ವಹಿಸಿ ಲೆಕ್ಕಗಳನ್ನು ಸಮನ್ವಯಗೊಳಿಸುವ ಕ್ರಮ ಕೈಗೊಳ್ಳಲಾಗಿದೆ.<br>3) ವಿಶ್ವವಿದ್ಯಾನಿಲಯದ ಪ್ರತಿ ಮಾಹೆಯ ಅಂತ್ಯಕ್ಕೆ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಹೊಂದಾಣಿಕೆಯೊಂದಿಗೆ ಲೆಕ್ಕ ಸಮನ್ವಯಗೊಳಿಸಲಾಗಿರುತ್ತದೆ. |

87

**ಇ–ಪ್ರಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೇ ದಿ ಮೈಸೂರು ಪೇಪರ್ ಮಿಲ್ಸ್ ಲಿ, ರವರಿಂದ ಖರೀದಿಸಿರುವುದು (ಮುದ್ರಣಾಲಯ)**

2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಮುದ್ರಣಾಲಯಕ್ಕೆ ಅವಶ್ಯಕವಿರುವ ಪೇಪರ್‌ಗಳನ್ನು ಖರೀದಿಸಿರುವ ಹುಂಡಿಗಳನ್ನು ಪರಿಶೀಲಿಸಲಾಗಿ ದಿ.ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್ ಭದ್ರಾವತಿ ಕಾರ್ಖಾನೆಗೆ ಪಾವತಿಸಿರುವ ವಿವರಗಳು ಈ ಕೆಳಕಂಡಿಂತಿದೆ.

| ಕ್ರ.ಸಂ | ಬಿ.ಆರ್.ಸಂ & ದಿನಾಂಕ | ಧನಾದೇಶ ಸಂಖ್ಯೆ ದಿನಾಂಕ | ಮೊತ್ತ | ಖರೀದಿಸಿದ ವಸ್ತುಗಳ ವಿವರ |
|---|---|---|---|---|
| 1 | 38/29.06.2016 | 806542/19.07.2016 | 12,56,548 | Cleeam wove elegant sheet (307 §AqÀ¯ïi) |
| 2 | 46/14.07.2016 | 806543/02.08.2016 | 11,63,417 | Cleeam wove elegant sheet (316 §AqÀ¯ïi) |
| 3 | 124/04.01.2017 | 806590/21.01.2017 | 6,91,824 | Cleeam wove elegant sheet (316 §AqÀ¯ïi) |
| | | **ಒಟ್ಟು ಮೊತ್ತ** | **31,11,789** | |

ಕೆ.ಟಿ.ಪಿ.ಪಿ ಕಾಯ್ದೆ 2000ರ ನಿಯಮ 4 ರನ್ವಯ ಇ–ಪ್ರಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡು ಪೇಪರ್ ಬಂಡಲ್‌ಗಳನ್ನು ಖರೀದಿಸಬೇಕಾಗಿರುತ್ತದೆ. ಅಥವಾ ಕೆ.ಟಿ.ಪಿ.ಪಿ ಕಾಯ್ದೆ 2000ರ ನಿಯಮ 4 (ಜಿ) ಪ್ರಕಾರ ಸರ್ಕಾರದಿಂದ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ಪಡೆದಿರುವ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:07/25.09.2018 & 09/26.09.2018 ರಲ್ಲಿ ಎರಡು ವಿಚಾರಣಾ ಪತ್ರಗಳಲ್ಲಿ ಕೋರಲಾಗಿದ್ದರೂ ಕೋರಲಾಗಿರುವ ಇ–ಪ್ರಕ್ಯೂರ್‌ಮೆಂಟ್ ಪ್ರಕ್ರಿಯೆ ಕಡತಗಳು ಮತ್ತು ಸರ್ಕಾರದ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರಿಂದ **ರೂ.31,11,789/–ಗಳನ್ನು ಆಕ್ಷೇಪಣೆಗೆ** ಸೂಚಿಸಿದೆ.

ಸರ್ಕಾರದ ಆರ್ಥಿಕ ಇಲಾಖೆ ಅಧಿಸೂಚನೆ ಸಂಖ್ಯೆ: ಆಇ460 ವೆಚ್ಚ 12/2015 ದಿನಾಂಕ:14.07.2015 ಮತ್ತು ಅಧಿಸೂಚನೆ ಸಂಖ್ಯೆ:DE890 ವೆಚ್ಚ 12/2016, ದಿನಾಂಕ:01.12.2016 ರಲ್ಲಿ ಸರ್ಕಾರದ ಅಧೀನಕ್ಕೊಳಪಟ್ಟ ಸ್ವಾಯತ್ತ ಸಂಸ್ಥೆಗಳು, ಪಂಚಾಯತ್‌ರಾಜ್, ನಗರ ಸ್ಥಳೀಯ ಸಂಸ್ಥೆಗಳು ತಮಗೆ ಅಗತ್ಯವಿರುವ ಮುದ್ರಣ ಹಾಗೂ ಬರೆಯುವ ಕಾಗದವನ್ನು ಅವುಗಳ ಗುಣಮಟ್ಟ ಹಾಗೂ ದರವನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಸಮಿತಿಯು ನಿರ್ಧರಿಸಿರುವ ದರದಲ್ಲಿ ಮಾರಾಟ ಮಾಡುವ ಷರತ್ತಿಗೊಳಪಟ್ಟು ನೇರವಾಗಿ ದಿ ಮೈಸೂರು ಪೇಪರ್ ಮಿಲ್ಸ್‌ಗಳಿಂದ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ(4ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸರ್ಕಾರವು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿರುತ್ತದೆ.

ಅದರನ್ವಯ 2016–17ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಮುದ್ರಣಾಲಯಕ್ಕೆ ಅವಶ್ಯಕವಿರುವ ಕಾಗದಗಳನ್ನು ಖರೀದಿಸುವ ಸಂಬಂಧವಾಗಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿ.ಎಲ್1/382(ಎ)/2015–16 ದಿನಾಂಕ:27.05.2016 ಮತ್ತು ಆದೇಶ ಸಂಖ್ಯೆ:ಜಿ.ಎಲ್1/382(ಬಿ)2015–16 ದಿನಾಂಕ:05.12.2016 ರ ಅನ್ವಯದಂತೆ ಮುದ್ರಣಾಲಯದ ಕಾರ್ಯಗಳಿಗೆ ಅವಶ್ಯಕವಿದ್ದ ಪೇಪರ್ ಅನ್ನು "ದಿ ಮೈಸೂರು ಪೇಪರ್ ಮಿಲ್ಸ್ ಲಿ" ಬೆಂಗಳೂರು ಬದ್ರಾವತಿ ಕಾರ್ಖಾನೆ ಇವರಿಂದ ಖರೀದಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಇದರನ್ವಯ ಅವಶ್ಯಕ ಪೇಪರ್ ಅನ್ನು ಖರೀದಿಸಿದ ಸಂಬಂಧ ರೂ.31,11,789/–ಗಳ ವೆಚ್ಚ ಭರಿಸಲಾಗಿದೆ.

ಕೆ.ಟಿ.ಪಿ.ಪಿ ಕಾಯ್ದೆ 1999ರ ನಿಯಮ (4)ಜಿ ಆದೇಶ ಪ್ರತಿಗಳು ಮತ್ತು

| | | |
|---|---|---|
| | | ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಮಂಜೂರಾತಿ ಆದೇಶದ ಪ್ರತಿ ಹಾಗೂ ಮೈಸೂರು ಪೇಪರ್ ಲಿ, ಬೆಂಗಳೂರು ರವರ ದರಪಟ್ಟಿಯ ಪ್ರತಿ ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ ರೂ.31,11,789/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ. |

| 88 | **ಟೆಂಡರ್ ಕರೆಯದೆ ಮೆಸ್ ಗುತ್ತಿಗೆ ನೀಡಿರುವುದು:– (ವಿದ್ಯಾರ್ಥಿ ಕ್ಷೇಮಾ ಪಾಲನಾ)**<br>ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಾ ಪಾಲನಾ ವಿಭಾಗದ ಅಧೀನದಲ್ಲಿ ಬರುವ 19 ಸ್ನಾತಕೋತ್ತರ ಪುರುಷ/ಮಹಿಳಾ ಮೆಸ್ ಗುತ್ತಿಗೆಯನ್ನು ಮೆಸ್ ಗುತ್ತಿಗೆದಾರರಿಗೆ ವಹಿಸಿಕೊಟ್ಟು ಮೆಸ್ ಗುತ್ತಿಗೆ ಬಿಲ್ಲುಗಳನ್ನು ಗುತ್ತಿಗೆದಾರರಿಗೆ ಪಾವತಿಸಿದೆ ಆದರೆ ಪಾವತಿಸಿರುವ ಭೋಜನ ವೆಚ್ಚದ ಬಿಲ್ಲು 5 ಲಕ್ಷಕ್ಕಿಂತ ಹೆಚ್ಚಿಗೆ ಪಾವತಿಸಿರುವುದರಿಂದ ಕೆ.ಟಿ.ಪಿ.ಪಿ ಕಾಯ್ದೆ 2000 ರನ್ವಯ ಪ್ಯಾಕೇಜ್ ಸಿಸ್ಟಂ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಬೇಕಾಗಿದ್ದು, ಟೆಂಡರ್ ಕರೆಯದೆ ಹಾಗೂ ಟೆಂಡರ್ ಕಡತವನ್ನು ಪರಿಶೀಲನೆಗೆ ಹಾಜರುಪಡಿಸಬೇಕಾಗಿ ವಿಚಾರಣೆ ಸಂಖ್ಯೆ:2018–19 ದಿನಾಂಕ:15.10.2018 ರಂದು ವಿಚಾರಣೆಗೆ ವಿವರಣೆ ನೀಡದೆ ಕಡತ ಹಾಜರುಪಡಿಸದೆ ಇರುವುದರಿಂದ ಕೆ.ಟಿ.ಪಿ.ಪಿ ನಿಯಮ 23 ರನ್ವಯ ಆಡಳಿತಾತ್ಮಕ ಕ್ರಮ ಜರುಗಿಸಲು ತಿಳಿಸಿದೆ.<br>1) ಮೆಸ್ ಗುತ್ತಿಗೆದಾರ ನೋಂದಣಿ ಪ್ರಮಾಣ ಪತ್ರ ಹಾಜರುಪಡಿಸಿರುವುದಿಲ್ಲ.<br>2) ಗುತ್ತಿಗೆದಾರರ ಮೆಸ್ ಬಿಲ್ಲುಗಳಲ್ಲಿ ಆದಾಯ ತೆರಿಗೆ ಇ.ಪಿ.ಎಸ್, ಪಿ.ಎಫ್, ಇ.ಎಸ್.ಐ ಸೇವಾ ತೆರಿಗೆ ಕಟಾಯಿಸಿ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿರುವ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.<br>3) ಗುತ್ತಿಗೆದಾರರಿಂದ ಬರೆಯಿಸಿಕೊಂಡಿರುವ ಮಂಜೂರಾತಿ ಪ್ರಮಾಣ ಪತ್ರ ಹಾಜರುಪಡಿಸಿರುವುದಿಲ್ಲ.<br>4) 2015–16ನೇ ಮೆಸ್ ಗುತ್ತಿಗೆದಾರರೇ ಮುಂದುವರಿಸದ ಹೊಸದಾಗಿ ಟೆಂಡರ್ ಕರೆದಿರುವುದಿಲ್ಲ.<br>5) ಅನುಮೋದಗೊಂಡಿರುವ ದರಪಟ್ಟಿ ಮಂಜೂರಾತಿ ಆದೇಶ ಪ್ರತಿ ಹಾಜರುಪಡಿಸಿರುವುದಿಲ್ಲ.<br>ವಿವರದಲ್ಲಿ ತಿಳಿಸಿರುವಂತೆ ಅನುಬಂಧ ತಿಳಿಸಿರುವಂತೆ ಮಾರ್ಚಿ 2016 ರಿಂದ ಫೆಬ್ರವರಿ 2017 ವರೆಗೆ ಪಾವತಿಸಿರುವ ಮೆಸ್ ಗುತ್ತಿಗೆ ಪಾವತಿಯ ಬಿಲ್ಲಿನ ಮೊಬಲಗು **ರೂ.3,13,38,896/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರವನ್ನು **ಅನುಬಂಧ–34 ರಲ್ಲಿ** ನೀಡಲಾಗಿದೆ. | 2015–16 ನೇ ಸಾಲನಲ್ಲಿ ವಿಶ್ವವಿದ್ಯಾನಿಲಯದ ನೇರ ಆಡಳಿತಕ್ಕೊಳಪಟ್ಟ ಕಾಲೇಜು/ಅಧ್ಯಾಯನ ವಿಭಾಗಗಳಲ್ಲಿ ಸೆಮಿಷ್ಟರ್ ಪರೀಕ್ಷೆಗಳು ಜೂನ್‌ವರೆವಿಗೂ ಮುಂದುವರಿದ ಕಾರಣ ಹಾಗೂ ಗುತ್ತಿಗೆದಾರರಿಗೆ ಸಂಬಂಧಿಸದ ಪ್ರಕ್ರೀಯೆಯು ಅನಿವಾರ್ಯ ಕಾರಣಗಳಿಂದಾಗಿ ವಿಳಂಬವಾಗಿರುವ ಹಿನ್ನೆಲೆಯಲ್ಲಿ ಹಾಗೂ 2016–17 ನೇ ಸಾಲಿನ ಪ್ರವೇಶಾತಿ ಪ್ರಕ್ರೀಯೆಯು ಪ್ರಾರಂಬಗೋಡಿದ್ದು ಗುತ್ತಿಗೆದಾರರನ್ನು ಆಯ್ಕೆ ಮಾಡುವ ಪ್ರಕ್ರೀಯೆಗೆ ಕಾಲಾವಕಾಶ ಕಡಿಮೆ ಇದ್ದುದರಿಂದ 2015–16 ನೇ ಸಾಲಿನಲ್ಲಿ ಮೆಸ್ ನಡೆಸದ ಗುತ್ತಿಗೆದಾರರು ಚೆನ್ನಾಗಿ ಊಟವನ್ನು ತಯಾರಿಸಿ ವದ್ಯಾರ್ಥಿಗಳಿಗೆ ನೀಡಿದ್ದುದರಿಂದ ವಿದ್ಯಾರ್ಥಿಗಳಿಂದ ಯಾವುದೇ ತಕರಾರು ಇಲ್ಲವಾಗಿದ್ದ ಕಾರಣ 2016–17ನೇ ಸಾಲಿಗೂ ತಾತ್ಕಾಲಿಕವಾಗಿ ಇವರನ್ನೆ ಮುಂದುವರಿಸಲು ಮಾನ್ಯ ಕುಲಪತಿಗಳು ಅನುಮೋಧಿಸಿರಿತ್ತಾರೆ 2015–16ನೇ ಸಾಲಿನಲ್ಲಿ ಸ್ನಾತಕ ಪೂರ್ವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ1300 ಮತ್ತು ರೂ 1350ಗಳನ್ನು ನೀಡುತ್ತಿದ್ದ ದರದಲೇ ಸದರೀ ಗುತ್ತಿಗೆದಾರರನ್ನು 2016–16ರ ಸಾಲಿಗೂ ಮೂಂದುವರಿಸಲಾಗಿದೆ.<br>ದಿನಾಂಕ 14.10.2016ರಂದು ಮಾನ್ಯ ಕಿಲಪತಿಗಳ ಅದ್ಯಕ್ಷತೆಯಲ್ಲಿ ನಡೆದ 2016–17ನೇ ಸಾಲಿನ ವಿದ್ಯಾರ್ಥಿಗಳ ಆಡಳಿತ ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ದಿ ಸಲಹಾ ಸಮಿತಿ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿದ್ದು ಪುಸ್ತಕ ಸಾಲಿನಲ್ಲಿ ಸರ್ಕಾರವು ವಿದ್ಯಾರ್ಥಿ ವೇತನವನ್ನು ರೂ 1600 ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 1650 ಗಳನ್ನು ನಿಗಧಿ ಪಡಿಸಿರುವುದರಿಂದ ಯು,ಜಿ ಮತ್ತು ಪಿ.ಜಿ ಯವರಿಗೆ ತಾರತಮ್ಯ ಇರಬಾರದೆಂಬ ಉದ್ದೇಶದಿಂದ ವಿಶ್ವವಿದ್ಯಾನಿಲಯದಿಂದ ನೀಡುತ್ತಿದ್ದ ಇ.ಬಿ.ಎಲ್ ಮೊತ್ತ ರೂ 300 ಗಳಿಗೆ ಹೆಚ್ಚಾಗಿ ಒಟ್ಟು ಮೊತ್ತ ರೂ 700ರ ದರದಲ್ಲಿ ಮೆಸ್ ದರವನ್ನು ನಿಗಧಿಗೊಳಿಸಲು ತೀರ್ಮಾನಿಸಲಾಯಿತು ಹಾಗೂ ದೀನಾಂಕ 21.12.2016ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಇದನ್ನು ಅನುಮೋಧಿಸಲಾಗಿರುತ್ತದೆ. |
|---|---|---|

| | | |
|---|---|---|
| | | ದಿನಾಂಕ:14.10.2016ರಮದು ನಡೆದ ಸಲಹಾ ಸಮಿತಿ ಸಭೆಯ ನಡುವಳಿ ದಿನಾಂಕ 21.12.2016ರಂದು ನಡೆದ ಸಿಂಡಿಕೇಟ್ ಸಭೆಯು ನಿರ್ಣಯದ ಪ್ರತಿ ಹಾಗೂ ಮಾನ್ಯ ಕುಲಪತಿಗಳು ಕಡತದಲ್ಲಿ ಅನುಮೋಧಿಸಿರುವ ಪ್ರತಿಯ ಪ್ರತಿಯನ್ನು ಈ ಕೂಡ ಲಗತ್ತಿಸಿದೆ<br>ಆದ್ದರಿಂದ ರೂ.3,13,38,896/–ಗಳ ಆಕ್ಷೇಪಣೆತನ್ನು ಕೈ ಬಿಡಲು ಕೋರಿದೆ. |

| | | |
|---|---|---|
| 89 | **<u>Providing temporary steel/ Aluminium trussed roofing with seating chairs & stage arrangements with sound system & allied works at amphi theatre for the valedictor function of Centenary celebration at open Air theatre at Manasa Gangothri :–(ಹಣಕಾಸು ವಿಭಾಗ)</u>**<br><br>2016–17ನೇ ಸಾಲಿನ ಆಗಸ್ಟ್–2016ರ ಮಾಹೆಯ ವೋಚರ್‌ಗಳನ್ನು ಪರಿಶೀಲಿಸಿದಾಗ ಚೆಕ್ ಸಂಖ್ಯೆ:176356 ದಿನಾಂಕ:11.08.16 ರಲ್ಲಿ ಗುತ್ತಿಗೆದಾರರಿಂದ ಶ್ರೀ ಡಿ.ಶಿವಲಿಂಗಯ್ಯ ರವರಿಗೆ ಮೇಲ್ಕಂಡ ಕಾಮಗಾರಿಗೆ ಸಂಬಂಧಿಸಿದಂತೆ ರೂ.72,90,203/–ಗಳನ್ನು ಪಾವತಿಸಲಾಗಿದ್ದು, ಅದರಂತೆ ವಿಚಾರಣ ಪತ್ರಸಂಖ್ಯೆ:112 ದಿನಾಂಕ:27.07.18 ರಲ್ಲಿ ವಿವರಣೆಯನ್ನು ನೀಡಲು ಕೋರಲಾಗಿತ್ತು. ಆದರೆ ನೀಡಿರುವುದಿಲ್ಲ.<br><br>ಸದರಿ ಕಾಮಗಾರಿಗೆ 3 ಜನ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿರುತ್ತಾರೆ ಎಂದು ಹೇಳಲಾಗಿದ್ದು, ಒಬ್ಬರು ತಾಂತ್ರಿಕ ಬಿಡ್ ಮಾತ್ರ ಅಂಗೀಕೃತವಾಗಿ ಉಳಿದ ಇಬ್ಬರು ಗುತ್ತಿಗೆದಾರರ ತಾಂತ್ರಿಕ ಬಿಡ್‌ಗಳು ತಿರಸ್ಕೃತಗೊಂಡಿದ್ದು, ತಿರಸ್ಕೃತಗೊಂಡಿರುವ ತಾಂತ್ರಿಕ ಬಿಡ್‌ಗಳನ್ನು (technical evaluation) ಹಾಜರುಪಡಿಸಿರುವುದಿಲ್ಲ.<br><br>ಅಂಗೀಕೃತವಾದ ಬಿಡ್‌ದಾರರ ಟೆಂಡರ್ ಮೊತ್ತದ ದರಗಳ ಮೇಲೆ ಶೇ.30.12% ರಷ್ಟು ಅಧಿಕ ದರ ನಮೂದಿಸಿರುತ್ತಾರೆ. ಕೆ.ಟಿ.ಪಿ.ಪಿ ನಿಯಮಾನುಸಾರ ಒಬ್ಬರೇ ಬಿಡ್‌ದಾರರು ಉಳಿದಿದ್ದರೆ ಹಾಗೂ ಶೇ.10.00%ರಷ್ಟು ಹೆಚ್ಚುವರಿಯಾಗಿದ್ದಾಗ ಮರು ಟೆಂಡರ್ ಕರೆಯಬೇಕಾಗಿರುತ್ತದೆ. ಆದರೂ ಬಿಡ್‌ದಾರರೊಂದಿಗೆ ಶೇ.10.60% ರಷ್ಟು ಹೆಚ್ಚುವರಿಯಾಗಿ ಸಂದಾನ ನಡೆಸಿ ಟೆಂಡರ್ ಅಂಗೀಕರಿಸಿರುವುದಕ್ಕೆ ವಿವರಣೆ ನೀಡಿರುವುದಿಲ್ಲ.<br><br>ಸದರಿ ಕಾಮಗಾರಿಗೆ Technical sanction ನ್ನು SE/CE ರವರಿಂದ ಪಡೆದಿರುವ ಬಗ್ಗೆ (Technical sanction ಪ್ರತಿಯನ್ನು) ಹಾಜರುಪಡಿಸಿರುವುದಿಲ್ಲ. | ವಿಶ್ವವಿದ್ಯಾನಿಲಯದ ಆಧೇಶ ಸಂಖ್ಯೆ ವಿವಿ/ ಶತಕ 23 2015–16 ದಿನಾಂಕ 16.7.2016ರ ಅನ್ವಯದಂತೆ ಬಯಲು ರಂಗ ಮಂದಿರದಲ್ಲಿ ನಡೆದ ಶತಮಾನೋತ್ಸವ ಸಮಾರಂಭಕ್ಕೆ ಈ ಕಾಮಗಾರಿಯನ್ನು ಶ್ರೀ ಡಿ.ಶಿವಲಿಂಗಯ್ಯ ಗಿತ್ತಿಗೆದಾರರು ಇವರಿಗೆ ವಹಿಸಿಕೊಡಲು ರೂ 72,91,274/–ಗಳಿಗೆ ಅಗತ್ಯ ಮಂಜೂರಾತಿ ನೀಡಲಾಗಿದೆ.<br><br>ಈ ಕಾಮಗಾರಿಗೆ ನಿಯಮಾನುಸರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ ಹೂರಡಿಸಲಾಯಿತು ಟೆಂಡರ್ ದರ ಸಲ್ಲಿಸಿದ್ದ ಮೂರು ಗುತ್ತಿಗೆ ದಾರರ ಪೈಕಿ ಶ್ರೀ ಡಿ.ಶಿವಲಿಂಗಯ್ಯ ಇವರು ಸಲ್ಲಿಸಿದ್ದ ದರ ಟೆಂಡರ್ ಮೊತ್ತಕ್ಕಿಂತ ಶೇ 30.12 ರಷ್ಟು ಹೆಚ್ಚಿನ ದರವನ್ನು ದಿನಾಂಕ 16.7.2016ರಂದು ನಡೆದ ಟೆಂಡರ್ ಕಮಿಟಿಯಲ್ಲಿ ಅನುಮೋದಿಸಲಾಗಿದೆ.<br><br>(1) ತನಿಖಾ ವರದಿಯಲ್ಲಿ ಪ್ರಸ್ತಾಪಿಸಿರುವಂತೆ ಇದಕ್ಕೆ ಮತ್ತೊಮ್ಮೆ ಟೆಂಡರ್ ಕರೆದು ನಿರ್ವಹಿಸಲು ಸಾಕಷ್ಟು ಕಾಲಾವಕಶ ಇರಲಿಲ್ಲ ಸದರೀ ಕಾರ್ಯಕ್ರಮಕ್ಕೆ ಸನ್ಮಾನ್ಯ ಉಪರಾಷ್ಟ್ರಪತಿಗಳ ಆಗಮನದ ದಿನಾಂಕ ನಿಗಧಿಯಾಗಿದ್ದರಿಂದ ಮತ್ತೊಮ್ಮೆ ಟೆಂಡರ್ ಕರಯದೇ ಶ್ರೀ ಡಿ.ಶಿವಲಿಂಗಯ್ಯ ಗುತ್ತಿಗೆದಾರರು ಇವರ ಹೆಚ್ಚಿನ ದರವನ್ನು ಅಂಗೀಕರಿಸುವ ಅನಿವಾರ್ಯತೆಯಾಗಿರುತ್ತದೆ.<br>(2) ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸಲಾಗುವ ಎಲ್ಲಾ ಕಾಮಗಾರಿಗಳಿಗೂ ತಾಂತ್ರಿಕ ಮಂಜೂರಾತಿ ನೀಡುವ ಸಲುವಾಗಿ ಕಟ್ಟಡ ಸಮಿತಿಯನ್ನು ಹಿಂದೆಯೇ ರಚಿಸಲಾಗಿದ್ದು ಈ ಸಮಿತಿಯಲ್ಲಿ ಲೋಕೋಪಯೋಗಿ ಮತ್ತು ವಿಧ್ಯುಚ್ಛಕ್ತಿ ಇಲಾಖೆ ಅಧೀಕ್ಷಕ ಅಭಿಯಂತರರು ಸದಸ್ಯರಾಗಿರುತ್ತಾರೆ ಕಾಮಗಾರಿಗಳ ತಾಂತ್ರಿಕತೆಯನ್ನು ಅವರು ಕೂಲಂಕುಶವಾಗಿ ಪರಿಶೀಲಿಸಿ ಸಲಹೆ |

| | | |
|---|---|---|
| | ಕಾಮಗಾರಿಯು ರೂ.25.00 ಲಕ್ಷ್ಕಕಿಂತಲೂ ಹೆಚ್ಚುವರಿಯಾಗಿರುವುದರಿಂದ 'E' M.B ಯಲ್ಲಿ record ಆಗಿರಬೇಕು. ಅದರಂತೆ 'E' M.B ಯನ್ನು ಹಾಜರುಪಡಿಸಿರುವುದಿಲ್ಲ.<br><br>Tender agreement ಪ್ರಕಾರ ಕೆಲಸ ಪ್ರಾರಂಭಿಸುವ ಮೊದಲು ಕಾರ್ಮಿಕ ಇಲಾಖೆಯಲ್ಲಿ ನೋಂದಣಿಯಾಗಿರುವ ಕಟ್ಟಡ ಕಾರ್ಮಿಕರುಗಳನ್ನು ಮಾತ್ರ ನೇಮಿಸಿಕೊಳ್ಳಬೇಕು. ಅದರಂತೆ ಕೆಲಸ ಮಾಡಿರುವ ಕಾರ್ಮಿಕರ ವಿವರ ನೀಡಲು ಸೂಚಿಸಿದರು ಸಹ ಹಾಜರುಪಡಿಸಿರುವುದಿಲ್ಲ. | ಸೂಚನೆಗಳನ್ನು ನೀಡುವುದರೊಂದಿಗೆ ಕಟ್ಟಡ ಸಮಿತಿಯ ಅನುಮೋಧನೆಗಾಗಿ ಶಿಫಾರಸ್ಸು ಮಾಡುತ್ತಾರೆ<br>ಹೀಗಾಗಿ ವಿಶ್ವವಿದ್ಯಾನಿಲಯದ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಯಂತರರು ಹಾಗೂ ಅಧೀಕ್ಷಕ ಅಭಿಯಂತರರಿಗೆ ಮಂಜೂರಾತಿಗಾಗಿ ಸಲ್ಲಿಸಲಾಗುತ್ತಿಲ್ಲ.<br><br>(3) ಈ ಕಾಮಗಾರಿಗೆ ಸಂಬಂಧಿಸಿದ ಇ.ಎಂ.ಬಿ ಪುಸ್ತಕವನ್ನು ಮರು ಪರಿಶೀಲನಾ ಸಮಯದಲ್ಲಿ ಹಾಜರು ಪಡಿಸಲಾಗಿದೆ<br>(4) ಕಾಮಗಾರಿ ಕೆಲಸಗಳಿಗೆ ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಆಗಿರುವ ಕಟ್ಟಡ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳವುದರ ಕುರಿತು ಮುಂದೆ ಅಗತ್ಯ ಕ್ರಮವಹಿಸಲಾಗುತ್ತದೆ<br>ವಿಶ್ವವಿದ್ಯಾನಿಲಯದ ದಿನಾಂಕ 16.7.2016ರ ಆದೇಶದ ಪ್ರತಿ ಹಾಗೂ ದಿನಾಂಕ 16.7.2016ರಂದು ನಡೆದ ಟೆಂಡರ್ ಸಮಿತಿ ಸಭೆಯ ನಡುವಳಿಯನ್ನು ಈ ಕೂಡ ಲಗತ್ತಿಸಿದೆ. |

| 90 | **ಕ್ರೀಡಾಭಿವೃದ್ಧಿ ನಿಧಿಯಡಿಯಲ್ಲಿ Construction of building ಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕಪತ್ರದಲ್ಲಿ ತಪ್ಪು ಜಮೆಯಾಗಿರುವುದು :– (ಇಂಜಿನಿಯರಿಂಗ್ ವಿಭಾಗ)**<br><br>2016–17ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ವಾರ್ಷಿಕ ಲೆಕ್ಕಪತ್ರದಲ್ಲಿ ವಹಿವಾಟಿನ ಸಂಖ್ಯೆ:155 ರಲ್ಲಿ ಕ್ರೀಡಾಭಿವೃದ್ಧಿ ನಿಧಿಯಡಿಯಲ್ಲಿ Construction of building ಗೆ ರೂ.92,09,707/–ಗಳ ವೆಚ್ಚವಾಗಿದೆ ಎಂದು ವಾರ್ಷಿಕ ಲೆಕ್ಕಪತ್ರದಲ್ಲಿ ನಮೂದಾಗಿರುತ್ತದೆ. ಆದರೆ ಸದರಿ ಖಾತೆಯಡಿ ರೂ.1,00,08,949ಕ್ಕೆ ಕಾಮಗಾರಿಯಾಗಿರುವುದು ಲೆಕ್ಕಪರಿಶೋಧನಾ ವೇಳೆಯಲ್ಲಿ ಕಂಡುಬಂದಿರುತ್ತದೆ. ಆದ್ದರಿಂದ ವಾರ್ಷಿಕ ಲೆಕ್ಕಪತ್ರದಲ್ಲಿ ರೂ.7,99,247/–ನ್ನು ತೆಗೆದುಕೊಂಡಿಲ್ಲದಿರುವುದರಿಂದ ಲೆಕ್ಕಹೊಂದಾಣಿಕೆ ಮಾಡಿಕೊಳ್ಳುವವರೆಗೂ ಹಾಗೂ ಇದಕ್ಕೆ ಸೂಕ್ತ ದಾಖಲೆಗಳನ್ನು ಹಾಜರುಪಡಿಸುವವರೆಗೂ **ರೂ.7,99,247/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | 2016–17ನೇ ಸಾಲಿನಲ್ಲಿ ವಾರ್ಷಿಕ ಲೆಕ್ಕಪತ್ರದನ್ವಯ ಕ್ರೀಡಾಭಿವೃದ್ಧಿ ನಿಧಿಯಡಿಯಲ್ಲಿ ವಹಿವಾಟಿನ ಸಂಖ್ಯೆ:135 ರಲ್ಲಿ ಸಣ್ಣ ಕಾಮಗಾರಿಗಳು ಶೀರ್ಷಿಕೆಯಲ್ಲಿ ರೂ.7,98,899/–ಗಳು ಮತ್ತು ವಹಿವಾಟು ಸಂಖ್ಯೆ.155ರಲ್ಲಿ ಕಟ್ಟಡ ಕಾಮಗಾರಿಗಳು ಶೀರ್ಷಿಕೆಯಲ್ಲಿ ರೂ.92,09,707/–ಗಳು ಒಟ್ಟು ಮೊತ್ತ ರೂ.1,00,08,606/–ಗಳನ್ನು ಕಾಮಗಾರಿಗಳಿಗಾಗಿ ವೆಚ್ಚ ಭರಿಸಿದ್ದು ಲೆಕ್ಕ ಪತ್ರದಲ್ಲಿ ನಮೂಧಿಸಿರುವುವದು ಸರಿಯಿರುತ್ತದೆ ಯವುದೇ ವ್ಯತ್ಯಾಸಗಳಿರುವುದಿಲ್ಲ ಮತ್ತು ಯಾವುದೇ ಲೆಕ್ಕ ಪತ್ರದಲ್ಲಿ ಬಿಟ್ಟು ಹೋಗಿರುವುದಿಲ್ಲ ಎಂಬುದಾಗಿ ನಿವೇಧಿಸುತ್ತಾ ಲೆಕ್ಕ ಪತ್ರದ ಪ್ರತಿಯನ್ನು ಲಗತ್ತಿಸಿದೆ.<br><br>ಆದ್ದರಿಂದ ರೂ.7,99,847/–ಗಳ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
|---|---|---|

| | | |
|---|---|---|
| 91 | **<u>ಕಛೇರಿ ಸಾದಿಲ್ವಾರು ವೆಚ್ಚದ ಮೊತ್ತ ರೂ.5.00 ಲಕ್ಷಕ್ಕಿಂತ ಹೆಚ್ಚಿಗೆ ಇರುವುದರಿಂದ ಟೆಂಡರ್ ಕರೆಯದಿರುವುದು ಮತ್ತು ದಾಸ್ತಾನು ವಿತರಣೆ ವಹಿ ಹಾಜರುಪಡಿಸದೆ ಇರುವುದು:– (ಹಣಕಾಸು ವಿಭಾಗ)</u>**<br>2016–17ನೇ ವರ್ಷದಲ್ಲಿ ಹಣಕಾಸು ವಿಭಾಗದಿಂದ ವಿವಿಧ ಅಂಗಸಂಸ್ಥೆ ವಿಭಾಗಗಳಿಗೆ ಅಧೀನ ಕಛೇರಿಗಳಿಗೆ ಸಾದಿಲ್ವಾರು ಬಿಲ್ಲುಗಳ ಮೂಲಕ ಪಾವತಿಸಿರುವ ಬಿಲ್ಲುಗಳನ್ನು ಪರಿಶೀಲಿಸಿದಾಗ ವಾರ್ಷಿಕ ಲೆಕ್ಕಪತ್ರದ ಜಿ.ಆರ್.ಎ ವಹಿವಾಟು ಸಂಖ್ಯೆ:115 ರಲ್ಲಿ ರೂ.76,49,030/– ಹಾಗೂ ಬ್ಯಾಂಕ್ ಖಾತೆಯ ಸಂಖ್ಯೆ:54007591437 ಬ್ಯಾಂಕ್ ವಹಿವಾಟು ಸಂಖ್ಯೆ:115 ಕಾರ್ಯಕ್ರಮಗಳ ಯೋಜನೆಯಡಿಯಲ್ಲಿ ರೂ.76,39,296/– ಸಾದಿಲ್ವಾರು ಬಿಲ್ಲುಗಳ ಮುಖಾಂತರ ಪಾವತಿಸಿರುವ ಬಿಲ್ಲುಗಳ ಮೊತ್ತ 5 ಲಕ್ಷಕ್ಕಿಂತ ಹೆಚ್ಚಿಗೆ ಪಾವತಿಸಿರುವುದರಿಂದ ಟೆಂಡರ್ ಕರೆಯಬೇಕಾಗಿರುತ್ತದೆ. ಟೆಂಡರ್ ಕರೆಯದೆ ದಾಸ್ತಾನು ವಿತರಣೆ ವಹಿ ಹಾಜರುಪಡಿಸದೆ Notification order No DPAR/2/EPR/2009 ದಿನಾಂಕ:09.10.2012 ಹಾಗೂ DPAR/02/EPR/2011(A) Date:29.07.2011 Mysore University Mysore all procurements in respect of every rocurement under the said act value of which exceeds rupees 5 lakhs shall procure their procurements through e-procurement platform with effect from the third day of December 12 K.T.T.P ನಿಯಮ ಕೆ.ಕ್ಯೂ 1 ರಲ್ಲಿ ನಿಗದಿತ ನಮೂನೆಯಲ್ಲಿ ಕೊಟೇಷನ್ ಪಡೆದಿರುವ ಮೂಲ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಪಾರದರ್ಶಕತೆ ನಿಯಮ ಉಲ್ಲಂಘನೆಯಾಗಿರುತ್ತದೆ.<br>ಜಿ.ಆರ್.ಎ ವಹಿವಾಟು ಸಂಖ್ಯೆ:232 ರಲ್ಲಿ ಹಾಸ್ಟೆಲ್ ಪಾತ್ರೆ ಸಲಕರಣೆಗಳ ಖರೀದಿ ವಾರ್ಷಿಕ ನಿರ್ವಹಣೆಗಾಗಿ ರೂ.4,01,338/– ಹಾಜರುಪಡಿಸದೆ ಇರುವುದರಿಂದ ರೂ.4,01,338/– ವಾರ್ಷಿಕ ಸಾದಿಲ್ವಾರು ಬಿಲ್ಲುಗಳ ಸ್ಟಾಕ್ ಅಕೌಂಟ್ ಹಾಜರುಪಡಿಸದೆ ಇರುವುದರಿಂದ ಮೊಬಲಗು ಈ ಕೆಳಕಂಡಂತೆ ಆಕ್ಷೇಪಣೆಯಲ್ಲಿಡಲಾಗಿದೆ.<br>1) ಜಿ.ಆರ್.ಎ ವಹಿವಾಟು ಸಂಖ್ಯೆ:115 ರಲ್ಲಿ ರೂ.76,49,030<br>2) ಜಿ.ಆರ್.ಎ ವಹಿವಾಟು ಸಂಖ್ಯೆ:232 ರಲ್ಲಿ ರೂ.4,01,338 | ಹಾಸ್ಟೆಲ್ ಪಾತ್ರೆ ಸಲಕರಣೆಗಳ ಖರೀದಿ, ವಾರ್ಷಿಕ ನಿರ್ವಹಣೆಗೆ ವಾರ್ಷಿಕ ಸಾದಿಲ್ವಾರು ಮುಂತಾದ ಶೀರ್ಷಿಕೆಗಳಲ್ಲಿ 2016–17 ನೇ ಸಾಲಿನಲ್ಲಿ ರೂ.1,56,89,664/–ಗಳ ವೆಚ್ಚ ಭರಿಸಲಾಗಿದ್ದು ಈ ವೆಚ್ಚದ ಬಗ್ಗೆ ಆಕ್ಷೇಪಿಸಿ 2016–17 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 91 ರಲ್ಲಿ ರೂ.1,56,89,664/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಈ ವೆಚ್ಚಗಳಿಗೆ ಸಂಬಂಧಿಸಿದಂತೆ ಕಂಡಿಕೆ 91 ರಲ್ಲಿ ಕೇಳಲಾದ ಮಾಹಿತಿಯನ್ನು ಸಿದ್ದ ಪಡಿಸಲು ಕ್ರಮವಹಿಸಿದ್ದು ದಾಖಲಾತಿಗಳನ್ನು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರು ಪಡಿಸಲಾಗುವುದು. |

| | | |
|---|---|---|
| | 3) ಬ್ಯಾಂಕ್ ಅಕೌಂಟ್ ನಂ.54007591437 ರೂ.76,39,296<br>**ಒಟ್ಟು ರೂ.1,56,89,664**<br>ವಿವರದಲ್ಲಿ ತಿಳಿಸಿರುವಂತೆ ವಿಚಾರಣೆ ಸಂಖ್ಯೆ:194/20.18.19 ದಿನಾಂಕ:18.08.2018 ರಂದು ವಿಚಾರಣೆ ನೀಡಲಾಗಿದ್ದು ವಿಚಾರಣೆಗೆ ಯಾವುದೇ ರೀತಿಯ ಸಾದಿಲ್ವಾರು ಬಿಲ್ಲು ದಾಸ್ತಾನು ವಹಿ ಟೆಂಡರ್ ಕಡತ ಅಕೌಂಟ್ ಲೆಕ್ಕಪರಿಶೋಧನೆಗೆ ಹಾಜರುಪಡಿಸದೆ ಇರುವುದರಿಂದ **ರೂ.1,56,89,664/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | |

| | | |
|---|---|---|
| 92 | **(ಎ). ಪಾವತಿಸಿರುವ ಬಿಲ್ಲಿನ ಮೊಬಲಗು ಒಂದು ಲಕ್ಷಕ್ಕಿಂತ ಹೆಚ್ಚಿಗೆ ಇರುವುದರಿಂದ ಟೆಂಡರ್ ಕರೆಯದೇ ಬಿಲ್ಲು ಪಾವತಿಸಿರುವುದು:– (ಹಣಕಾಸು ವಿಭಾಗ)**<br>2016–17ನೇ ವರ್ಷದ ಹಣಕಾಸು ವಿಭಾಗದ ತಪಾಸಣೆಯ ಅವಧಿಯಲ್ಲಿ ಹಾಜರುಪಡಿಸಿರುವ ಸಾದಿಲ್ವಾರು ಬಿಲ್ಲನ್ನು ಪರಿಶೀಲಿಸಿದಾಗ Lipi 6810 line matrix printer ಖರೀದಿ ಬಿಲ್ಲಿನ ಮೊಬಲಗು ಒಂದು ಲಕ್ಷಕ್ಕಿಂತ ಹೆಚ್ಚಿಗೆ ಪಾವತಿಸಿರುವುದರಿಂದ ಟೆಂಡರ್ ಕರೆಯಬೇಕಾಗಿರುತ್ತದೆ. ಟೆಂಡರ್ ಕರೆಯದೆ ಹಾಗೂ ಕೆ.ಟಿ.ಪಿ.ಪಿ ನಿಯಮ ಕೆಕ್ಯೂ–1 ರಲ್ಲಿ ನಿಗದಿತ ನಮೂನೆಯಲ್ಲಿ ಕೊಟೇಷನ್ ಪಡೆಯದೆ ನಿಯಮಬಾಹಿರವಾಗಿ ಧನಾದೇಶದ ಸಂಖ್ಯೆ:176227/ 03.08.2016 ರಂದು m/s Lipi Data systems Ltd. The precidency St Marks road Bangalore towards the purchase of line mtrix printer 6810 Vide LDBA03/2016-17/840407 ರೂ.2,61,443/– ಪಾವತಿಸದೆ. ಪಾವತಿಸಿರುವ ಮೊಬಲಗು ಟೆಂಡರ್ ಕರೆಯದೆ ದಾಸ್ತಾನು ವಿತರಣೆ ವಹಿ ಹಾಜರುಪಡಿಸದೆ ಟೆಂಡರ್ ಕಡತ ಹಾಜರುಪಡಿಸದೆ ಇರುವುದರಿಂದ ವಿಚಾರಣೆ ಸಂಖ್ಯೆ99/2018–19 ದಿನಾಂಕ:26.07.2018 ವಿಚಾರಣೆ ನೀಡಲಾಗಿದ್ದು ವಿವರಣೆ ನೀಡದೆ – ದಾಖಲಾತಿಯನ್ನು ಹಾಜರುಪಡಿಸದೆ ಇರುವುದರಿಂದ ಮೊಬಲಗು ರೂ.**2,61,443/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**<br>Ramesh Sarkar ಎಂಬುವವರಿಗೆ photo graphics and video cost of photo albums Ch.No 174935-936 ದಿನಾಂಕ:23.05.2016 ರಂದು ರೂ.60,000 ಹಾಗೂ ಚೆಕ್ ನಂ:174937–938 ದಿನಾಂಕ:23.05.2016 ರಂದು ರೂ.75,000/– ಒಟ್ಟು ರೂ.1,35,000/– ಪಾವತಿಸದೆ ಟೆಂಡರ್ ಕರೆಯದೆ ನಿಗದಿತ ನಮೂನೆ ಕೆಕ್ಯೂ1 ರಲ್ಲಿ ಕೊಟೇಷನ್ ಪಡೆಯದೆ ನಿಯಮ ಉಲ್ಲಂಘಿಸಿ ಮಾರಾಟ ತೆರಿಗೆ ಬಾಬ್ತು 5,400 ವಸೂಲಾತಿ ಸೂಚಿಸುತ್ತಾ **ರೂ.1,35,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ವಿಚಾರಣೆ ಸಂಖ್ಯೆ;55/2018–19 ದಿನಾಂಕ:19.07.2018 ರಂದು ವಿಚಾರಣೆ ನೀಡಲಾಗಿದ್ದು ಪಾರದರ್ಶಕತೆ ನಿಯಮ ಉಲ್ಲಂಘನೆಯಾಗಿರುವುದರಿಂದ | ಪ್ರಸ್ತಾವಿತ ಕಂಡಿಕರಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ2016–17ನೇ ಸಾಲಿನಲ್ಲಿ ಹಣಕಾಸು ವಿಭಾಗಕ್ಕೆ Lipi 6810 mtrix ಪ್ರಿಂಟರ್ ಯಂತ್ರವನ್ನು m/s Lipi Data systems Ltd Bangaloreರವರಿಂದ ವಿವಿಧ ವಿಭಾಗಗಳ ಕಾಗದ ಪತ್ರಗಳ ತುರ್ತು ಪ್ರಿಂಟಿಂಗ್ ಅವಶ್ಯಕತೆಯನ್ನು ಪರಿಗಣಿಸಿ ಖರೀದಿಸಿ ಕ್ರಮವಹಿಸಲಾಗಿದೆ ಸರಬರಾಜು ಪಡೆಯಲಾಗಿರುವ ಏಜೆನ್ಸಿಯಾದ m/s Lipi Data systems Ltd Bangaloreರವರು ಕೇಂದ್ರ ಸರ್ಕಾರದ ಅಧೀಕೃತ ಸರಬರಾಜು ಏಜೆನ್ಸಿಯಾದ D G s and D ನೊಂದಿಗೆ ಒಪ್ಪಂದ ಮಾಡಿಕೊಂಡು ಅನುಮೋದಿತವಾಗಿರು ದರದಲ್ಲಿಯೇ ವಿಶ್ವವಿದ್ಯಾನಿಲಯಕ್ಕೆ ಸರಬರಾಜು ಮಾಡಿದೆ.<br>ಸರಬರಾಜು ಪಡೆಯುವ ಮುದ್ರಣಯಂತ್ರವು ಸುಸ್ಥಿರಿಯಲ್ಲಿದೆ ದಾಸ್ತಾನುತೆಗೆದುಕೊಂಡಿದೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಸಕ್ಷಮ ಅಧಿಕಾರಿಗಳಿಂದ ಧೃಢೀಕರಣವಾಗಿದೆ.<br>ಸದರಿ ಪ್ರಿಂಟರ್ ಯಂತ್ರವನ್ನು ತುರ್ತು ಅವಶ್ಯಕತೆ ಹಿನ್ನಲೆತಲ್ಲಿ ವಭ್ಯವಿದ್ದ ಕಡಿಮೆ ಕಾಲಾವಕಾಶದಲ್ಲಿ ಖರೀದಿಸಲಾಗಿದೆ ಎಂಬ ಅಂಶವನ್ನು ಮತ್ತು ಕೇಂದ್ರ ಸರ್ಕಾರದ ಅಧೀಕೃತ ಸಂಸ್ಥೆಯಿಂದ ಅನುಮೋದಿತವಾದ ಏಜೆನ್ಸಿಯಿಂದ ಅನುಮೋದಿತ ದರದಲ್ಲಿಯೇ ಖರೀದಿಸಿರುವುದರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಅಕ್ಷೇಪಿತ ಮೊತ್ತ ರೂ.2,61,443/–ಗಳ ಕೈ ಬಿಡಲು ಕೋರಿದೆ.<br>(a) ಪ್ರಸ್ತಾವಿತ ಕಂಡಿಕೆಯಲ್ಲಿ photo graphics and video cost of photo albums ಸಲುವಾದ ಪಾವತಿ ಎಂದುm/sRamesh Sarkarಮೈಸೂರು ಇವರಿಗೆ ರೂ.75,000/– ಗಳನ್ನು ಫಿಠಣಠ ರಡಿಚಿಫಿಥಿ ಚಿಟಜ ತುಜಜಠಗೆ ಬಿಲ್ ನಂ: 104/ದಿನಾಂಕ:24.03.2016 ಮತ್ತು ಬಿಲ್ ನಂ:105/ದಿನಾಂಕ:24.03.2016 ರಂದು ರೂ.60,000/–ಗಳನ್ನು photo albumಗೆ ಕೋಡಲಾಗಿದೆ. ಒಟ್ಟಾರೆಯಾಗಿ |

| | | |
|---|---|---|
| | ಮೊಬಲಗು ಆಕ್ಷೇಪಣೆಗೆ ತರಲಾಗಿದೆ. | ರೂ.1,35,000/–ಗಳನ್ನು ಕೋಡಲಾಗಿದೆ.<br>ಅದರೆ ಸದರಿ ಪಾವತಿಯ ಒಟ್ಟು ಮೊತ್ತ ರೂ.1,35,000/– ಗಳು ಅಗಿರುವುದರಿಂದ ಪಾವತಿ ರೂ.1–00 ಮಾಡುವ ಹಿನ್ನಲೆಯಲ್ಲಿ KTPP–1990–2000 ಏಜೆನ್ಸಿಯ ನಿರ್ಧರವಾದ ಟೆಂಡರ್ ಮೂಲಕ ನಿಯಮ ನಿರ್ಧರಿಸಬೇಕಿದ್ದು ಅದರೆ ಕೊಟೇಷನ್ ಅಧಾರದಲ್ಲಿ ದರದಲ್ಲಿ ಪ್ರಕಟಣೆ ಹೊರಡಿಸಿ ಅದರ ಅನ್ವಯ ಕೊಟೇಷನ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಏಜೆನ್ಸಿಗಳು ಸೂಚಿಸುವ ದರಗಳ ತುಲನಾತ್ಮಕ ದರದಲ್ಲಿ ತಯಾರಿಸಿ ಅವುಗಳ ಕಡಿಮೆ ದರವನ್ನು ಸೂಚಿಸುವ ಏಜೆನ್ಸಿಯಿಚಿದ m/sRamesh Sarkar ಪ್ರಸ್ತಾವಿತ ಶತಮಾನೋತ್ಸವ ಕಾರ್ಯಕ್ರಮಗಳ photoand videoಚಿತ್ರೀಕರಣ ಸೇವೆಯನ್ನು ಪಡೆಯಲಾಗಿದೆ.<br>ಅಲ್ಲದೇ ಸೇವೆಯನ್ನು ನೀಡಿರುವ m/sRamesh Sarkarಇವರು ಮೈಸೂರುನಲ್ಲಿಯೇ ಗುರುತಿಸಲ್ಪಟ್ಟಿರುವ ಉತ್ತಮ ಛಾಯಾಗ್ರಹಕರಾಗಿರುತ್ತಾರೆ. ಈ ಅಂಶವನ್ನು ಪರಿಗಣಿಸಿ ಅದಾಂಯವರಿಂದ ಮೇಲಿನ ಕಾರ್ಯಕ್ರಮಕ್ಕೆ ಥಿಂಣಂ graphics and videoಸೇವೆ ಪಡೆಯಲಾಗಿದೆ.<br>ಅಲ್ಲದೇ ಈ photo graphics and videoಸೇವೆ ಪಡೆಯುವ ಸಂದರ್ಭದಲ್ಲಿ ದರಪಟ್ಟಿ ಪ್ರಕಟಣೆ ಹೊರಡಿಸಿ ಅದರಲ್ಲಿನ ಭಾಗಿದಾರರು ಸೂಚಿಸಿರುವ ದರಗಳ ತುಲನಾತ್ಮಕ ದರಪಟ್ಟಿ ತಯಾರಿಕೆ ಅವುಗಳಲ್ಲಿ ಎಲ್–1 ಅಗಿರುವ ಏಜೆನ್ಸಿಯಾಗಿರುವ m/sRamesh Sarkarರವರಿಂದ ವೀಡಿಯೋ ಚಿತ್ರೀಕರಣ ಮತ್ತು ಪೋಟೋ ಸೇವೆ ಪಡೆಯಲಾಗಿದೆ,<br>ಈ ಹಿನ್ನಲೆಯಲ್ಲಿ ಸದರಿ ಕಂಡಿಕೆ ಕೈ ಬಿಡಲು ಕೋರಿದೆ |

<table>
<tr><td>92</td><td><u>(ಬಿ). ಭಾವಚಿತ್ರಗಳನ್ನು ಕಾಟನ್ ಕ್ಯಾನ್ವಾಸ್ ಆಯಿಲ್ ಪೇಂಟ್‌ನಿಂದ ರಚಿಸುವ ಕೆಲಸಕ್ಕೆ ಟೆಂಡರ್ ಕರೆಯದೆ ಇರುವುದು:– (ಹಣಕಾಸು ವಿಭಾಗ)</u><br>2016–17ನೇ ಸಾಲಿನ ಅಕ್ಟೋಬರ್–2016 ರ ಮಾಹೆಯ ವೋಚರ್‌ಗಳನ್ನು ಪರಿಶೀಲಿಸಿದಾಗ 18"ಥ23" ಅಳತೆಯ ಬಣ್ಣದ ಭಾವ ಚಿತ್ರಗಳನ್ನು ಕಾಟನ್ ಕ್ಯಾನ್ವಾಸ್‌ನಲ್ಲಿ ಆಯಿಲ್ ಪೇಂಟ್‌ನಿಂದ ರಚಿಸುವ ಕೆಲಸಕ್ಕೆ<br>1) Mohammed Iqbal, P.W.D contractor or railway contractor ರವರಿಗೆ ರಚಿಸುವ ಕೆಲಸಕ್ಕೆ ರೂ.89,550/–ಗಳನ್ನು ಪಾವತಿ ಮಾಡಲಾಗಿರುತ್ತದೆ.<br>2) Puttaswamy, P.W.D contractor ರವರಿಗೆ ರೂ.90,000/–ಗಳನ್ನು ಪಾವತಿ ಮಾಡಲಾಗಿರುತ್ತದೆ.<br>3) R Udaykumar class III contractor ರವರಿಗೆ ರೂ.89,325/–ಗಳನ್ನು ಪಾವತಿ ಮಾಡಲಾಗಿರುತ್ತದೆ.<br>4) Nagaraju class II contractor ರವರಿಗೆ ರೂ.93,000/–ಗಳನ್ನು ಪಾವತಿ ಮಾಡಲಾಗಿರುತ್ತದೆ.<br>ಸದರಿ ಕೆಲಸಕ್ಕೆ (ಭಾವಚಿತ್ರಗಳನ್ನು ರಚಿಸುವುದು) ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆಯದೆಕೊಟೇಶನ್ ಕರೆದು ಪಾವತಿ ಮಾಡಲಾಗಿರುತ್ತದೆ. ಇದು ಒಂದೇ ರೀತಿಯ ಕೆಲಸವಾಗಿದ್ದು ಒಟ್ಟು ರೂ.3,61,875/–ಗಳನ್ನು ಸಿವಿಲ್ ಗುತ್ತಿಗೆದಾರರಿಗೆ ಪಾವತಿ ಮಾಡಲಾಗಿರುತ್ತದೆ. ಒಂದು ಲಕ್ಷಕ್ಕಿಂತ ಅಧಿಕ ಮೊತ್ತವಾಗಿದ್ದು, ಕೆ.ಟಿ.ಪಿ.ಪಿ ನಿಯಮ 1999 ಮತ್ತು 2000 ರ ನಿಯಮವನ್ನು ಪಾಲಿಸಿರುವುದಿಲ್ಲ ಪಾವತಿಸಿರಲ್ಪಟ್ಟರು ಈ ಕೆಲಸಕ್ಕೆ ಸಣ್ಣ ಕಾಮಗಾರಿ–135 ರಡಿಯಲ್ಲಿ (ಲೆಕ್ಕಶೀರ್ಷಿಕೆ) ಪಾವತಿಸಲಾಗಿರುತ್ತದೆ. ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗಿರುವ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ. ಅದರಂತೆ ಈ ಕೆಲಸಕ್ಕೆ ವಿಚಾರಣೆ ಪತ್ರಸಂಖ್ಯೆ:100/ ದಿ:26.07.2018 ರಲ್ಲಿ ಕೋರಿರುವಂತೆ ವಿವರಣೆ ಮತ್ತು ಮಾಹಿತಿ ನೀಡುವವರೆಗೆ ರೂ.3,61,875/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.</td><td>2016–17ನೇ ಸಾಲಿನ ವಿಶ್ವವಿದ್ಯಾನಿಲಯದಲ್ಲಿ ಶತಮಾನೋತ್ಸವ ಆಚರಣೆ ಸಂಬಂಧ ಎಲ್ಲಾ ಭವ ಚಿತ್ರಗಳನ್ನು ಕಾಟನ್ ಕ್ಯಾನ್ವಾಸ್‌ನಲ್ಲಿ ಆಯಿಲ್ ಪೇಂಟ್‌ನಿಂದ ರಚಿಸುವ ಕಾರ್ಯವನ್ನು ನಿಯಾಮಾನುಸಾರ ಟೆಂಡರ್ ಕರೆದು ಒಬ್ಬರೇ ಗಿತ್ತಿಗೆದಾರರಿಗೆ ವಹಿಸಿಕೊಡಲು ಸಾಕಷ್ಟು ಕಾಲಾವಕಾಸ ಬೇಕಾಗದ್ದುದರಿಂದ ಹಾಗೂ ಈ ಆಚರಣೆಗೆ ದೇಶ ವಿದೇಶಗಳಿಂದ ಗಣ್ಯಾತಿ ಗಣ್ಯರು ಆಗಮಿಸುತ್ತಿದ್ದುದರಿಂದ ಭಾವ ಚಿತ್ರಗಳು ಆಕರ್ಷಣೀಯವಾಗಿ ಇರಬೇಕೆಂಬ ಉದ್ದೇಶದಿಂದ ಮತ್ತು ಈ ಕಾರ್ಯವನ್ನು ಜರೂರಾಗಿ ನಿರ್ವಹಿಸಬೇಕಾಗಿದ್ದುದರಿಂದ ಬೇರೆ ಬೇರೆ ಗುತ್ತಿಗೆ ದಾರರುಗಳಿಂದ ಪಟ್ಟಿಗಳನ್ನು ಅಹ್ವಾನಿಸಿ ಕಾರ್ಯವನ್ನು ತುರ್ತಾಗಿ ಪೂರ್ಣಗೊಳಿಸಿ ಕೊಳ್ಳುವ ನಿಟ್ಟಿನಲ್ಲಿ ಈ ಕ್ರಮವಹಿಸಿದೆ.<br>ಇದೊಂದು ವಿಶೇಷ ಸಂದರ್ಭವಾಗಿದ್ದುದರಿಂದ ಇದನ್ನು ಪರಿಗಣಿಸಿ ಆಕ್ಷೇಪಣೆ ಮೊತ್ತ ರೂ 361875/–ಗಳನ್ನು ಕೈ ಬಿಡಲು ಕೋರಿದೆ.</td></tr>
</table>

**92**

**(ಸಿ). ಟೆಂಡರ್ ಕರೆಯದೆ ಬಿಡಿ ಬಿಡಿ ಬಿಲ್ಲುಗಳನ್ನು ಒಂದೇ ಸಂಸ್ಥೆಯ ಸರಬರಾಜುದಾರರಿಗೆ ಸಮಾರಂಭಕ್ಕೆ ಚೇರ್ ಕುರ್ಚಿ ಪೆಂಡಾಲ್ ನಿರ್ಮಾಣಕ್ಕಾಗಿ ಬಿಲ್ಲು ಪಾವತಿಸಿರುವುದು:– (ಹಣಕಾಸು ವಿಭಾಗ)**

2016–17ನೇ ಸಾಲಿನ ವಿಶ್ವವಿದ್ಯಾನಿಲಯದ ವಿವಿಧ ಸಮಾರಂಭಗಳಿಗೆ ಪೆಂಡಾಲ್ ನಿರ್ಮಾಣಕ್ಕಾಗಿ ಬಾಡಿಗೆ ಆಧಾರದ ಮೇಲೆ ಚೇರ್ ಕುರ್ಚಿ ವೇದಿಕೆ ನಿರ್ಮಾಣಕ್ಕಾಗಿ ಬಿಡಿ ಬಿಡಿ ಬಿಲ್ಲುಗಳಲ್ಲಿ ಪೂಜಾ ಪ್ರಿಂಟರ್ಸ್, ಮೈಸೂರು ರವರಿಗೆ ಸಾದಿಲ್ವಾರು ಬಿಲ್ಲುಗಳ ಮುಖಾಂತರ ಪಾವತಿ ಬಿಲ್ಲಿನ ಮೊಬಲಗು ರೂ.2.00 ಲಕ್ಷಕ್ಕಿಂತ ಅಧಿಕ ಇರುವುದರಿಂದ ಟೆಂಡರ್ ಕರೆಯಬೇಕಾಗಿದ್ದು ಟೆಂಡರ್ ಕರೆಯದೆ ಬಿಡಿ ಬಿಡಿ ಬಿಲ್ಲುಗಳಲ್ಲಿ ಪಾವತಿಸಿರುವುದು ಪಾರದರ್ಶಕತೆ ನಿಯಮ ಉಲ್ಲಂಘನೆ ಮಾಡಿ ಪಾವತಿಸಿರುವುದರಿಂದ ಸದರಿ ಆಡಿಟ್ ಕಂಡಿಕೆ ಪಾಲನಾ ವರದಿ ನೀಡುವ ತನಕ ಮೊಬಲಗು **ರೂ.9,59,451/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| ಕ್ರಸಂ | ಬಿಲ್ ನಂ | ದಿನಾಂಕ | ಮೊಬಲಗು |
|---|---|---|---|
| 1 | 217 | 20.07.2016 | 88,694 |
| 2 | 219 | 20.07.2016 | 63,308 |
| 3 | ಚೆಕ್ ನಂ 176574 | 26.08.2016 | 86,914<br>62,038 |
| 4 | 339 | 13.03.2017 | 84,513 |
| 5 | 338 | 13.03.2017 | 84,772 |
| 6 | 343 | 13.03.2017 | 84,000 |
| 7 | 342 | 13.03.2017 | 86,500 |
| 8 | 337 | 13.03.2017 | 85,840 |
| 9 | 341 | 13.03.2017 | 82,400 |
| 10 | 340 | 13.03.2017 | 85,750 |
| 11 | 172 | 31.03.2016 | 64,722 |
| ಚೆಕ್ ನಂ. 174928/ 23.05.2016 | | | |

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಲವು ವಿಷಯಗಳ ಬಗ್ಗೆ ಆಗಿಂದ್ದಾಗ್ಗೆ ಸಭೆ, ಸಮಾರಂಭಗಳು ನಿಗಧಿಯಾಗದೆ ಏಕಾಏಕಿ ನಿಗಧಿಯಾಗುವುದರಿಂದ ಅನಿವಾರ್ಯವಾಗಿ ಸಮಾರಂಭಗಳನ್ನು ನಡೆಸಬೇಕಾಗಿ ಬರುತ್ತಿದ್ದು 2016–17 ನೇ ಸಾಲಿನಲ್ಲಿ ಇದೇ ರೀತಿಯ ಸಭೆ ಸಮಾರಂಭಗಳು ನಿಗಧಿಯಾದ ಹಿನ್ನೆಲೆಯಲ್ಲಿ ಸದರಿ ಸಮಾರಂಭಗಳಿಗೆ ಅವಶ್ಯಕವಿರುವ ಪೆಂಡಾಲ್, ಕುರ್ಚಿ ಮುಂತಾದ ಸಾಮಗ್ರಿಗಳನ್ನು ಪಡೆಯಲಾಗಿರುತ್ತದೆ, ಪೂರ್ವ ನಿಗಧಿಯಾಗದೆ ದಿಢೀರ್ ಸಭೆ, ಸಮಾರಂಭಗಳು ಉದ್ಭವವಾಧ ಕಾರಣ ಟೆಂಡರು ಮುಂತಾದ ನಿಯಮಗಳ ಪ್ರಕ್ರಿಯೆಗಳನ್ನು ಪಾಲನೆ ಮಾಡಲು ಕಾಲಾವಕಾಶವಿಲ್ಲದ ಕಾರಣ ಅಗತ್ಯತೆಗನುಗುಣವಾಗಿ ಅಧಿಕೃತ ಸರಬರಾಜುದಾರರಿಂದ ದರ ಪಟ್ಟಿಯನ್ನು ಕರೆದು ಕಡಿಮೆ ದರ ಸಲ್ಲಿಸಿದ ಮೆ॥ ಪೂಜಾ ಪ್ರಿಂಟರ್ಸ್, ಮೈಸೂರು ಇವರಿಂದ ಸಭೆಗೆ ಸಂಬಂಧಿಸಿದ ಸಲಕರಣೆಗಳನ್ನು ಪಡೆದು, ಹಣ ಪಾವತಿಸಲಾಗಿದೆ ಈ ಸಂಬಂಧ, ಸಂಬಂಧಪಟ್ಟ ದರ ಪಟ್ಟಿವಿವರ, ಪಾವತಿ, ವಿವರಗಳ ದಾಖಲಾತಿಗಳನ್ನು ಲಗತ್ತಿಸಲಾಗಿದೆ. ಈ ಬಗ್ಗೆ 2016–17ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 92(ಸಿ) ರಲ್ಲಿ ಆಕ್ಷೇಪಿಸಲಾಗಿದೆ.

ಈ ನಿಟ್ಟಿನಲ್ಲಿ ಮೇಲೆ ಪ್ರಸ್ತಾಪಿಸಿ, ವಿವರಿಸಿ ಸಂಬಂಧ ಪಟ್ಟ ದಾಖಲಾತಿಗಳನ್ನು ಹಾಜರು ಪಡಿಸುತ್ತ ಸದರಿ ಆಕ್ಷೇಪಣೆ ಮೊತ್ತ ರೂ 9,59,451/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡಲು ನಿವೇದಿಸಿದೆ.

| | |
|---|---|
| **ಒಟ್ಟು ರೂ.** | **9,59,451** |

ಕೆ.ಟಿ.ಪಿ.ಪಿ ನಿಯಮ ಉಲ್ಲಂಘನೆ ಹಾಗೂ ಕೆ.ಕ್ಯೂ.1 ರಲ್ಲಿ ನಿಗದಿತ ನಮೂನೆಯಲ್ಲಿ ಕೊಟೇಷನ್ ಪಡೆಯದೆ ಬಿಲ್ಲುಗಳಿಗೆ ಪಾವತಿಸಿರುವುದಕ್ಕೆ ಸೂಕ್ತ ವಿವರಣೆ ನೀಡುವವರೆಗೆ ಮೊತ್ತ **ರೂ.2,61,443 + 1,35,000 + 3,61,875 + 9,59,451 = 17,17,769/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| | | |
|---|---|---|
| 93 | **<u>2016–17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 263ರಲ್ಲಿ "ಭದ್ರತಾ ಸೇವೆ" ಒದಗಿಸದ ಬಾಬ್ತು ಪಾವತಿ ರೂ.11795771/– ಟೆಂಡರ್ ಕಡತ/ದಾಖಲಾತಿ ಒದಗಿಸಿಲ್ಲ :– (ಹಣಕಾಸು ವಿಭಾಗ)</u>**<br><br>2016–17ರ ವಾರ್ಷಿಕ ಲೆಕ್ಕಪತ್ರ ಅನ್ವಯ "ಲೆಕ್ಕಶೀರ್ಷಿಕೆ 263" ರಲ್ಲಿ (ಆಯವ್ಯಯ ಶೀರ್ಷಿಕೆ) "ಭದ್ರತಾ ಸೇವೆ" ಒದಗಿಸಿದ ಸಿಬ್ಬಂದಿಗಳಿಗೆ ಒಟ್ಟು ರೂ.1,17,95,771/–ಗಳನ್ನು ಪಾವತಿಸಲಾಗಿದೆ.<br><br>**<u>ಇದಕ್ಕೆ ಸಂಬಂಧಿಸಿದಂತೆ ಕೆಳಕಂಡಂತೆ ನ್ಯೂನ್ಯತೆಗಳು ಕಂಡು ಬಂದಿರುತ್ತದೆ.</u>**<br><br>1) ವಿಶ್ವವಿದ್ಯಾನಿಲಯದ ಅಧಿಸೂಚನೆ ದಿನಾಂಕ:11.12.2018 ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆ ಮುಂದುವರೆಸುವ ಕುರಿತಂತೆ ದಿನಾಂಕ:31.12.2014ಕ್ಕೆ ಏಜೆನ್ಸಿದಾರರ ಗುತ್ತಿಗೆ ಅವಧಿ ಕೊನೆಗೊಂಡಿದ್ದು, 2016–17ನೇ ಸಾಲಿನಲ್ಲಿ ಸಹ ಪುನಃ ಶ್ರೀ ರಂಗನಾಥ ಏಜೆನ್ಸಿ, ಮೈಸೂರು ಇವರಿಗೆ ನೀಡಲಾಗಿದೆ. ಭದ್ರತಾ ಸಿಬ್ಬಂದಿಗಳನ್ನು ನೇಮಿಸಿಕೊಂಡು ವೇತನ ಪಾವತಿಸಲಾಗಿರುವುದನ್ನು ಗಮನಿಸಲಾಗಿದ್ದು, ಮುಂದಿನ ಅವಧಿಗೆ ಪುನಃ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಏಜೆನ್ಸಿದಾರರಿಂದ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆದುಕೊಳ್ಳಲಾಗಿದೆಯೆ ಎಂಬುದರ ಬಗ್ಗೆ ವಿವರಣೆಯನ್ನು ಕೆಳಕಂಡ ದಾಖಲೆಗಳೊಂದಿಗೆ ಪರಿಶೀಲನೆಗೆ ವಿಚಾರಣಾ ಪತ್ರ ಸಂಖ್ಯೆ:116/28.07.2018ರಲ್ಲಿ ಹಾಜರುಪಡಿಸಲು ಕೋರಲಾಗಿತ್ತು.<br><br>* ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕಡತ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳ ಖಾತೆಗೆ ಇಖಖ & ಇಕಈ ವಂತಿಗೆ ಹಣ ಜಮೆ ಮಾಡಿರುವ ವಿವರ<br>* ಟೆಂಡರ್ ಪ್ರಕಟಣೆ ಜಾಹೀರಾತು.<br>* ಜಿಲ್ಲಾ/ ರಾಜ್ಯ ಟೆಂಡರ್ ಬುಲೆಟಿನ್ ಪ್ರಕಟಣಾ ಪ್ರತಿ<br>* ಟೆಂಡರ್‌ಗೆ ಸಂಬಂಧಿಸಿದ ಮೂಲ ಕರಾರು ಪತ್ರ.<br>* ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದಿರುವ ಪ್ರತಿ.<br>ಯಾವುದೇ ಮೂಲ ಟೆಂಡರ್ ಕಡತ/ದಾಖಲಾತಿ ಒದಗಿಸದಿರುವುದರಿಂದ 2016–17ರಲ್ಲಿ ಭದ್ರತಾ ಸಿಬ್ಬಂದಿಗಳಿಗೆ ಪಾವತಿಸಿರುವ ಬಾಬ್ತು **ರೂ.1,17,95,771/–ಗಳನ್ನು** | ಮೈಸೂರು ವಿಶ್ವವಿದ್ಯಾನಿಲಯವು ದೊಡ್ಡ ಸಂಸ್ಥೆಯಾಗಿದ್ದು, ಇದರ ವ್ಯಾಪ್ತಿಯಲ್ಲಿ ಹಲವಾರು ಕಛೇರಿ ವಿಭಾಗಗಳು ಕಾರ್ಯ ನಿರ್ವಹಿಸುತ್ತಿದ್ದು ಈ ವ್ಯಾಪ್ತಿಯಲ್ಲಿ ಬರು ಸಂಕೀರ್ಣ ಸ್ಥಳಗಳಿಗೆ, ಕಚೇರಿ ವಿಭಾಗಗಳ ಸ್ಥಳಗಳಿಗೆ ಅತ್ಯಾವಶ್ಯಕ ಭದ್ರತಾ ಕಾರ್ಯಗಳು ಬೇಕಾಗಿದ್ದು ಅದರಂತೆ 2016–17 ನೇ ಸಾಲಿನಲ್ಲಿಯೂ ಸಹ ಭದ್ರತಾ ಸಿಬ್ಬಂಧಿ ವರ್ಗದವರನ್ನು ನೇಮಿಸಿಕೊಳ್ಳಲಾಗಿದೆ. ಹೀಗೆ ಭದ್ರತಾ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು 2014–15 ನೇ ಸಾಲಿನಲ್ಲಿ ಶ್ರೀ ರಂಗನಾಥ ಎಂಟರ್ ಪ್ರೈಸಸ್, ಮೈಸೂರು ಇವರಿಗೆ ಭದ್ರತಾ ಸಿಬ್ಬಂದಿಗಳನ್ನು ಒದಗಿಸುವ ಸಂಬಂಧ ಒಂದು ವರ್ಷದ ಅವಧಿಗೆ ಅಂದರೆ ಮೊದಲ 6 ತಿಂಗಳು ದಿನಾಂಕ:01.07.2014 ರಿಂದ 30.06.2014 ರವರೆಗೆ ಹಾಗೂ ಮುಂದಿನ 6 ತಿಂಗಳ ಅವಧಿಗೆ ಅಜಿದರೆ ದಿನಾಂಕ:01.01.2015 ರಿಂದ 30.06.2017 ರವರಗೆ ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ:ಜಿ,ಎಲ್/217/1995–96(VI) ದಿನಾಂಕ;30.06.2014 ಮತ್ತು ಜಿ,ಎಲ್/217/1995–96(VI) ದಿನಾಂಕ:11.12.2014 ರಲ್ಲಿ ಕಾರ್ಯದೇಶ ನೀಡಲಾಗಿದೆ (ಆದೇಶ ಪತ್ರಗಳು ಅಡಕ–1 ಮತ್ತು 2 ನ್ನು ಲಗತ್ತಿಸಲಾಗಿದೆ)<br><br>ದಿನಾಂಕ: 19.06.2015 ರ ಸಿಂಡಿಕೇಟ್ ಸಭೆಯ "ವಿಶ್ವವಿದ್ಯಾನಿಲಯ ಆವರಣಗಳಲ್ಲಿ ಅನಧಿಕೃತ ವ್ಯಕ್ತಿಗಳ ಪ್ರವೇಶವನ್ನು ನಿರ್ಬಂಧಿಸುವ ಸಂಬಂಧ ಮುಖ್ಯ ದ್ವಾರಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿದ್ದು ಸದರಿ ಕಾಮಗಾರಿಗಳ ಕಾರ್ಯವು ಪೂರ್ಣಗೊಳ್ಳುವವರೆಗೆ ಹಾಲಿ ಭದ್ರತಾ ಸೇವೆಯನ್ನು ಒದಗಿಸುತ್ತಿರುವ ಸಂಸ್ಥೆಯವರನ್ನೆ ತಾತ್ಕಾಲಿಕವಾಗಿ ದಿನಾಂಕ:01.07.2015 ರಿಂದ ಮುಂದುವರಿಸಲು ಮತ್ತು ಕಾಮಗಾರಿ ಮುಗಿದ ನಂತರ ಮುಂದೆ ಮೆ॥ ಕೆನಾನ್ ಡಿಟೆಕ್ಟೀವ್ ಅಂಡ್ ಸೆಕ್ಯೂರಿಟಿ ಸರ್ವಿಸಸ್, ಬೆಂಗಳೂರು ಇವರಿಂದ ಭದ್ರತಾ ಸಿಬ್ಬಂಧಿಯನ್ನು ಭದ್ರತಾ ಕಾರ್ಯಕ್ಕೆ ನೇಮಿಸಿಕೊಳ್ಳುವುದಕ್ಕೆ ತೀರ್ಮಾನಿಸಲಾಯಿತು. |

| | | |
|---|---|---|
| | **ಆಕ್ಷೇಪಣೆಯಲ್ಲಿಡಲಾಗಿದೆ.** | ದಿನಾಂಕ;19.06.2015 ರಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾದ ನಿರ್ಣಯ ವಿಷಯ ಸಂಖ್ಯೆ:2015/6–26, ದಿನಾಂಕ:19.06.2015 ರ ಪತ್ರ (ಅಡಕ್–3–ರ ಪತ್ರವನ್ನು ಲಗತ್ತಿಸಲಾಗಿದೆ)<br><br>ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಶ್ರೀ ರಂಗನಾಥ ಎಂಟರ್ ಪ್ರೈಸಸ್, ಮೈಸೂರು ಇವರಿಗೆ ದಿನಾಂಕ:01.07.2015 ರಿಂದ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಹಾಲಿ ಚಾಲ್ತಿಯಲ್ಲಿರುವ ಷರತ್ತು ಮತ್ತು ನಿಬಂಧನೆಗಳನ್ವಯ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂಧಿಯ ಸೇವೆಯನ್ನು ಮುಂದುವರಿಸಲು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ಜಿ,ಎಲ್ 7/32/2015–16 ದಿನಾಂಕ:13.07.2015 ರ ಆದೇಶದಲ್ಲಿ ಮುಂದುವರಿಕೆ ಆದೇಶ ನೀಡಲಾಯಿತು (ಆದೇಶ ಸಂಖ್ಯೆ ಜಿ,ಎಲ್ 7/32 2015–16 ದಿನಾಂಕ:13.07.2015 ಪ್ರತಿಯನ್ನು ಅಂದರೆ ಅಡಕ್ 4 ನ್ನು ಮಾಹಿತಿಗಾಗಿ ಲಗತ್ತಿಸಿದೆ).<br><br>2016–17 ನೇ ಸಾಲಿನಲ್ಲಿ ಹೊಸದಾಗಿ ಭದ್ರತಾ ಸಿಬ್ಬಂಧಿಯ ಸಂಸ್ಥೆಯನ್ನು ನೇಮಿಸುವ ಸಂಬಂಧ ದಿನಾಂಕ:26.02.2016 ರಂದು ನಡೆದ ಟೆಂಡರ್ ಅಂಗೀಕಾರ ಪ್ರಾಧಿಕಾರ ಸಭೆಯ ತೀರ್ಮಾನದಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ಹೊರ ಗುತ್ತಿಗೆ ಆಧಾರದ ಮೇಲೆ ಒಬ್ಬ ಸೆಕ್ಯೂರುಟಿ ಸೂಪರ್ ವೈಸರ್ ಹಾಗೂ 74 ಸೆಕೂರಿಟಿ ಗಾರ್ಡ್‌ಗಳನ್ನು ಒದಗಿಸಲು ವಿಶ್ವವಿದ್ಯಾನಿಲಯದ ಅಧಿ ಸೂಚನೆ ಸಂಖ್ಯೆ:ಜಿ,ಎಲ್ 7/32/2016–17 ದಿನಾಂಕ:08.07.2016 ರ ಆದೇಶದಲ್ಲಿ ಮೆ॥ ಕೆನಾನ್ ಡಿಟೆಕ್ಟೀವ್ ಅಂಡ್ ಸೆಕ್ಯೂರಿಟಿ ಸರ್ವೀಸಸ್, ಬೆಂಗಳೂರು ಇವರಿಗೆ ಆದೇಶ ನೀಡಲಾಯಿತು ಆದೇಶ ಪತ್ರದ ಪ್ರತಿ (ಅಡಕ5) ಯನ್ನು ಲಗತ್ತಿಸಲಾಗಿದೆ.<br><br>ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಕಚೇರಿಗಳು ವಿಭಾಗಗಳು ಕಾಲೇಜುಗಳು ವಿದ್ಯಾರ್ಥಿ ನಿಲಯಗಳು ಮಂಡ್ಯ, ಹಾಸನ, ಚಾಮರಾಜನಗರ ಸ್ನಾತಕೋತ್ತರ ಕೇಂದ್ರಗಳ ಕಟ್ಟಡಗಳಿಗೆ ಹಾಗೂ ವಿಶ್ವವಿದ್ಯಾನಿಲಯದ ಸಂಪೂರ್ಣ |

| | | |
|---|---|---|
| | | ಸ್ಥಿರ ಚರ ಸ್ವತ್ತುಗಳ ರಕ್ಷಣೆ ಸಂಬಂಧ ಹೊರಗುತ್ತಿಗೆ ಆಧಾರದ ಮೇಲೆ ಸೆಕ್ಯೂರಿಟಿ ಸಿಬ್ಬಂಧಿಯನ್ನು ನೇಮಿಸಿಕೊಳ್ಳಲು ಪಾರದರ್ಶಕ ನಿಯಮಾನುಸಾರ ಇ- ಪ್ರೋ ಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಗಿದ್ದು ಸದರಿ ಟೆಂಡರ್ ಪ್ರಕಟಣೆಯಂತೆ 13 ಮಂದಿ ಏಜೆನ್ಸಿದಾರರು ಟೆಂಡರ್ ಸಲ್ಲಿಸಿದ್ದು ಇವರಲ್ಲಿ ಒಬ್ಬರು ಟೆಂಡರುದಾರರನ್ನು ಇ- ಪ್ರೋ ಕ್ಯೂರ್‌ಮೆಂಟ್ ಪೋರ್ಟ್‌ನಲ್ಲಿಯೆ ಕೈ ಬಿಡಲಾಗಿ ಉಳಿದ 12 ಮಂದಿ ಟೆಂಡರ್‌ದಾರರು ಸಲ್ಲಿಸಿದ ದಾಖಲಾತಿಗಳನ್ನು ದಿನಾಂಕ:05.05.2016 ರಂದು ಜರುಗಿದ ಟೆಂಡರ್ ಪರಿಶೀಲನಾ ಸಮಿತಿ ಸಭೆಯ ಸುದೀರ್ಘವಾಗಿ ಪರಿಶೀಲಿಸಿ ಅವರುಗಳಲ್ಲಿ 07 ಮಂದಿ ಏಜೆನ್ಸಿದಾರರು ಅರ್ಹತೆ ಹೊಂದಿರುತ್ತಾರೆ ಎಂದು ಶಿಫಾರಸ್ಸು ಮಾಡಲಾಗಿದೆ (ಅಡಕ-ಎ) ಈ ಸಂಬಂಧ ದಿನಾಂಕ:06.05.2016 ರಂದು ಜರುಗಿದ ಟೆಂಡರ್ ಅಂಗೀಕಾರ ಪ್ರಾಧಿಕಾರ ಸಭೆಯು ಸದರಿ 07, ಮಂದಿ ಏಜೆನ್ಸಿದಾರರ Financial Bid ನ್ನು ತೆರೆಯಲು ತಿರ್ಮಾನಿಸಿತು (ಅಡಕ-ಬಿ)<br><br>ಹಾಗೂ ದಿನಾಂಕ:23.05.2016 ರಂದು ಜರುಗಿದ ಟೆಂಡರ್ ಅಂಗೀಕಾರ ಪ್ರಾಧಿಕಾರ ಸಭೆಯು Financial Bid ನ ವಿವರಗಳನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯದ ಟೆಂಡರ್ ಪ್ರಕಟಣೆಯಲ್ಲಿ ಭದ್ರತಾ ಸಿಬ್ಬಂಧಗಳ ಮೂಲ ವೇತನ, ತುಟ್ಟಿಭತ್ಯೆ, ಹಾಗೂ ಇ.ಪಿ.ಎಫ್ ಸೇವಾ ತೆರಿಗಳು ಪರಿಷ್ಕೃತಗೊಂಡಿರುವುದರಿಂದ ಅರ್ಹ ಟೆಂಡರುದಾರರಿಗೆ ಕಾರ್ಯಾದೇಶ ನೀಡುವ ಸಮಯದಲ್ಲಿ ಚಾಲ್ತಿಯಲ್ಲಿರುವ ಕನಿಷ್ಟ ವೇತನ ಮತ್ತು ಇತರೆ ತೆರಿಗೆ ವಂತಿಗೆ ಪಾವತಿ ಮಾಡಲು ಕ್ರಮ ಕೈ ಗೊಳ್ಳಲಾಗುವುದು ಎಂದು ತಿಳಿಸಲಾಗಿದೆ (ಅಡಕ-ಸಿ)<br><br>ದಿನಾಂಕ:22.06.2016 ರಂದು ಜರುಗಿದ ಟೆಂಡರ್ ಅಂಗೀಕಾರ ಪ್ರಾಧಿಕಾರ ಸಭೆಯು ಸದರಿ 7 ಮಂದಿ ಟೆಂಡರ್‌ದಾರರ ಸಂದರ್ಶನವನ್ನು ನಡೆಸಿ ಅಂತಿಮವಾಗಿ ಮೆ॥ ಕೆನಾನ್ ಡಿಟೆಕ್ಟೀವ್ ಅಂಡ್ ಸೆಕ್ಯೂರಿಟಿ ಸರ್ವೀಸಸ್, ಬೆಂಗಳೂರು. ಇವರ ಭದ್ರತಾ ಸಿಬ್ಬಂಧಿಯ ಟೆಂಡರ್‌ನ್ನು |

| | | |
|---|---|---|
| | | ಅಂಗೀಕರಿಸಲಾಯಿತು(ಅಡಕ–ಇ)<br><br>2016–17 ನೇ ಸಾಲಿಗೆ ಭದ್ರತಾ ಸಂಸ್ಥೆಯನ್ನು ನೇಮಿಸುವ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ (ಅಡಕ–08) ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪತ್ರ ಸಂಖ್ಯೆ:ಜಿ,ಎಲ್,7/32/52015–16 ದಿನಾಂಕ;24.02.2016 ರಲ್ಲಿ ಪ್ರಕಟಣೆ ಹೊರಡಿಸಲಾಗಿದೆ (ಪತ್ರ ಅಡಕ–9 ಲಗತ್ತಿಸಿದೆ) ಟೆಂಡರ್‌ಗೆ ಸಂಬಂಧಿಸಿದ ಕರಾರು ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ (ಕರಾರು ಪತ್ರ ಅಡಕ–10)<br><br>ಮೇಲೆ ಪ್ರಸ್ತಾಪಿಸಿರುವ ಎಲ್ಲಾ ವಿದ್ಯಾಮಾನಗಳ ಬಗ್ಗೆ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದಿರುವ ಅನುಮೋದನೆ ಪತ್ರದ ಪ್ರತಿಯನ್ನು ಇದರೊದಿಗೆ ಲಗತ್ತಿಸಲಾಗಿದೆ.(ಅಡಕ 6 ಪತ್ರದ ಪ್ರತಿ)<br><br>ಮುಂದುವರಿದು 2016–17ನೇ ಸಾಲಿನಲ್ಲಿ **ಭದ್ರತಾ** ಸಿಬ್ಬಂಧಿಯವರ ಇ,ಎಸ್,ಐ ಮತ್ತು ಇ,ಪಿ,ಎಫ್ ಕಂತುಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಜಮೆ ಮಾಡಲಾಗಿರುವ ವಿವರಗಳನ್ನು ಇದರೊಂದಿಗೆ ಲಗತ್ತಿಸುತ್ತ ಕಂಡಿಕೆ 93 ರಲ್ಲಿ ಆಕ್ಷೇಪಿಸಿರುವ ಮೊತ್ತ ರೂ.1,17,95,771/– ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. |

| | | |
|---|---|---|
| 94 | **<u>ಲೆಕ್ಕಶೀರ್ಷಿಕೆ 262–ಬೆರಳಚ್ಚುಗಾರರು/ಸ್ವಚ್ಛತಾ ಸಿಬ್ಬಂದಿಗಳಿಗೆ ನೇಮಕ ಮಾಡಲಾದ ಟೆಂಡರ್ ದಾಖಲಾತಿಗಳ ಪ್ರಕ್ರಿಯೆ ಕಡತ ಹಾಜರುಪಡಿಸಿಲ್ಲದಿರುವುದು :– (ಹಣಕಾಸು ವಿಭಾಗ)</u>**<br>2016–17ನೇ ಸಾಲಿನಲ್ಲಿ ಕೆಲಸ ನಿರ್ವಹಿಸಿದ ಬೆರಳಚ್ಚುಗಾರರು/ಸ್ವಚ್ಛತಾ ಸಿಬ್ಬಂದಿಗಳಿಗೆ ವಾರ್ಷಿಕ ಲೆಕ್ಕಪತ್ರ ರೀತ್ಯಾ ಒಟ್ಟು ರೂ.1,32,15,562/–ಗಳನ್ನು ಪಾವತಿಸಲಾಗಿದೆ. ಸದರಿ ಸಿಬ್ಬಂದಿಗಳ ನೇಮಕ/ಮುಂದುವರೆಸಿರುವ ಬಗ್ಗೆ ಮೂಲ ಟೆಂಡರ್ ಕಡತ ಹಾಗೂ ಕೆ.ಟಿ.ಪಿ.ಪಿ ನಿಯಮಗಳು 2000ರಲ್ಲಿ ವಿವರಿಸಿರುವಂತೆ ಕಡತ ನಿರ್ವಹಿಸಿರುವ ಬಗ್ಗೆ ದಾಖಲಾತಿ ಕೋರಿ ವಿಚಾರಣಾ ಪತ್ರ ಸಂಖ್ಯೆ:117 ದಿನಾಂಕ:28.07.2018ಕ್ಕೆ ನೀಡಲಾಗಿದ್ದು, ಯಾವುದೇ ದಾಖಲಾತಿ/ಕಡತ ಒದಗಿಸಿರುವುದಿಲ್ಲ.<br>ಬೆರಳಚ್ಚುಗಾರರ ವೇತನಕ್ಕೆ ರೂ.17,76,270/– ಹಾಗೂ ಸ್ವಚ್ಛತಾ ಸಿಬ್ಬಂದಿಗಳ ವೇತನಕ್ಕೆ ರೂ.1,14,39,292/– ಒಟ್ಟು ರೂ.1,32,15,562/– ಪಾವತಿಸಲಾಗಿರುವುದನ್ನು ಗಮನಿಸಲಾಗಿದ್ದು, ಸ್ವಚ್ಛತಾ ಸಿಬ್ಬಂದಿಗಳ ನೇಮಕ ಹಾಗೂ ವೇತನ ಪಾವತಿಗೆ ಸಂಬಂಧಿಸಿದಂತೆ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತದೆ.<br>1) ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಸ್ವಚ್ಛತಾ ಸಿಬ್ಬಂದಿಗಳನ್ನು ನಿಯಮಾನುಸಾರ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬೇಕಾಗಿರುತ್ತದೆ. ಯಾವುದೇ ಟೆಂಡರ್ ಪ್ರಕ್ರಿಯೆ ನಡೆಸದೆ ಸ್ವಚ್ಛತಾ ಸಿಬ್ಬಂದಿಗಳನ್ನು ನೇರವಾಗಿ ನೇಮಕ ಮಾಡಿಕೊಂಡು ವೇತನ ಪಾವತಿ ಮಾಡಿರುವುದು ಕೆ.ಟಿ.ಪಿ.ಪಿ ನಿಯಮದ ಉಲ್ಲಂಘನೆಯಾಗಿರುತ್ತದೆ.<br>2) ಸ್ವಚ್ಛತಾ ಸಿಬ್ಬಂದಿಗಳಿಗೆ ಪ್ರತಿ ಮಾಹೆ ವೇತನವನ್ನು ನಗದು ರೂಪದಲ್ಲಿ ಪಾವತಿಸಲಾಗಿರುವುದು ಕಂಡು ಬಂದಿರುತ್ತದೆ. ವೇತನವನ್ನು ಚೆಕ್/ ಆರ್.ಟಿ.ಜಿ.ಎಸ್ ಮುಖಾಂತರ ಸ್ವಚ್ಛತಾ ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡದಿರುವ ಕುರಿತು ವಿವರಣೆ ಕೋರಿದೆ.<br>3) ಸದರಿಯವರ ಖಾತೆಗೆ ಇಖಖ/ಇಕಈ ಮೊತ್ತದ ಹಣ ಜಮೆ ಮಾಡಿರುವ ಬಗ್ಗೆ ವಿವರ/ದಾಖಲಾತಿ ಒದಗಿಸಿಲ್ಲ.<br>ಮೇಲ್ಕಂಡ ದಾಖಲಾತಿಗಳನ್ನು ಹಾಜರುಪಡಿಸುವವರೆಗೆ 2016–17ರ ಪಾವತಿಯ | ಮೈಸೂರು ವಿಶ್ವವಿದ್ಯಾನಿಲಯದ ನಿಲಯದ ವ್ಯಾಪ್ತಿಯಲ್ಲಿ 90 ವಿವಿಧ ವಿಭಾಗ ಇಲಾಖೆಗಳು ಹಾಗೂ ಮಂಡ್ಯ, ಹಾಸನ, ಚಾಮರಾಜನಗರದಲ್ಲಿ ಪಿ.ಜಿ ಕೋರ್ಸುಗಳು ಒಳಪಟ್ಟಿದ್ದು ಇದರೊಂದಿಗೆ ಕಾರಂಜಿ ಕೆರೆ, ಮಾನಸ ಗಂಗೋತ್ರಿಯ ಮುಖ್ಯಸ್ಥಳಗಳು ಸೇರುತ್ತದೆ ಈ ಎಲ್ಲಾ ಸ್ಥಳಗಳಿಗೆ ಹಗಲು ಮತ್ತು ರಾತ್ರಿಯ ಪಾಳಯದಲ್ಲಿ ಭದ್ರತಾ ಸೇವೆಗಾಗಿ ಭದ್ರತಾ ಸಿಬ್ಬಂಧಿಗಳ ಅವಶ್ಯಕತೆಯಿದ್ದು ಆಮೇರೆಗೆ 221 ಮಂದಿ ಸಹಾಯ ಕಾರ್ಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಡಿದ್ದು ಈ ಸಿಬ್ಬಂದಿಯನ್ನು ಮೈಸೂರಿನ ಹೌಸ್ ಕೀಪಿಂಗ್ ಕ್ಯಾಂಪಸ್ ಹೌಸ್ ಕೀಪಿಂಗ್ ಹಾಸ್ಟೆಲ್ಸ್ ಮಂಡ್ಯ ಪಿ,ಜಿ ಸಂಟರ್ ಹಾಗೂ ಹಾಸ್ಟೆಲ್ ಚಾಮರಾಜನಗರ ಪಿ,ಜಿ ಸೆಂಟರ್ ಹಾಗೂ ಹಾಸ್ಟೆಲ್ ಹಾಸನ ಪಿ,ಜಿ ಸೆಂಟರ್‌ಗಳಿಗೆ ನೇಮಿಸಿಕೊಳ್ಳಲಾಗಿದ್ದು ಸದರಿ ಭದ್ರತಾ ಸಿಬ್ಬಂಧಿಯವರು ಅವರನ್ನು ನಿಯುಕ್ತಿಗೊಳಿಸಿದ ಸ್ಥಳ ಮತ್ತು ವಿಭಾಗ ಇಲಾಖೆಗಳಡಿಯಲ್ಲಿ ಕಾರ್ಯ ನಿರ್ವಹಿಸಿತ್ತಿದ್ದಾರೆ ಹೀಗೆ ಸ್ವಚ್ಚತಾ ಸಿಬ್ಬಂಧಿಯವರನ್ನು ನೇಮಿಸಿಕೊಳ್ಳ ಮೊದಲು ವಿಶ್ವವಿದ್ಯಾನಿಲಯದ ಕಾಲಾವಕಾಶ ಹಾಗೂ ತಾಂತ್ರಿಕ ಕಾರಣಗಳಿಂದ ಟೆಂಡರ್ ಪ್ರಕ್ರಿಯೆಗಳಿಗೆ ಅಡಚಣೆಯಾದುದರಿಂದ ಹಾಗೂ ಸ್ವಚ್ಚತಾ ಕಾರ್ಯಗಳು ನಿರಂತರವಾಗಿ ನಡೆಯ ಬೇಕಾದುದರಿಂದ ತುರ್ತಾಗಿ 221 ಮಂದಿ ಸ್ವಚ್ಚತಾ ಸಿಬ್ಬಂಧಿಯನ್ನು 2016–17ನೇ ಸಾಲಿಗೆ ನೇರವಾಗಿ ನೇಮಿಸಿಕೊಂಡು ವಿಶ್ವವಿದ್ಯಾನಿಲಯದ ವ್ಯಾಪ್ತಿ ಮತ್ತು ಮಂಡ್ಯ, ಹಾಸನ, ಹಾಗೂ ಚಾಮರಾಜನಗರ ಸ್ಥಳಗಳಿಗೆ ನಿಯುಕ್ತಿಗೊಳಿಸಲಾಗಿರುತ್ತದೆ. ಸದರಿ ಸ್ವಚ್ಚತಾ ಸಿಬ್ಬಂಧಿಯ ವೇತನವನ್ನು ಕುಲಪತಿಗಳು ಹಾಗೂ ಕುಲಸಚಿವರುಗಳ ಅನುಮೋದನೆ ಮತ್ತು ಮಂಜೂರಾತಿಯ ಮೇರೆಗೆ ವಿತರಿಸಲಾಗಿರುತ್ತದೆ. ಸ್ವಚ್ಚತಾ ಸಿಬ್ಬಂಧಿಯ ನೇಮಕಾತಿಯನ್ನು ವಿಶ್ವವಿದ್ಯಾನಿಲಯದ ನಿಯಮದನುಸಾರ ನೇಮಕ ಮಾಡಿಕೊಳ್ಳಲಾಗಿದ್ದು ಸದರಿ ಸ್ವಚ್ಚತಾ ಸಿಬ್ಬಂಧಿಯ ಮಾಸಿಕ ವೇತನದಲ್ಲಿ ಪ್ರತಿ ಮಾಹೆಯ ವೇತನ ಬಿಲ್ಲಿನಲ್ಲಿ |

| | | |
|---|---|---|
| | ಒಟ್ಟು ಮೊತ್ತ **ರೂ.1,32,15,562/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಇಖಋ /ಇಕಈ ನಿಧಿಯ ಕಂತುಗಳನ್ನು ಕಟಾಯಿಸಿ ಸಂಬಂಧ ಪಟ್ಟ ಇಲಾಖೆಗಳಿಗೆ ಪಾವತಿಸಲಾಗುತ್ತದೆ.<br><br>ಮುಂದುವರಿದು ಸ್ವಚ್ಚತಾ ಸಿಬ್ಬಂಧಿಯ ಮಾಸಿಕ ವೇತನವನ್ನು ಹಲವು ಸಂದರ್ಭಗಳಲ್ಲಿ ಕಾರಣಾಂತರದಿಂದ ನಗದು ರೂಪದಲ್ಲಿ ಪಾವತಿ ಮಾಡಲಾಗಿದ್ದು ಮುಂದಿನ ದಿನಗಳಲ್ಲಿ ಬ್ಯಾಂಕಿನ ಖಾತೆಯ ಮುಖಾಂತರರ ಪಾವತಿಸುವ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.<br><br>ಈ ನಿಟ್ಟಿನಲ್ಲಿ 2016–17ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿತ ಕಂಡಿಕೆ 94 ರಲ್ಲಿ ಪ್ರಸ್ತಾಪಿಸಿ ಆಕ್ಷೇಪಿಸಿ ಬೆರಳಚ್ಚುಗಾರರ ವೇತನದ ಮೊತ್ತ ರೂ.17,76,270/– ಹಾಗೂ ರೂ.1,14,39,292/–ಗಳು ಸ್ವಚ್ಚತಾ ಸಿಬ್ಬಂಧಿಯ ವೇತನ ಬಾಬ್ತು ಒಟ್ಟು ರೂ1,32,15,562/–ಗಳನ್ನು ಆಕ್ಷೇಪಣೆಯಲ್ಲಿಟ್ಟಿದ್ದು ಸದರಿ ಆಕ್ಷೇಪಿಸಿ ಮೊತ್ತ ರೂ.1,32,15,562/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. |

| 95 | **<u>Information Infrastructure development ಖಾತೆಯ ವೆಚ್ಚದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸದಿರುವುದು:– (ಹಣಕಾಸು ವಿಭಾಗ)</u>**<br><br>2016–17ನೇ ಸಾಲಿನಲ್ಲಿ Information Infrastructure development ಖಾತೆಯಡಿಯಲ್ಲಿ ಉಪಕರಣಗಳು (equipment) ಗಳ ಖರೀದಿಗಾಗಿ ರೂ.9,11,508/–ಗಳ ವೆಚ್ಚ ಭರಿಸಲಾಗಿದ್ದು, ಯಾವ ಯಾವ ಉಪಕರಣಗಳನ್ನು ಖರೀದಿಸಲಾಗಿದೆ ಹಾಗೂ ಉಪಕರಣಗಳನ್ನು ಖರೀದಿಸುವ ಸಂದರ್ಭದಲ್ಲಿ ಪಾರದರ್ಶಕ ನಿಯಮಗಳನ್ನು ಪಾಲಿಸಲಾಗಿದೆಯೆ ಎಂಬ ಬಗ್ಗೆ ಪರಿಶೀಲನೆಗಾಗಿ ಅಗತ್ಯ ದಾಖಲಾತಿಯಾದ ಕಡತ ವಹಿಗಳನ್ನು ಕೆಳಕಂಡಂತೆ ಹಾಜರುಪಡಿಸಲು ಕೋರಲಾಗಿತ್ತು.<br><br>1. office automation and internet facility ಗೆ ಸಂಬಂಧಿಸಿದಂತೆ ರೂ.2,16,85,343/–ಗಳನ್ನು ವೆಚ್ಚ ಮಾಡಲಾಗಿದ್ದು ಈ ಕಾಮಗಾರಿಗೆ/ಕಾರ್ಯಕ್ಕೆ ಸಂಬಂಧಿಸಿದಂತೆ ಯಾವ ಗುತ್ತಿಗೆದಾರರಿಂದ ಕರಾರು ಪತ್ರ ಮಾಡಿಕೊಳ್ಳಲಾಗಿದೆ ಎಂಬ ಬಗ್ಗೆ ಗುತ್ತಿಗೆ ಕರಾರು ಪತ್ರದ ಪ್ರತಿಯನ್ನು ಪಾರದರ್ಶಕ ನಿಯಮದಲ್ಲಿ ಕಾಮಗಾರಿ ನಿರ್ವಹಿಸಿರುವ ಬಗ್ಗೆ<br>2. Electrical work and maintenance ಬಗ್ಗೆ ಈ ಖಾತೆಯಡಿ ರೂ.9,17,860/–ಗಳನ್ನು ವೆಚ್ಚ ಮಾಡಲಾಗಿದೆ. ಈ ಸಂಬಂಧ ಗುತ್ತಿಗೆ ಕರಾರು ಪತ್ರ ಅನುಪಯುಕ್ತ ವಸ್ತುಗಳ ದಾಸ್ತಾನು ತೆಗೆದುಕೊಂಡಿರುವ ಬಗ್ಗೆ ಹಾಗೂ ವರ್ಷದ ಅಂತ್ಯದಲ್ಲಿ ಹರಾಜು ಮಾಡಿರುವ/ವಿಲೇವಾರಿ ಮಾಡಿರುವ ಬಗ್ಗೆ ನಿರ್ವಹಿಸಲಾದ ವಹಿ ಅಥವಾ ಕಡತ.<br>**3.** Purchases of UPS and batteries ಈ ಬಗ್ಗೆ ರೂ.7,47,489/–ಗಳನ್ನು ಈ ಖಾತೆಯಡಿಯಲ್ಲಿ ವೆಚ್ಚ ಮಾಡಲಾಗಿದೆ ಸಂಬಂಧಿಸಿದಂತೆ ಖರೀದಿಸಲಾದ ವಸ್ತುಗಳ ಬಗ್ಗೆ ಪಾರದರ್ಶಕ ನಿಯಮಗಳನ್ನು ಪಾಲಿಸಿರುವ ಬಗ್ಗೆ ಅಗತ್ಯ ಗುತ್ತಿಗೆಕರಾರು ಪತ್ರಗಳು ಉಪಕರಣಗಳ ಗುಣಮಟ್ಟ ಹಾಗೂ ಉಪಕರಣಗಳ ಗ್ಯಾರಂಟಿ/ವಾರೆಂಟಿ ಅವಧಿಗಳ ಬಗ್ಗೆ ಪರಿಶೀಲನೆಗಾಗಿ ಅಗತ್ಯ ದಾಸ್ತಾನು ವಹಿ ಮತ್ತು ಯಾವ ಶಾಖೆಯಲ್ಲಿ ಅಳವಡಿಸಲಾಗಿದೆ ಎಂಬ ಬಗ್ಗೆ ಮಾಹಿತಿ. | ವಿಶ್ವವಿದ್ಯಾನಿಲಯದ ವ್ಯಾಪ್ತಿತಲ್ಲಿ ವಿವಿಧ ವಿಭಾಗ ಕಛೇರಿಗಳು ಕಾರ್ಯ ನಿರ್ವಹಿಸುತ್ತಿದ್ದು ಈ ಎಲ್ಲಾ ವಿಭಾಗ ಕಛೇರಿಗಳ ವಿವಿಧ ಸ್ಥಳಗಳಲ್ಲಿ ಇಂಟರ್‌ನೆಟ್ ಸೌಲಭ್ಯಗಳು ಯು.ಪಿ.ಎಸ್ ಸೌಲಭ್ಯಗಳು ಅಲ್ಯೂಮಿನಿಯಂ ವಿಭಾಗಗಳ ಸೌಲಭ್ಯಗಳು ಮನಸ ಗಂಗೋತ್ರಿಯ ಕ್ಲಾಕ್ ಟವರ್ ಹಾಗೂ ಇನ್ನಿತರ ಮುಖ್ಯ ಸ್ಥಳಗಳಲ್ಲಿ ಸಿ.ಸಿ.ಟಿವಿ ಕ್ಯಾಮರಾಗಳ ಅಲವಡಿಕೆ ಕಾರ್ಯಗಳ ಅವಶ್ಯಕತೆ ಮೇರೆಗೆ 2016–17 ನೇ ಸಾಲಿನಲ್ಲಿ ಈ ಕಾರ್ಯಗಳನ್ನು ಕೈಗೊಳ್ಳಲಾಗಿದ್ದು ಇದಕ್ಕೆ ಪೂರಕವಾಗಿ ಆಡಳಿತಾತ್ಮಕ ಮಂಜೂರಾತಿ ಅನುದಾನದ ಲಭ್ಯತೆಯ ಪರಿಗಣನೆ ಸಿಂಡಿಕೇಟ್ ಸಭೆಯ ಅನುಮೋದನೆ ಹಾಗೂ ಮಂಜೂರಾತಿ ಆದೇಶಗಳನುಸಾರ ಈ ವಿವಿಧ ಕಾರ್ಯಗಳನ್ನು ಕೈಗೊಂಡು ನಿಯಮಗಳನುಮತಿಯ ಮೇರೆಗೆ ಹಲವು ಮುಖ್ಯ ಕೆಲಸಗಳಿಗೆ ಅಧಿಕೃತ ಕಂಪನಿಗಳಿಂದ ದರಪಟ್ಟಿ ಪಡೆದು ಅಧಿಕೃತ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ<br><br>ಹೊಸದಾಗಿ internet facility ಅಲ್ಲದೆ(AMC) Anncead maintenance Contract ಒಳಗೊಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ ಈ ಎಲ್ಲಾ ಹೊಸ ಯೋಜನೆಯ ಕಾಮಗಾರಿಗಳಿಗೆ 2016–17 ನೇಸಾಲಿನಲ್ಲಿ ಒಟ್ಟು ಮೊತ್ತ ರೂ.2,42,62,200/–ಗಳು ವೆಚ್ಚವಾಗಿದ್ದು ಈ ಬಗ್ಗೆ 2016–17ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 95ರಲ್ಲಿ ಹಲವು ನ್ಯೂನತೆಗಳನ್ನು ಗಮನಿಸಿ ಆಕ್ಷೇಪಿಸಿ ರೂ.2,42,62,200/–ಗಳನನು ಆಕ್ಷಢಪಣೆಯಲ್ಲಿಡಲಾಗಿದೆ<br><br>ಈ ಸಂಬಂಧ ಕಂಡಿಕೆ 95 ರಲ್ಲಿ ಪ್ರಸ್ತಾಪಿಸಲಾಗಿರುವ ಮಾಹಿತಿಗಳು ಅಂದರೆ ವೆಚ್ಚವಾಗಿರುವ ಮೊತ್ತದ ಕಾಮಗಾರಿಗಳ ಅನುಷ್ಠಾನದ ವಿವರ ಗುತ್ತಿಗೆ ಕರಾರು ಪತ್ರ ದಾಸ್ತಾನು ವಹಿ ವಿವರಗಳು ದರ ಪಟ್ಟಿ ವಿವರಗಳು ಮುಂತಾದ ಅಗತ್ಯ ದಾಖಲಾತಿಗಳನ್ನು ಒದಗಿಸುತ್ತ ರೂ.2,42,62,200/–ಗಳ ಮೊತ್ತದ ಆಕ್ಷೇಪಣೆಯನ್ನು |
|---|---|---|

| | | |
|---|---|---|
| | **4**. ಅಗತ್ಯ ಗುತ್ತಿಗೆ ಕರಾರು ಪತ್ರಗಳು ಮತ್ತು ದಾಸ್ತಾನು ವಹಿ.<br>ಮೇಲ್ಕಂಡ ವಿವರಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:110/ ದಿನಾಂಕ:28.07.2018 ರಲ್ಲಿ ನೀಡಲಾಗಿತ್ತದರೂ ಈ ಬಗ್ಗೆ ಯಾವುದೇ ವಿವರವನ್ನು ನೀಡಿರುವುದಿಲ್ಲ. ಆದುದರಿಂದ ಒಟ್ಟು **ರೂ.2,42,62,200/-** ಅಗತ್ಯ ದಾಖಲಾತಿಗಳನ್ನು ಹಾಜರುಪಡಿಸುವವರೆಗೆ **ಆಕ್ಷೇಪಣೆಯಲ್ಲಿಡಲಾಗಿದೆ.** | ಕೈ ಬಿಡುವಂತೆ ನಿವೇದಿಸಲಾಗಿದೆ.<br>1. ಪ್ರಸ್ತುತ ವೆಚ್ಚ ಮಾಡಲಾದ ಅನುಷ್ಠಾನಗೊಳಿಸಿದ ಕಾಮಗಾರಿ ವಿವರದ ಪಟ್ಟಿ<br>2. ಗುತ್ತಿಗೆ ಕರಾರು ಪತ್ರ<br>3. ಟೆಂಡರು ದರಪಟ್ಟಿ ವಿವರ<br>4. ವಿಶ್ವವಿದ್ಯಾನಿಲಯದ ಆದೇಶಗಳು<br>5. ಪಾವತಿ ಮೊತ್ತದ ವಿವರಗಳು |

| | | |
|---|---|---|
| 96 | **<u>Educational multimedia research center ದಾಖಲೆಗಳನ್ನು ಹಾಜರುಪಡಿಸದಿರುವುದು</u> :– <u>(ಹಣಕಾಸು ವಿಭಾಗ)</u>**<br>ಖಾತೆಯಲ್ಲಿ office automation internet facilityಗಾಗಿ ರೂ.9,29,903/–ಗಳ ವೆಚ್ಚವನ್ನು ಭರಿಸಲಾಗಿದ್ದು ಈ ಸಂಬಂಧ ಗುತ್ತಿಗೆ ಕರಾರು ಪತ್ರದ ಪ್ರತಿಯನ್ನು ಕಾಮಗಾರಿಯನ್ನು ಪಾರದರ್ಶಕತೆ ನಿಯಮಾನುಸಾರ ಗುತ್ತಿಗೆ ಕರೆದಿರುವ ಬಗ್ಗೆ ಮಾಹಿತಿ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:119/ದಿ:13.08.2018 ರಲ್ಲಿ ನೀಡಲಾಗಿತ್ತು. ಆದರೆ ಈ ಬಗ್ಗೆ ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ.<br>Office automation internet facility ಗಾಗಿ 2016–17ನೇ ಸಾಲಿನಲ್ಲಿ information infrastructure development ಖಾತೆ ಹಾಗೂ Educational multimedia research centre ಖಾತೆಯಲ್ಲಿ ಪ್ರತ್ಯೇಕವಾಗಿ ಪಾವತಿಸಿರುವುದು ಕಂಡು ಬಂದಿರುತ್ತದೆ.<br>ಕಾಮಗಾರಿಯ ಒಂದೇ ರೀತಿಯದು ಆಗಿದ್ದುದರಿಂದ ಪಾರದರ್ಶಕತೆ ನಿಯಮಗಳ ಅನುಸಾರ ಗುತ್ತಿಗೆ ಕರೆದಿರುವ ಪ್ರತಿಯನ್ನು ಕಡತದೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದಲ್ಲಿ ಪರಿಶೀಲಿಸಲು ಸಾಧ್ಯವಾಗುತ್ತಿತ್ತು. ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದಿರುವುದರಿಂದ **ರೂ.9,29,903/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | 2016–17ನೇ ಸಾಲಿನಲ್ಲಿ ಇ.ಎಂ.ಆರ್.ಸಿ ಕಛೇರಿಯಲ್ಲಿ officeautomation internet ಸೌಲಭ್ಯ ಒದಗಿಸಿಕೊಳ್ಳುವ ಸಲುವಾಗಿ ವಿವಿಧ ಬಗೆಯ ಉಪಕರಣಗಳನ್ನು ನಿಯಮಾನುಸಾರ ದರಪಟ್ಟಿಗಳನ್ನು ಕರೆದು ಕಡಿಮೆ ದರ ನಮೂದಿಸಿರುವ ಸಂಸ್ಥೆಯಿಂದ ಖರೀದಿಸಿ ಅಳವಡಿಕೊಳ್ಳಲಾಗಿದೆ. ಇವೆಲ್ಲವೂ ಬೇರೆ ಬೇರೆ ರೀತಿಯ ಉಪಕರಣಗಳು ಹಾಗೂ ಅದಕ್ಕೆ ಸಂಬಂಧಿಸಿದ ಬಿಡಿ ಭಾಗಗಳು ಸೇರಿದಂತೆ ಒಂದು ಲಕ್ಷದ ಒಳಗೆ ಇರುವುದರಿಂದ ಇವುಗಳಿಗೆ ಟೆಂಡರ್ ಕರೆದು ನಿರ್ವಹಿಸಲಾಗಿರುವುದಿಲ್ಲಾ ಎಂಬ ವಿಚಾರವನ್ನು ನಿವೇದಿಸುತ್ತಾ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಡಿ.ವಿ3/ಇತರೆ/ಇ.ಎಂ.ಆರ್.ಸಿ/2007–08, ದಿನಾಂಕ:02.02.2016 ರಲ್ಲಿ ಇ.ಎಂ.ಆರ್.ಸಿ ಕೇಂದ್ರಕ್ಕೆ 2012–17ನೇ ಸಾಲಿನವರೆಗೆ (ಆಯವ್ಯಯ ಅಂದಾಜು) 12ನೇ ಯೋಜನೆಯಲ್ಲಿ ಬಿಡಗಡೆಯಾಗಿರುವ ಅನುದಾನ ರೂ.3,79,90,000/–ಗಳಡಿಯಲ್ಲಿ ಯು.ಜಿ.ಸಿ ಮಾರ್ಗಸೂಚಿಯಂತೆ ಬಳಸಿಕೊಳ್ಳಲು ಆಡಳಿತಾತ್ಮಕ ಮಂಜೂರಾತಿ ಪಡೆಯಲಾಗಿದೆ. ಅದರನ್ವಯ 2016–17ನೇ ಸಾಲಿನಲ್ಲಿ 12ನೇ ಯೋಜನೆಯಡಿಯಲ್ಲಿ ವೆಚ್ಚ ಭರಿಸಲಾಗಿರುತ್ತದೆ.<br>ರೂ.9,29,903/–ಗಳಿಗೆ ಸಂಬಂಧಿಸಿದಂತೆ ಓಚರ್‌ಗಳು, ಮಂಜೂರಾತಿ ಪತ್ರಗಳು, ಕೋಟೇಶನ್ ಮತ್ತು ತುಲನಾತ್ಮಕ ಪಟ್ಟಿ; ದಾಸ್ತಾನು ವಹಿಯ ಪುಟಗಳ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ; **ರೂ.9,29,903/–ಗಳ** ಆಕ್ಷೇಪಣೆಯನ್ನು ತೀರುವಳಿಗೊಳಿಸುವಂತೆ ಕೋರಿದೆ. |

97 **ಏಪ್ರಿಲ್–2016 ಹಾಗೂ ಮೇ–2016 ಮಾಹೆಯಲ್ಲಿ ಕಾವೇರಿ ಟೂರ್ಸ್ & ಟ್ರಾವೆಲ್ಸ್ ಬಾಡಿಗೆ ಆಧಾರದ ಮೇಲೆ ಬಿಡಿ ಬಿಡಿ ಬಿಲ್ಲುಗಳನ್ನು ಪಾವತಿಸಿರುವುದು:– (ಹಣಕಾಸು ವಿಭಾಗ)**

**ಎ) ವಾಹನಗಳ ದುರಸ್ಥಿಯ ಬಿಡಿಭಾಗಗಳು ಖರೀದಿ ಹಾಗೂ ಬಾಡಿಗೆ ಆಧಾರದ ಮೇಲೆ ಬಿಲ್ಲು ಪಾವತಿಸಿರುವುದು:**

2016–17ನೇ ಸಾಲಿನ ಹಣಕಾಸು ವಿಭಾಗದಲ್ಲಿ ಬಾಡಿಗೆ ಆಧಾರದ ಮೇಲೆ ಕಾವೇರಿ ಟೂರ್ಸ & ಟ್ರಾವೆಲ್ಸ್ ಮೈಸೂರು ರವರಿಗೆ ಬಿಡಿ ಬಿಡಿ ಬಿಲ್ಲುಗಳಲ್ಲಿ ಪಾವತಿಸಿದೆ, ಪಾವತಿಸಿರುವ ಮೊಬಲಗು ಒಂದು ಲಕ್ಷಕ್ಕಿಂತ ಹೆಚ್ಚಿಗೆ ಹಾಗೂ 5 ಲಕ್ಷಕ್ಕಿಂತ ಹೆಚ್ಚಿಗೆ ಪಾವತಿಸಿರುವುದರಿಂದ ಟೆಂಡರ್ ಕರೆಯಬೇಕಾಗಿರುತ್ತದೆ. ಟೆಂಡರ್ ಕರೆದಿರುವ ಕಡತ ಹಾಗೂ ಕರಾರು ಒಪ್ಪಂದ ಮಾಡಿಕೊಂಡಿರುವ ಮೂಲ ಕರಾರು ಪತ್ರ ಪರಿಶೀಲನೆ ಹಾಜರುಪಡಿಸದೆ ಪರಿಷ್ಕೃತ ಆದೇಶ ಸಂಖ್ಯೆ:ಜಿ.ಎಲ್8/531/2000–01 ದಿನಾಂಕ:10.06.2014 ಆದೇಶದ ಮೇರೆಗೆ ದಿನಾಂಕ:01.08.2013 ರಿಂದ 19.05.2014 ವರೆಗೆ ಬಾಡಿಗೆ ವಾಹನಗಳ ಡೀಸೆಲ್ ದರ ಪ್ರತಿ ಲೀಟರ್‌ಗೆ 5.84 ಸದರಿ ಹೆಚ್ಚಳವನ್ನು 8.06 ಗಳಿಗೆ ಪರಿಗಣಿಸಿ ಹಾಲಿ ಇರುವ ಬಾಡಿಗೆ ವಾಹನಕ್ಕೆ ಹೊರ ಸ್ಥಳಗಳಿಗೆ ಪ್ರತಿ ಕಿ.ಮಿ ಗೆ 0.90 ಹಾಗೂ ಸ್ಥಳೀಯವಾಗಿ ಪ್ರತಿ ಒಂದು ಗಂಟೆಗೆ ಬಾಡಿಗೆ ದರ – ರೂ. 30/– ಗಳನ್ನು ಹೆಚ್ಚುವರಿ ಮಾಡಲಾಗಿದೆ. ದಿನಾಂಕ:20.05.2014 ಬಾಡಿಗೆ ಮಾಡಲಾಗಿದ್ದು, 2016–17ನೇ ಸಾಲಿಗೆ ದರ ಪರಿಪೂರ್ಣವಾಗದೆ ಮರು ಆದೇಶ ಪಡೆಯದೆ ಟೆಂಡರ್ ಕರೆಯದೆ ಬಿಲ್ಲುಗಳಿಗೆ ಪಾವತಿಸಿರುವುದು ನಿಯಮಬಾಹಿರವಾಗಿರುವುದರಿಂದ ಮೊಬಲಗು **ರೂ.6,82,122/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಇದರಲ್ಲಿ ಸೇವಾ ತೆರಿಗೆ ಕಟಾಯಿಸದೆ ಇರುವುದರಿಂದ ಮೊಬಲಗು ಶೇ 5.6 ರಂತೆ **ರೂ.38,199/–ಗಳನ್ನು ವಸೂಲಾತಿಗೆ** ಸೂಚಿಸಿದೆ.

| ಕ್ರ.ಸಂ | ಬಿ.ಆರ್ ಸಂಖ್ಯೆ ದಿನಾಂಕ | ಧನಾದೇಶ ಸಂಖ್ಯೆ ದಿನಾಂಕ | ಮೊತ್ತ | ಷರಾ |
|---|---|---|---|---|
| 1 | 129/2016–17/09.08.2016 | 525133/27.08.2016 | 1066243 | ಮೇ/ಜೂನ್–2016 ಪದವಿ ಪರೀಕ್ಷಾ ಕಾರ್ಯಕ್ಕಾಗಿ ವಾಹನ ಬಾಡಿಗೆ ಪಡೆದಿರುವುದು |
| 2 | 161/2016– | – | 127885 | ಆಗಸ್ಟ್–2016ರ ಃ.ಇಜ |

ಬಾಡಿಗೆ ವಾಹನಗಳ ಡೀಸೆಲ್ ದರ ಪ್ರತಿ ಲೀಟರ್‌ಗೆ 5.84 ಸದರಿ ಹೆಚ್ಚಳವನ್ನು 8.06 ರೂಗಳಿಗೆ ಪರಿಗಣಿಸಿ ಹಾಲಿ ಇರುವ ಬಾಡಿಗೆ ವಾಹನಕ್ಕೆ ಹೊರ ಸ್ಥಳಗಳಿಗೆ ಪ್ರತಿ ಕಿ.ಮೀ ಗೆ 0.90 ಹಾಗೂ ಸ್ಥಳೀಯವಾಗಿ ಪ್ರತಿ ಗಂಟೆಗೆ ಬಾಡಿಗೆ ದರ ರೂ.30ಗಳನ್ನು ಹೆಚ್ಚುವರಿ ಮಾಡಲಾಗಿದೆ ಎಂದು 2016–17 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 97 ರಲ್ಲಿ ಪ್ರಸ್ತಾಪಿಸಲಾಗಿದೆ.

2013–14 ನೇ ಸಾಲಿನ ಅವಧಿಗೆ ಪತ್ರಿಕೆ ಹಾಗೂ ಟೆಂಡರ್ ಬುಲಿಟಿನ್ ಮುಖಾಂತರ ಪ್ರಕಟಣೆ ಹೊರಡಿಸಲಾಗಿದೆ ಮೆ॥ ಗುರುಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು ಮತ್ತು ಮೆ॥ ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು ಇವರುಗಳು ಟೆಂಡರ್ ಸಲ್ಲಿಸಿದ್ದು ಇವರಲ್ಲಿ ಎಲ್–2 ಮೆ॥ ಕಾವೇರಿ ಅಂಡ್ ಟೂರ್ಸ್ ಟ್ರಾವೆಲ್ಸ್, ಮೈಸೂರು ಇವರು ಸಲ್ಲಿಸಿದ್ದ ದರ ಎಲ್–1 ಮೆ॥ ಗುರುಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು, ಇವರ ದರಕ್ಕಿಂತ ಕಡಿಮೆ ಇದ್ದುದರಿಂದ ಮೆ॥ ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು ಇವರ ದರವನ್ನು ಅಂಗೀಕರಿಸಿ ಕರಾರು ಒಪ್ಪಂದ ಮಾಡಿಕೊಳಲಾಯಿತು.ಚ

ಆದೇಶ ಸಂಖ್ಯೆ ದಿನಾಂಕ:01.08.2013 ರ ಆದೇಶದಲ್ಲಿ ಇಂದನ ದರ ಪ್ರತಿ ಲೀಟರ್‌ಗೆ ರೂ.1 ಹೆಚ್ಚಳ ಕಡಿಮೆ ಆದ ಸಂದರ್ಭದಲ್ಲಿ ಪ್ರತಿ ಕಿ.ಮೀ ಗೆ 0–15 ಪೈಸೆಗಳಂತೆ ಮತ್ತು ಸ್ಥಳೀಯವಾಗಿ ಪ್ರತಿ ಗಂಟೆಗೆ ರೂ,5.00 ರಂತೆ ಹೆಚ್ಚಳ ಕಡಿಮೆ ಮಾಡಲು ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು ಹಾಗೂ ಈ ದರವು 2013–14ನೇ ಸಾಲಿಗೆ ಪ್ರಚಲಿತವಾಗಿತ್ತು.

2014–15ನೇ ಸಾಲಿಗೆ ಪರಿಷ್ಕೃತ ಆದೇಶ ಸಂಖ್ಯೆ: ಜಿ.ಎಲ್8/531/2000–01 ದಿನಾಂಕ:10.06.2014 ರ ಪರಿಷ್ಕೃತ ದರ ಡೀಸೆಲ್ ದರ ಪ್ರತಿ ಲೀಟರ್‌ಗೆ

| | | | | |
|---|---|---|---|---|
| | 17/23.09.2016 | | | ಪರೀಕ್ಷೆಯ ಜಾಗೃತದಳದ ಸದಸ್ಯರಿಗೆ ವಾಹನ ಬಾಡಿಗೆ ಸೌಲಭ್ಯ |
| 3 | 144/2016–17/23.08.2016 | 527040/16.03.2017 | 40697 | ಔಟರೀಚ್ ಪರೀಕ್ಷಾ ಕಾರ್ಯಕ್ಕಾಗಿ ವಾಹನ ಸೌಲಭ್ಯ |
| | | ಒಟ್ಟು | **1234825** | |

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಕೆ.ಟಿ.ಪಿ.ಪಿ (ತಿದ್ದುಪಡಿ) ನಿಯಮ 2001ರ ಉಪನಿಯಮ 4 (ಇ) ಹಾಗೂ 4(ಇಇ) ಹಾಗೂ ಸರ್ಕಾರದ ಇತ್ತೀಚಿನ ಅಧಿಸೂಚನೆ ಸಂಖ್ಯೆ:ಸಿಆಸುಇಇ/ಇಸಂಗ್ರ/2009, ದಿನಾಂಕ:09.10.2012ರಲ್ಲಿ ವಿವರಿಸಿರುವಂತೆ ರೂ.5,00,000/–ಗಳಿಗೆ ಮೀರಿದ ಪ್ರತಿಯೊಂದು ಸಂಗ್ರಹಣೆ/ಸೇವೆಯ ಸಂಬಂಧದಲ್ಲಿ ಎಲ್ಲಾ ಸಂಸ್ಥೆಗಳು/ಇಲಾಖೆಗಳು ದಿನಾಂಕ:03.12.2012 ರಿಂದ ಜಾರಿಗೆ ಬರುವಂತೆ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ (ಇ–ಪ್ರಕ್ಯೂರ್‌ಮೆಂಟ್) ಮುಖಾಂತರ ಟೆಂಡರ್ ಕರೆದು ತಮ್ಮ ಸೇವೆಯನ್ನು ಪೂರೈಸಿಕೊಳ್ಳತಕ್ಕದೆಂದು ನಿರ್ದಿಷ್ಟಪಡಿಸಲಾಗಿದೆ. ಆದುದರಿಂದ ಮೆ॥ ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್ ರವರೊಂದಿಗಿನ ಟೆಂಡರ್ (ಇ–ಪ್ರಕ್ಯೂರ್‌ಮೆಂಟ್) ಪ್ರತಿಯೊಂದು ಮೂಲ ದಾಖಲಾತಿ/ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:05/2018–19 ದಿನಾಂಕ:17.09.2018ರಲ್ಲಿ ನೀಡಲಾಗಿ, ಯಾವುದೇ ಇ–ಪ್ರಕ್ಯೂರ್‌ಮೆಂಟ್ ಮೂಲ ಕಡತಗಳು ಹಾಗೂ ಲೆಕ್ಕಪತ್ರ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರಿಂದ ಮೆ॥ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್ ರವರಿಗೆ ಪಾವತಿಸಿರುವ ಒಟ್ಟು ಮೊತ್ತ **(1234825 + 682122) ರೂ.19,16,947/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಹಾಗೂ 5.6% ರಂತೆ ಸೇವಾ ತೆರಿಗೆ ಒಟ್ಟು ಮೊತ್ತ (38199 + 69150) ರೂ.1,07,349/–ಗಳನ್ನು ವಸೂಲಾತಿಗೆ ಸೂಚಿಸಿದೆ.**

ರೂ.5.84ಹೆಚ್ಚಳವಾಗಿದ್ದು ಸದರಿ ಹೆಚ್ಚಳವನ್ನು ರೂ.6.00ಗಳಿಗೆ ಪ್ರತಿ ಕಿ,ಮೀ ಗೆ 0.90 ಪೈಸೆಗಳಂತೆ ಹಾಗೂ ಸ್ಥಳೀಯವಾಗಿ ಪ್ರತಿ ಒಂದು ಗಂಟೆಗೆ ಬಾಡಿಗೆ ದರ ರೂ.30.00ಗಳನ್ನು ಹೆಚ್ಚಳ ಮಾಡಲಾಯಿತು ಹಾಗೂ 2014–15 ರ ಸದರಿ ದರ 2016–17ನೇ ಸಾಲುಗೂ ಮುಂದುವರಿಸಲಾಗಿರುತ್ತದೆ,

(a) 2016 ರ ಮೇ,ಜೂನ್ ಮಾಹೆಯ ಪದವಿ ಪರೀಕ್ಷಾಕಾರ್ಯಕಾಗಿ ವಾಹನಗಳನ್ನು ಬಾಡಿಗೆಗೆ ಪಡೆಯಲಾಯಿತು ಇದು ಅನಿವಾರ್ಯ ಮತ್ತು ಅವಶ್ಯಕವಾದುದರಿಂದ ಬಾಡಿಗೆಗೆ ಪಡೆಯಲೇಬೇಕಾಯಿತು ಹಾಗೂ ರೂ.10,66,243/–ಗಳ ವೆಚ್ಚ ಭರಿಸಲಾಯಿತು.

(b) ಬಿ,ಎಡ್ ಪರೀಕ್ಷಾ ಕಾರ್ಯಕ್ಕೆ 2016ರ ಆಗಸ್ಟ್ ಮಾಹೆಯಲ್ಲಿ ಜಾಗೃತ ದಳದ ಸದಸ್ಯರಿಗೆ ವಾಹನ ಸೌಲಭ್ಯ ಒದಗಿಸಬೇಕಾದ್ದರಿಂದ ಬಾಡಿಗೆ ವಾಹನವನ್ನು ಪಡೆದು ಈ ಸಂಬಂಧ ರೂ.1,27,885/–ಗಳ ವೆಚ್ಚವನ್ನು ಭರಿಸಲಾಯಿತು

(c) ಮುಂದುವರಿದು ಔಟ್‌ರೀಚ್ ಪರೀಕ್ಷಾ ಕಾರ್ಯಕ್ಕಾಗಿ ವಾಹನ ಸೌಲಭ್ಯ ಒದಗಿಸಿ ಈ ಬಾಬ್ತು ರೂ.40,697/–ಗಳ ವೆಚ್ಚ ಭರಿಸಲಾಯಿತು.

2016–17 ನೇ ಸಾಲಿಗೆ ವಿಶ್ವವಿದ್ಯಾನಿಲಯದ ಕಾರ್ಯಗಳಿಗೆ ಬಾಡಿಗೆ ವಾಹನಗಳನ್ನು ಪಡೆಯಲಾಗಿದ್ದು ಡೀಸೆಲ್‌ದರ, ಹೊರ ಸ್ಥಳಗಳಿಗೆ ಪ್ರತಿ ಕಿ,ಮೀ ಗೆ ರೂ.5.84 ಸದರಿ ಹೆಚ್ಚಳವನ್ನು ರೂ.8.06ಗಳಿಗೆ ಪರಿಗಣಿಸಿ ಹಾಲಿ ಇರುವ ಬಾಡಿಗೆ ವಾಹನಕ್ಕೆ ಹೊರ ಸ್ಥಳಗಳಿಗೆ ಪ್ರತಿ ಕಿ,ಮೀ ರೂ.0.90 ಹಾಗೂ ಸ್ಥಳೀಯವಾಗಿ ಪ್ರತಿ ಒಂದು ಗಂಟೆಗೆ ಬಾಡಿಗೆ ದರ ರೂ.30.00ಗಳ ಹೆಚ್ಚಳದ ಬಾಬ್ತು 2016–17ನೇ ಸಾಲಿಗೆ ಬಾಡಿಗೆ ವಾಹನಗಳ ವೆಚ್ಚ ರೂ.6,82,122/–ಗಳನ್ನು ಭರಿಸಲಾಗಿರುತ್ತದೆ.

2016–17ನೇ ಸಾಲಿನ ಲೆಕ್ಕಾಪರಿಶೋಧನಾ ವರದಿಯಲ್ಲಿ ರೂ.6,82,122/–ಗಳನ್ನು ತೋರಿಸಲಾಗಿದ್ದು ಬಿಲ್ಲುಗಳ ಪಾವತಿಯಂತೆ ರೂ.6,82,397/–ಗಳಾಗಿದ್ದ ಲೆಕ್ಕ ಪರಿಶೋಧನಾ ವರದಿಯ ಮೊತ್ತಕ್ಕು ಬಿಲ್ಲುಗಳ ಪಾವತಿಯ ಮೊತ್ತಕ್ಕು ರೂ.275/–ಗಳ ವ್ಯತ್ಯಾಸ ಕಂಡು ಬರುತ್ತಿದ್ದು ಬಿಲ್ಲಿನಲ್ಲಿನ ಪಾವತಿ ಮೊತ್ತ ಸರಿಯಾಗಿದ್ದು ಲೆಕ್ಕ

ಪರಿಶೋಧನಾ ವರದಿಯ ಮೊತ್ತವನ್ನು ಸರಿಪಡಿಸಿಕೊಳ್ಳಲು ವಿನಂತಿಸಲಾಗಿದೆ.

ಒಟ್ಟಾರೆಯಾಗಿ 2016–17 ನೇ ಸಾಲಿಗೆ ಬಾಡಿಗೆ ವಾಹನಗಳಿಗೆ ಈ ಕೆಳಕಂಡ ವಿವರಗಳಂತೆ ವೆಚ್ಚವನ್ನು ಭರಿಸಲಾಗಿರುತ್ತದೆ.

| ಕ್ರ ಸಂ | 2016–17ನೇ ಸಾಲಿನಲ್ಲಿ ಬಾಡಿಗೆ ವಾಹನಗಳಿಗೆ ಪಾವತಿಸಿದ ಮೊತ್ತ | ಬಿಲ್ಲಿನಲ್ಲಿ ಶೇ,2.3 ರಂತೆ ಕಟಾಯಿಸಿದ ತೆರಿಗೆ ಮೊತ್ತ | ಚೆಕ್ ಮುಖಾಂತರ ಪಾವತಿಸಿದ ನಿವ್ವಳ ಮೊತ್ತ |
|---|---|---|---|
| 1 | 6,82,397/– | 15,697/– | 6,66,700/– |
| 2 | 10,66,243/– | 24,524/– | 10,41,719 |
| 3 | 1,27,885/– | 2,941/– | 1,24,944/– |
| 4 | 40,697/– | 936/– | 39,761/– |
| **ಒಟ್ಟು** | **19,17,222/–** | **44,098/–** | **18,73,124/–** |

ಮೇಲಿನ ವಿವರದಂತೆ ರೂ.19,17,222/– 2016–17ನೇ ಸಾಲಿಗೆ ಬಾಡಿಗೆ ವಾಹನಗಳಿಗೆ ವೆಚ್ಚ ಭರಿಸಲಾಗಿಸದ್ದು ಇದಕ್ಕೆ ಸಂಬಂಧಿಸಿದ ಬಿಲ್ಲುಗಳಲ್ಲಿ ರೂ.44,098/–ಗಳನ್ನು ಶೇ 2.3 ರಂತೆ ಕಟಾಯಿಸಿ ಸಂಬಂಧ ಪಟ್ಟ ಖಾತೆಗೆ ಜಮಾ ಮಾಡಲಾಗಿರುತ್ತದೆ, ಆದರೆ ಕಂಡಿಕೆಯಲ್ಲಿ ರೂ.1,07,349/–ಗಳನ್ನು ಕಟಾವಣೆಗೆ ಸೂಚಿಸಿ ಸೇವಾ ತೆರಿಗೆ ಮೊಬಲಗು ಶೇ 5.6 ರಂತೆ ಕಟಾಯಿಸುವಂತೆ ಸೂಚಿಸಲಾಗಿದ್ದು ಶೇ 5.6 ರ ದರಕ್ಕೆ ನಿಖರ ಮಾಹಿತಿ ಲಭ್ಯವರುವುದಿಲ್ಲ ಒಂದು ವೇಳೆ ಮಾಹಿತಿಯನ್ನು ಒದಗಿಸಿದಲ್ಲಿ ಈ ಬಗ್ಗೆ ಮುಂದಿನ ಕ್ರಮ ವಹಿಸಿ ಲೆಕ್ಕ ಪರಿಶೋಧನೆಗೆ ವಿವರವನ್ನು ಒದಗಿಸಲಾಗುವುದು

ಈ ನಿಟ್ಟಿನಲ್ಲಿ ಕಂಡಿಕೆ 97 ರಲ್ಲಿ ಆಕ್ಷೇಪಿಸಿ ಆಕ್ಷೇಪಣೆಯಲ್ಲಿಟ್ಟಿರುವ ಮೊಬಲಗು ರೂ.19,16,947/–ಗಳಿಗೆ ಸಂಬಂಧ ಪಟ್ಟ ಬಿಲ್ಲುಗಳು ಹಾಗೂ ಇವುಗಳಿಗೆ ಪೂರಕ ದಾಖಲಾತಿಗಳನ್ನು ಇದರೊಟ್ಟಿಗೆ ಒದಗಿಸುತ್ತ ಸದರಿ ಆಕ್ಷೇಪಿತ ಮೊತ್ತ ರೂ. 19,16,947/–/–ಗಳನ್ನು ಆಕ್ಷೇಪಣೆಯಿಂದ ಹಾಗೂ ವಸಲಾತಿ ಮೊತ್ತ ರೂ 1,07,349/–ಗಳ ವಸೂಲಾತಿಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

| | | |
|---|---|---|
| **98** | **<u>ಗಣಕ ಯಂತ್ರಗಳ ವಾರ್ಷಿಕ ನಿರ್ವಹಣೆಗಾಗಿ ಭರಿಸಿರುವ ವೆಚ್ಚದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸದಿರುವುದು :– (ಹಣಕಾಸು ವಿಭಾಗ)</u>**<br>2016–17ನೇ ಸಾಲಿನಲ್ಲಿ ಗಣಕ ಯಂತ್ರಗಳ ವಾರ್ಷಿಕ ನಿರ್ವಹಣೆಗಾಗಿ ಸಾಮಾನ್ಯ ರೆವಿನ್ಯೂ ಖಾತೆಯಿಂದ ರೂ.9,08,738/– ಹಾಗೂ ಪರಿಕ್ಷಾ ಖಾತೆಯಿಂದ ರೂ.1,47,873/– ಗಳನ್ನು ವೆಚ್ಚ ಮಾಡಿರುವುದು ಕಂಡು ಬಂದಿರುತ್ತದೆ.<br>ಈ ಸಂಬಂಧ ಪಾರದರ್ಶಕ ಅಧಿನಿಯಮದನ್ವಯ ಗುತ್ತಿಗೆ ಕರಾರು ಮಾಡಿಕೊಂಡಿರುವ ಬಗ್ಗೆ ಅಗತ್ಯ ಕರಾರು ಪತ್ರದ ಪ್ರತಿ ಹಾಗೂ ಕಡತ ಮತ್ತು ವಹಿಯನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರಸಂಖ್ಯೆ:79 ದಿನಾಂಕ:24.07.2018 ರಲ್ಲಿ ನೀಡಲಾಗಿತ್ತು. ಆದರೆ ಪ್ರತ್ಯುತ್ತರ ನೀಡಿರುವುದಿಲ್ಲ.<br>ಆದ್ದುದರಿಂದ, ಗಣಕ ಯಂತ್ರಗಳನ್ನು ಖರೀದಿಸಿದ ದಿನಾಂಕ ಸದರಿ ಯಂತ್ರಗಳಿಗೆ ಇದ್ದಂತಹ ಗ್ಯಾರಂಟಿ/ ವಾರೆಂಟಿ ಅವಧಿ, ಅನಂತರ ವಾರ್ಷಿಕ ನಿರ್ವಹಣೆಯ ಕರಾರು ಒಪ್ಪಂದದ ವಿವರಗಳು ಲಭ್ಯವಿರುವುದಿಲ್ಲ. ವಿವರಗಳನ್ನು ನೀಡುವವರೆಗೆ ಒಟ್ಟು ಮೊತ್ತ **ರೂ.10,56,611/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗ ಹಾಗೂ ಪರೀಕ್ಷಾ ವಿಭಾಗಗಳಿಗೆ 2016–17ನೇ ಸಾಲಿಗೆ ರೂ.10,56,611/–ಗಳನ್ನು ವಾರ್ಷಿಕ ಗಣಕಯಂತ್ರಗಳ ನಿರ್ವಹಣೆಗಾಗಿ ವೆಚ್ಚ ಮಾಡಲಾಗಿದ್ದು ಈ ಬಗ್ಗೆ 2016–17ನೇ ಸಾಲಿನಲ್ಲಿ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ಪ್ರಸ್ತಾಪಿಸಿ ರೂ.10,56,611/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br>ಹಣಕಾಸು ಮತ್ತು ಪರೀಕ್ಷಾ ವಿಭಾಗಗಳಲ್ಲಿ ಹಲವು ಗಣಕಯಂತ್ರಗಳು ಕಾರ್ಯನಿರ್ವಹಿಸುತ್ತಿದ್ದು ಅವುಗಳ ನಿರ್ವಹಣೆ ಕಾರ್ಯವು ಅವಶ್ಯಕವಾಗಿರುತ್ತದೆ. ಗಣಕಯಂತ್ರಗಳು ಆಗಿಂದಾಗ್ಗೆ ದುರಸ್ಥಿಗೆ ಬರುವುದು ಹಾಗೂ ಇದರ ಬಿಡಿಭಾಗಗಳನ್ನು ಪದೇ ಪದೇ ಬದಲಾಯಿಸುವ ಸಂದರ್ಭಬರುವದರಿಂದ ವೆಚ್ಚದ ಅವಶ್ಯಕತೆ ಉದ್ಭವವಾಗುತ್ತದೆ, ಬಿಡಿ ಭಾಗಗಳ ಬೆಲೆಯು ಜಾಸ್ತಿಯಾಗುವುದರಿಂದ ವೆಚ್ಚವು ತಾನೇ ತಾನಾಗಿ ಹೆಚ್ಚಳವಾಗುವುದು ಈ ನಿಟ್ಟಿನಲ್ಲಿ ವೆಚ್ಚ ಭರಿಸುವ ಮುನ್ನ ಸಂಬಂಧ ಪಟ್ಟ ವಿಭಾಗದ ಮುಖ್ಯಸ್ಥರು ನಿರ್ವಹಣೆಯ ವಿವರಗಳೊಂದಿಗೆ ಬೇಡಿಕೆಯನ್ನು ಸಲ್ಲಿಸುವರು ಈ ಆಧಾರದ ಮೇಲೆ ಸಂಬಂಧ ಪಟ್ಟ ಪ್ರಾಧಿಕಾರ/ ಮುಖ್ಯಸ್ಥರಿಂದ ಪೂರ್ವಾನುಮತಿ ಪಡೆದು ವಿಶ್ವವಿದ್ಯಾನಿಲಯದ ಆದೇಶ ಹೊರ ಬಂದ ಮೇಲೆ ಸದರಿ ಗಣಕ ಯಂತ್ರಗಳ ದುರಸ್ಥಿ/ ನಿರ್ವಹಣೆಯ ಕಾರ್ಯ ಕೈಗೊಳ್ಳಲಾಗುವುದು ಈ ಪ್ರಕ್ರಿಯೆ ಪ್ರಾರಂಭವಾಗುವ ಮೊದಲು, ದರಪಟ್ಟಿ, ಟೆಂಡರುಗಳ ಮುಖಾಂತರ ನಿರ್ವಹಣೆಯ ಕಾರ್ಯ ಯೋಜನೆಯನ್ನು ಅಧಿಕೃತ ಸರಬರಾಜುದಾರರು ಹಾಗೂ ಕಂಪನಿಯವರಿಂದ ದುರಸ್ಥಿ ಕೆಲಸ ನಿರ್ವಹಿಸಲಾಗುವುದು, ಹೀಗೆ 2016–17ನೇ ಸಾಲಿಗೆ ರೂ.10,56,611/–ಗಳ ವೆಚ್ಚ ಭರಿಸಲಾಗಿರುತ್ತದೆ, ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಇದರೊಂದಿಗೆ ಹಾಜರು ಪಡಿಸುತ್ತ ಪ್ರಸ್ತುತ ಆಕ್ಷೇಪಸಿ, ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.10,56,611/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. |

| | | |
|---|---|---|
| 99 | **<u>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಪ್ರವೇಶಾತಿ ವಿವರಗಳು ಮೆಸ್‌ಬಿಲ್ಲು ಮತ್ತು ವಿದ್ಯಾರ್ಥಿವೇತನ ಬಿಡುಗಡೆ ಮಾಡಿರುವ ವಿವರ :– (ಹಣಕಾಸು ವಿಭಾಗ)</u>**<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರಡಿಯಲ್ಲಿ ಪ್ರಕರಣ (4)ರಲ್ಲಿ (18)ರ ಪ್ರಕಾರ ವಿದ್ಯಾರ್ಥಿನಿಯರಿಗೆ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಅನುಸೂಚಿತ ಪಂಗಡಗಳಿಗೆ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ನಿವಾಸ, ಶಿಸ್ತು ಮತ್ತು ಬೋಧನೆಗೆ ಸಂಬಂಧಿಸಿದಂತೆ ವಿಶೇಷ ಏರ್ಪಾಡುಗಳನ್ನು ಮಾಡಿಕೊಂಡುವಂತೆ ತಿಳಿಸಿದೆ. 2016–17ನೇ ಸಾಲಿಗೆ ಸಂಬಂಧಿಸಿದಂತೆ ಈ ಪ್ರಕರಣದಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ವಿವಿಧ ಕೋರ್ಸುಗಳ ತರಗತಿಗಳಿಗೆ ಶುಲ್ಕ ರಿಯಾಯತಿ ಮೇರೆಗೆ ಪ್ರವೇಶಾತಿ ಪಡೆದುಕೊಂಡಿರುವ ವಿವರ ಸದರಿ ರಿಯಾಯಿತಿ ಶುಲ್ಕವನ್ನು ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಮರುಭರಿಕೆ ಮಾಡಿರುವ ವಿವರಗಳು ಮತ್ತು ಸರ್ಕಾರದಿಂದ ಮರುಭರಿಕೆಯಾಗದಿರುವ ಕಾರಣದಿಂದ ವಿದ್ಯಾರ್ಥಿಗಳಿಂದ ಸಂಗ್ರಹಿಸಿರುವ ಪ್ರವೇಶಾತಿ ಶುಲ್ಕದ ವಿವರಗಳು ವಿದ್ಯಾರ್ಥಿನಿಲಯದಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಂಡಿರುವ ವಿವರ ಹಾಗೂ ಇವರಿಗೆ ಬರಿಸಿರುವ ಮೆಸ್ ಬಿಲ್ಲಿನ ಮೊತ್ತ, ಸರ್ಕಾರದಿಂದ ಮರುಭರಿಕೆಯಾಗದಿರುವ ವಿವರಗಳು ಹಾಗೂ ಪಾವತಿಸಿದೇ ಬಾಕಿ ಇರುವ ವಿದ್ಯಾರ್ಥಿವೇತನದ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ:49/2018–19 ದಿನಾಂಕ:18.07.2018ರಲ್ಲಿ ಮತ್ತು 68/2018–19 ದಿನಾಂಕ:23.07.2018ರಲ್ಲಿ ವಿವರಗಳನ್ನು ಕೋರಿ ಸದರಿ ವಿಚಾರಣೆಯನ್ನು ಡೆಪ್ಯೂಟಿ ರಿಜಿಸ್ಟರ್‌ರವರು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ, ವಿಶೇಷ ಘಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೂ ಸಹಾ ವಿಚಾರಣೆಯ ಪ್ರತಿಯನ್ನು ಕಳುಹಿಸಿಕೊಡಲಾಗಿ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಮುಂದುವರೆದಂತೆ ವಿಚಾರಣಾ ಸಂಖ್ಯೆ:1/2018–19 ದಿನಾಂಕ:25.08.2018ರಲ್ಲಿ 2016–17ನೇ ಸಾಲಿಗೆ ಪಾವತಿಸಿರುವ ಮೆಸ್ ಬಿಲ್ಲಿನಲ್ಲಿ ಹಿಂದಿನ ಸಾಲಿನಲ್ಲಿ ಬಾಕಿ ಉಳಿದಿದ್ದ ಹಾಗೂ ಪ್ರಸಕ್ತ ಸಾಲಿನ ವರ್ಷಕ್ಕೆ ಮೆಸ್ ಬಿಲ್ಲನ್ನು ಪಾವತಿಸಿರುವ ವಿವರಗಳು ಇಃಐ ಬಾಬ್ತು | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಪ್ರವೇಶಾತಿ ವಿವರಗಳು ಮೆಸ್ ಬಿಲ್ಲುಗಳು ಹಾಗೂ ವಿದ್ಯಾರ್ಥಿ ವೇತನ ಬಿಡುಗಡೆ ಸಂಬಂಧಿಸಿದ ವಿವರಗಳನ್ನು ಹಾಜರು ಪಡಿಸಿರುವುದಿಲ್ಲವೆಂದು ಆಕ್ಷೇಪಿಸಿ ಕಂಡಿಕೆ 99 ರಲ್ಲಿ ಪ್ರಸ್ತಾಪಿಸಿರುವ ಮಾಹಿತಿಯನ್ನು ಸಿದ್ಧಪಡಿಸಲು ಕ್ರಮ ವಹಿಸಲಾಗಿದ್ದು ಸಂಬಂಧ ಪಟ್ಟ ದಾಖಲಾತಿ ವಿವರಗಳನ್ನು ಮುಂದಿನ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಹಾಜರು ಪಡಿಸಲಾಗುವುದೆಂಬ ಮಾಹಿತಿಯನ್ನು ನಿವೇದಿಲಾಗಿದೆ. |

| | | |
|---|---|---|
| | ವಿಶ್ವವಿದ್ಯಾನಿಲಯದಿಂದ ಬಿಡುಗಡೆಯಾಗಿರುವ ಅನುದಾನದ ವಿವರಗಳು ಹಾಗೂ ಇನ್ನಿತರ ವಿಷಯಗಳ ಬಗ್ಗೆ ವಿಚಾರಣೆಯನ್ನು ನೀಡಲಾಗಿ, 2015–16ನೇ ಶೈಕ್ಷಣಿಕ ಸಾಲಿನಲ್ಲಿ ಮೆಸ್ ನಡೆಸುತ್ತಿದ್ದ ಗುತ್ತಿಗೆದಾರರನ್ನೇ 2016–17ನೇ ಶೈಕ್ಷಣಿಕ ಸಾಲಿಗೂ ಸಹ ತಾತ್ಕಾಲಿಕವಾಗಿ ಮುಂದುವರೆಸುವಂತೆ ಕುಲಸಚಿವರು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಲಹಾ ಸಮಿತಿ ಮತ್ತು ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳದೆ ಮುಂದುವರೆಯುವಂತೆ ಆದೇಶವನ್ನು ನೀಡಿರುತ್ತಾರೆ. ಹಾಗೂ 2016–17ನೇ ಸಾಲಿಗೆ 19 ವಿದ್ಯಾರ್ಥಿನಿಲಯಗಳಲ್ಲಿ ಪರಿಶಿಷ್ಟ ಜಾತಿಯ 2189 ವಿದ್ಯಾರ್ಥಿಗಳನ್ನು ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿರುವ 433 ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಮಾಡಿಕೊಳ್ಳಲಾಗಿದೆ. ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಒಟ್ಟು ರೂ.1,60,00,000/–ಗಳು ಹೊಂದಾಣಿಕೆಯಾಗಿದ್ದು, ಹಾಗೂ ವಿದ್ಯಾರ್ಥಿ ವೇತನದ ಬಾಬ್ತು ರೂ.1,94,03,580/–ಗಳು ಬಿಡುಗಡೆಯಾಗಿದ್ದು, ಒಟ್ಟಾರೆ 19 ವಿದ್ಯಾರ್ಥಿನಿಲಯದಿಂದ ಮೆಸ್ ಬಿಲ್ಲಿನ ಬಾಬ್ತು ರೂ.3,79,47,676/–ಗಳು ವೆಚ್ಚವಾಗಿದ್ದು, ಇದರಲ್ಲಿ ರೂ.93,48,370/–ಗಳನ್ನು ಕಾಯ್ದಿರಿಸಿ ಇನ್ನುಳಿದಂತೆ ರೂ.2,81,99,306/–ಗಳನ್ನು ಮೆಸ್ ಬಿಲ್ಲನ್ನು ಪಾವತಿಸಲಾಗಿದೆ. ಸದರಿವೆಚ್ಚವು 2015–16ನೇ ಆರ್ಥಿಕ ವರ್ಷದಲ್ಲಿ ಬಾಕಿ ಉಳಿದಿದ್ದ ಮೆಸ್ ಬಿಲ್ಲನ್ನು ಪಾವತಿಸಲು ಕ್ರಮಕೈಗೊಳ್ಳಲಾಗಿದೆ. ಹಾಗೂ 2016–17ನೇ ಸಾಲಿನ ಆರ್ಥಿಕ ವರ್ಷದ ಮೆಸ್ ಬಿಲ್ಲನ್ನು ಪಾವತಿಸಿರುತ್ತಾರೆ. 2016–17ನೇ ಸಾಲಿನ ವಿವಿಧ ಕೋರ್ಸ್‌ಗಳ ತರಗತಿಗಳಿಗೆ ಶುಲ್ಕ ರಿಯಾಯಿತಿ ಮೇರೆಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಆಯಾ ನೋಂದಣಿ ಮಾಡಿಕೊಂಡಿರುವ ವಿಭಾಗದಲ್ಲಿಯೇ ಮಾಹಿತಿ ಲಭ್ಯವಿರುವುದಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿಶೇಷ ಘಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಲ್ಲಿ ಮಾಹಿತಿ ಲಭ್ಯ ಇರುವುದಿಲ್ಲವೆಂದು ವಿವರಣೆಯಲ್ಲಿ ನೀಡಿರುತ್ತಾರೆ. | |

| | | |
|---|---|---|
| 100 | **<u>M/S Dreams Interiors Mysore, ರವರಲ್ಲಿ ಉಪಕರಣಗಳ ಖರೀದಿ ಮಾಡಿರುವುದು:–</u>**<br>**<u>(ಹಣಕಾಸು ವಿಭಾಗ)</u>**<br>2016–17ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಹಾಜರುಪಡಿಸಿರುವ ಬ್ಯಾಂಕ್ ಖಾತೆ ಸಂಖ್ಯೆ:64098950735 ಯಲ್ಲಿ ಆಡಳಿತ ವಿಭಾಗದ ಆದೇಶ ಸಂಖ್ಯೆ:ಜಿ.ಎಲ್.1/826/2015–16 ದಿ:02.09.2016 ರಂದು ಉಪಕರಣ ಖರೀದಿಗಾಗಿ ರೂ.15,26,400/– ಪಾವತಿಸಲಾಗಿದೆ. ಆದರೆ ಕರಾರು ಪತ್ರವು ನಿರ್ದೇಶಕರ ಹೆಸರಿಗೆ ಪಡೆಯಲಾಗಿದ್ದು ನಿರ್ದೇಶಕರಿಗೆ ಹಣಕಾಸು ಪ್ರತ್ಯಾಧಿಕಾರ ಹಂಚಿಕೆ ಹೊಂದಿರುವ ಆದೇಶದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಇದರಿಂದ ನಿರ್ದೇಶಕರೇ ನೇರವಾಗಿ ಟೆಂಡರ್ ಆಹ್ವಾನಿಸಿದ್ದು, ನಿಯಮ ಬಾಹಿರವಾಗಿರುತ್ತದೆ. ಖರೀದಿಗಾಗಿ ಪಾವತಿಸಿರುವ ಮೊತ್ತವು ರೂ.5,00,000/– ಕ್ಕಿಂತ ಹೆಚ್ಚಾಗಿರುವುದರಿಂದ ಕುಲಸಚಿವರು ಟೆಂಡರ್ ಕರೆಯಬೇಕಾಗಿರುತ್ತದೆ. ಹಾಗೂ ಪಾವತಿಸಿರುವ ಬಿಲ್ಲಿನಲ್ಲಿ ಆದಾಯ ತೆರಿಗೆ ಕಟಾಯಿಸದೆ ಇರುವುದು ಮತ್ತು ಬಿಲ್ಲಿನಲ್ಲಿ ಆದಾಯ ತೆರಿಗೆ ನೋಂದಣಿ ಪತ್ರ ಲಗತ್ತಿಸದೆ ಇರುವುದರಿಂದ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯೊಂದಿಗೆ ಸೂಕ್ತ ವಿವರಣೆ ನೀಡಲು ವಿಚಾರಣಾ ಪತ್ರಸಂಖ್ಯೆ:149 ದಿ:01.08.2018 ರಂದು ನೀಡಲಾಗಿದ್ದು ವಿವರಗಳನ್ನು ಹಾಜರುಪಡಿಸದಿರುವ ಕಾರಣ, ಮೊಬಲಗು **ರೂ.15,26,400/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ,** ಬಿಲ್ಲಿನಲ್ಲಿ ಆದಾಯ ತೆರಿಗೆ ಕಟಾಯಿಸದೆ ಇರುವುದರಿಂದ **ರೂ.35,107/–ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.** | 2016–17ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 100 ರಲ್ಲಿ M/S Dreams Interiors Mysore, ಇವರಿಂದ ಉಪಕರಣಗಳ ಖರೀದಿ ಬಗ್ಗೆ ಪ್ರಸ್ತಾಪಿಸಿ ಕರಾರು ಪತ್ರವನ್ನು ನಿರ್ದೇಶಕರ ಹೆಸರಿಗೆ ಪಡೆಯಲಾಗಿದೆ, ಹಾಗೂ ಟೆಂಡರ್‌ನ್ನು ನಿರ್ದೇಶಕರ ಹೆಸರಿಗೆ ನೇರವಾಗಿ ಆಹ್ವಾನಿಸಲಾಗಿದೆ ಎಂದು ಪ್ರಸ್ತಾಪಿಸಿ ರೂ.15,26,400/–ಗಳನ್ನು ಆಕ್ಷೇಪಣೆಯಲ್ಲಿಯೂ ರೂ.35,107/–ಗಳನ್ನು ವಸೂಲಾತಿಗಾಗಿ ಸೂಚಿಸಲಾಗಿದೆ, ಈ ಸಂಬಂಧ ವಿಶ್ವವಿದ್ಯಾನಿಲಯದ ದಿನ ನಿತ್ಯದ ಚಟುವಟಿಕೆಗಳಲ್ಲಿ ಕುಲಸಚಿವರು ತುಂಬ ಬ್ಯುಸಿಯಾಗಿದ್ದ ಕಾರಣ ಈ ಪ್ರಸ್ತಾವನೆಗೆ ಸಂಬಂಧಿಸಿದ ಉಪಕರಣಗಳನ್ನು ಪಡೆಯಲು, ಟೆಂಡರು ಮತ್ತು ಕರಾರು ಪತ್ರಗಳ ಬಗ್ಗೆ ನೇರವಾಗಿ ವ್ಯವಹರಿಸುವ ಅಧಿಕಾರವನ್ನು ನಿರ್ದೇಶಕರು ಇವರಿಗೆ ಆದೇಶ ಸಂಖ್ಯೆ ಜಿ,ಎಲ್,1/826/2015–16 ದಿನಾಂಕ:02.9.2016ರಲ್ಲಿ ನೀಡಲಾಗಿದ್ದು, ಅದರಂತೆ ಯೂನಿವರ್ಸಿಟಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಈ ವಿಭಾಗಕ್ಕೆ ಅವಶ್ಯಕವಾಗಿರುವ ಉಪಕರಣಗಳನ್ನು ಖರೀದಿಸಿ ರೂ.15,26,400/–ಗಳ ವೆಚ್ಚಗಳನ್ನು ಭರಿಸಲಾಗಿರುತ್ತದೆ. (ನಿರ್ದೇಶಕರಿಗೆ ಪ್ರತ್ಯಾಧಿಕಾರ ನೀಡಿದ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ)<br><br>ಸದರಿ ಪರಿಕರಗಳನ್ನು ಖರೀದಿಸುವ ಸಂಬಂಧ ದಿನ ಪತ್ರಿಕೆ ಮತ್ತು ಜಿಲ್ಲಾಟೆಂಡರು, ಬುಲಿಟನ್ ಸಂಖ್ಯೆ ಜಿ,ಟಿ,ಬು,ಡಿ,ಮಿಸ್:22/2016–17 ದಿನಾಂಕ:24.9.2016(ಇದನ್ನು ಮುಂದೂಡಲಾಗಿದೆ) ಹಾಗೂ ಸಂಖ್ಯೆ:ಎಸ್,ಪಿ,ಎ/41/2016–17 ದಿನಾಂಕ:07.10.2016ರ ಪ್ರಕಾರ ಪ್ರಕಟಣೆ ಹೊರಡಿಸಿದ್ದು ಆಮೇರೆಗೆ ನಾಲ್ಕು ಕಂಪನಿಯವರು ಬಿಡ್‌ನಲ್ಲಿ ಬಾಗವಹಿಸಿ ಅವರುಗಳ ದರವನ್ನು ನಮೂದಿಸಿದ್ದು ದರ ಪಟ್ಟಿಯು ಈ ಕೆಳಕಂಡಂತಿರುತ್ತದೆ. |

| ಕ್ರ. | ಕಂಪನಿಯ ಹೆಸರು | ದರ | ಶಿಫಾರಸ್ಸು |
|---|---|---|---|

| ಸಂ | | | |
|---|---|---|---|
| 1 | ಮೆ॥ ಮ್ಯಾಟ್ರಿಕ್ ಟೆಕ್ನಾಲಿಜೀಸ್ ಇನ್ | 15,61,600/– | Technical and financial bids are accepted |
| 2 | ಮೆ॥ ಕ್ರಿಯೇಟೀವ್ ಸೊಲೊಷನ್ಸ್ | 16,04,000/– | Technical and financial bids are accepted |
| 3 | ಮೆ॥ ಟ್ರೀಮ್ಸ್ ಇಂಟೀರಿಯರ್ಸ್ | 15,26,400/– | Technical and financial bids are accepted |
| 4 | ಮೆ॥ ಎ,ವಿ ಡಿಸೈನರ್ಸ್ | 17,54,76,192/– | Technical and financial bids are accepted |

ಮೇಲಿನ ತುಲನಾತ್ಮಕ ದರ ಪಟ್ಟಿಯಲ್ಲಿ ಅವಲೋಕಿಸಿದಾಗ ಕ್ರ.ಸಂ 3ರ ಮೆ॥ ಡ್ರೀಂಮ್ಸ್ ಇಂಟೀರಿಯರ್ಸ್ ಇವರು ನಮೂದಿಸಿರುವ ದರ ರೂ.15,26,400/– ಇತರ ಮೂರು ಕಂಪನಿಯವರಿಗಿಂತ ಕಡಿಮೆಯಿದ್ದು ಈ ಕಡಿಮೆ ದರ ನಮೂದಿಸಿರುವ ಮೆ॥ ಟ್ರೀಮ್ಸ್ ಇಂಟೀರಿಯರ್ಸ್ ಇವರ ದರವನ್ನು ಅಂಗೀಕರಿಸಲಾಗಿರುತ್ತದೆ, ಹಾಗೂ ಕ್ರ ಸಂ: ಎಸ್,ಪಿ,ಎ/ಎಂ,ಐ,ಎಸ್,ಇ/2016–17/226(ಎ) ದಿನಾಂಕ:16.12.2016ರ ಪತ್ರದಲ್ಲಿ ಅಂಗೀಕಾರ ಪತ್ರವನ್ನು ನೀಡಲಾಗಿದೆ (ಪತ್ರದ ಪ್ರತಿ ಲಗತ್ತಿಸಿದೆ)

| | ಕಾಮಗಾರಿಗೆ ವ್ಯಾಪ್ತಿ ಮೀರಿ ಅನುಮೋದನೆ ನೀಡಿರುತ್ತಾರೆ.<br>2016–17ನೇ ಸಾಲಿನಲ್ಲಿ ನಿಯಮಾನುಸಾರವಾಗಿ ಅನುಮೋದನೆಯನ್ನು ಕ್ರಮವಾಗಿ ಮುಖ್ಯ ಅಭಿಯಂತರರು, ಅಧೀಕ್ಷಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರಿಂದ ಪಡೆಯಬೇಕಿರುತ್ತದೆ. ಆದರೆ ನಿಯಮ ಪಾಲನೆ ಮಾಡದೆ ಮೇಲಿನ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು ಅಂತಿಮವಾಗಿ ಅನುಮೋದನೆ ನೀಡಿ ಪೂರ್ಣಗೊಳಿಸಿರುತ್ತಾರೆ. ಇದು ಕರ್ನಾಟಕ ಸರ್ಕಾರ ಆರ್ಥಿಕ ಇಲಾಖೆ ಹೊರಡಿಸಿರುವ ಆರ್ಥಿಕ ಪ್ರತ್ಯಾಧಿಕಾರದ ಉಲ್ಲಂಘನೆಯಾಗಿರುತ್ತದೆ. | ಇರುತ್ತದೆ ಇದರನ್ವಯ ಕಟ್ಟಡ ಸಮಿತಿಗೆ ಮಂಜೂರಾತಿ ಪಡೆದು ಈ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಿದೆ ಆದ್ದರಿಂದ ಈ ಕಂಡಿಕೆಯಲ್ಲಿ ತಿಳಿಸಿರುವ ಕಾಮಗಾರಿಗಳ ಅಂದಾಜುಗಳಿಗೆ ತಾಂತ್ರಿಕ ಮಂಜೂರಾತಿ ನೀಡುವಲ್ಲಿ ಸರ್ಕಾರದ ಆರ್ಥಿಕ ಇಲಾಖೆ ಹೊರಡಿಸಿರುವ ಆರ್ಥಿಕ ಪ್ರತ್ಯಾಧಿಕಾರದ ಉಲ್ಲಂಘನೆ ಆಗಿರುವುದಲ್ಲ ಎಂಬುದಾಗಿ ನಿವೇದಿಸಲಾಗಿದೆ. |

| 121 | **ಕಾಲ ಅವಧಿ ವಿಸ್ತರಣೆ ಅನುಮೋದನೆ ಪಡೆಯದೆ ಇರುವ ಬಗ್ಗೆ ವಿಳಂಬಿತ ಅವಧಿಗೆ ದಂಡ ವಸೂಲಿ ಮಾಡದೆ ಇರುವ ಬಗ್ಗೆ:- (ಇಂಜಿನಿಯರಿಂಗ್ ವಿಭಾಗ)** | |
|---|---|---|

| ಕಾಮಗಾರಿ | Construction of additional class rooms and seminar hall to Mathematics dept of Manasa Gangotri, Mysore. |
|---|---|
| ಅಂದಾಜು ಮೊತ್ತ | 97,00,000 |
| ಗುತ್ತಿಗೆದಾರರು | ಸಿ.ಪುಟ್ಟಸ್ವಾಮಿ |
| ಟೆಂಡರ್‌ಗಿಟ್ಟ ಮೊತ್ತ | 1,16,31,911 |
| ಗುತ್ತಿಗೆ ವಹಿಸಿದ ಮೊತ್ತ | 1,15,96,966 |
| ಕಾರ್ಯದೇಶ | TND/Ag No:65/15-16/ 30.07.15 |
| ಅಂತಿಮ ಬಿಲ್ಲು | ಬಿ.ಆರ್.898/16-17/14.03.17 ರೂ.11,81,438 |

ಗುತ್ತಿಗೆ ಕಾರ್ಯದೇಶದ ವಿವರದನ್ವಯ ಕಾಮಗಾರಿ ನಿರ್ವಹಣೆಗೆ 5 ತಿಂಗಳ ಕಾಲವಕಾಶ ನೀಡಿದ್ದು, ಸದರಿ ಕಾಮಗಾರಿಯನ್ನು ದಿ:30.07.15 ಕ್ಕೆ ಪ್ರಾರಂಭಿಸಿ ದಿ:30.11.15 ಕ್ಕೆ ಕಾಮಗಾರಿ ಪೂರ್ಣಗೊಳಿಸಬೇಕಾಗಿರುತ್ತದೆ. ಆದರೆ ಗುತ್ತಿಗೆದಾರರು ದಿ:30.07.15 ಕ್ಕೆ ಪ್ರಾರಂಭಿಸಿ ದಿ:25.02.2017 ಕ್ಕೆ ಪೂರ್ಣಗೊಳಿಸಿರುತ್ತಾರೆ. ಅಂದರೆ 15 ತಿಂಗಳುಗಳ ವಿಳಂಬವಾಗಿದ್ದು, ಈ ಬಗ್ಗೆ ವಿಳಂಬಕ್ಕೆ ಕಾರಣ ಮತ್ತು ದಂಡ ವಸೂಲಾತಿ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:51/29.10.2018 ರಂದು ನೀಡಿದ್ದರೂ ಸದರಿ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿಲ್ಲ.

| ವಿಳಂಬ ಅವಧಿ ಮತ್ತು ಶುಲ್ಕ ವಿವರ | |
|---|---|
| Date of mark out | 30.07.2015 |
| Time allowed | 5 months |
| Due Date of completion | 29.72.2015 |
| Actual date of completion | 25.02.2017 |
| No of day’s delay | 248 days |
| Late progress | Rs. 11,81,438 |
| Penalty 11834/ 248= 47.60 per day 248x47.60=11,804 | |

ಆದ್ದರಿಂದ **ರೂ.11,804/-ಗಳನ್ನು** ಸಂಬಂಧಿಸಿದ ಗುತ್ತಿಗೆದಾರರಿಂದ ಅಥವಾ ಅಭಿಯಂತರರಿಂದ **ವಸೂಲಾತಿಗೆ** ಸೂಚಿಸಿದೆ.

ಕಂಡಿಕೆ ಸಂಖ್ಯೆ.121 ರಲ್ಲಿ ಸೂಚಿಸಿರುವ ರೂ.11,804/- ಗಳ ಮೊತ್ತವನ್ನು ಸಂಬಂಧಿಸಿದ ಕಾಮಗಾರಿ ಗುತ್ತಿಗೆದಾರರಾದ ಸಿ.ಪುಟ್ಟಸ್ವಾಮಿ ಇವರ ಕಾಮಗಾರಿ ಅಂತಿಮ ಬಿಲ್ಲನ್ನು ಪಾವತಿಸಲು ಬಾಕಿ ಇದ್ದು ಈ ಅಂತಿಮ ಬಿಲ್ಲಿನಲ್ಲಿ ರೂ.11,804/-ಗಳನ್ನು ಕಟಾಯಿಸಿ ಸಂಬಂಧಿಸಿದ ಖಾತೆಗೆ ಜಮಾ ಮಾಡಲಾಗುವುದು ಹಾಗೂ ಈ ವಿವರವನ್ನು ಮುಂದಿನ ಲೆಕ್ಕಾಪರಿಶೋಧನಗೆ ಹಾಜರು ಪಡಿಸಲಾಗುವುದೆಂದು ನಿವೇದಿಸಲಾಗಿದೆ.

**122**

**<u>ಹೆಚ್ಚುವರಿ ಭದ್ರತಾ ಠೇವಣಿಯನ್ನು (Additional security deposit) ವಿ.ವಿ ನಿಧಿಗೆ ಜಮಾ ಮಾಡದೆ ಇರುವುದು, EIRL ºÁUÀÆ Work slip ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೆ ಪಾವತಿ ಮಾಡಿರುವುದು, ಇ.ಎಂ.ಬಿ ನಲ್ಲಿ ಕಾರ್ಯಪಾಲಕ ಅಭಿಯಂತರರವರ ಚೆಕ್ ಮೆಸರ್‌ಮೆಂಟ್ ಸಹಿ ಇರುವುದಿಲ್ಲ:– (ಇಂಜಿನಿಯರಿಂಗ್ ವಿಭಾಗ)</u>**

| | |
|---|---|
| ಕಾಮಗಾರಿ | Providing temporary steel/ aluminium trussed roofing with seating chairs and stage arrangements with sound system and allied works at Amphi theatre for the function, 103 Indian science congress, Dated:3-7th January. |
| ಅಂದಾಜು ಮೊತ್ತ | 450 ಲಕ್ಷ |
| ಟೆಂಡರ್‌ಗಿಟ್ಟ ಮೊತ್ತ | 4,47,34,500 |
| ಗುತ್ತಿಗೆ ವಹಿಸಿದ ಮೊತ್ತ | 2,88,44,400 (35.52% ಕಡಿಮೆ ದರ) |
| ಗುತ್ತಿಗೆದಾರರು | |
| ಕಾರ್ಯದೇಶ | TND/Ag No:216/15-16/ 28.12.15 |

**<u>ಮೇಲ್ಕಂಡ ಕಾಮಗಾರಿಯ ದಾಖಲಾತಿಗಳನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನ್ಯತೆಗಳು ಇರುತ್ತದೆ:</u>**

ಸದರಿ ಕಾಮಗಾರಿಯ ಕಾರ್ಯದೇಶ (work order) ನೀಡುವುದಕ್ಕೆ ಮುಂಚಿತವಾಗಿ ಟೆಂಡರ್ ಪ್ರಕ್ರಿಯೆಯಲ್ಲಿ ಸದರಿ ಗುತ್ತಿಗೆದಾರರು ಶೇ.35.52 ಕಡಿಮೆ ದರ ಸೂಚಿಸಿದ್ದು, ಇದರ ಬಾಬ್ತು (Additional security deposit) ರೂ.1,58,90,100/– ಅನ್ನು ಧನಾದೇಶ ಸಂಖ್ಯೆ:000106/16.12.2015 ರಲ್ಲಿ ಧನಾದೇಶವನ್ನು ಇಂಜಿನಿಯರಿಂಗ್ ವಿಭಾಗದಲ್ಲಿ ಪಡೆದು ಕಾರ್ಯದೇಶವನ್ನು ನೀಡಿರುತ್ತಾರೆ. ಸದರಿ ಧನಾದೇಶವನ್ನು ಠೇವಣಿ ವಹಿಗೆ ದಾಖಲಿಸದೆ 6 ನೇ ಅಂತಿಮ ಬಿಲ್ಲು ಬಿ.ಆರ್ ಸಂಖ್ಯೆ:70/16–17/ ದಿ:21.05.16 ರಲ್ಲಿ ಪಾಸಾಗಿದ್ದು (ರೂ.35,31,652) 35.52 ಕಡಿಮೆ ದರ ಸೂಚಿತ ಠೇವಣಿ ರೂ.1,58,90,100 ಹಾಗೂ ಶೇ.5% ಠೇವಣಿ ದಿನಾಂಕ:19.05.2016

ಕಂಡಿಕೆ ಸಂಖ್ಯೆ.122ರಲ್ಲಿ ಸೂಚಿತವಾದ ಕಾಮಗಾರಿಯು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶತಮಾನೋತ್ಸವ ಸಂಧರ್ಭದ ನಿಮಿತ್ತ ನಡೆದ 103ನೇ ಭಾರತೀಯ ವಿಜ್ಞಾನ ಸಮ್ಮೇಳನ ಸಲುವಾಗಿ ವಿಶ್ವವಿದ್ಯಾನಿಲಯದಕ್ಕೆ ಆಗಮಿಸುವ ಗಣ್ಯ ವ್ಯಕ್ತಿಗಳ ಆಶನದ ವ್ಯವಸ್ಥೆ, ವೇದಿಕೆ ನಿರ್ಮಾಣ, ಧ್ವನಿ ವರ್ಧಕ ವ್ಯವಸ್ಥೆ, ಪೆಂಡಲ್ ವ್ಯವಸ್ಥೆಗೆ ಸಂಬಂಧಿಸಿದ್ದಾಗಿರುತ್ತದೆ. ಈ ಅಧಿವೇಶನದ ಅವಧಿಯು ದಿನಾಂಕ:03.01.20156 ರಿಂದ 07.01.2016 ರವರಗೆ 5 ದಿನಗಳ ಕಾರ್ಯಕ್ರಮ ನಡೆದಿದ್ದು ಈ ಕೆಲಸವನ್ನು ನಿರ್ವಹಿಸಲು ಪ್ರತಿಷ್ಠಿತ ಕಂಪನಿಯಾದ M/S ALKR ಈ ಸಿಕಂದರಾಬಾದ್ ಇವರಿಗೆ ವಹಿಸಲಾಗಿದ್ದು ಇವರು ಸದರಿ ಕಾಮಗಾರಿಯನ್ನು ತೃಪ್ತಿಕರವಾಗಿ ನಿರ್ವಹಿಸಿರುತ್ತಾರೆ,

ಈ ಅಂಶವನ್ನು ಪರಿಗಣಿಸಿ ಸದರಿ ಆಕ್ಷೇಪಿತ ಮೊತ್ತ ರೂ.1,58,90,100/–ಗಳ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

| | | |
|---|---|---|
| | ಗುತ್ತಿಗೆದಾರರಿಗೆ ವಾಪಸ್ಸು ನೀಡಿರುತ್ತಾರೆ, ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ, ಕಡಿಮೆ ದರ (35.52%) ದ ಮೊತ್ತ ಠೇವಣಿಯನ್ನು ಗುತ್ತಿಗೆದಾರರು ಧನಾದೇಶ ರೂಪದಲ್ಲಿ ನೀಡಿದ್ದರು, ಸದರಿ ಮೊತ್ತ ರೂ.1,58,90,100/-ಅನ್ನು ವಿ.ವಿ ನಿಧಿಗೆ ಜಮಾ ಮಾಡಿದ್ದಲ್ಲಿ ದಿ:28.12.2015 ರಿಂದ 19.05.2016 ರವರೆಗೆ ರೂ.1,58,90,100 ಕ್ಕೆ ಸರ್ಕಾರಿ ಸಾಮಾನ್ಯ ಬಡ್ಡಿದರ ಶೇ. 8 ರಂತೆ, ರೂ.5,01,517/- ವಿ.ವಿ ನಿಧಿಗೆ ಜಮಾ ಆಗುತಿತ್ತು. ಆದರೆ ಸದರಿ ಚೆಕ್ ಅನ್ನು ಜಮಾ ಮಾಡಿರುವುದಿಲ್ಲವಾದ್ದರಿಂದ ರೂ.5,01,517/- ನಷ್ಟವಾಗಿರುತ್ತದೆ.<br>ಸದರಿ ಕಾಮಗಾರಿಯಲ್ಲಿ ಇ.ಐ.ಆರ್.ಎಲ್ ಹಾಗೂ ವರ್ಕ್ಸ್ ಸ್ಲಿಪ್ ಐಟಂಗಳ ಪಾವತಿ ಆಗಿದ್ದು, ಇ.ಐ.ಆರ್.ಎಲ್-31,08,000 ಹಾಗೂ ವರ್ಕ್‌ಸ್ಲಿಪ್-92,48,082/- ಗುತ್ತಿಗೆದಾರರಿಗೆ ಮೈಸೂರು ವಿ.ವಿ ಆದೇಶ ಸಂಖ್ಯೆ:2/367/2015-16/ 31.03.16 ಈ ಆದೇಶದ ಮೇರೆಗೆ ಗುತ್ತಿಗೆದಾರರಿಗೆ ಪಾವತಿಸಲಾಗಿರುತ್ತದೆ. ಲೋಕೋಪಯೋಗಿ ಇಲಾಖಾ ಸಂಹಿತೆ ಪ್ರಕಾರ ಮುಖ್ಯ ಅಭಿಯಂತರರಿಂದ ಇ.ಐ.ಆರ್.ಎಲ್ ಹಾಗೂ ವರ್ಕ್‌ಸ್ಲಿಪ್ ಐಟಂಗಳಿಗೆ ಅನುಮೋದನೆ ಪಡೆದು ನಂತರ ಗುತ್ತಿಗೆದಾರರಿಗೆ ಪಾವತಿಸಬಹುದಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಕಾರ್ಯಪಾಲಕ ಅಭಿಯಂತರರು ವಿ.ವಿ ಅನುಮತಿ ಪಡೆದು ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ.<br><br>ಸದರಿ ಕಾಮಗಾರಿ, ಇ.ಒ.ಃ ಪರಿಶೀಲಿಸಿದಾಗ ಅಂತಿಮ ಬಿಲ್ಲು ಇದರಲ್ಲಿ ಕಾರ್ಯಪಾಲಕ ಅಭಿಯಂತರರು, ಚೆಕ್ ಮೆಸರ್‌ಮೆಂಟ್ ಸಹಿ ಹಾಕಿರುವುದಿಲ್ಲ. ಹಾಗೂ ಇ.ಒ.ಃ ನಲ್ಲಿ (ಅಂತಿಮ ಬಿಲ್ಲು) ಗುತ್ತಿಗೆದಾರರ ಒಪ್ಪಿಗೆ ಸಹಿ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಮೇಲ್ಕಂಡ ವಿವರದನ್ವಯ, ನ್ಯೂನ್ಯತೆಗಳ ಬಗ್ಗೆ ಸ್ಪಷ್ಟೀಕರಣ ನೀಡುವವರೆವಿಗೆ **ರೂ.1,58,90,100/-ಅನ್ನು ಆಕ್ಷೇಪಣೆಗೆ ಸೂಚಿಸಿದೆ.** | |

123

**ವಿದ್ಯಾರ್ಥಿಗಳ "ಮಾಹಿತಿ ಸಂಗ್ರಹಣೆ" ಬಾಬ್ತು IEM ಸಂಸ್ಥೆಗೆ ಮೊತ್ತಗಳ ಪಾವತಿ/ಮುಂಗಡ ಕಟಾಯಿಸಿಲ್ಲ :– (ಪರೀಕ್ಷಾಂಗ ವಿಭಾಗ)**

2016–17ನೇ ಸಾಲಿನಲ್ಲಿ ವಿದ್ಯಾರ್ಥಿಗಳ "ಮಾಹಿತಿ ಸಂಗ್ರಹಣೆ" ಬಾಬ್ತು IEM ಸಂಸ್ಥೆ ಮಹಾರಾಷ್ಟ್ರ ರವರಿಗೆ ವಿವಿಧ ಚೆಕ್‌ಗಳ ಮೂಲಕ ಹಣ ಪಾವತಿಸಲಾಗಿದೆ.

| ಕ್ರ.ಸಂ | ಬಿ.ಆರ್.ನಂ & ದಿನಾಂಕ | ಧನಾದೇಶ ಸಂಖ್ಯೆ & ದಿನಾಂಕ | ಮೊತ್ತ | ಷರಾ |
|---|---|---|---|---|
| 1 | 58/16–17/22.06.2016 | 524666/24.06.2016 | 9533925<br>224442 | |
| 2 | 198/16–17/27.10.2016 | 525836 | 8996306<br>211786 | |
| 3 | 239/05.01.2017 | 526560/10.01.2017 | 871730<br>(–) 2500000 | ಮುಂಗಡ ಕಳೆದಿರುವುದು |
| | | ಟಿ.ಡಿ.ಎಸ್ | 5371730<br>123549 | |
| | | **ಒಟ್ಟು** | **5495279** | |
| **ಒಟ್ಟು (ಎ) + (ಬಿ) + (ಸಿ)** | | | **24461738** | **2016–17ನೇ ಸಾಲಿನಲ್ಲಿ ಪಾವತಿಸಲಾಗಿದೆ.** |

ಈ ಹಿಂದೆ ನೀಡಲಾಗಿದ್ದ ಮುಂಗಡ ರೂ.50,00,000/–ಗಳಲ್ಲಿ ಕೇವಲ ರೂ.25,00,000/–ಗಳನ್ನು ಖಟಾಯಿಸಿದ್ದು, (ನಿಯಮಬಾಹಿರವಾಗಿ ಮುಂಗಡ ಪಾವತಿಸಲಾಗಿರುವುದರಿಂದ ಒಂದೇ ಬಿಲ್ಲಿನಲ್ಲಿ ಒಟ್ಟಾರೆ ಮೊತ್ತ ಕಟಾಯಿಸಬೇಕಿತ್ತು). ದಿನಾಂಕ:31.03.2017ರವರೆವಿಗೆ ಮುಂಗಡ ಉಳಿಕೆ ರೂ.25,00,000/–ಗಳಿಗೆ ನಿಯಮಾನುಸಾರ ಶೇ 12 ಒಟ್ಟು ಸೇರಿ ಒಟ್ಟಾರೆ ರೂ.28,00,000/–ಗಳಲ್ಲಿ ಈಗಾಗಲೇ ರೂ.15,00,000/–ಗಳನ್ನು ಕಡಿತಗೊಳಿಸಿ ಬಾಕಿ ಉಳಿದಿರುವ ಮೊತ್ತ **ರೂ.13,00,000/–ಗಳನ್ನು**IEM ಸಂಸ್ಥೆಯಿಂದ ವಸೂಲ್ಮಾಡಲು ಸೂಚಿಸಿದೆ. ಹಾಗೂ ಸದರಿ IEM ಸಂಸ್ಥೆಗೆ MOU ನಲ್ಲಿ ವಿಧಿಸಿದ್ದ ಷರತ್ತುಗಳನ್ವಯ ವಿಷಯವಾರು ಪ್ರಶ್ನೆಪತ್ರಿಕೆಗಳಿಗೆ Code – ಆ – Codeರಚನೆ/ ನಿರ್ವಹಣೆ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಿಸಿ (ಮಾಹಿತಿ

ಮೆ॥ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್ ಮೆಂಟ್, ಮುಂಬಯಿ ಇವರೊಂದಿಗೆ ದಿನಾಂಕ15.2.2014ರಂದು ಮಾಡಿಕೊಂಡ ಕರಾರು ಒಪ್ಪಂದದ ಪ್ರಕಾರವಾಗಿ ರೂ.50,00,000/–ಗಳ ಮೊಬಲೈಸೇಷೇನ್ ಮುಂಗಡ ಪಾವತಿ ಮಾಡಲಾಗಿತ್ತು ಸದರೀ ಮುಂಗಡ ಮೊತ್ತವನ್ನು ನಾಲ್ಕು ಹಂತಗಳಲ್ಲಿ ಪಾವತಿ ಮಾಡಬಹುದಾದ ಬಿಲ್ಲುಗಳಲ್ಲಿ ಕಡಿತಗೊಳಿಸಿ ಹೊಂದಾಣಿಕೆ ಮಾಡಿಕೊಳ್ಳ ಬಹುದೆಂದು ಷರತ್ತು ಇರುತ್ತದೆ ಇದಕ್ಕನುಸಾರವಾಗಿ IEM ಸಂಸ್ಥೆಯವರಿಂದ ಮೊದಲನೇ ಹಂತದಲ್ಲಿ ರೂ.25,00,000/–ಗಳನ್ನು ಎರಡನೆ ಹಂತದಲ್ಲಿ ರೂ.15,00,000/– ಮತ್ತು ಮೂರು ಮತ್ತು ನಾಲ್ಕನೇ ಹಂತದಲ್ಲಿ ರೂ.10,00,000/–ಗಳು ಒಟ್ಟು ಮೊತ್ತ ರೂ.50,00,000/–ಗಳನ್ನು ಪೂರ್ಣ ಪ್ರಮಾಣದಲ್ಲಿ ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ ವಿವರ ಈ ಕೆಳಗಿನಂತಿದೆ

| **ಕ್ರ.ಸಂ** | **ಧನಾದೇಶ ಸಂಖ್ಯೆ & ದಿನಾಂಕ** | **ಮೊತ್ತ** | **ಚಲನ್ ಸಂಖ್ಯೆ & ದಿನಾಂಕ** |
|---|---|---|---|
| 1 | 526558/10.1.2017 | 25,00,000 | 72076/13.1.2017 |
| 2 | 5965555/17.5.2018 | 15,00,000 | 8822/17.5.2018 |
| 3 | 597180/21.8.2019 | 10,00,000 | 47112/6.9.2019 |
| | **ಒಟ್ಟು** | **50,00,000** | |

ಹೀಗಾಗಿ ಇವರಿಂದ ವಸೂಲಿಸಬೇಕಾದ ಬಾಕಿ ಮೊತ್ತ ಯಾವುದೂ ಇರುವುದಿಲ್ಲ.

ಕರಾರು ಒಪ್ಪಂದದ ಪ್ರಕಾರವಾಗಿ ಮುಂಗಡ ಮೊತ್ತವನ್ನು ನಾಲ್ಕುಹಂತಗಳಲ್ಲಿ ಪೂರ್ಣಪ್ರಮಾಣದಲ್ಲಿ ಇವರಿಂದ ವಸೂಲಿ ಮಾಡಿಕೊಂಡಿರುವುದರಿಂದ ಮತ್ತು

| | | |
|---|---|---|
| | ದತ್ತಾಂಶವನ್ನು ಶೇಖರಣೆ ಮಾಡುವುದು) ಹಾಗೂ ಇನ್ನಿತರ ಕೆಲಸಗಳನ್ನು IEM ಸಂಸ್ಥೆಗೆ ವಹಿಸಲಾಗಿತ್ತು. ಆದರೆ ಸದರಿ ವಿಭಾಗದಿಂದ ಒಟ್ಟು ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಮಾಹಿತಿ (ವಿಷಯವಾರು/ಕೋರ್ಸ್‌ಗಳವಾರು) ನೀಡದಿರುವುದರಿಂದ ಪೂರ್ಣ ಪಾವತಿ ಮೊತ್ತವನ್ನು ನಿಖರವಾಗಿ ಲೆಕ್ಕಹಾಕಲು ಸಾಧ್ಯವಾಗಿರುವುದಿಲ್ಲ.<br><br>ಆದುದರಿಂದ 2016–17ನೇ ಸಾಲಿನಲ್ಲಿIEM ಸಂಸ್ಥೆಗೆ ಪಾವತಿಸಲಾದ **ಒಟ್ಟು ರೂ.2,44,61,738/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಕರಾರು ಒಪ್ಪಂದದಲ್ಲಿ ಬಡ್ಡಿ ಹಣ ವಸೂಲಿಸಲು ಅವಕಾಶ ಮಾಡಿಕೊಂಡಿರಲಿಲ್ಲವಾದ್ದರಿಂದ ಬಡ್ಡಿ ಹಣ ವಸೂಲಿಸಿರುವುದಿಲ್ಲ.<br><br>ಸಂಸ್ಥೆಯವರು ಆಯಾಯ ಬಿಲ್ಲು ಸಲ್ಲಿಸುವ ಸಂದರ್ಭದಲ್ಲಿ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆಗಳನ್ನು ದಾಖಲಿಸಿ ಸಲ್ಲಿಸಿರುತ್ತಾರೆ ಇದರ ಆಧಾರದ ಮೇಲೆ ಬಿಲ್ಲುಗಳನ್ನು ಪಾವತಿಸಲಾಗಿದೆ.<br><br>ಮೇಲಿನ ಸಂಸ್ಥೆಗೆ ಪಾವತಿಸಲಾದ ಬಿಲ್ಲು ಪ್ರತಿಗಳು ಚಲನ್ ಪ್ರತಿಗಳು ಬ್ಯಾಂಕ್ ಸ್ಟೇಟ್ಮೆಂಟ್ ಪ್ರತಿ ನಗದು ಪುಸ್ತಕದ ಪ್ರತಿ ಹಾಗೂ ಕರಾರು ಒಪ್ಪಂದದ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ.<br><br>ಹಾಗೂ ಇದೇ ವಿಷಯಕ್ಕೆ ಸಂಬಂಧಿದಂತೆ 2015–16ನೇ ಸಾಲಿನ ಲೆಕ್ಕ ತನಿಖಾ ವರದಿಯ ಕಂಡಿಕೆ 61–ರ ಆಕ್ಷೇಪಣೆಯನ್ನು ದಿನಾಂಕ 27.11.2019ರಂದು ನಡೆದ ಅಡ್ ಹಾಕ್ ಸಮಿತಿಸಭೆಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಈಗಾಗಲೇ ತೀರುವಳಿಗೊಳಿಸಿರುವುರಿಂದ, ಪ್ರಸ್ತುತ ಸಾಲಿನ ಈ ಕಂಡಿಕೆಯ ಆಕ್ಷೇಪಣೆ ಮೊತ್ತ ರೂ.2,44,61,730/– ಮತ್ತು ವಸೂಲಾತಿ ಮೊತ್ತ ರೂ.2,44,61,730/– ಮತ್ತು ವಸೂಲಾತಿ ಮೊತ್ತ ರು.13,00,000/–ಗಳನ್ನು ತೀರುವಳಿಗೊಳಿಸಲು ಕೋರಿದೆ. |

**124** **<u>ಒಂದೇ ತೆರನಾದ ಕಾಮಗಾರಿಗಳ ಒಟ್ಟು ಮೊತ್ತದಲ್ಲಿ ಎರಡು ಲಕ್ಷ/ ಐದು ಲಕ್ಷ ಮಿತಿಯೊಳಗೆ ವಿಭಾಗಿಸಿ ಇ–ಟೆಂಡರ್ ಕರೆಯದೆ ನಿಯಮಬಾಹಿರವಾಗಿ ಟೆಂಡರ್ ಕರೆದು ಕ್ರಮ ವಹಿಸಿರುವುದರ ಬಗ್ಗೆ:– (ಇಂಜಿನಿಯರಿಂಗ್ ವಿಭಾಗ)</u>**

ಮೈಸೂರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗದ 2016–17ನೇ ಸಾಲಿನ ಕೈಗೊಂಡ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ದಾಖಲಾತಿಗಳನ್ನು ಪರಿಶೀಲಿಸಲಾಗಿ ಟೆಂಡರ್ ಪ್ರಕಟಣೆ ಬಗ್ಗೆ ಒಂದೆ ತೆರನಾದ (ವಸತಿ ಗೃಹಗಳ ದುರಸ್ಥಿ, ವಿದ್ಯಾರ್ಥಿನಿಲಯಗಳ ದುರಸ್ಥಿ, ಕಟ್ಟಡಗಳ ದುರಸ್ಥಿ) ಕಾಮಗಾರಿಗಳನ್ನು ಒಗ್ಗೂಡಿಸಿ ಕೆ.ಟಿ.ಪಿ.ಪಿ ನಿಯಮದ ಪ್ರಕಾರ ಇ–ಟೆಂಡರ್ ಕರೆದು ಕಾಮಗಾರಿ ನಿರ್ವಹಿಸುವ ಬದಲು ಎರಡು ಲಕ್ಷದ ಮಿತಿಯೊಳಗೆ ಟೆಂಡರ್ ಕರೆದು (ಟಚಿಟಿಣಚಿಟ) ಕೆ.ಟಿ.ಪಿ.ಪಿ ರ ಅನ್ವಯ ಟೆಂಡರ್ ಆಹ್ವಾನ ಪತ್ರಿಕೆಯನ್ನು ಜಿಲ್ಲಾ ಟೆಂಡರ್ ಬುಲೆಟಿನಲ್ಲಿ ಪ್ರಕಟಿಸದೆ ಅಥವಾ ವ್ಯಾಪಕ ಪ್ರಚಾರ ಮಾಡದೆ ಅಥವಾ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸದೆ ಕೇವಲ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಿ ಕ್ರಮವಹಿಸಿರುವುದು ನಿಯಮಬಾಹಿರವಾಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ:ಕಸಂ/ವಾಪ್ರ/69/ವಾಪ್ರಜಾ/2013, ಬೆಂಗಳೂರು ದಿನಾಂಕ:10.09.2014 ರ ಪ್ರಕಾರ ಕ್ರ.ಸಂ–19 ರ ವಿವರದನ್ವಯ ಕಾಮಗಾರಿ 1 ಲಕ್ಷ ರೂಗಳಿಂದ 10 ಲಕ್ಷ ರೂಗಳ ವರೆಗಿನ ಕಾಮಗಾರಿಯ ಜಾಹೀರಾತು ಬಿಡುಗಡೆ ಕಾಮಗಾರಿ ವ್ಯಾಪ್ತಿ ಪ್ರದೇಶದಲ್ಲಿನ ಎರಡು ಜಿಲ್ಲಾ ದಿನ ಪತ್ರಿಕೆಗಳು ಮತ್ತು ಒಂದು ಪ್ರಾದೇಶಿಕ ದಿನ ಪತ್ರಿಕೆಯಲ್ಲಿ ನಿಯಮಾನುಸಾರ ಟೆಂಡರ್ ಪ್ರಕಟಣೆಗೆ ನೀಡಬೇಕಾಗಿರುತ್ತದೆ. ಆದರೆ ಮೇಲ್ಕಂಡ ವಿವರದಂತೆ ಕೇವಲ ನೋಟೀಸ್‌ಬೋರ್ಡ್‌ನಲ್ಲಿ ಪ್ರಕಟಣೆ ನೀಡಿ ಕ್ರಮ ವಹಿಸಿರುವುದು ನಿಯಮಬಾಹಿರವಾಗಿರುತ್ತದೆ. ಕೇವಲ ಸೂಚನಾ ಫಲಕದಲ್ಲಿ ಸೂಚಿಸಿ ಟೆಂಡರ್ ಕರೆದು ಕೆಲವೇ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ನಿಯಮಾನುಸಾರ ಟೆಂಡರ್ ಪ್ರಕಟಣೆ ನೀಡದಿದ್ದ ಪ್ರಸಂಗದಲ್ಲಿ ಕರೆದ ಟೆಂಡರ್‌ಗೆ ಸ್ಪರ್ಧಾತ್ಮಕ ಬೆಲೆ ದೊರೆಯದೆ ವಿ.ವಿ ನಿಧಿಗೆ ನಷ್ಟವುಂಟಾಗಿರುವುದು ಖಚಿತವಾಗಿರುತ್ತದೆ. ಮೇಲ್ಕಂಡಂತೆ ಕರೆದಿರುವ ಟೆಂಡರ್ ಪ್ರಕಟಣೆ ವಿವರ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ ಮತ್ತು ದಿನಾಂಕ | ವಿವರ | ಅಂದಾಜು ಮೊತ್ತ | ಕಾಮಗಾರಿಗಳ ಸಂಖ್ಯೆ | ಷರಾ |
|---|---|---|---|---|---|
| 1 | ಯುಇಡಿ/ಡಿಬಿ–2/65/ 13.04.16 | ವಸತಿ ಗೃಹಗಳ ದುರಸ್ಥಿ, ಕಟ್ಟಡಗಳ ದುರಸ್ಥಿ | 40,09,350 | 21 | |
| 2 | ಯುಇಡಿ/ಡಿಬಿ–2/87/ 22.04.16 | | 37,58,900 | 20 | |
| 3 | ಯುಇಡಿ/ಡಿಬಿ– | | 11,91,750 | 06 | |

2016–17ನೇ ಸಾಲಿನಲ್ಲಿ ನಿರ್ವಹಿಸಿರುವ ಎಲ್ಲಾವಾರ್ಷಿಕ ನಿರ್ವಹಣೆಯ ಕಾಮಗಾರಿಗಳೂ ದುರಸ್ತಿ ಮತ್ತು ಬದಲಾವಣೆ ಹಾಗೂ ಸುಣ್ಣ ಬಣ್ಣ ಹಾಕುವ ಕಾಮಗಾರಿಗಳಾಗಿರುತ್ತದೆ ವಿಶ್ವವಿದ್ಯಾನಿಲಯದಲ್ಲಿ ವಿವಿಧ ರೀತಿಯ ಕಛೇರಿಗಳು ಕಾಲೇಜುಗಳು ಅಧ್ಯಯನ ವಿಭಾಗಗಳು ಹಾಸ್ಟೆಲ್ ಕಟ್ಟಡಗಳು ಅತಿಥಿ ಗೃಹಗಳು ಹಾಗೂ ವಸತಿ ಗೃಹದ ಕಟ್ಟಡಗಳು ಇದ್ದು ಇವುಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿಗಳು ಬೇರೆ ಬೇರೆ ತರಹದವುಗಳಾಗಿರುತ್ತದೆ ಒಂದೇ ತರಹದ ನಿರ್ವಹಣೆ ಮತ್ತು ದುರಸ್ತಿಗಳಾಗಿರುವುದಿಲ್ಲ. ಆಯಾ ಕಟ್ಟಡಗಳಿಗೆ ಅವಶ್ಯಕವಿರುವ ಸಿ ವಿ ಲ್ ಮತ್ತು ವಿದ್ಯುಚ್ಛಕ್ತಿ ದುರಸ್ತಿಗಳು ಪೀಠೋಪಕರಣ ದುರಸ್ತಿ ಮತ್ತು ಬದಲಾವಣೆಗಳು ಒಂದು ಕಟ್ಟಡದಿಂದ ಮತ್ತೊಂದಕ್ಕೆ ವ್ಯತ್ಯಾಸವಿರುತ್ತದೆ ಹಾಗಾಗಿ ಆಯಾ ಕಟ್ಟಡಗಳ ದುರಸ್ತಿ ನಿರ್ವಹಣೆಗಳ ಅಗತ್ಯತೆಗನುಸಾರವಾಗಿ ಅಂದಾಜುಗಳನ್ನು ತಯಾರಿಸಿ ಮಂಜೂರಾತಿ ಪಡೆದು ಟೆಂಡರ್ ನಿಯಮಗಳನ್ನು ಪಾಲಿಸುವುದರೊಂದಿಗೆ ಕಾಮಗಾರಿಗಳನ್ನು ನಿರ್ವಹಿಸಿ ವೆಚ್ಚಗಳನ್ನು ಭರಿಸಲಾಗಿದೆ ಈ ಕಾರಣದಿಂದಾಗಿ ಇವೆಲ್ಲವನ್ನು ಒಟ್ಟಿಗೆ ಸೇರಿಸಿ ಇ ಟೆಂಡರ್ ಕರೆದು ನಿರ್ವಹಿಸಲು ಸಾಧ್ಯವಾಗಿರುವುದಿಲ್ಲ ಎಂಬುದಾಗಿ ನಿವೇಧಿಸುತ್ತಾ **ರೂ.8,59,24,150/–ಗಳ ಆಕ್ಷೇಪಣೆಯನ್ನು** ತೀರುವಳಿಗೊಳಿಸಲು ಕೋರಿದೆ.

| | | | | | |
|---|---|---|---|---|---|
| | 2/528/ 16.06.16 | | | | |
| 4 | ಯುಇಡಿ/ಡಿಬಿ–2/671/ 06.07.16 | | 89,48,000 | 25+22=47 | |
| 5 | ಯುಇಡಿ/ಡಿಬಿ–2/912/ 01.08.16 | ವಸತಿ ಗೃಹಗಳ ದುರಸ್ಥಿ, ಕಟ್ಟಡಗಳ ದುರಸ್ಥಿ ಮತ್ತು ವಿದ್ಯಾರ್ಥಿನಿಲಯಗಳ ದುರಸ್ಥಿ | 50,65,300 | 28 | |
| 6 | ಯುಇಡಿ/ಡಿಬಿ–2/1094/ 24.08.16 | ವಸತಿ ಗೃಹಗಳ ದುರಸ್ಥಿ | 52,78,600 | 28 | |
| 7 | ಯುಇಡಿ/ಡಿಬಿ–2/1300/ 19.09.16 | ವಸತಿ ಗೃಹಗಳ ದುರಸ್ಥಿ, ವಿದ್ಯಾರ್ಥಿನಿಲಯಗಳ ದುರಸ್ಥಿ ಮತ್ತು ಕಟ್ಟಡಗಳ ದುರಸ್ಥಿ | 42,09,350 | 23 | |
| 8 | ಯುಇಡಿ/ಡಿಬಿ–2/1369/ 24.09.16 | ವಸತಿ ಗೃಹ, ವಿದ್ಯಾರ್ಥಿನಿಲಯ, ಕಟ್ಟಡಗಳ ದುರಸ್ಥಿ | 80,99,100 | 44 | |
| 9 | ಯುಇಡಿ/ಡಿಬಿ–2/1808/ 09.11.16 | ವಸತಿ ಗೃಹ, ಕಟ್ಟಡಗಳ ದುರಸ್ಥಿ | 46,62,800 | 26 | |
| 10 | ಯುಇಡಿ/ಡಿಬಿ–2/2086/ 15.12.16 | ವಸತಿ ಗೃಹ, ಕಟ್ಟಡಗಳ ದುರಸ್ಥಿ | 64,67,300 | 34 | |
| 11 | ಯುಇಡಿ/ಡಿಬಿ–2/2355/ 18.01.17 | ವಸತಿ ಗೃಹ, ಕಟ್ಟಡಗಳ ದುರಸ್ಥಿ | 65,45,850 | 34 | |
| 12 | ಯುಇಡಿ/ಡಿಬಿ–2/2725/ 10.02.17 | ವಸತಿ ಗೃಹ, ಕಟ್ಟಡಗಳ ದುರಸ್ಥಿ | 38,52,700 | 22 | |
| 13 | ಜಿ.ಎಲ್–7/166/2015/15.03.16 | ವಸತಿ ಗೃಹ, ಹಾಸ್ಟೆಲ್ ದುರಸ್ಥಿ | 48,50,700 | 24 | |
| ವಿದ್ಯುತ್ ಕಾಮಗಾರಿಗಳು | | | | | |
| 1 | ಜಿ.ಎಲ್–7/211/2016–17/22.06.16 | ವಿದ್ಯುತ್ ಕಾಮಗಾರಿ | 16,40,400 | 9 | |
| 2 | ಜಿ.ಎಲ್–7/230/2016–17/ 29.06.16 | ವಿದ್ಯುತ್ ಕಾಮಗಾರಿ | 11,12,500 | 7 | |
| 3 | ಜಿ.ಎಲ್–7/280/2015–16/11.03.16 | ವಿದ್ಯುತ್ ಕಾಮಗಾರಿ | 15,42,800 | 9 | |
| 4 | ಯುಇಡಿ/ಡಿಬಿ–1/2015–16/ 02.11.15 | ವಿದ್ಯುತ್ ಕಾಮಗಾರಿ | 57,55,600 | 15 | 5 ಲಕ್ಷಗಳ ಒಳಗೆ ಮಿತಿಯೊಳಗೆ ಕಛೇರಿ ಸೂಚನಾ ಫಲಕ ಮತ್ತು ಹೆಚ್ಚು ಪ್ರಚಾರವಿಲ್ಲದ ದಿನ ಪತ್ರಿಕೆ. |
| | | | | | |
| 1 | ಯುಇಡಿ/ಡಿಬಿ–1/775/20.07.16 | ಕಾಮಗಾರಿ | 28,27,650 | 6 | 5 ಲಕ್ಷ ಮಿತಿಯೊಳಗೆ ಇ–ಟೆಂಡರ್ ಕರೆಯುವುದನ್ನು ತಪ್ಪಿಸಿ 6 ಕಾಮಗಾರಿಗಳಾಗಿ ವಿಭಾಗಿಸಿ ಟೆಂಡರ್ ಪ್ರಕ್ರಿಯೆ |

| | | | | | |
|---|---|---|---|---|---|
| | | | | | ಕೈಗೊಂಡಿರುವುದು. |
| 2 | ಯುಇಡಿ/ಡಿಬಿ–1/530–31/ 16.06.16 | ಕಾಮಗಾರಿ | 28,76,000 | 7 | 5 ಲಕ್ಷ ಮಿತಿಯೊಳಗೆ 7 ಕಾಮಗಾರಿಗಳಾಗಿ ವಿಭಾಗಿಸಿ ಟೆಂಡರ್ ಪ್ರಕ್ರಿಯೆಕೈಗೊಂಡಿರುವುದು. |
| 3 | ಯುಇಡಿ/ಡಿಬಿ–1/2230/03.02.16 | ಕಾಮಗಾರಿ | 14,39,000 (4,70,000 4,99,000 4,70,000) | 3 | 5 ಲಕ್ಷ ಮಿತಿಯೊಳಗೆ 3 ಕಾಮಗಾರಿಗಳಾಗಿ ವಿಭಾಗಿಸಿ ಇ–ಟೆಂಡರ್ ಕರೆಯುವುದರಿಂದ ತಪ್ಪಿಸಿ ಟೆಂಡರ್ ಕ್ರಮ ಕೈಗೊಂಡಿರುವುದು. |
| 4 | ಯುಇಡಿ/ಡಿಬಿ–1/ಐಎಫ್‌ಟಿ/30/ 2015–16/ 24.03.16 | ಕಾಮಗಾರಿ | 17,90,500 | 4 | 5 ಲಕ್ಷ ಮಿತಿಯೊಳಗೆ 4 ಕಾಮಗಾರಿಗಳಾಗಿ ವಿಭಾಗಿಸಿ ಇ–ಟೆಂಡರ್ ಕರೆಯದೆ ಹೆಚ್ಚು ವ್ಯಾಪಕ ಪ್ರಚಾರವಿಲ್ಲದ ಸ್ಥಳೀಯ ದಿನ ಪತ್ರಿಕೆ, ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಿ ಟೆಂಡರ್ ಕ್ರಮ ವಹಿಸಿರುವುದು ನಿಯಮಬಾಹಿರ. |

ವಿವರಗಳನ್ನು ಒದಗಿಸುವವರೆಗೆ **ರೂ.8,59,24,150/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| | | |
|---|---|---|
| 125 | **<u>ಸಣ್ಣ ಕಾಮಗಾರಿಗಳ ಆಧಾರದ ಮೇಲೆ ಪಾವತಿಸಿರುವ ಕಾಮಗಾರಿ ಬಿಲ್ಲುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಯಾಕೇಜ್ ಸಿಸ್ಟಂನಲ್ಲಿ ಟೆಂಡರ್ ಕರೆಯದೇ ಬಿಡಿ ಬಿಡಿ ಬಿಲ್ಲುಗಳಲ್ಲಿ ಪಾವತಿಸಿರುವುದು:– (ಇಂಜಿನಿಯರಿಂಗ್ ವಿಭಾಗ)</u>**<br>2016–17ನೇ ಸಾಲಿನ ಹಣಕಾಸು ವಿಭಾಗದ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ವಾರ್ಷಿಕ ಲೆಕ್ಕಪತ್ರದಂತೆ (ಲೆಕ್ಕಶೀರ್ಷಿಕೆ:01–05–136) ಆದರೆ ಟೆಂಡರ್ ನೋಟಿಫಿಕೇಷನ್‌ನಲ್ಲಿ ರೂ.3,22,44,856/–ಗಳಾಗಿದ್ದು, ಇದರ ಬಗ್ಗೆ ಇಂಜಿನಿಯರಿಂಗ್ ವಿಭಾಗದ ದಾಖಲಾತಿ ಪತ್ರಗಳನ್ನು ಪರಿಶೀಲಿಸಲಾಗಿ ಈ ಭಾಗದಲ್ಲಿ ರೂ.2,86,75,785/–ಗಳಿಗೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಬಾಕಿ ಮೊತ್ತ ರೂ.35,69,071/–ಕ್ಕೆ (ವಾ.ಲೆ ಮತ್ತು ಟೆಂಡರ್ ನೋಟಿಫಿಕೇಷನ್) ಸಣ್ಣ ಕಾಮಗಾರಿ ಬಿಲ್ಲುಗಳಿಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಕಟ್ಟಡಗಳ ವಾರ್ಷಿಕ ನಿರ್ವಹಣೆ ಹಾಗೂ ದುರಸ್ಥಿಗಾಗಿ ಬಿಡಿ ಬಿಡಿ ಬಿಲ್ಲುಗಳಲ್ಲಿ ಸಣ್ಣ ಕಾಮಗಾರಿಗಳ ಗುತ್ತಿಗೆದಾರರಿಗೆ ಪಾವತಿಸಲಾಗಿದೆ. ದಾಖಲೆಗಳನ್ನು ಹಾಜರುಪಡಿಸುವವರೆಗೂ ಈ ಸಂಬಂಧದ ವ್ಯತ್ಯಾಸದ ಮೊತ್ತ **ರೂ.35,69,071/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಮುಂದುವರೆದು ವಾರ್ಷಿಕ ಲೆಕ್ಕಪತ್ರದಲ್ಲಿ ರೂ.3,18,44,856/–ಗಳನ್ನು ಮಾತ್ರ ನಮೂದಿಸಿರುತ್ತಾರೆ. ವಾರ್ಷಿಕ ಲೆಕ್ಕಪತ್ರದಲ್ಲಿನ ವ್ಯತ್ಯಾಸವನ್ನು ಕ್ರಮಬದ್ಧಗೊಳಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ. ವಿವರ **<u>ಅನುಬಂಧ–37ರಲ್ಲಿ</u>** ವಿವರಿಸಲಾಗಿದೆ. | ಮೈಸೂರು ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ಸಣ್ಣ ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಿರುವ ಸಂಬಂಧ ಅವಶ್ಯಕತೆಯಿದ್ದುದರಿಂದ ಕಛೇರಿ/ವಿಭಾಗದ ಮುಖ್ಯಸ್ಥರ ಬೇಡಿಕೆ ಮೇರೆಗೆ ಅವಶ್ಯಕತೆಯಿರುವ ಕಾಮಗಾರಿಗಳಿಗೆ ಸ್ಥಳೀಯ ದಿನ ಪ್ರತಿಕೆಗಳಲ್ಲಿ ಪ್ರಕಟಣೆ ನೀಡಿ ರೂ.1,00,000/–ದಿಂದ ರೂ.2,00,000/–ಗಳ ಕಾಮಗಾರಿಗಳನ್ನು ಕಛೇರಿಯ ಸೂಚನಾ ಫಲಕಗಳಲ್ಲಿ ಪ್ರಕಟಿಸಿ ಅರ್ಹ ಗುತ್ತಿಗೆದಾರರಿಂದ ಟೆಂಡರು ಪಡೆದು ನಿಯಮಾನುಸಾರ ಕಾಮಗಾರಿಗಳನ್ನು ನಿರ್ವಹಿಲಾಗಿದೆ ಇಂತಹ ಕಾಮಗಾರಿಗಳಿಗೆ ಕುಲಪತಿಗಳ, ಹಾಗೂ ಕುಲ ಸಚಿವರುಗಳು ಪೂರ್ವಾನುಮತಿ ಹಾಗೂ ಆದೇಶಗಳನ್ನು ಪಡೆಯಲಾಗಿದೆ. ಸದರೀ ಕಾಮಗಾರಿಗಳು ನಿಗಧಿತ ಅವಧಿಯೊಳಗೆ ತೃಪ್ತಿಕರವಾಗಿ ಪೂರೈಸಲಾಗಿದೆಯೆಂದು ವರದಿಸುತ್ತ ಆಕ್ಷೇಪಣೆ ಮೊತ್ತ ರೂ.35,69,071/–ಗಳನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

| | | |
|---|---|---|
| **126** | **<u>ಪರೀಕ್ಷಾ ಖಾತೆಯ ಸಂಖ್ಯೆ:54007591200 ರಲ್ಲಿ ವಹಿವಾಟು ಸಂಖ್ಯೆ:122 ಹಾಗೂ 155 ರಲ್ಲಿ ವಾರ್ಷಿಕ ಲೆಕ್ಕಪತ್ರದಂತೆ ಮಾಡಿರುವ ವೆಚ್ಚಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಹಾಜರುಪಡಿಸದೆ ಇರುವುದು:– (ಇಂಜಿನಿಯರಿಂಗ್ ವಿಭಾಗ)</u>**<br><br>2016–17ನೇ ವರ್ಷದ ಪರೀಕ್ಷೆ ವಿಭಾಗದ ಬ್ಯಾಂಕ್ ಖಾತೆಯ ಸಂಖ್ಯೆ:54007591200 ರಲ್ಲಿ ವಾರ್ಷಿಕ ಲೆಕ್ಕಪತ್ರದಂತೆ ಹಾಗೂ ಥಿಂಟಣಡಿಣಾಥಿಣುಂಟ ಠಜಿ ಥಣುಟಜುಟಿಂ ಕಾಮಗಾರಿ ಬಿಲ್ಲು ಪಾವತಿಗೆ ಸಂಬಂಧಿಸಿದಂತೆ ಕಾಮಗಾರಿ ಬಿಲ್ಲು ಟೆಂಡರ್ ಕಡತ, ಆಡಳಿತಾತ್ಮಕ ಮಂಜೂರಾತಿ ಇತ್ಯಾದಿ ಲೆಕ್ಕಪತ್ರಗಳನ್ನು ಪರಿಶೀಲನೆಗೆ ಹಾಜರುಪಡಿಸಬೇಕೆಂದು ವಿಚಾರಣೆ ಸಂಖ್ಯೆ:205/2018–19 ದಿ:23.08.2018 ವಿಚಾರಣೆ ನೀಡಲಾಗಿರುವುದಕ್ಕೆ ರೂ. **7,78,33,287/– ಗಳಲ್ಲಿ (ವಾರ್ಷಿಕ ಲೆಕ್ಕಪತ್ರದಂತೆ) ರೂ.7,52,47,921/–ಗಳಿಗೆ ದಾಖಲೆಗಳನ್ನು ಹಾಜರುಪಡಿಸಿದ್ದು, ಪರಿಶೀಲಿಸಲಾಗಿರುತ್ತದೆ. ಆದರೆ ರೂ.25,85,366/–ಕ್ಕೆ ಓಚರ್‌ಗಳನ್ನು ಹಾಜರುಪಡಿಸದೆ ಇರುವುದರಿಂದ ರೂ.25,85,366/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಕಂಡಿಕೆ 126 ಕ್ಕೆ ಸಂಬಂಧಿಸಿದಂತೆ ಲೆಕ್ಕ ತನಿಖೆಯಲ್ಲಿ ಗಮನಿಸಿರುವಂತೆ ರೂ.25,85,366/– ಮೊತ್ತದ ಬದಲು ಕಾರಣಾಂತರಗಳಿಂದ 2016–17ನೇ ಸಾಲಿನಲ್ಲಿ ಪಾವತಿಯಾಗಿರುವುದಿಲ್ಲ ಇನ್ನಿತರೆ ಕಾರಣಗಳಿಂದ ಈ ಪ್ರಸ್ತಾಪವು 2016–17ನೇ ಸಾಲಿನ ವಹಿವಾಟಿಗೆ ಅನ್ವಯವಾಗುವುದಿಲ್ಲ ಹಾಗೂ ಸದರೀ ಬಿಲ್ಲುಗಳ ಮೊತ್ತದ ವೆಚ್ಚವು ಮುಂದಿನ ಅಂದರೆ 2017–18 ನೇ ಸಾಲಿನ ಖರ್ಚಿಗೆ ಅನ್ವಯವಾಗುತ್ತಿಗಿಲಿದ್ದು 2016–17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಪೆಸ್ತ್ರಾಪಿಸಿ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.25,85,366/– ಗಳನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

| | | |
|---|---|---|
| 127 | **<u>ನಿಗದಿತ ಕಾಲಾವಧಿ ಪೂರ್ಣಗೊಂಡ ನಂತರದಲ್ಲಿ ಸಾಧಿಸಿರುವ ಪ್ರಗತಿಗೆ ದಂಡ ಪ್ರಸ್ತಾಪನೆಯ ಬಗ್ಗೆ :– (ಇಂಜಿನಿಯರಿಂಗ್ ವಿಭಾಗ)</u>**<br>ಗುತ್ತಿಗೆ ಸಂಸ್ಥೆಯವರು ಪ್ಯಾಕೇಜ್–1 ರಲ್ಲಿನ ಎಲ್ಲಾ ಕೆಲಸವನ್ನು ದಿನಾಂಕ:16.03.2016ರ ಅಂತ್ಯಕ್ಕೆ ಪೂರ್ಣಗೊಳಿಸಿ ನೂತನ ಕಟ್ಟಡಗಳನ್ನು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಡುವಲ್ಲಿ ವಿಫಲವಾಗಿರುತ್ತದೆ. ನಿಗದಿತ ಕಾಲಾವಧಿ ಪೂರ್ಣಗೊಂಡ ನಂತರದಲ್ಲಿ ರೂ.7,99,41,984/–ಗಳ ಪ್ರಗತಿಯನ್ನು ಸಾಧಿಸಿರುತ್ತಾರೆ. ಟೆಂಡರ್ಏಫ–4ರ ನಿಯಮದಡಿ Condition of Contract A General Clause (41) ರ ಪ್ರಕಾರ ಹಾಗೂ Pwa 65ರಲ್ಲಿನ Clause2 (d) ಪ್ರಕಾರ ವಿಳಂಬದ ಕಾಲಾವಧಿಯಲ್ಲಿ ಸಾಧಿಸಿರುವ ಪ್ರಗತಿಗೆ ದಂಡವನ್ನು ವಿಧಿಸಬೇಕಾಗಿರುತ್ತದೆ. ಕಡತದಲ್ಲಿ ಗುತ್ತಿಗೆ ಸಂಸ್ಥೆಯವರಿಂದ ಕಾಲಾವಧಿಯ ವಿಸ್ತರಣೆಯ ಬಗ್ಗೆ ಯಾವುದೇ ಪತ್ರ ವ್ಯವಹರಿಸಿರುವ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಇಲಾಖೆಯಿಂದ ನಿಶ್ಚಿತ ಕಾಲಾವಧಿಯಲ್ಲಿ ಕೆಲಸವನ್ನು ಪೂರ್ಣಗೊಳಿಸುವಲ್ಲಿ ಗುತ್ತಿಗೆ ಸಂಸ್ಥೆಯವರಿಗೆ ಅಡಚಣೆ ಮಾಡಿರುವ ಬಗ್ಗೆ ಯಾವುದೇ ಮಾಹಿತಿಗಳು ಕಡತದಲ್ಲಿ ಲಭ್ಯವಿರುವುದಿಲ್ಲ. ದಿನಾಂಕ:17.03.2016 ರಿಂದ 31.03.2017ರ ತೆಗೆದುಕೊಂಡಿರುವ 380 ದಿನಗಳಿಗೆ ದಿನ ಒಂದಕ್ಕೆ ರೂ.2,103.74 ಗಳಂತೆ ರೂ.7,99,421/– ಗಳನ್ನು ವಸೂಲಿಸಲು ಕ್ರಮವಹಿಸಬೇಕಾಗಿರುತ್ತದೆ. ಸದರಿ ವಿಷಯವಾಗಿ ಲೆಕ್ಕತನಿಖಾ ವಿಚಾರಣೆ ಸಂಖ್ಯೆ:69/2018–19 ದಿನಾಂಕ:28.11.2018ರಲ್ಲಿ ವಿವರಣೆಯನ್ನು ಕೇಳಲಾಗಿರುವುದಕ್ಕೆ ಕೈಗೊಂಡ ಕ್ರಮದ ಯಾವುದೇ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ನಿಗದಿತ ಕಾಲಾವಧಿ ಪೂರ್ಣಗೊಂಡ ನಂತರದ ಪ್ರಗತಿಗೆ ದಂಡವೆಂದು **ರೂ.7,99,421/–ಗಳನ್ನು** ಗುತ್ತಿಗೆ ಸಂಸ್ಥೆಯವರಿಂದ **ವಸೂಲಿಸಲು ಸೂಚಿಸಿದೆ.** | ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಾಮಗಾರಿಗಳನ್ನು 2016–17ನೇ ಸಾಲಿನಲ್ಲಿ ಪ್ಯಾಕೇಜ್–1 ರಡಿಯಲ್ಲಿ ಕೈಗೊಂಡ ಕಾಮಗಾರಿಗಳನ್ನು ಟೆಂಡರ್ ನಿಯಮಗಳ ಪ್ರಕಾರ ದಿನಾಂಕ:16.03.2016ರ ರೊಳಗೆ ಪೂರ್ಣಗೊಳಿಸಬೇಕಾಗಿತ್ತು. ಆದರೆ ಕಛೇರಿಯು ಕೆಲವು ಅಡಚಣೆಗಳಿಂದ ಗುತ್ತಿಗೆದಾರರಿಗೆ ಸ್ಥಳ ಹಸ್ತಾಂತರ ಆದೇಶ ನೀಡುವುದು ವಿಶ್ವವಿದ್ಯಾನಿಲಯದ ಕಡೆಯಿಂದ ವಿಳಂಬವಾಗಿರುವ ಕಾರಣ ಕಾಮಗಾರಿ ಕೆಲಸವನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ, ವಿಶ್ವವಿದ್ಯಾನಿಲಯದ ಅಧಿಕಾರಿಗಳು ಸ್ಥಳ ಹಸ್ತಾಂತರ ಆದೇಶ ನೀಡಿದ ನಂತರದಲ್ಲಿ ತ್ವರಿತಗತಿಯಲ್ಲಿ ಪ್ರಗತಿಯನ್ನು ಸಾಧಿಸಿ ದಿನಾಂಕ:31.03.2017ರಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾರೆ.<br>ಟೆಂಡರ್ ಷರತ್ತ ಮತ್ತು ನಿಬಂದನೆಗಳಂತೆ ಗುತ್ತಿಗೆದಾರರು ಸಮರ್ಪಕವಾಗಿ ನಿರ್ವಹಿಸಿರುವದರಿಂದ ಹಾಗೂ ಕಾಮಗಾರಿ ವಿಳಂಬಕ್ಕೆ ಗುತ್ತಿಗೆದಾರರು ನೇರವಾಗಿ ಹೊಣೆಗಾರರಾಗಿರದ ಕಾರಣ ವಸೂಲಾತಿಗೆ ಪ್ರಸತಾಪಿಸಿರುವ ಮೊತ್ತ ರೂ.7,99,421/–ಗಳನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

| | | |
|---|---|---|
| 128 | **<u>ಮೌಲ್ಯಭವನ ಕಟ್ಟಡ ನಿರ್ಮಾಣದಲ್ಲಿ ಹೊರತೆಗೆದ ಮಣ್ಣನ್ನು ವಿಲೇವಾರಿ ಮಾಡಿ ವಿಶ್ವವಿದ್ಯಾನಿಲಯಕ್ಕೆ ನಷ್ಟವುಂಟುಮಾಡಿರುವುದು :– (ಇಂಜಿನಿಯರಿಂಗ್ ವಿಭಾಗ)</u>**<br>ಮೈಸೂರು ವಿಶ್ವವಿದ್ಯಾನಿಲಯದ ಮೌಲ್ಯಭವನ ಕಟ್ಟಡ ನಿರ್ಮಾಣದ ಕೆಲಸದಲ್ಲಿ ಕರಾರಿನ ಐಟಂ ನಂ. (5) (KSRB 2-1.2) ರಲ್ಲಿ 3698.81 ಘ.ಮೀ ಮಣ್ಣು ಕರಾರಿನ ಐಟಂ ನಂ (8) (KSRB 2-2.4) ರಲ್ಲಿ 4868.18 ಘ.ಮೀ ಮಣ್ಣು ಕರಾರಿನ ಐಟಂ ನಂ.(12) (KSRB 2-2.4) ರಲ್ಲಿ 8597.46 ಘ.ಮೀ ನಂತೆ ಒಟ್ಟಾರೆ 17,164.65 ಘ.ಮೀ ಮಣ್ಣು ಅಗೆಯುವ ಕಾರ್ಯಕ್ಕೆ ಹಣ ಪಾವತಿಯನ್ನು ಮಾಡಲಾಗಿದೆ.<br>ಟೆಂಡರ್ ಕರಾರಿನ ಐಟಂ ನಂ (36) ರ ರೀತ್ಯಾ ಅಗೆದು ಹೊರ ತೆಗೆದ ಮಣ್ಣಿನಲ್ಲಿ 15,570.53 ಘ.ಮೀ ನಷ್ಟು 10.00 ಕಿ.ಮೀ ಗಿಂತಲೂ ದೂರ ಸಾಗಿಸಲು ಘ.ಮೀ.ಗೆ ರೂ.150/–ಗಳ ದರದಂತೆ ರೂ.23,25,580/–ಗಳನ್ನು ಪಾವತಿಸಲಾಗಿದೆ.<br>ಸಾಗಿಸಲಾಗಿರುವ ಮಣ್ಣು 15570.53 ಘ.ಮೀನ್ನು ಶೇಖರಿಸಿಕೊಂಡು ವಿಶ್ವವಿದ್ಯಾನಿಲಯದ ಅವಶ್ಯಕ ಕೆಲಸಕ್ಕೆ ಬಳಸಿಕೊಳ್ಳುವ ಕಾರ್ಯವನ್ನು ಕೈಗೊಂಡಿರುವುದಿಲ್ಲ. ಅಥವಾ ಹರಾಜಿನ ಮೂಲಕ ವಿಲೇವಾರಿ ಮಾಡಲು ಕ್ರಮವನ್ನು ಕೈಗೊಂಡಿರುವುದಿಲ್ಲ. 2013–14ನೇ ಸಾಲಿನ PWD SR RATE SL, NO.58 CODE NO.0752 GRAVAL Sqmtr.ಗೆ ರೂ. 120.00 ನಿಗದಿಯಾಗಿದ್ದು, ವಿಲೇವಾರಿ ಮಾಡಿರುವ ಮಣ್ಣಿನ ಬಾಬ್ತಿನಿಂದ ರೂ.18,68,464/–ಗಳು ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗಿರುತ್ತದೆ. ಮಣ್ಣು ಸಾಗಿಸಲು ರೂ.23,35,580/–ಗಳನ್ನು ಗುತ್ತಿಗೆ ಸಂಸ್ಥೆಯವರಿಗೆ ಪಾವತಿಸಿದ್ದು, ಒಟ್ಟಾರೆಯಾಗಿ ರೂ.42,00,044/–ಗಳು ವಿಶ್ವವಿದ್ಯಾನಿಲಯಕ್ಕೆ ಹೊರೆಯಾಗಿರುತ್ತದೆ. ಈ ಸಂಬಂಧವಾಗಿ ಲೆಕ್ಕಪರಿಶೋಧನಾ ವಿಚಾರಣೆ ಸಂಖ್ಯೆ:70/2018–19 ದಿನಾಂಕ:28.11.2018ರಲ್ಲಿ ಸಮಂಜಸ ವಿವರಣೆ ಸಲ್ಲಿಸುವಂತೆ ಸೂಚಿಸಲಾಗಿದ್ದರೂ ಯಾವುದೇ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಮಣ್ಣಿನ ಮೂಲ ದರ ಮತ್ತು ಸಾಗಣೆ ಬಾಬ್ತು **ರೂ.42,00,044/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಸದರಿ ಆಕ್ಷೇಪಣೆಯಲ್ಲಿ ತಾವು 5570.53 ಘ.ಮೀ ಮಣ್ಣನ್ನು ವಿಶ್ವವಿದ್ಯಾನಿಲಯದ ಅವಶ್ಯಕ ಕೆಲಸಕ್ಕೆ ಬಳಸಿಕೊಂಡಿರುವುದಿಲ್ಲ ಎಂದು ಆಕ್ಷೇಪಿಸಿರುತ್ತಿರಿ. ಆದರೆ ಮೌಲ್ಯ ಭವನ ಕಟ್ಟಡದ ನಿರ್ಮಾಣದಲ್ಲಿ ನೆಲಮಾಳಿಗೆ ಮಾಡಬೇಕಾಗಿದ್ದುದರಿಂದ, ಮಣ್ಣಿನ ಅವಶ್ಯಕತೆ ಇರುವುದಿಲ್ಲವಾದ್ದರಿಂದ ಹಾಗೂ ಮಣ್ಣನ್ನು ಹರಾಜು ಪ್ರಕ್ರಿಯೆ ಕೈಗೊಂಡು ಮಾರಾಟ ಮಾಡಲು ತುಂಬಾ ಕಾಲಾವಧಿಯಾಗುತ್ತಿದ್ದುದರಿಂದ ಕಾಮಗಾರಿ ಪ್ರಾರಂಭಿಸುವಲ್ಲಿ ವಿಳಂಬವಾಗುವ ಕಾರಣದಿಂದ, ಸದರಿ ಅಗೆದು ಹೊರ ತೆಗೆದು ಮಣ್ಣನ್ನು ಖರೀದಿಸಲು ಹಾಗೂ ಉಚಿತವಾಗಿಯೂ ತೆಗೆದುಕೊಂಡು ಹೋಗಲು ಯಾರೂ ಆಸಕ್ತಿ ತೋರಿರುವುದಿಲ್ಲ ಆದ್ದರಿಂದ ಈ ಮಣ್ಣನ್ನು ವಿಶ್ವವಿದ್ಯಾನಿಲಯದ ಆವರಣದಿಂದ ದೂರಕ್ಕೆ ಸಾಗಾಟ ಮಾಡಬೇಕಾಗಿದ್ದರಿಂದ ಸದರಿ ಗುತ್ತಿಗೆ ಸಂಸ್ಥೆಯವರಿಗೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರತ್ತಾ, ಸದರಿ ಕಂಡಿಕೆಯಲ್ಲಿ ಆಕ್ಷೇಪಣೆಗೆ ಸೂಚಿಸಲಾಗಿರುವ ಮೊತ್ತ ರೂ.42,00,044/–ಗಳನ್ನು ಕೈ ಬಿಡಲು ಈ ಮೂಲಕ ಕೋರಲಾಗಿದೆ. |

129 **<u>ಮೌಲ್ಯ ಭವನ ಕಟ್ಟಡದ ಕೆಲಸಕ್ಕೆ ಅಳವಡಿಸಿರುವ ಮರದ ಗಣಮಟ್ಟದ ಪ್ರಮಾಣ ಪತ್ರವನ್ನು ಹಾಜರುಪಡಿಸದಿರುವುದು :– (ಇಂಜಿನಿಯರಿಂಗ್ ವಿಭಾಗ)</u>**

ಮೌಲ್ಯ ಭವನ ಕಟ್ಟಡ ನಿರ್ಮಾಣ ಕೆಲಸದಲ್ಲಿ ಮರದ ಕೆಲಸಕ್ಕೆ ಹಾಗೂ ಪಿಠೋಪಕರಣಗಳನ್ನು ಸಿದ್ದಪಡಿಸಿ ಅಳವಡಿಸುವ ಕೆಲಸದಲ್ಲಿ ಮೂಲ ಅಂದಾಜು ಪಟ್ಟಿಯ ಪ್ರಕಾರ ರೂ.4,02,23,734/–ಗಳಿಗೆ ಅವಕಾಶವನ್ನು ಕಲ್ಪಿಸಿಕೊಳ್ಳಲಾಗಿದೆ. ಮರದ ಕೆಲಸಗಳು ಮತ್ತು ಪಿಠೋಪಕರಣಗಳನ್ನು ಸರಬರಾಜಿಗಾಗಿ ಗುತ್ತಿಗೆ ಸಂಸ್ಥೆಗೆ ಪ್ರಗತಿಯ ಭಾಗಶಃ ಬಿಲ್ಲಿನಲ್ಲಿ ಒಟ್ಟು ರೂ.4,24,39,779/–ಗಳನ್ನು ಪಾವತಿಸಲಾಗಿದೆ. ಇಲಾಖಾ ಕೆಲಸಕ್ಕೆ ಮರಗಳನ್ನು ಖರೀದಿಸಿ ಅಳವಡಿಸುವ ಮೊದಲು Institute of wood science and technology (Indian Council of Forestry Research & Education) Ministry of Environment, Forest & Climate Change, Bangalore ಇವರಿಂದ ಗುಣ ಮಟ್ಟವನ್ನು ಪರೀಕ್ಷಿಸಿದ ನಂತರವೇ ಮರಗಳ ಬಳಸಿ ಅಳವಡಿಸಬೇಕಾಗಿದೆ. ಮರಗಳನ್ನು ಪರೀಕ್ಷೆಗೆ ಒಳಪಡಿಸದೇ ಅಳವಡಿಸಿ ಪಾವತಿಸಿರುವ ವಿವರಗಳು ಈ ರೀತಿಯಲ್ಲಿದೆ.

| ಕ್ರ.ಸಂ | ಪಾವತಿಸಿರುವ ವಿವರಗಳು | ಒಟ್ಟು ಮೊತ್ತ |
|---|---|---|
| 1 | 2015–16ನೇ ಸಾಲಿನಲ್ಲಿ ಪಾವತಿಸಿರುವುದು | 2,22,11,484 |
| 2 | 9ನೇ ಮತ್ತು ಭಾಶಃ ಬಿಲ್ಲಿನಲ್ಲಿ | 16,43,120 |
| 3 | 10ನೇ ಮತ್ತು ಭಾಗಶಃ ಬಿಲ್ಲಿನಲ್ಲಿ | 38,97,440 |
| 4 | 11ನೇ ಮತ್ತು ಭಾಗಶಃ ಬಿಲ್ಲಿನಲ್ಲಿ | 1,46,87,735 |
| | **ಒಟ್ಟು** | **4,24,39,779** |

ಲೆಕ್ಕಪರಿಶೋಧನಾ ವಿಚಾರಣೆಯ ಸಂಖ್ಯೆ:62/2018–19 ದಿನಾಂಕ:15.11.2018ರಲ್ಲಿ ಮರಕೆಲಸದ ಬಾಬ್ತಿನಲ್ಲಿ ರೂ.4,24,39,779/–ಗಳನ್ನು ಪಾವತಿಸಿದ್ದು, ಪರೀಕ್ಷಿಸಿರುವ ಮರದ ಗುಣಮಟ್ಟದ ಪ್ರಮಾಣ ಪತ್ರವನ್ನು ಹಾಜರುಪಡಿಸುವಂತೆ ಸೂಚಿಸಲಾಗಿತ್ತು. ಈ ಸಂಬಂಧವಾಗಿ ಲೆಕ್ಕಪರಿಶೋಧನೆಗೆ ಯಾವುದೇ ಮಾಹಿತಿಯನ್ನು ಹಾಜರುಪಡಿಸಿರುವುದಿಲ್ಲ. ಮರಗೆಲಸಕ್ಕೆ ಪಾವತಿಸಿರುವ ಮೊತ್ತ **ರೂ.4,24,39,779/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಮೌಲ್ಯ ಭವನ ಕಟ್ಟಡಕ್ಕೆ ಅಳವಡಿಸಿರುವ ಮರದ ಸಾಮಾಗ್ರಿಗಳ ಗುಣ ಮಟ್ಟಗಳು ಮಂಜೂರಾತಿಯಾಗಿರುವ ಅಂದಾಜು ಪಟ್ಟಿಯಲ್ಲಿ ಮಾಡಿಕೊಂಡಿರುವ ಮರದ ಸಾಮಾಗ್ರಿಗಳ ಗುಣ ಮಟ್ಟಗಳಿಗೆ ಹೊಲಿಕೆಯಾಗಿರುವುದನ್ನು ಸಹಾಯಕ ಕಾರ್ಯ ಪಾಲಕ ಅಭಿಯಂತರರು ಮತ್ತು ಕಾರ್ತಪಾಲಕ ಅಭಿಯಂತರರು ಅಳವಡಿಸುವ ಮುನ್ನ ಪರೀಕ್ಷಿಸಿ ಖಚಿತಪಡಿಸಿಕೊಂಡ ನಂತರವೇ ಅಳವಡಿಸಲಾಗಿದೆ ಹಾಗೂ ಬಿಲ್ಲುಗಳನ್ನು ಪಾವತಿಗಾಗಿ ಅಂಗೀಕರಿಸಲಾಗಿರುತ್ತದೆ ಮೌಲ್ಯ ಮಾಪನ ಕಟ್ಟಡವು ಈಗಾಗಲೇ ಪೂರ್ಣಗೊಂಡಿದ್ದು ಲೆಕ್ಕ ತನಿಖೆಯಲ್ಲಿ ಸೂಚಿಸಿರುವಂತೆ ಮುಂದೆ ನಿರ್ವಹಿಸಬಹುದಾದ ಕಟ್ಟಡ ಕಾಮಗಾರಿಗಳಿಗೆ ಉಪಯೋಗಿಸುವ ಮರಗಳ ಗುಣ ಮಟ್ಟವನ್ನು ಅರಣ್ಯ ಇಲಾಖೆಯಿಂದ ಪರಿಶೀಲನೆಗೆ ಒಳಪಡಿಸಿ ಅಗತ್ಯ ದೃಢೀಕರಣ ಪಡೆಯಲಾಗುವುದೆಂದು

ಪ್ರಸ್ತಾಪಿಸುತ್ತ ರೂ.4,24,39,779/–ಗಳ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

| | | |
|---|---|---|
| **130** | <u>**ಲೆಕ್ಕ ಪರಿಶೋಧನೆಗೆ ಔಡುರುಟಚಿಟ EMB ಯನ್ನು ಹಾಜರುಪಡಿಸದೇ ಇರುವುದು :– (ಇಂಜಿನಿಯರಿಂಗ್ ವಿಭಾಗ)**</u><br>2016–17ನೇ ಸಾಲಿಗೆ ಪ್ಯಾಕೇಜ್–1 ರಲ್ಲಿ ಅನುಷ್ಠಾನಗೊಳಿಸಿರುವ ಕಾಮಗಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಅಳತೆಯನ್ನು ದಾಖಲಿಸಿರುವ Original EMB ಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಲ್ಲಿ ವಿಫಲರಾಗಿದ್ದು, EMBಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.<br>ಲೆಕ್ಕಪರಿಶೋಧನಾ ಸಂದರ್ಭದಲ್ಲಿ ವಿಚಾರಣೆ ಸಂಖ್ಯೆ:69/2018–19 ದಿನಾಂಕ:22.11.2018ರಲ್ಲಿ ಅಳತೆಯನ್ನು ನಮೂದಿಸಿರುವ ಇಒಃಯಲ್ಲಿ ಪ್ರತಿ ಪುಟಕ್ಕೆ ಅಳತೆಯನ್ನು ಒಪ್ಪಿಕೊಂಡಿರುವುದಕ್ಕೆ ಗುತ್ತಿಗೆ ಸಂಸ್ಥೆಯವರಿಂದ ನಿಯೋಜಿತ ಪ್ರತಿನಿಧಿಯಿಂದ ಅಳತೆಯನ್ನು ಒಪ್ಪಿರುವುದಕ್ಕೆ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರವರು ಅಳತೆ ಪರಿಶೀಲನೆ ಮಾಡಿರುವುದಕ್ಕೆ ದಿನಾಂಕದೊಂದಿಗೆ ನಮೂದಿಸಿರುವ ಅಳತೆ ಪುಸ್ತಕಕ್ಕೆ ಅಳತೆ ಪರಿಶೀಲನೆ ಮಾಡಲಾಗಿದೆ ಎಂದು ಸಹಿಯೊಂದಿಗೆ ಹಾಜರುಪಡಿಸಲು ತಿಳಿಸಲಾಗಿದ್ದರೂ EMB ಯನ್ನು ಹಾಜರುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಅಳತೆ ಪುಸ್ತಕಗಳನ್ನು ಹಾಜರುಪಡಿಸದೇ ಇರುವ ವಿವರಗಳನ್ನು <u>**ಅನುಬಂಧ–38ರಲ್ಲಿ**</u> ವಿವರಿಸಿದೆ. ಲೆಕ್ಕಪರಿಶೋಧನೆಗೆ ಇಒಃಯನ್ನು ಹಾಜರುಪಡಿಸದೇ ಇರುವುದನ್ನು ಗಮನಿಸದಾಗ ಮೇಲ್ನೋಟಕ್ಕೆ ವಿಶ್ವವಿದ್ಯಾನಿಲಯದ ಹಣವು ದುರುಪಯೋಗವಾಗಿರಬಹುದು ಎಂದು ಕಂಡುಬರುತ್ತದೆ. ಸದರಿ ಪ್ರಕರಣದ ಬಾಬ್ತು **ರೂ.5,62,45,866/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | 2016–17ನೇಸಾಲಿನ ವಾರ್ಷಿಕ ಲೆಕ್ಕಾ ಪರಿಶೋಧನಾ ವರದಿಯ ಕಂಡಿಕೆ 130 ರಲ್ಲಿ ಗಮನಿಸಿ ಆಕ್ಷೇಪಿಸಲಾದ ಅಂಶಗಳ ಬಗ್ಗೆ ಗುತ್ತಿಗೆ ಸಂಸ್ಥೆಯವರಿಂದ ನಿಯೋಜಿತ ಪ್ರತಿ ನಿಧಿಯು ಅಳತೆಯನ್ನು ಒಪ್ಪಿರುವುದಕ್ಕೆ ಸಂಬಂಧ ಪಟ್ಟವರಿಂದ ಅಳತೆ ಪುಸ್ತಕದಲ್ಲಿ ಸಹಿ ಪಡೆಯಲಾಗಿದೆ ಹಾಗೂ ಸಂಬಂಧ ಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಳತೆ ಪುಸ್ತಕದಲ್ಲಿ ಅಳತೆ ಪರಿಶೀಲನೆ ಮಾಡಿರುವ ಬಗ್ಗೆ ಸಹಿ ಮತ್ತು ದಿನಾಂಕ ನಮೂದಿಸಲಾಗಿದೆ.<br>ಮುಂದುವರೆದು ಮೂಲ ಇ– ಎಂಬಿಯನ್ನು ಪ್ರಸ್ತುತ ಲೆಕ್ಕ ಪರಿಶೋಧನಾ ಸಮಯದಲ್ಲಿ ಲೆಕ್ಕ ಪರಿಶೋಧನಾ ತಂಡಕ್ಕೆ ಒದಗಿಸಲಾಗಿತ್ತು ಆದಾಗ್ಯೂ ಸದರಿ ವಿವರಗಳ ಜೆರಾಕ್ಸ್ ಪ್ರತಿಯನ್ನು ಈ ಮೂಲಕ ಲಗತ್ತಿಸಲಾಗಿದೆ. ಈ ಅಂಶದ ಮೇರೆಗೆ ಸದರಿ ಕಂಡಿಕೆ 130ರ ಮೊತ್ತ ರೂ.5,45,866/–ಗಳ ಮೊತ್ತವನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. ಹಾಗೂ ಸದರಿ ಬಿ.ಆರ್ ಬಿಲ್ಲಿನ ವಿವರಗಳು ಈ ಕೆಳಕಂಡತಿದೆ.<br>1) ಬಿ.ಆರ್ ಸಂಖ್ಯೆ: 280/31.08.2016 ರೂ.4,18,95,654/–<br>2) ಬಿ.ಆರ್ ಸಂಖ್ಯೆ: 528/03.12.2016 ರೂ.<u>1,43,50,212/–</u><br>ಒಟ್ಟು=5,62,45,866/– |

**131** **<u>ರಾಜಸ್ವ ತೆರಿಗೆಯ ಬಾಬ್ತು ಕಡಿಮೆ ಕಟಾಯಿಸಿರುವುದು :– (ಇಂಜಿನಿಯರಿಂಗ್ ವಿಭಾಗ)</u>**

2016–17ನೇ ಸಾಲಿಗೆ ಪ್ಯಾಕೇಜ್–1ರಲ್ಲಿ ಅನುಷ್ಠಾನಗೊಳಿಸಿರುವ ಕಾಮಗಾರಿ ಕೆಲಸಗಳಿಗೆ ಪ್ರಾಕೃತಿಕವಾಗಿ ಸಿಗುವಂತಹ ಮರಳು ಮತ್ತು ಕಲ್ಲುಗಳನ್ನು ಉಳಿಸಿಕೊಂಡಿದ್ದು, ನಿರ್ದೇಶಕರುಗಳ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಪತ್ರದ ಸಂಖ್ಯೆ:ಗಭೂವಿ/ಡಿಸಿಬಿ/ಕಗಗು/ರಾಪಕೊ/2013–14 ದಿನಾಂಕ:13.03.2014ರಲ್ಲಿ ನಿಗದಿಪಡಿಸಲಾಗಿರುವ ದರದಂತೆ ಬಳಸಿಕೊಳ್ಳುವ ಪರಿಮಾಣಕ್ಕೆ ಎದುರಾಗಿ ರಾಜಸ್ವ ತೆರಿಗೆಯನ್ನು ವಸೂಲಿಸಬೇಕಾಗಿರುತ್ತದೆ.

ರಾಜಸ್ವ ತೆರಿಗೆಯ ಬಾಬ್ತು ರೂ.4,92,313/–ಗಳನ್ನು ಕಟಾಯಿಸಬೇಕಾಗಿರುವುದರಲ್ಲಿ ರೂ.4,65,774/–ಗಳನ್ನು ಕಟಾಯಿಸಲಾಗಿದೆ. ಇನ್ನುಳಿದಂತೆ ರೂ.26,539/–ಗಳು ಬಾಕಿ ಇರುವ ಬಗ್ಗೆ **<u>ಅನುಬಂಧ–39ರಲ್ಲಿ</u>** ವಿವರಿಸಿದೆ. ಲೆಕ್ಕಪರಿಶೋಧನಾ ಸಂದರ್ಭದಲ್ಲಿ ವಿಚಾರಣೆ ಸಂಖ್ಯೆ:69/2018–19 ದಿನಾಂಕ:28.11.2018ರಲ್ಲಿ ರಾಜಸ್ವ ತೆರಿಗೆಯ ವ್ಯತ್ಯಾಸದ ಬಾಬ್ತು ವಸೂಲಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಲಾಗಿದ್ದರೂ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ರಾಜಸ್ವ ತೆರಿಗೆಯ ವ್ಯತ್ಯಾಸದ ಬಾಬ್ತು **ರೂ.26,539/–ಗಳನ್ನು ವಸೂಲಿಸಲು** ಕ್ರಮಕೈಗೊಂಡು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಜಮಾ ಮಾಡಲು ಸೂಚಿಸಿದೆ.

2016–17 ನೇ ಸಾಲಿನ ವಾರ್ಷಿಕ ಲೆಕ್ಕಾ ಪರಿಶೋಧನಾ ವರದಿಯ ಕಂಡಿಕೆ 131ರಲ್ಲಿ ರಾಜಸ್ವ ತೆರಿಗೆ ವಸೂಲಾತಿಗೆ ಸೂಚಿಸಿರುವಂತೆ ಸದರಿ ಸಂಸ್ಥೆ ಮೆ॥ ಬಿ.ಎಸ್.ಆರ್, ಕಂಪನಿಗೆ ಸಂಬಂಧಿಸಿದ ಬಿಲ್ಲಿನಬಿ.ಆರ್.ಸಂಖ್ಯೆ:185/22.12.2018ರಲ್ಲಿ ರೂ.26,539/–ಗಳನ್ನು ಕಟಾಯಿಸಿ ಸಂಬಂಧ ಪಟ್ಟ ಶೀರ್ಷಿಕೆಗೆ ಜಮಾ ಮಾಡಲಾಗಿದೆ.

ಸದರಿ ಮೊತ್ತ ರೂ.26,539/–ಗಳ ಬಿಲ್ಲಿನ ಜೆರಾಕ್ಸ್ ವಿವರ ಹಾಗೂ ಅಳತೆ ಪುಸ್ತಕದ ಜೆರಾಕ್ಸ್ ವಿವರಗಳನ್ನು ಇದರೊಂದಿಗೆ ಒದಗಿಸಲಾಗಿದೆಯೆಂದು ಹಾಗೂ ವಸೂಲಾತಿ ಕಂಡಿಕೆಯನ್ನು ಕೈ ಬಿಡುವಂತೆ ಈ ಮೂಲಕ ನಿವೇದಿಸಲಾಗಿದೆ.

**ರಾಜಸ್ವ ತೆರಿಗೆ ಕಟಾಯಿಸಿದ ವಿವರ ಈ ಕೆಳಕಂಡಂತಿದೆ**

| ಕ್ರ ಸಂ | ಬಿ.ಆರ್.ಸಂಖ್ಯೆ/ದಿನಾಂಕ | ಬಿಲ್ಲಿನ ಮೊತ್ತ | ಕಟಾಯಿಸಿದ ರಾಜಧನ ಮೊತ್ತ | ಕಟಾಯಿಸಿದ ಇತರೆ ಮೊತ್ತ | ಧನಾದೇಶ ಮೊತ್ತ |
|---|---|---|---|---|---|
| 1 | 185/22.12.2018 | 45,30,524/– | 26,539/– | 2,31,055/– | 42,72,930/– |

| | | |
|---|---|---|
| **132** | **<u>ಹೊಸ ಮಣ್ಣನ್ನು ಸಂಗ್ರಹಿಸಿರುವ ಬಾಬ್ತು ರಾಜಸ್ವ ತೆರಿಗೆಯನ್ನು ಕಟಾಯಿಸದಿರುವುದು :- (ಇಂಜಿನಿಯರಿಂಗ್ ವಿಭಾಗ)</u>**<br>2016-17ನೇ ಸಾಲಿಗೆ ಪ್ಯಾಕೇಜ್-1ರಲ್ಲಿನ ಕಾಮಗಾರಿ ಕೆಲಸಗಳಿಗೆ ಹೊಸ ಮಣ್ಣನ್ನು ಸಂಗ್ರಹಿಸಿ ಕಟ್ಟಡ ನಿರ್ಮಾಣದ ಕೆಲಸಕ್ಕೆ ಬಳಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ನಿರ್ದೇಶಕರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ಇವರು ನಿಗದಿಪಡಿಸಿರುವ ದರದಂತೆ ಸಂಗ್ರಹಿಸಲಾಗಿರುವ ಮಣ್ಣಿಗೆ ರಾಜಸ್ವ ತೆರಿಗೆಯನ್ನು ವಸೂಲಿಸಬೇಕಾಗಿರುತ್ತದೆ. ಲೆಕ್ಕಪರಿಶೋಧನೆಯಲ್ಲಿ ಹೊಸದಾಗಿ ಸಂಗ್ರಹಿಸಲಾಗಿರುವ ಮಣ್ಣಿಗೆ ಯಾವುದೇ ರಾಜಸ್ವ ತೆರಿಗಯನ್ನು ವಸೂಲಿಸದೇ ಇರುವುದು ಕಂಡುಬಂದಿರುತ್ತದೆ. ವಿವರಗಳನ್ನು **<u>ಅನುಬಂಧ-40ರಲ್ಲಿ</u>** ವಿವರಿಸಿದೆ. ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ:69/2018-19 ದಿನಾಂಕ:-28.11.2018ರಲ್ಲಿ ರಾಜಸ್ವ ತೆರಿಗೆಯ ಬಾಬ್ತು ರೂ.11,667/-ಗಳನ್ನು ವಸೂಲಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದ್ದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಅನುಬಂಧದಲ್ಲಿ ವಿವರಿಸಿರುವ ಮೊತ್ತ **ರೂ.11,667/-ಗಳನ್ನು ವಸೂಲಿಸಿ** ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಜಮಾ ಮಾಡಲು ಸೂಚಿಸಿದೆ. | ಕಂಡಿಕೆ 132ರಲ್ಲಿ ಹೊಸ ಮಣ್ಣನ್ನು ಸಂಗ್ರಹಿಸಿರುವ ರಾಜಸ್ವದ ಬಾಬ್ತು ರೂ.11,667/-ಗಳನ್ನು ವಸೂಲಿಸಲು ಸೂಚಿಸಿದ್ದು ಅದರಂತೆ ರೂ.11,667/-ಗಳನ್ನು ಸಂಬಂಧ ಪಟ್ಟ ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಮಾಹಿತಿಯನ್ನು ಒದಗಿಸಲಾಗುವುದು ಎಂದು ನಿವೇದಿಸಿದೆ. |

| | | |
|---|---|---|
| **133** | **<u>ಮಣ್ಣಿನ ಕೆಲಸವನ್ನು ನಿರ್ವಹಿಸಿರುವುದರಲ್ಲಿ ಕುಗ್ಗುವಿಕೆ (Shrinkage)ಯನ್ನು ಅಳತೆಯಲ್ಲಿ ಕಳೆಯದೇ ಇರುವುದು:– (ಇಂಜಿನಿಯರಿಂಗ್ ವಿಭಾಗ)</u>**<br>2016–17ನೇ ಸಾಲಿಗೆ ಪ್ಯಾಕೇಜ್–1ರಲ್ಲಿ ನೂತನ ಕಟ್ಟಡಗಳ ಕೆಲಸಕ್ಕೆ ಮಣ್ಣನ್ನು ಬಳಸಿ ಅಂದರೆ 20 ಎಂ.ಎಂ ಗಿಂತಲೂ ದಪ್ಪ ಇಲ್ಲದಂತೆ ನೀರನ್ನು ಬಳಸಿಕೊಂಡು ಕೆಲಸವನ್ನು ನಿರ್ವಹಿಸಿರುತ್ತಾರೆ. ನಿರ್ದೇಶಕರು, ಏಇಖಖಇವರು ಮಾಡಿರುವ ಪ್ರಯೋಗದ ಮೇರೆಗೆ ಉಪ ಕಾರ್ಯದರ್ಶಿಗಳು ಕಫಆ (ನೀರಾವರಿ) ವಿಧಾನಸೌಧ, ಬೆಂಗಳೂರು ಇವರು ಹೊರಡಿಸಿರುವ ಆದೇಶದ ಸಂಖ್ಯೆ: PWD/11GMS64 ಬೆಂಗಳೂರು ದಿನಾಂಕ:10.03.1966 ರಲ್ಲಿನಂತೆ ಶೇ 15 ರಷ್ಟು ಮಣ್ಣಿನ ಪ್ರಮಾಣದಲ್ಲಿ ಕುಗ್ಗುವಿಕೆಯನ್ನು ಕಳೆಯುವಂತೆ ತಿಳಿಸಿದೆ. (Manual Labour) ಮಣ್ಣಿನ ಕೆಲಸವನ್ನು ನಿರ್ವಹಿಸಿರುವುದಕ್ಕೆ ಅಳತೆ ಪುಸ್ತಕದಲ್ಲಿ ಶೇ 15 ರಷ್ಟು ಮಣ್ಣಿನ ಕುಗ್ಗುವಿಕೆಯನ್ನು ಕಳೆಯದೇ ಹಣ ಪಾವತಿ ಮಾಡಲಾಗಿದೆ. ಸದರಿ ವಿಷಯವಾಗಿ ವಿಚಾರಣಾ ಸಂಖ್ಯೆ:69/2018–19 ದಿನಾಂಕ:28.11.2018ರಲ್ಲಿ ಮಣ್ಣಿನ ಕೆಲಸದಲ್ಲಿನ ಕುಗ್ಗುವಿಕೆಯ ಬಾಬ್ತು ರೂ.15,933/–ಗಳನ್ನು ಸಂಬಂಧಪಟ್ಟ ಗುತ್ತಿಗೆ ಸಂಸ್ಥೆಯವರಿಂದ ವಸೂಲಿಸುವಂತೆ ಸೂಚಿಸಲಾಗಿತ್ತು. ಸಂಬಂಧವಾಗಿ ಕೈಗೊಂಡ ಕ್ರಮದ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಮಣ್ಣಿನ ಕುಗ್ಗುವಿಕೆಯ ವಿವರಗಳನ್ನು **<u>ಅನುಬಂಧ – 41ರಲ್ಲಿ</u>** ವಿವರಿಸಿದೆ. ಕುಗ್ಗುವಿಕೆಯ ಬಾಬ್ತು **ರೂ.15,933/–ಗಳನ್ನು ವಸೂಲಿಸಲು ಸೂಚಿಸಿದೆ.** | ಮಣ್ಣಿನ ಕೆಲಸದ ಕಾಮಗಾರಿಯು ಮಣ್ಣಿನ ಕುಗ್ಗುವಿಕೆ ಬಗ್ಗೆ ಅಳತೆ ಕಳೆಯದೆ ಪಾವತಿಸಿರುವ ಸಂಬಂಧ ರೂ.15,933/–ಗಳನ್ನು ಕಂಡಿಕೆ 133ರಲ್ಲಿ ವಸೂಲಿಸಲು ಸೂಚಿಸಿದ್ದು ಈ ಮೊತ್ತವನ್ನು ಸಂಬಂಧ ಪಟ್ಟ ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಮಾಹಿತಿಯನ್ನು ಒದಗಿಸಲಾಗುವುದು ಎಂಬ ಅಂಶವನ್ನು ನಿವೇದಿಸಲಾಗಿದೆ. |

**134**

**<u>ಇಒಃಯಲ್ಲಿ ಅಳತೆಯನ್ನು ದಾಖಲಿಸದೇ ಹಣ ಪಾವತಿ ಮಾಡಿರುವುದು :– (ಇಂಜಿನಿಯರಿಂಗ್ ವಿಭಾಗ)</u>**

2016–17ನೇ ಸಾಲಿಗೆ ಪ್ಯಾಕೇಜ್–1ರಲ್ಲಿ ಮೌಲ್ಯ ಭವನ ನಿರ್ಮಾಣ ಕಾಮಗಾರಿ ಕೆಲಸಕ್ಕೆ 10ನೇ ಮತ್ತು ಭಾಗಶಃ ಬಿಲ್ಲನ್ನು ಬಿ.ಆರ್.ನಂ. 528 ದಿನಾಂಕ:03.12.2016 ರಲ್ಲಿ ರೂ.1,43,50,212/–ಗಳನ್ನು ಪಾವತಿಸಲಾಗಿದೆ. ಇದರಲ್ಲಿ Water supply and sanitary ಕೆಲಸವು ಸೇರಿಕೊಂಡಿರುತ್ತದೆ. ಆದರೆ ಕರಾರಿನ ಐಟಂ ನಂ (11) (18)ರ ಅಳತೆ ಪುಸ್ತಕದಲ್ಲಿ ಅಳತೆಯನ್ನು ದಾಖಲಿಸದೇ ಹಣ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ. ವಿವರಗಳು ಈ ರೀತಿಯಲ್ಲಿದೆ.

| ಕ್ರ.ಸಂ | ಟೆಂಡರ್ ಐಟಂ ನಂ. | ಪರಿಮಾಣ | ದರ | ಪಾವತಿಸಿರುವ ಮೊತ್ತ | ಬಿಲ್ಲಿನ ಪುಟ ಸಂಖ್ಯೆ | ಷರಾ |
|---|---|---|---|---|---|---|
| 1 | 11 | 158.04 (ಮೀ) | 350.00 | 55314.00 | 70 | |
| 2 | 18 | 72 (ನಂ) | 190.00 | 13480.00 | 70 | |
| | | | ಒಟ್ಟು | **68794.00** | | |

ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:69/2018–19 ದಿನಾಂಕ:28.11.2018ರಲ್ಲಿ ಅಳತೆಯನ್ನು ದಾಖಲಿಸದೇ ಹಣ ಪಾವತಿ ಮಾಡಿರುವುದನ್ನು ಗುತ್ತಿಗೆ ಸಂಸ್ಥೆಯಿಂದ ವಸೂಲಿಸಲು ಸೂಚಿಸಲಾಗಿದ್ದು, ಕೈಗೊಂಡ ಕ್ರಮದ ಬಗ್ಗೆ ಯಾವುದೇ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಅಳತೆಯನ್ನು ದಾಖಲಿಸದೆ ಪಾವತಿಸಿರುವ ಮೊತ್ತ **ರೂ.68,794/–ಗಳನ್ನು ವಸೂಲಿಸಲು ಸೂಚಿಸಿದೆ.**

2016–17 ನೇ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 134 ರಲ್ಲಿ ಸೂಚಿಸಿರುವ ವಸೂಲಾತಿ ಮೊತ್ತ ರೂ.68,794/–ಗಳಿಗೆ ಸಂಬಂಧಿಸಿದಂತೆ ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸಲಾಗಿದ್ದು ವಸೂಲಾತಿಯಲ್ಲಿನ ರೂ.68,794/–ಗಳನ್ನು ಸಂಬಂಧಿಸಿದ ಬಾಬ್ತಿಗೆ ಗುತ್ತಿಗೆದಾರರು ಕಾಮಗಾರಿ ಮಾಡಿದ್ದು ತುರ್ತು ಕೆಲಸಗಳು ಹಾಗೂ ಕಥ ತಪ್ಪಿನಿಂದ ಇ–ಎಂ–ಬಿ ಅಳತೆ ಪುಸ್ತಕದಲ್ಲಿ ನಮೂದಾಗಿರುವುದಿಲ್ಲ ಆದಾಗ್ಯೂ ಸದರಿ ಗುತ್ತಿಗೆದಾರರ ಮುಂದಿನ ಕಾಮಗಾರಿ ಹುಂಡಿಯಲ್ಲಿ ಕಡಿತಗೋಳಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಲು ಕ್ರಮ ವಹಿಸಿ ಮಾಹಿತಿಯನ್ನು ಮುಂದಿನ ಲೆಕ್ಕ ತಪಾಸಣ ವೇಳೆಯಲ್ಲಿ ಸಲ್ಲಿಸಲಾಗುವುದೆಂದು ನಿವೇದಿಸಲಾಗಿದೆ.

| | | |
|---|---|---|
| 135 | **<u>ನಿಗದಿತ ಕಾಲಾವಧಿ ಪೂರ್ಣಗೊಂಡ ನಂತರದಲ್ಲಿ ಸಾಧಿಸಿರುವ ಪ್ರಗತಿಗೆ ದಂಡ ಪ್ರಸ್ತಾವನೆಯ ಬಗ್ಗೆ :– (ಇಂಜಿನಿಯರಿಂಗ್ ವಿಭಾಗ)</u>**<br>ಗುತ್ತಿಗೆ ಸಂಸ್ಥೆಯವರು ಪ್ಯಾಕೇಜ್–2 ರಲ್ಲಿನ ಎಲ್ಲಾ ಕಾಮಗಾರಿ ಕೆಲಸಗಳನ್ನು ದಿನಾಂಕ:17.09.2016ರ ಅಂತ್ಯಕ್ಕೆ ಪೂರ್ಣಗೊಳಿಸಿ ನೂತನ ಕಟ್ಟಡಗಳನ್ನು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಡುವಲ್ಲಿ ವಿಫಲರಾಗಿರುತ್ತಾರೆ. 2016–17ನೇ ಸಾಲಿನ ಅವಧಿಯಲ್ಲಿ ರೂ.1,82,87,588/–ಗಳ ಪ್ರಗತಿಯನ್ನು ಸಾಧಿಸಿರುತ್ತಾರೆ. ನಿಗದಿಯ ಕಾಲಾವಧಿ ಮೀರಿ ರೂ.12,58,90,251/–ಗಳ ಪ್ರಗತಿಯನ್ನು ಸಾಧಿಸಿದ್ದು, (ದಿನಾಂಕ:18.09.2016 ರಿಂದ ದಿನಾಂಕ:31.03.2017ರವರೆಗೆ) ಟೆಂಡರ್ KW-4 ರ ನಿಯಮದಡಿ Condition of Contract A General Clause (41)ಡಿ ಪ್ರಕಾರ ಹಾಗೂ PWa 65 Clause 2(d) ಪ್ರಕಾರ ವಿಳಂಬದ ಕಾಲಾವಧಿಯಲ್ಲಿ ಸಾಧಿಸಿರುವ ಪ್ರಗತಿಗೆ ದಂಡವನ್ನು ವಿಧಿಸಬೇಕಾಗಿರುತ್ತದೆ. ಕಡತದಲ್ಲಿ ಗುತ್ತಿಗೆ ಸಂಸ್ಥೆಯವರಿಂದ ಕಾಲಾವಧಿ ವಿಸ್ತರಣೆಯ ಬಗ್ಗೆ ಯಾವುದೆ ಪತ್ರ ವ್ಯವಹರಿಸಿರುವ ಮಾಹಿತಿ ಲಭ್ಯವಿರುವುದಿಲ್ಲ. ಹಾಗೂ ಇಲಾಖೆಯಿಂದ ನಿಶ್ಚಿತ ಕಾಲಾವಧಿಯಲ್ಲಿ ಕೆಲಸವನ್ನು ಪೂರ್ಣಗೊಳಿಸುವಲ್ಲಿ ಗುತ್ತಿಗೆ ಸಂಸ್ಥೆಯವರಿಗೆ ಅಡಚಣೆ ಮಾಡಿರುವ ಬಗ್ಗೆ ಯಾವುದೆ ಮಾಹಿತಿಯು ಸಹಾ ಲಭ್ಯವಿರುವುದಿಲ್ಲ. ದಿನಾಂಕ:18.09.2016 ರಿಂದ 31.03.2017ರ ಅಂತ್ಯದವರೆಗೆ ಹೆಚ್ಚುವರಿ 196 ದಿನಗಳಿಗೆ ರೂ.6,422.98 ರಂತೆ (ಪ್ರತಿ ದಿನಕ್ಕೆ) ಒಟ್ಟು ರೂ.12,58,903/–ಗಳ ದಂಡವನ್ನು ವಿಧಿಸಿ ವಸೂಲಿಸಲು ಲೆಕ್ಕ ತನಿಖಾ ವಿಚಾರಣಾ ಸಂಖ್ಯೆ 72(ಎ)/2018–19 ದಿನಾಂಕ:29.11.2018ರಲ್ಲಿ ವಿಚಾರಣೆ ನೀಡಲಾಗಿದ್ದರೂ ಸಹಾ ಯಾವುದೇ ಕ್ರಮವನ್ನು ಕೈಗೊಂಡಿರುವ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸದರಿ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿ ವಿಫಲರಾಗಿರುವುದರಿಂದ ದಂಡದ ಬಾಬ್ತು **ರೂ.12,58,903/–ಗಳನ್ನು ವಸೂಲಿಸಲು ಸೂಚಿಸಿದೆ.** | 2016–17 ನೇ ಸಾಲಿನ ಲೆಕ್ಕಪರಿಶೋದನ ವರದಿಯ ಕಂಡಿಕೆ–135ಕ್ಕೆ ಸಂಬಂಧಿಸಿದಂತೆ ಪ್ಯಾಕೇಜ್–2ರಲ್ಲಿನ ಕಾಮಗಾರಿಗಳ ಕೆಲಸಕ್ಕೆ ಸಂಬಂಧಿಸಿದಂತೆ ದಿನಾಂಕ:17.09.2016ರ ಅಂತ್ಯಕ್ಕೆ ಕಟ್ಟಡಗಳನ್ನು ಪೂರ್ಣಗೊಳಿಸುವ ಸಂಬಂಧ ಪ್ಯಾಕೇಜ್ ಕಾಮಗಾರಿಯ ಟೆಂಡರ್ ಕರಾರಿನ ನಿಯಮಾನುಸಾರ ಭಾಗಶಃ ಪೂರ್ಣಗೊಳಿಸಲಾಗಿದ್ದು ಸದರಿ ಕಂಡಿಕೆಯಲ್ಲಿ ವಸೂಲಾತಿಗೆ ಸೂಚಿಸಲಾಗಿರುವ ಮೊತ್ತದ ಈ ಕಾಮಗಾರಿ ನಿರ್ವಹಿಸು ಸ್ಥಳ ಹಸ್ತಾಂತರಿಸುವಲ್ಲಿ ಕಾರಂಆಂತರದಿಂದ ವಿಶ್ವವಿದ್ಯಾನಿಲಯದ ವತಿಯಿಂದ ವಿಳಂಬವಾಗಿದ್ದು ಗುತ್ತಿಗೆ ಸಂಸ್ಥೆಯವರಿಗೆ ಕಾಲಾನುಕ್ರಮವಾಗಿ ಕಾಮಗಾರಿ ಪ್ರಾರಂಭಿಸಲು ತಡವಾಗಿರುತ್ತದೆ. ಅದ್ದರಿಂದ ನಿಗದಿತ ಕಾಲವಧಿಯ ವಿಸ್ತರಣೆಗೆ ಸಂಬಂಧಿಸಿದ ಪತ್ರ ಪಡೆದು ಮುಂದಿನ ಲೆಕ್ಕ ಪರಿಶೋಧನೆಯಲ್ಲಿ ಸಲ್ಲಿಸಲಾಗುವು. ಆದ್ದರಿಂದ ಸದರಿ ಕಂಡಿಕೆಯಲ್ಲಿ ಸೂಚಿಸಲಾಗಿರುವ ವಸೂಲಾತಿ ಮೊತ್ತ ರೂ.12,58,963/– ಗಳನ್ನು ಕೈ ಬಿಡಲು ಈ ಮೂಲಕ ಕೋರಲಾಗಿದೆ. |

| | | |
|---|---|---|
| 136 | **ಮೊಬೈಲೈಜೇಷನ್ ಮುಂಗಡವನ್ನು ವಸೂಲಿಸಿರುವ ಬಗ್ಗೆ :– (ಇಂಜಿನಿಯರಿಂಗ್ ವಿಭಾಗ)**<br>ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ ಸೆಷನ್ (200) ರಂತೆ ರಿಜರ್ವ್ ಬ್ಯಾಂಕ್ ಇವರಲ್ಲಿ ಅನುಮೋದನೆಯಾಗಿರುವ ಷೆಡ್ಯೂಲ್ ಬ್ಯಾಂಕ್ ಗ್ಯಾರಂಟಿಯ ಮೇಲೆ ಶೇ 5 ರಷ್ಟು ಮೊಬೈಲೈಜೇಷನ್ ಮುಂಗಡವನ್ನು ಪಾವತಿಸಲು ಅವಕಾಶವನ್ನು ಕಲ್ಪಿಸಿದ್ದು, ಇದರಂತೆ ಟೆಂಡರ್ ಗುತ್ತಿಗೆದಾರರಿಗೆ ಪಾವತಿಸಿರುವ ಮುಂಗಡ ಬಾಬ್ತನ್ನು ಈ ಕೆಳಕಂಡಂತೆ ವಸೂಲಿಸಿದೆ.<br>• ಗುತ್ತಿಗೆ ಸಂಸ್ಥೆಯವರಿಗೆ ಪಾವತಿಸಿರುವ ಮುಂಗಡ ಬಾಬ್ತು: 2,24,00,000<br>• 2014–15ನೇ ಸಾಲಿನಲ್ಲಿ ವಸೂಲಿ – 8,99,366.00; 2015–16ನೇ ಸಾಲಿನಲ್ಲಿ ವಸೂಲಿ – 1,71,10,839.00: 1,80,10,205.00<br>• ದಿನಾಂಕ:31.03.2016ರ ಅಂತ್ಯಕ್ಕೆ ಬಾಕಿ ಇರುವ ಮುಂಗಡ: 43,89,795.00<br>• 2016–17ನೇ ಸಾಲಿಗೆ ವಸೂಲಿ ಬಾಬ್ತು: 43,89,940.00<br>• ಹೆಚ್ಚುವರಿಯಾಗಿ ವಸೂಲಿ ಆಗಿರುವ ಮೊತ್ತ: (–) 145.00<br>ಗುತ್ತಿಗೆ ಸಂಸ್ಥೆಯವರಿಗೆ ಪಾವತಿಸಿರುವ ಅಡ್ವಾನ್ಸ್ ಬಾಬ್ತು ಯಾವುದೂ ಬಾಕಿ ಇರುವುದಿಲ್ಲ. 2016–17ನೇ ಸಾಲಿನಲ್ಲಿ ಮುಂಗಡ ಬಾಬ್ತು ರೂ.43,89,795/–ಗಳನ್ನು ವಸೂಲಿಸಿದ್ದು, ಲೆಕ್ಕಪರಿಶೋಧನಾ ವಿಚಾರಣೆ ಸಂಖ್ಯೆ:72(ಎ)/2018–19 ದಿನಾಂಕ:29.11.2018ರಲ್ಲಿ ಮೊಬೈಲೈಜೇಷನ್ ಅಡ್ವಾನ್ಸ್ ವಹಿಯನ್ನು ಹಾಜರಪಡಿಸುವಂತೆ ತಿಳಿಸಲಾಗಿದ್ದರೂ ವಹಿಯನ್ನು ಹಾಜರುಪಡಿಸಿರುವುದಿಲ್ಲ. ಮುಂದಿನ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ವಹಿಯನ್ನು ಹಾಜರುಪಡಿಸುವಂತೆ ಸೂಚಿಸಿದೆ. | ವಿಶ್ವವಿದ್ಯಾನಿಲಯದ ಕಾಮಗಾರಿಗಳನನು ನಿರ್ವಹಿಸಲು ಅನುಕೂಲವಾಗಲೆಂಬ ಉದ್ದೇಶದಿಂದ ಹಲವು ಕಾಮಗಾರಿಗಳಿಗೆ ಸಂಬಂಧಿಸಿದಂತೆ 2016–17 ನೇ ಸಾಲಿನಲ್ಲಿ ರೂ.43,89,795/–ಗಳನ್ನು ಮೊಬಲೈಸೇಷನ್ ರೂಪದಲ್ಲಿ ಪಾವತಿಸಲಾಗಿತ್ತು ಹಾಗೂ ಈ ಮೊತ್ತವನ್ನು 2016–17ನೇ ಸಾಲಿನಲ್ಲಿ ವಸೂಲಿಸಿ ಹೊಂದಾಣಿಕೆ ಮಾಡಲಾಗಿದ್ದು ಸದರಿ ಮಾಹಿತಿ ವಿವರಗಳನ್ನು ಮುಂದಿನ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಒದಗಿಸಲಾಗುವುದೆಂದು ನಿವೇದಿಸಲಾಗಿದೆ. |

**137** **<u>ಚಾಮರಾಜನಗರ ಪಿ.ಜಿ. ಸೆಂಟರ್ ಕಟ್ಟಡ ಕೆಲಸಕ್ಕೆ ಅಳವಡಿಸಿರುವ ಮರದ ಗುಣ ಮಟ್ಟದ ಪ್ರಮಾಣ ಪತ್ರವನ್ನು ಹಾಜರುಪಡಿಸದಿರುವುದು :- (ಇಂಜಿನಿಯರಿಂಗ್ ವಿಭಾಗ)</u>**

2016-17ನೇ ಸಾಲಿಗೆ ಪ್ಯಾಕೇಜ್-2ರಲ್ಲಿ ಚಾಮರಾಜನಗರ ಪಿ.ಜಿ. ಸೆಂಟರ್ ಕಟ್ಟಡ ಕೆಲಸಕ್ಕೆ ಮರವನ್ನು ಖರೀದಿಸಿ ಅಳವಡಿಸಿರುವ ಸಂಬಂಧವಾಗಿ 5ನೇ ಮತ್ತು ಭಾಗಶಃ ಬಿಲ್ಲನ್ನು ಬಿ.ಆರ್ ನಂ.489 ದಿನಾಂಕ:23.11.2016 ಬಿಲ್ಲಿನ ಮೊತ್ತ ರೂ.1,83,24,070/-ಗಳನ್ನು ಪಾವತಿಸಿರುವಲ್ಲಿ ಮರದ ಕೆಲಸಕ್ಕೆ ಈ ಕೆಳಕಂಡಂತೆ ಹಣ ಪಾವತಿ ಮಾಡಲಾಗಿದೆ.

| ಕ್ರ.ಸಂ | ಟೆಂಡರ್ ಐಟಂ ನಂ | ಪರಿಮಾಣ | ದರ | ಪಾವತಿಸಿರುವ ಮೊತ್ತ |
|---|---|---|---|---|
| 1 | 131 & 132 (KSRB 9.4-1) | 1.10 | 220000 | 24200 |
| 2 | 133 & 134 (KSRB 9.5-1) | 22.52 | 9000 | 202680 |
| | | | ಒಟ್ಟು | **448680** |

ಬಿಲ್ಲಿನ ಪುಟ ಸಂಖ್ಯೆ 13ರಲ್ಲಿ ರೂ.4,48,680/-ಗಳನ್ನು ಮರ ಕೆಲಸದ ಸಂಬಂಧವಾಗಿ ಪಾವತಿಸಲಾಗಿದ್ದು, Institute of wood science and technology (Indian council Forestry Research & Education) Ministry & Environment, Forest & Climate Change Malleswaram, Bangalore ಇವರಿಂದ ಮರದ ಗುಣಮಟ್ಟವನ್ನು ಪರೀಕ್ಷಿಸಿದ ನಂತರವೇ ಮರವನ್ನು ಕಟ್ಟಡಕ್ಕೆ ಅಳವಡಿಸಬೇಕಾಗಿರುತ್ತದೆ. ಮರದ ಗುಣಮಟ್ಟವನ್ನು ಪರೀಕ್ಷಿಸಿರುವ ಪ್ರಮಾಣ ಪತ್ರವನ್ನು ಹಾಜರುಪಡಿಸಲು ಲೆಕ್ಕಪರಿಶೋಧನಾ ವಿಚಾರಣೆ ಸಂಖ್ಯೆ:72/2018-19 ದಿನಾಂಕ:29.11.2018ರಲ್ಲಿ ವಿಚಾರಣೆ ನಿಡಲಾಗಿರುತ್ತದೆ.

ಈ ಸಂಬಂಧವಾಗಿ ಲೆಕ್ಕಪರಿಶೋಧನೆಗೆ ಯಾವುದೇ ಮರದ ಗುಣಮಟ್ಟ ಪರೀಕ್ಷಿಸಿದ ಪ್ರಮಾಣಪತ್ರವನ್ನು ಹಾಜರುಪಡಿಸಿರುವುದಿಲ್ಲ. ಸದರಿ ಕಟ್ಟಡಕ್ಕೆ ಮರಗಳನ್ನು ಖರೀದಿಸಿ ಅಳವಡಿಸಿರುವ ಬಾಬ್ತು **ರೂ.4,48,680/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಚಾಮರಾಜನಗರ ಪಿ.ಜಿ. ಸೆಂಟರ್ ಕಟ್ಟಡ ಕೆಲಸಕ್ಕೆ ಅಳವಡಿಸಿರುವ ಮರದ ಗುಣ ಮಟ್ಟಗಳು ಮಂಜೂರಾತಿಯಾದ ಅಂದಾಜು ಪಟ್ಟಿಯಲ್ಲಿರುವ ಗುಣಮಟ್ಟ ಗಳಿಗೆ ಹೋಲಿಕೆಯಾಗಿರುವುದನ್ನು ಸಕಾಯಕ ಕಾರ್ತಪಾಲಕ ಅಭಿಯಂತರರು ಪರಶೀಲಿಸಿದ್ದು ಅವುಗಳ ಗುಣ ಮಟ್ಟಗಳು ಸರಿಯಾಗಿರುವುದನ್ನು ಖಚಿತ ಪಡಿಸಿಕೊಂಡ ನಂತರವೇ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಗಾಗಿ ಅಂಗೀಕರಿಸಲಾಗಿರುತ್ತದೆ.

ಲೆಕ್ಕ ತನಿಖೆಯಲ್ಲಿ ಸೂಚಿಸಿರುವಂತೆ ಇನ್ನು ಮುಂದೆ ಯಾವುದೇ ಮರಗಳ ಅಳವಡಿಕೆ ಸಂಬಂಧ ಅರಣ್ಯ ಇಲಾಖೆಯಿಂದ ಮರದ ಗುಣಮಟ್ಟ ಪರೀಕ್ಷಿಸಿ ದೃಡೀಕರಣ ಪಡೆದ ನಂತರವೇ ಮರಗಳನ್ನು ಕಟ್ಟಡಗಳಿಗೆ ಅಳವಡಿಸಲಾಗುವುದೆಂದು ನಿವೇದಿಸುತ್ತ ರೂ.4,48,680/-ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.

| 138 | **ಲೆಕ್ಕಪರಿಶೋಧನೆಗೆ EMBಯನ್ನು ಹಾಜರುಪಡಿಸದೆ ಇರುವುದು :– (ಇಂಜಿನಿಯರಿಂಗ್ ವಿಭಾಗ)**<br><br>2016–17ನೇ ಸಾಲಿಗೆ ಪ್ಯಾಕೇಜ್–2ರಲ್ಲಿ ಅನುಷ್ಠಾನಗೊಳಿಸಿರುವ ಕಾಮಗಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಅಳತೆಯನ್ನು ದಾಖಲಿಸಿರುವ Original EMBಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಲ್ಲಿ ವಿಫಲರಾಗಿರುತ್ತಾರೆ. EMB ಜೆರಾಕ್ಸ್ ಪ್ರತಿ, ಸಹಾಯಕ ಕಾರ್ಯಪಾಲಕ ಅಭಿಯಂತರರವರು ಅಳತೆ ಪರಿಶೀಲನೆ ಮಾಡದೇಇರುವ ಜೆರಾಕ್ಸ್ EMB ಯನ್ನು ಹಾಜರುಪಡಿಸಿರುತ್ತಾರೆ. ಹಾಗೂ ಕೆಲವೊಂದು EMBಯನ್ನು ಹಾಜರುಪಡಿಸದೇ ಇರುವುದು ಸಹಾ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.<br><br>ಲೆಕ್ಕಪರಿಶೋಧನಾ ಸಂದರ್ಭದಲ್ಲಿ ವಿಚಾರಣೆಯ ಸಂಖ್ಯೆ:72/2018–19 ದಿನಾಂಕ:29.11.2018ರಲ್ಲಿ ಅಳತೆಯನ್ನು ನಮೂದಿಸಿರುವ EMBಯಲ್ಲಿ ಪ್ರತಿ ಪುಟಕ್ಕೆ ಗುತ್ತಿಗೆ ಸಂಸ್ಥೆಯಿಂದ ನಿಯೋಜಿಸಿರುವ ಪ್ರತಿನಿಧಿಯಿಂದ ಸಹಿಯೊಂದಿಗೆ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರರವರು ಅಳತೆ ಪರಿಶೀಲನೆ ಮಾಡಿರುವುದಕ್ಕೆ ದಿನಾಂಕದೊಂದಿಗೆ ನಮೂದಿಸಿರುವ ಅಳತೆ ಪುಸ್ತಕವನ್ನು ಹಾಜರುಪಡಿಸುವಂತೆ ತಿಳಿಸಲಾಗಿದ್ದರೂ ಸಹಾ EMB ಯನ್ನು ಹಾಜರುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಅಳತೆ ಪುಸ್ತಕಗಳನ್ನು ಹಾಜರುಪಡಿಸದೆ ಇರುವ ವಿವರಗಳನ್ನು **ಅನುಬಂಧ–42ರಲ್ಲಿ** ವಿವರಿಸಿದೆ. EMB ಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೆ ಇರುವುದರಿಂದ ಇದೊಂದು ಮೇಲ್ನೋಟಕ್ಕೆ ವಿಶ್ವವಿದ್ಯಾನಿಲಯದ ಹಣವು ದುರುಪಯೋಗವಾಗಿರುವುದು ಕಂಡುಬಂದಿರುತ್ತದೆ. ಇದರ ಒಟ್ಟಾರೆ **ರೂ.8,61,17,562/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಕಂಡಿಕೆ 138 ರಲ್ಲಿ ಆಕ್ಷೇಪಿಸಿ ಆಕ್ಷೇಪಣೆಯಲ್ಲಿಟ್ಟಿರುವ ಮೊಬಲಗು ರೂ.8,61,17,562/–ಗಳಿಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನೆಯಲ್ಲಿ ಪರಿಶೀಲಿಸಿದ್ದು ಆದಾಗ್ಯೂ ಬಿ,ಆರ್,ಸಂಖ್ಯೆ ಮತ್ತು ಇ,ಎಂ,ಬಿ ವಿವರಗಳನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.<br><br>1 – ಬಿ,ಆರ್,ಸಂಖ್ಯೆ–284/16–17 ದಿನಾಂಕ:31.08.2016 – 1,13,16,535/–<br>2 – ಬಿ,ಆರ್,ಸಂಖ್ಯೆ–287/16–17 ದಿನಾಂಕ:31.08.2016 – 2,33,44,010/–<br>3 – ಬಿ,ಆರ್,ಸಂಖ್ಯೆ–483/16–17 ದಿನಾಂಕ:23.11.2016 – 1,80,80,978/–<br>4 – ಬಿ,ಆರ್,ಸಂಖ್ಯೆ–490/16–17 ದಿನಾಂಕ:23.11.2016 – 65,78,131/–<br>5 – ಬಿ,ಆರ್,ಸಂಖ್ಯೆ–502/16–17 ದಿನಾಂಕ:26.11.2016 – 1,18,32,848/–<br>6 – ಬಿ,ಆರ್,ಸಂಖ್ಯೆ–604/16–17 ದಿನಾಂಕ:05.01.2017 – 57,60,930/–<br>7 – ಬಿ,ಆರ್,ಸಂಖ್ಯೆ–1011/16–17 ದಿನಾಂಕ:15.03.2017 – 36,76,521/–<br>8 – ಬಿ,ಆರ್,ಸಂಖ್ಯೆ–1012/16–17 ದಿನಾಂಕ:15.03.2017 – 25,85,366/–<br>9 – ಬಿ,ಆರ್,ಸಂಖ್ಯೆ–1014/16–17 ದಿನಾಂಕ:15.03.2017 – 29,42,152/–<br>**ಒಟ್ಟು ಮೊತ್ತ** – **8,61,17,562/–**<br><br>ಮೇಲ್ಕಂಡಂತೆ ಪ್ರಸ್ತಾಪಿಸಿ ವಿವರಗಳನ್ನು ಒದಗಿಸಿರುವದರ ಮೇರೆಗೆ ಆಕ್ಷೇಪಣೆ ಮೊತ್ತ ರೂ. 8,61,17,562/–ಗಳನ್ನು ಆಕ್ಷೇಪಣೆ ಕಂಡಿಕೆಯಿಂದ ಕೈ ಬಿಡುವಂತೆ ಕೋರಲಾಗಿದೆ.<br>(ಸಂಬಂಧಿಸಿದ ಜೆರಾಕ್ಸ್ ಪ್ರತಿ ಲಗತ್ತಿಸಿದೆ) |
|---|---|---|

**139** **<u>ರಾಜಸ್ವ ತೆರಿಗೆಯನ್ನು ಕಡಿಮೆ ಕಟಾಯಿಸಿರುವುದು :– (ಇಂಜಿನಿಯರಿಂಗ್ ವಿಭಾಗ)</u>**

2016–17ನೇ ಸಾಲಿಗೆ ಅನುಷ್ಠಾನಗೊಳಿಸಿರುವ ಪ್ಯಾಕೇಜ್–2 ರಲ್ಲಿನ ಕಾಮಗಾರಿ ಕೆಲಸಗಳಿಗೆ ಪ್ರಾಕೃತಿಕವಾಗಿ ಸಿಗುವ ಮರಳು ಮತ್ತು ಕಲ್ಲುಗಳನ್ನು ಬಳಸಿಕೊಂಡಿದ್ದು, ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಪತ್ರದ ಸಂಖ್ಯೆ:ಗಭೂವಿ/ಡಿಸಿಬಿ/ಕಗಗು/ರಾಪಕೋ/2013–14 ದಿನಾಂಕ:13.03.2014ರಲ್ಲಿ ನಿಗದಿಪಡಿಸಿರುವ ದರದಂತೆ ಬಳಸಿಕೊಳ್ಳುವ ಪರಿಮಾಣಕ್ಕೆ ಎದುರಾಗಿ ರಾಜಸ್ವ ತೆರಿಗೆಯನ್ನು ವಸೂಲಿಸಬೇಕಾಗಿರುತ್ತದೆ.

ರಾಜಸ್ವ ತೆರಿಗೆಯ ಬಾಬ್ತು ರೂ.4,82,646/–ಗಳನ್ನು ಕಟಾಯಿಸಬೇಕಾಗಿರುವುದರಲ್ಲಿ ರೂ.2,67,012/–ಗಳನ್ನು ಮಾತ್ರ ಕಟಾಯಿಸಿದ್ದು, ಇನ್ನುಳಿದಂತೆ ರೂ.2,15,634/–ಗಳು ಬಾಕಿ ಇರುವ ಬಗ್ಗೆ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ವಿಚಾರಣೆ ಸಂಖ್ಯೆ 72(ಎ)/2018–19 ದಿನಾಂಕ:29.11.2018 ರಲ್ಲಿ ರಾಜಸ್ವ ತೆರಿಗೆಯ ವ್ಯತ್ಯಾಸದ ಬಾಬ್ತು ವಸೂಲಿಸಿ ಲೆಕ್ಕಪರಿಶೋನೆಗೆ ಹಾಜರುಪಡಿಸುವಂತೆ ಸೂಚಿಸಲಾಗಿದ್ದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ. **ವಸೂಲಿಸಬೇಕಾದ ರೂ.2,15,634/–ಗಳಿಗೆ<u>ಅನುಬಂಧ–43ರಲ್ಲಿ</u>** ವಿವರಿಸಿದೆ. ಸದರಿ ಮೊತ್ತವನ್ನು ಗುತ್ತಿಗೆ ಸಂಸ್ಥೆಯವರಿಂದ ವಸೂಲಿಸಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಜಮಾ ಮಾಡಲು ಸೂಚಿಸಿದೆ.

2016–17ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 139ರಲ್ಲಿ ರಾಜಧನ ವಸೂಲಾತಿಗೆ ಸೂಚಿಸಲಾಗಿದ್ದು ಸದರಿ ಸಂಸ್ಥೆ ಮೇ॥ಬಿ.ಎಸ್.ಆರ್ ಕಂಪನಿಗೆ ಸಂಬಂಧಿಸಿದ ಬಿಲ್ಲಿನ ಬಿ.ಆರ್ ಸಂಖ್ಯೆ:189/26.12.2018ರಲ್ಲಿ ರೂ.2,15,634/–ಗಳನ್ನು ಕಟಾಯಿಸಿ ಸಂಬಂಧ ಪಟ್ಟ ಶೀರ್ಷಿಕೆಗೆ ಜಮೆ ಮಾಡಲಾಗಿದೆ.

ಸದರಿ ಮೊತ್ತ ರೂ.2,15,634/–ಗಳ ಬಿಲ್ಲಿನ ಜೆರಾಕ್ಸ್ ಹಾಗೂ ಅಳತೆ ಪುಸ್ತಕದ ಜೆರಾಕ್ಸ್ ವಿವರಗಳನ್ನು ಇದರೊಂದಿಗೆ ಒದಗಿಸಲಾಗಿದೆ ಆ ಮೇರೆಗೆ ಸದರಿ ವಸೂಲಾತಿ ಕಂಡಿಕೆಯನ್ನು ಕೈ ಬಿಡುವಂತೆ ಈ ಮೂಲಕ ಕೋರಲಾಗಿದೆ.

**<u>ರಾಜಧನ ಕಟಾಯಿಸಿದ ವಿವರ ಈ ಕಳಕಂಡಂತಿರುತ್ತದೆ</u>**

| ಕ್ರ ಸಂ | ಬಿ,ಆರ್.ಸಂಖ್ಯೆ | ಬಿಲ್ಲಿನ ಮೊತ್ತ | ರಾಜಧನಕಟಾಯಿಸಿದ ಮೊತ್ತ | ಇತರೆ ಕಡಿತ ಮೊತ್ತ | ಧನಾದೇಶ ಮೊತ್ತ |
|---|---|---|---|---|---|
| 1 | 189/26.12.2018 | 77,858,463/– | 2,15,634/– | 3,97,550/– | 71,45,279/– |

| | | |
|---|---|---|
| **140** | **<u>ಹೊಸ ಮಣ್ಣನ್ನು ಸಂಗ್ರಹಿಸಿರುವ ಬಾಬ್ತು ರಾಜಸ್ವ ತೆರಿಗೆಯನ್ನು ಕಟಾಯಿಸದರಿವುದು :– (ಇಂಜಿನಿಯರಿಂಗ್ ವಿಭಾಗ)</u>**<br><br>2016–17ನೇ ಸಾಲಿಗೆ ಪ್ಯಾಕೇಜ್–2ರಲ್ಲಿನ ಕಾಮಗಾರಿ ಕೆಲಸಗಳಿಗೆ ಹೊಸದಾಗಿ ಮಣ್ಣನ್ನು ಸಂಗ್ರಹಿಸಿ, ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳುವ ಕಾರ್ಯವನ್ನು ಕೈಗೊಂಡಿದ್ದು, ಇದಕ್ಕೆ ಸಂಬಂಧಿಸಿದಂತೆ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ಇವರು ನಿಗದಿಪಡಿಸಿರುವ ದರದಂತೆ ಸಂಗ್ರಹಿಸಿರುವ ಮಣ್ಣಿಗೆ ರಾಜಸ್ವ ತೆರಿಗೆಯನ್ನು ವಸೂಲಿಸಬೇಕಾಗಿರುತ್ತದೆ. ಲೆಕ್ಕಪರಿಶೋಧನೆಯಲ್ಲಿ ಹೊಸದಾಗಿ ಸಂಗ್ರಹಿಸಿರುವ ಮಣ್ಣಿಗೆ ರಾಜಸ್ವ ತೆರಿಗೆಯನ್ನೇ ವಸೂಲಿಸಿರುವುದಿಲ್ಲ. ವಿವರಗಳನ್ನು **<u>ಅನುಬಂಧ–44ರಲ್ಲಿ</u>** ವಿವರಿಸಿದ್ದು, ರೂ.54,883/–ಗಳನ್ನು ಖಟಾಯಿಸಬೇಕಾಗಿರುತ್ತದೆ.<br>ಲೆಕ್ಕಪರಿಶೋಧನಾ ಸಂದರ್ಭದಲ್ಲಿ ವಿಚಾರಣೆ ಸಂಖ್ಯೆ:72(ಎ)/2018–19 ದಿನಾಂಕ:29.11.2018ರಲ್ಲಿ ರಾಜಸ್ವ ತೆರಿಗೆಯ ಬಾಬ್ತು ವಸೂಲಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದ್ದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಇದರ ಬಾಬ್ತು **ರೂ.54,883/–ಗಳನ್ನು ವಸೂಲಿಸಿ** ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಜಮಾ ಮಾಡಲು ಸೂಚಿಸಿದೆ. | ಕಂಡಿಕೆ 140 ರಲ್ಲಿ ರೂ.54,823/–ಗಳನ್ನು ವಸೂಲಾತಿಗೆ ಸೂಚಿಸಿರುವ ಮೇರೆಗೆ ಹೊಸ ಮಣ್ಣನ್ನು ಸಂಗ್ರಹಿಸಿರು ಬಾಬ್ತು ರಾಜಸ್ವ ತೆರಿಗೆಯನ್ನು ಮೆ॥ ಬಿ.ಎಸ್.ಆರ್ ಇನ್ ಫ್ರಾಟೆಕ್ ಇಂಡಿಯಾ ಲಿ॥ ಬೆಂಗಳೂರು ಇವರ ಬಿಲ್ಲಿನಲ್ಲಿ ಕಟಾಯಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಮಾಹಿತಿಯನ್ನು ಒದಗಿಸಲಾಗುವುದು ಎಂದು ನಿವೇದಿಸಲಾಗಿದೆ. |

| | | |
|---|---|---|
| **141** | <u>**ಮಣ್ಣಿನ ಕೆಲಸವನ್ನು ನಿರ್ವಹಿಸಿರುವುದಿಲ್ಲ ಕುಗ್ಗುವಿಕೆ (ಖುಡಿಟಿಞಚಿರಿಜ) ನ್ನು ಅಳತೆ ಪುಸ್ತಕದಲ್ಲಿ ಕಳೆಯದೇ ಇರುವುದು (ಶೇ 15) :– (ಇಂಜಿನಿಯರಿಂಗ್ ವಿಭಾಗ)**</u><br><br>2016–17ನೇ ಸಾಲಿಗೆ ಪ್ಯಾಕೇಜ್–2 ರಡಿಯಲ್ಲಿ ನೂತನ ಕಟ್ಟಡಗಳ ಕೆಲಸಕ್ಕೆ ಸಂಗ್ರಹಿಸಿ ಹಾಗೂ ಪಾಯದ ಕಡಲಸದಲ್ಲಿ ಹೊರ ತೆಗೆದ ಮಣ್ಣನ್ನು ಸಹಾ ಪಾಯದ ಕೆಲಸಕ್ಕೆ ಮತ್ತು ಇನ್ನಿತರ ಕಟ್ಟಡ ಕೆಲಸಕ್ಕೆ 20 ಎಂ.ಎಂ ಗಿಂತಲು ದಪ್ಪ ಇಲ್ಲದಂತೆ ನೀರನ್ನು ಬಳಕೆ ಕೆಲಸವನ್ನು ನಿರ್ವಹಿಸಿರುತ್ತಾರೆ. ನಿರ್ದೇಶಕರು ಏಇಖಖ, ಏಖನಗರ ಇವರು ಮಾಡಿರುವ ಪ್ರಯೋಗದ ಮೇರೆಗೆ ಉಪ ಕಾರ್ಯದರ್ಶಿಗಳು PWD(ನೀರಾವರಿ) ಕರ್ನಾಟಕ ಸರ್ಕಾರ ವಿಧಾನ ಸೌಧ, ಬೆಂಗಳೂರು ಇವರ ಸರ್ಕಾರಿ ಆದೇಶ ಸಂಖ್ಯೆ: ಕಫಾಆ/11ಉಒಖ/64 ಬೆಂಗಳೂರು ದಿನಾಂಕ:10.03.1966 ರಲ್ಲಿನಂತೆ ಶೇ 15 ರಷ್ಟು ಮಣ್ಣಿನ ಪ್ರಮಾಣದಲ್ಲಿ ಕುಗ್ಗುವಿಕೆಯನ್ನು ಕಳೆಯುವಂತೆ ತಿಳಿಸಲಾಗಿದೆ. ಮಣ್ಣಿನ ಕೆಲಸವನ್ನು ನಿರ್ವಹಿಸಿರುವುದಕ್ಕೆ ಅಳತೆ ಪುಸ್ತಕದಲ್ಲಿ ಅಳತೆಯನ್ನು ದಾಖಲಿಸಿದ್ದು, ಶೇ 15 ರಷ್ಟು ಮಣ್ಣಿನ ಕುಗ್ಗುವಿಕೆಯನ್ನು ಕಳೆಯದೆ ಹಣ ಪಾವತಿ ಮಾಡಲಾಗಿದೆ. ಸದರಿ ವಿಷಯದ ಸಂಬಂಧವಾಗಿ ಲೆಕ್ಕ ತನಿಖಾ ವಿಚಾರಣಾ ಸಂಖ್ಯೆ 72(ಎ)/2018–19 ದಿನಾಂಕ:29.11.2018ರಲ್ಲಿ ಮಣ್ಣಿನ ಕೆಲಸದಲ್ಲಿನ ಕುಗ್ಗುವಿಕೆಯ ಬಾಬ್ತು ರೂ.1,35,369/–ಗಳನ್ನು ವಸೂಲಿಸುವಂತೆ ಸೂಚಿಸಲಾಗಿತ್ತು. ಈ ಸಂಬಂಧವಾಗಿ ಕೈಗೊಂಡ ಕ್ರಮದ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಮಣ್ಣು ಕುಗ್ಗುವಿಕೆಯ ವಿವರಗಳನ್ನು <u>**ಅನುಬಂಧ–45ರಲ್ಲಿ**</u> ವಿವರಿಸಿದ್ದು, ಕುಗ್ಗುವಿಕೆಯ ಬಾಬ್ತು **ರೂ.1,35,369/–ಗಳನ್ನು ವಸೂಲಿಸುವಂತೆ** ಸೂಚಿಸಿದೆ. | ಕಂಡಿಕೆ 141ರಲ್ಲಿ ಮಣ್ಣಿನ ಕೆಲಸದ ಕುಗ್ಗುವಿಕೆ ನಿರ್ವಹಣೆಯ ಬಗ್ಗೆ ರೂ.13,53,369/–ಗಳನ್ನು ವಸೂಲಾತಿಗೆ ಸೂಚಿಸಿದ್ದು ಸದರಿ ಮೊತ್ತ ರೂ.1,35,369/–ಗಳನ್ನು ಮೆ॥ ಬಿ,ಎಸ್,ಆರ್ ಇನ್ ಫ್ರಾಟೆಕ್ ಇಂಡಿಯಾ ಲಿ॥ ಬೆಂಗಳೂರು ಇವರ ಬಿಲ್ಲಿನಲ್ಲಿ ಭದ್ರತಾ ಠೇವಣಿಯ ಮೊತ್ತದಲ್ಲಿ ಕಟಾಯಿಸಲು ಕ್ರಮವಹಿಸಿ ಮಾಹಿತಿಯನ್ನು ಮುಂದಿನ ಲೆಕ್ಕಾ ಪರಿಶೋಧನೆಗೆ ಒದಗಿಸಲಾಗುವುದೆಂದು ನಿವೇದಿಸಲಾಗಿದೆ. |

| | | |
|---|---|---|
| **142** | **<u>ಜಂಗಲ್ ಕ್ಲಿಯರಿಂಗ್‌ನಲ್ಲಿ ವಾಯ್ಡ್ ಕಳೆಯದಿರುವುದು :– (ಇಂಜಿನಿಯರಿಂಗ್ ವಿಭಾಗ)</u>**<br>2016–17ನೇ ಸಾಲಿಗೆ ಪ್ಯಾಕೇಜ್–2 ರಲ್ಲಿ ಕೈಗೊಂಡಿರುವ ಕಾಮಗಾರಿ ಕೆಲಸದ ಸುತ್ತಮುತ್ತ ವಿರಳವಾಗಿ ಬೆಳದಿರುವ ಕುರುಚಲ ಗಿಡಗಂಟಿಗಳನ್ನು ಹೊರ ತೆಗೆದು ಸ್ವಚ್ಛಗೊಳಿಸಿದ ಪ್ರದೇಶದ ಒಟ್ಟಾರೆ ಅಳತೆಯನ್ನು ಚ.ಮೀ.ನಲ್ಲಿ ದಾಖಲಿಸಿ ಹಣ ಪಾವತಿ ಮಾಡಲಾಗಿದೆ. ವಿಳಂಬವಾಗಿ ಬೆಳೆದಿರುವ ಜಂಗಲ್ ಕ್ಲಿಯರಿಂಗ್ ಅಳತೆಯನ್ನು ದಾಖಲಿಸುವಾಗ ದಾಖಲಿಸಿರುವ ಅಳತೆಯಲ್ಲಿ ಶೇ 40 ರಷ್ಟು ಖಾಲಿ ಜಾಗ ಇದೆ ಎಂದು ಪರಿಗಣಿಸಿ, ದಾಖಲಿಸಿರುವ ಪರಿಮಾಣದಲ್ಲಿ ಕಳೆದು ನಿವ್ವಳ ಪರಿಮಾಣಕ್ಕೆ ಪಾವತಿಸಬೇಕಾಗಿದ್ದು, ತಪ್ಪಿನಿಂದಾಗಿ ದಾಖಲಿಸಿರುವ ಒಟ್ಟಾರೆ ಪರಿಮಾಣಕ್ಕೆ ಹಣ ಪಾವತಿಯಾದಂತಾಗಿದೆ. ಸದರಿ ವಿಷಯವಾಗಿ ವಿಚಾರಣೆ ಸಂಖ್ಯೆ:72(ಎ)/2018–19 ದಿನಾಂಕ:29.11.2018ರಲ್ಲಿ ರೂ.5,854/–ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದನ್ನು ವಸೂಲಿಸುವಂತೆ ವಿಚಾರಣೆಯಲ್ಲಿ ಸೂಚಿಸಲಾಗಿತ್ತು. ಇದರ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಸಂಬಂಧವಾಗಿ ವಿವರಗಳನ್ನು **<u>ಅನುಬಂಧ–46ರಲ್ಲಿ</u>** ವಿವರಿಸಿದೆ. ವಾಯ್ಡ್ ಕಳೆಯದೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ **ರೂ.5,854/–ಗಳನ್ನು ವಸೂಲಿಸಲು** ಸೂಚಿಸಿದೆ. | ಕಂಡಿಕೆ 142ರಲ್ಲಿ ಜಂಗಲ್ ಕ್ಲಿಯರಿಂಗ್‌ನಲ್ಲಿ ವಾಯ್ಡ್ ಕಳೆಯದಿರುವುದಿಲ್ಲವೆಂದು ಆಕ್ಷೇಪಿಸಿ ರೂ.5,854/–ಗಳನ್ನು ವಸೂಲಾತಿಗೆ ಸೂಚಿಸಿರುವ ಬಗ್ಗೆ ಸದರಿ ಮೊತ್ತ ರೂ.5,854/–ಗಳನ್ನು ಮೆ॥ ಬಿ,ಎಸ್,ಆರ್ ಇನ್ ಫ್ರಾಟೆಕ ಇಂಡಿಯಾ ಲಿ॥ ಬೆಂಗಳೂರು ಇವರ ಬಿಲ್ಲಿನಲ್ಲಿ ಕಟಾಯಿಸಿ ಸಂಬಂಧ ಪಟ್ಟ ಖಾತೆಗೆ ಜಮೆ ಮಾಡಲಾಗುವುದು ಎಂದು ಈ ಮೂಲಕ ಪ್ರಸ್ತಾಪಿಸಿ ನಿವೇದಿಸಿದೆ. |

| | | |
|---|---|---|
| **143** | **<u>EMB ಯಲ್ಲಿ ಅಳತೆಯನ್ನು ದಾಖಲಿಸದೆ ಹಣ ಪಾವತಿ ಮಾಡಿರುವುದು :- (ಇಂಜಿನಿಯರಿಂಗ್ ವಿಭಾಗ)</u>**<br><br>2016-17ನೇ ಸಾಲಿಗೆ ಪ್ಯಾಕೇಜ್-2 ರಲ್ಲಿ ಅಳತೆಯನ್ನು ದಾಖಲಿಸಿರುವ EMB ಯನ್ನು ಪರಿಶೀಲಿಸಿದಾಗ ಅಳತೆಯನ್ನು ದಾಖಲು ಮಾಡದೆ ಹಣ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ. ಈ ಸಂಬಂಧವಾಗಿ ವಿಚಾರಣಾ ಸಂಖ್ಯೆ:72(ಎ)/2018-19 ದಿನಾಂಕ 29.11.2018ರ್ಲಿ EMB ಯಲ್ಲಿ ಅಳತೆಯು ಲಭ್ಯವಿಲ್ಲದೆ ಪಾವತಿ ಮಾಡಿರುವ ಮೊತ್ತ ರೂ.43,500/-ಗಳನ್ನು ವಸೂಲಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಲಾಗಿತ್ತು. ಈ ಸಂಬಂಧವಾಗಿ ಕೈಗೊಂಡ ಕ್ರಮದ ಬಗ್ಗೆ ಯಾವುದೇ ಮಾಹಿತಿಯನ್ನು ಹಾಜರುಪಡಿಸಿರುವುದರಿಂದ ಮೊತ್ತ **ರೂ.43,500/-ಗಳನ್ನು ಗುತ್ತಿಗೆ ಸಂಸ್ಥೆಯವರಿಂದ ವಸೂಲಿಸಲು ಸೂಚಿಸಿದೆ.** ವಿವರವನ್ನು <u>ಅನುಬಂಧ-47ರಲ್ಲಿ</u> ಲಗತ್ತಿಸಿದೆ. | 2016-17ನೇ ಸಾಲಿನ ವಾರ್ಷಿಕ ಲೆಕ್ಕಾ ಪರಿಶೋಧನಾ ವರದಿ ಕಂಡಿಕೆ 143ರಲ್ಲಿ ಸೂಚಿಸಿರುವ ಮೊತ್ತ ರೂ.43,500/-ಗಳಿಗೆ ಸಂಬಂಧಿಸಿದಂತೆ<br><br>1. ಚಾಮರಾಜನಗರದ ಬಾಲಕರ ಹಾಸ್ಟಲ್ ಕಾಮಗಾರಿಯ ಮೊತ್ತ ರೂ.1,200/-<br>2. ಮಾನಸಗಂಗೋತ್ರಿಯ ಶೈಕ್ಷಣಿಕ ಕಾಮಗಾರಿಯ ಮೊತ್ತ ರೂ.7,500/-<br>3. ಮಾನಸಗಂಗೋತ್ರಿಯ ಶೈಕ್ಷಣಿಕ ಸಿಬ್ಬಂದಿ ಕಾಮಗಾರಿ ಮೊತ್ತ ರೂ.<u>34,800/-</u><br>ಒಟ್ಟು ಮೊತ್ತ ರೂ.**43,500/-**<br><br>ಮೇಲಿನ ಕಾಮಗಾರಿಯನ್ನು ಅಧಿಕೃತ ಗುತ್ತಿಗೆದಾರರಿಗೆ ನೀಡಲಾಗಿದ್ದು ಆಕ್ಷೇಪಣೆಯಲ್ಲಿನ ರೂ.43,500/-ಗಳನ್ನು ಗುತ್ತಿಗೆದಾರರ ಮುಂದಿನ ಕಾಮಗಾರಿ ಹುಂಡಿಯಲ್ಲಿ ಕಡಿತಗೊಳಿಸಿ ವಿಶ್ವವಿದ್ಯಾನಿಲಯದ ಸಂಬಂಧಿಸಿದ ಖಾತೆಗೆ ಜಮಾ ಮಾಡಲು ಕ್ರಮವಹಿಸಿ ಮಾಹಿತಿಯನ್ನು/ದಾಖಲೆಗಳನ್ನು ಮುಂದಿನ ಲೆಕ್ಕಾ ಪರಿಶೋಧನೆಗೆ ಸಲ್ಲಿಸಲಾಗುವುದು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ. |

| | | |
|---|---|---|
| **144** | **<u>ಕಬ್ಬಿಣವನ್ನು ಒಂದನೇ ಅಂತಸ್ಥಿಗೆ ಎತ್ತುವಳಿ ಮಾಡಿರುವುದಕ್ಕೆ ಹೆಚ್ಚುವರಿಯಾಗಿ ಪಾವತಿಸಿರುವ ಬಗ್ಗೆ :– (ಇಂಜಿನಿಯರಿಂಗ್ ವಿಭಾಗ)</u>**<br><br>2016–17ನೇ ಸಾಲಿಗೆ ಪ್ಯಾಕೇಜ್–2ರಲ್ಲಿ Construction of main block (Administrative Block) Boy's Hostel and allied work at Satellite P.G Centre Chamaraja Nagar ಇಲ್ಲಿನ 5ನೇ ಮತ್ತು ಭಾಗಶಃ ಬಿಲ್ಲನ್ನು ಬಿ.ಆರ್.ನಂ489 ದಿನಾಂಕ:23.11.2016ರಲ್ಲಿ ರೂ.1,83,24,070/–ಗಳನ್ನು ಪಾವತಿಸಿದೆ. EMB ಯಲ್ಲಿ ಕಬ್ಬಿಣದ ಅಳತೆಯನ್ನು Pre-measurementನ ಪುಟ ಸಂಖ್ಯೆ 73 ರಲ್ಲಿ 0.75 ಮೆಟ್ರಿಕ್ ಟನ್ ಹಾಗೂ ಪುಟ ಸಂಖ್ಯೆ 74ರಲ್ಲಿ 1.53 ಮೆಟ್ರಿಕ್ ಟನ್ ಕಬ್ಬಿಣದ ಕೆಲಸವನ್ನು ಒಟ್ಟಾರೆ 2.28 ಮೆಟ್ರಿಕ್ ಟನ್ ನಿರ್ವಹಿಸಿರುವುದಾಗಿ ದಾಖಲಿಸಿದೆ. ಸದರಿ ಕಬ್ಬಿಣವನ್ನು ನೆಲದಿಂದ ಒಂದನೇ ಮಹಡಿಗೆ ಎತ್ತುವಳಿ ಮಾಡುವಾಗ ಬಿಲ್ಲಿನಲ್ಲಿ ಪುಟ ಸಂಖ್ಯೆ 7 ರಲ್ಲಿ ಐಟಂ.63, 65, 67 & 69 ಎಂದು ಒಟ್ಟು 24509 ಮೆಟ್ರಿಕ್ ಟನ್ ಕಬ್ಬಿಣವನ್ನು ಎತ್ತುವಳಿ ಮಾಡಿದೆ ಎಂದು ಪಾವತಿಸಲಾಗಿದೆ. ಕಬ್ಬಿಣದ ಕೆಲಸವನ್ನು ನಿರ್ವಹಿಸದೇ ಹೆಚ್ಚಿಗೆ 0.1709 ಮೆಟ್ರಿಕ್ ಟನ್ ಎತ್ತುವಳಿ ಮಾಡಿರುವುದಾಗಿ ಕಂಡು ಬರುತ್ತದೆ. ಇದಕ್ಕೆ ದರ ಮೆಟ್ರಿಕ್ ಟನ್‌ಗೆ 500/– ರಂತೆ ರೂ.8,545/–ಗಳು ಹೆಚ್ಚಿಗೆ ಪಾವತಿಸಲಾಗಿದೆ. ಈ ವಿಚಾರವಾಗಿ ವಿಚಾರಣಾ ಸಂಖ್ಯೆ:72(ಎ)/2018–19 ದಿನಾಂಕ:29.11.2018 ರಲ್ಲಿ ಮೇಲೆ ವಿವರಿಸಿರುವಂತೆ ವಸೂಲಿಸಲು ಸೂಚಿಸಲಾಗಿರುತ್ತದೆ. ಇದರ ಬಗ್ಗೆ ಯಾವುದೇ ಕ್ರಮದ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಹೆಚ್ಚುವರಿಯಾಗಿ ಪಾವತಿಸಿರುವ ಎತ್ತುವಳಿ ಮೊತ್ತ **ರೂ.8,545/–ಗಳನ್ನು ವಸೂಲಿಸುವಂತೆ ಸೂಚಿಸಿದೆ.** | ಚಾಮರಾಜನಗರ ಬಾಲಕರ ಪಿ.ಜಿ ಹಾಸ್ಟೆಲ್ ಕಾಮಗಾರಿಗೆ ಒಂದನೇ ಅಂತಸ್ಥಿಗೆ ಕಬ್ಬಿಣ ಎತ್ತುವಳಿ ಮಾಡುವ ಬಾಬ್ತು ರೂ.8,545/–ಗಳನ್ನು ವಸೂಲಿಸಿ ಮಾಹಿತಿಯನ್ನು ಮುಂದಿನ ಲೆಕ್ಕಾ ಪರಿಶೋಧನೆಗೆ ಒದಗಿಸಲಾಗುವುದು ಎಂಬ ಅಂಶವನ್ನು ನಿವೇದಿಸಲಾಗಿದೆ. |

| | | |
|---|---|---|
| **145** | **<u>ನಿಗದಿತ ಕಾಲಾವಧಿಯಲ್ಲಿ ನಿಶ್ಚಿತ ಪ್ರಗತಿಯನ್ನು ಸಾಧಿಸುವಲ್ಲಿ ವಿಫಲರಾಗಿರುವ ಬಗ್ಗೆ:– (ಇಂಜಿನಿಯರಿಂಗ್ ವಿಭಾಗ)</u>**<br>ಗುತ್ತಿಗೆ ಸಂಸ್ಥೆಯವರಿಗೆ ಪ್ಯಾಕೇಜ್–3 ರಲ್ಲಿನ ಕಾಮಗಾರಿ ಕೆಲಸವನ್ನು ಪ್ರಾರಂಭಿಸಲು ದಿನಾಂಕ 26.02.2016 ರಂದು ಸ್ಥಳವನ್ನು ವಹಿಸಿಕೊಡಲಾಗಿದೆ. ದಿನಾಂಕ: 25.05.2017 ರ ಅಂತ್ಯಕ್ಕೆ ಸದರಿ ಕೆಲಸವನ್ನು ಪೂರ್ಣಗೊಳಿಸಬೇಕಾಗಿದ್ದರೂ ಸಹಾ ದಿ:31.03.2017 ರ ಅಂತ್ಯಕ್ಕೆ (ಮಾಸಿಕ ನಿಶ್ಚಿತ ಪ್ರಗತಿ ರೂ.1,61,46058.00) 13 ಮಾಸಿಕಕ್ಕೆ ರೂ.20,98,98,754.00 ಗಳ ಪ್ರಗತಿಯನ್ನು ಸಾಧಿಸಬೇಕಾಗಿರುತ್ತದೆ. ಇದರಲ್ಲಿ 2015–16 ನೇ ಸಾಲಿಗೆ ರೂ.95,54,511.00 ಗಳ ಪ್ರಗತಿಯನ್ನು ಹಾಗೂ 2016–17ನೇ ಸಾಲಿಗೆ 9,45,80,819.00 ಗಳ ಪ್ರಗತಿ ಸಾಧಿಸಿದ್ದು ಒಟ್ಟಾರೆ ರೂ. 10,41,35,330.00 ಗಳ ಪ್ರಗತಿ ಸಾಧಿಸಿದಂತಾಗುತ್ತದೆ.<br>ದಿನಾಂಕ:31.03.2017 ರ ಅಂತ್ಯಕ್ಕೆ ರೂ.10,57,63,424.00 ಗಳ ಪ್ರಗತಿ ಕುಂಠಿತವಾಗಿರುತ್ತದೆ. ಕುಂಠಿತ ಪ್ರಗತಿಗೆ KW-4 ರ ನಿಯಮದಡಿ Condition of Contract-A Genral Clause (41) ರ ಪ್ರಕಾರ ಹಾಗೂ P.W.G. 65gÀ Clause 2(d) ಪ್ರಕಾರ ಕುಂಠಿತ ಪ್ರಗತಿಗೆ ದಂಡವನ್ನು ವಿಧಿಸಬೇಕಾಗಿದ್ದು, ಲೆಕ್ಕಪರಿಶೋಧನಾ ಸಂದರ್ಭದಲ್ಲಿ ವಿಚಾರಣೆ ಸಂಖ್ಯೆ 76/2018–19 ದಿನಾಂಕ:03.12.2018 ರಲ್ಲಿ ವಿಚಾರಣೆ ನೀಡಲಾಗಿದ್ದು ಕೈಗೊಂಡ ಕ್ರಮದಬಗ್ಗೆ ಯಾವುದೇ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸದರಿ ಕಾಮಗಾರಿ ಎಲ್ಲಾ ಕೆಲಸಗಳನ್ನು ದಿನಾಂಕ:25.05.2017ರ ಅಂತ್ಯಕ್ಕೆ ಪೂರ್ಣಗೊಳಿಸಬೇಕಾಗಿರುವುದರಿಂದ ಕುಂಠಿತ ಪ್ರಗತಿಯಾಗಿದ್ದಲ್ಲಿ ಮುಂದಿನ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ಹಾಜರುಪಡಿಸಲು ಸೂಚಿಸಿದೆ. | Consfreeetion of main block boy's hostel at Chamarajanagar<br>ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ವಹಿಸಿದ್ದು 2015–16 ಮತ್ತು 2016–17 ನೇ ಸಾಲಿಗೆ ರೂ.10,41,35,330/–ಗಳ ಪ್ರಗತಿ ಸಾಧಿಸಿದ್ದು ಮುಂದಿನ ಅವಧಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವ ಗುರಿ ಹೊಂದಿದ್ದು ನಿಗಧಿತ ಅವಧಿಯಲ್ಲಿ ಕಾಮಗಾರಿಯ ಎಲ್ಲಾ ಕೆಲಸಗಳು ಪೂರ್ಣವಾಗಿದ್ದು ಸಾಧನೆ ತೃಪ್ತಿದಾಯಕವಾಗಿರುತ್ತದೆ. ನಿಗಧಿತ ಕಾಲಾವಧಿಯಲ್ಲಿ ನಿಶ್ಚಿತ ಪ್ರಗತಿಯು ಕುಂಠಿತವಾಗಿದ್ದರೂ ಸಹ ನಂತರದ ಅವಧಿಯಲಲಿ ಪೂರ್ಣ ಪ್ರಮಾಣದ ಪ್ರಗತಿಯ ಸಾಧನೆಯಾಗಿರುತ್ತದೆ ಯೆಂದು ಈ ಮಾಹಿತಿಯನನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಲಾಗುವುದೆಂದು ನಿವೇದಿಸಲಾಗಿದೆ. |

146

**ಲೆಕ್ಕಪರಿಶೋಧನೆಗೆ ಎಲೆಕ್ಟ್ರಾನಿಕ್ ಅಳತೆ ಪುಸ್ತಕವನ್ನು ಹಾಜರು ಪಡಿಸದಿರುವುದು :- (ಇಂಜಿನಿಯರಿಂಗ್ ವಿಭಾಗ)**

2016–17 ನೇ ಸಾಲಿನಲ್ಲಿ ಭಾರತ ಸರ್ಕಾರದ ಅಂಗ ಸಂಸ್ಥೆಗಳು ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಗಳ ಸಂಶೋಧನೆಗಾಗಿ ಬಿಡುಗಡೆಯಾದ ಅನುದಾನದ ವಿವರಗಳನ್ನು ಮೇಲಿನಂತೆ ಒದಗಿಸುತ್ತ ಮೇಲಿನ ವಿಷಯವನ್ನು ಗಣನೆಗೆ ತೆಗೆದುಕೊಳ್ಳುವಂತೆ ನಿವೇದಿಸಲಾಗಿದೆ.
</td>
</tr>
</table>

| | | |
|---|---|---|
| 170 | **<u>ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಳ್ಳಲಾಗಿರುವ ತೀರ್ಮಾನಗಳನ್ನು ಸರ್ಕಾರದಿಂದ ಅನುಮೋದನೆ ಪಡೆದಿರುವ ವಿವರಗಳನ್ನು ತಪಾಸಣೆಗೆ ಹಾಜರುಪಡಿಸದಿರುವುದು :– (ಆಡಳಿತ ವಿಭಾಗ)</u>**<br>2016–17ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000ರ ನಿಯಮ 41ರ ಮತ್ತು ಇದರ ಅಡಿಯಲ್ಲಿ ಬರುವ ಉಪನಿಯಮ 1 ರಿಂದ 7ರವರೆಗಿನ ನಿಯಮಗಳಂತೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯು ತೆಗೆದುಕೊಳ್ಳಲಾದ ನಿರ್ಣಯಗಳನ್ನು ಸರ್ಕಾರದ ಅನುಮೋದನೆಗಾಗಿ ಕಳುಹಿಸಿಕೊಡಲಾಗಿರುವ ನಿರ್ಣಯಗಳನ್ನು ಸರ್ಕಾರದಿಂದ ಅನುಮೋದನೆ ಪಡೆದಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕತಪಾಸಣೆ ವಿಚಾರಣೆ ಸಂಖ್ಯೆ:08/07.07.2018ರನ್ವಯ ಕೋರಲಾಗಿ ತಪಾಸಣೆಯ ಅವಧಿಯು ಮುಕ್ತಾಯವಾಗುವವರೆಗೂ ಸಲ್ಲಿಸದೆ ಇರುವುದರಿಂದ ತಪಾಸಣೆಯಲ್ಲಿ ಸಿಂಡಿಕೇಟ್ ಸಭೆಗಳಲ್ಲಿ ಆರ್ಥಿಕ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ತೆಗೆದುಕೊಳ್ಳಲಾಗಿರುವ ನಿರ್ಣಯಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ 2016–17 ನೇ ಸಾಲಿನಲ್ಲಿ ಸಿಂಡಿಕೇಟ್ ಸಭೆಯಲ್ಲಿ ಮಂಡಿತವಾಗಿ ಅನಿಮೋಧಿತವಾಗಿರುವ ನಿರ್ಣಯಗಳ ವಿವರವನ್ನು ಹಾಜರುಪಡಿಸಲು ಸೂಚಿಸಲಾಗಿದೆ<br>ಈ ಸಂಬಂಧದ ವಿವರಗಳನನು ಮುಂದಿನ ಲೆಕ್ಕ ಪರಿಶೋಧನಗೆ ಹಾಜರುಪಡಿಸಲಾಗುವುದು |

| | | |
|---|---|---|
| **171** | **<u>ವಾರ್ಷಿಕ ದಾಸ್ತಾನು ಪರಿಶೀಲನೆಯ ಕಡತಗಳನ್ನು ತಪಾಸಣೆಗೆ ಹಜರುಪಡಿಸದಿರುವುದು :– (ಆಡಳಿತ ವಿಭಾಗ)</u>**<br>2016–17ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಲ್ಲಿನ ಎಲ್ಲಾ ಪೀಠೋಪಕರಣಗಳು, ವಿದ್ಯುತ್ ಉಪಕರಣಗಳು, ಗಣಕಯಂತ್ರಗಳು ಹಾಗೂ ಇತರೆ ಎಲ್ಲಾ ಬೆಲೆಬಾಳುವ ಅಮೂಲ್ಯ ವಸ್ತುಗಳ ಬಗ್ಗೆ ಪ್ರತಿ ಆರ್ಥಿಕ ವರ್ಷದ ಸಂಹಿತೆ ಅನುಚ್ಛೇದ 169ರನ್ವಯ ಬೇರೆ ಕಛೇರಿ ಅಧಿಕಾರಿಗಳನ್ನು ನಿಯೋಜಿಸಿಕೊಂಡು ವಸ್ತುಗಳ ದಾಸ್ತಾನುಗಳನ್ನು ಅವರ ಸಮುಖದಲ್ಲಿ ವಾರ್ಷಿಕ ದಾಸ್ತಾನು ಪರಿಶೀಲನೆ ಕಾರ್ಯವನ್ನು ಕೈಗೊಂಡು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದಿರುವ ವರದಿಯನ್ನು ಆರ್ಥಿಕ ಸಮಿತಿ ಅನುಚ್ಛೇದ 168ರನ್ವಯ ಅನುಪಯುಕ್ತ ವಸ್ತುಗಳನ್ನು ಪಟ್ಟಿ ಮಾಡಿ ವಿಲೇವಾರಿ ಮಾಡಿರುವ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕಪತ್ರ ವಿಚಾರಣಾ ಪತ್ರ ಸಂಖ್ಯೆ 55 ದಿನಾಂಕ:01.08.2018ರಂದು ಕೋರಲಾಗಿ ಯಾವುದೇ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲವಾದ್ದರಿಂದ ಕಛೇರಿಯ ಮುಖ್ಯಸ್ಥರು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ. | ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಲ್ಲಿನ ಪೀಠೋಪಕರಣಗಳು, ವಿದ್ಯುತ್ ಉಪಕರಣಗಳು, ಗಣಕಯಂತ್ರಗಳು ಹಾಗೂ ಇತರೆ ಬೆಲೆ ಬಾಳುವ ಅಮೂಲ್ಯ ವಸ್ತಗಳ ವಾರ್ಷಿಕ ದಾಸ್ತಾನು ಪರಿಶೀಲನೆ ವರದಿಯನ್ನು 2016–17 ನೇ ಸಾಲಿಗೆ ಒದಗಿಸಿಲ್ಲವೆಂದು ಕಂಡಿಕೆ 171 ರಲ್ಲಿ ಪ್ರಸ್ತಾಪಿಸಲಾಗಿರುತ್ತದೆ.<br><br>ಈ ಸಂಬಂಧ ಸದರಿ 2016–17ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನೆಯ ಕಾರ್ಯವನ್ನು ಸಕ್ರಮ ಪ್ರಾದಿಕಾರದ ಸದಸ್ಯರನ್ನೊಳಗೊಂಡ ತಂಡವು ಪರಿಶೀಲನೆ ನಡೆಸಿ ಸಲ್ಲಿಸಿರುವ ವಿವಿರವಾದ ವರದಿಯನ್ನು ಇದರೊಂದಿಗೆ ಮಾಹಿತಿಗಾಗಿ ಲಗತ್ತಿಸುತ್ತ (ದಿನಾಂಕ:03.07.2018ರ ಪತ್ರ) ಸದರಿ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

| | | |
|---|---|---|
| **172** | **<u>ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :– (ಜೈನಾಲಜಿ ಮತ್ತು ಪ್ರಾಕೃತ್ ಸ್ನಾತಕೋತ್ತರ ಅಧ್ಯಯನ ವಿಭಾಗ)</u>**<br><br>2016–17ನೇ ಸಾಲಿನಲ್ಲಿ ವಿಭಾಗದಲ್ಲಿ ನಗದು ಪುಸ್ತಕವನ್ನು ನಿರ್ವಹಿಸದೇ ಇರುವುದರಿಂದ, ಬಿ.ಆರ್.ವಹಿ ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ರೀತ್ಯಾ ಪಾವತಿಗೆ ಸಂಬಂಧಿಸಿದಂತೆ ವೋಚರ್‌ಗಳನ್ನು ಪರಿಶೀಲಿಸಲಾಯಿತು. ಹಾಜರುಪಡಿಸಿದ ಬ್ಯಾಂಕ್‌ನ ಉಳಿತಾಯ ಖಾತೆ ಸಂಖ್ಯೆ:64147600288ರ ಬ್ಯಾಂಕ್ ಪಾಸ್ ಪುಸ್ತಕ ರೀತ್ಯ ಆರ್ಥಿಕ ವ್ಯವಹಾರಗಳನ್ನು ಪರಿಶೀಲಿಸಲಾಗಿ, ಧನಾದೇಶ ಸಂಖ್ಯೆ 689579, ದಿನಾಂಕ:19.08.2016ರಲ್ಲಿ ರೂ.57,480/– ಹಾಗೂ ದಿನಾಂಕ:21.10.2016ರಲ್ಲಿ ಧನಾದೇಶ ಸಂಖ್ಯೆ:689582 ರಲ್ಲಿ ರೂ.15725/–ಗಳನ್ನು ರಾಜೇಂದ್ರ ಪಾಟೀಲ್‌ರವರಿಗೆ ಪಾವತಿ ಮಾಡಲಾಗಿದ್ದು, ಪಾವತಿಗೆ ಸಂಬಂಧಪಟ್ಟ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:05/2018–19 ದಿನಾಂಕ:29.12.2018ರಲ್ಲಿ ನೀಡಲಾಗಿ, ಲೆಕ್ಕಪರಿಶೋಧನೆಗೆ ಸಂಬಂಧಪಟ್ಟ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದ ಕಾರಣ **ರೂ.83,205/–ಗಳನ್ನು ಆಕ್ಷೇಪಣೆಗೆ** ಸೂಚಿಸಿದೆ. | ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ಜೈನಾಲಜಿ ಮತ್ತು ಪ್ರಾಕೃತ ಸ್ನಾತಕೋತ್ತರ ಆಧ್ಯಯನ ವಿಭಾಗದ ಉಳಿತಾಯ ಖಾತೆ ಸಂಖ್ಯೆ:64147600288 ರಲ್ಲಿ ಈ ವೆಚ್ಚ ಭರಿಸಿರುವ ವಿವರಗಳನ್ನು ಕೆಳಗಿನಂತೆ ವಿವರಿಸಿದೆ.<br><br>ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಆಚರಣೆ ಸಂಬಂಧ "ರಾಷ್ಟ್ರೀಯ ಪ್ರಾಕೃತ ಸಾಹಿತ್ಯ ಒಂದು ಚಿಂತನ"ದ ಬಗ್ಗೆ ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮದ ಸಂಬಂಧವಾಗಿ ದಿನಾಂಕ:25.07.2016 ರಂದು ಡಿ.ಸಿ ಹುಂಡಿಯನ್ನು ಸಲ್ಲಿಸಿದ್ದು ಅದರನ್ವಯ ಧನಾದೇಶ ಸಂಖ್ಯೆ:176364 ದಿನಾಂಕ:10.08.2016 ರಂದು ರೂ.57,485/–ಗಳಿಗೆ ಧನಾದೇಶ ವಿತರಿಸಿದ್ದು ಸದರಿ ಧನಾದೇಶವನ್ನು ವಿಭಾಗದ ಬ್ಯಾಂಕ್ ಖಾತೆ ಸಂಖ್ಯೆ: 64147600288, ದಿನಾಂಕ:18.08.2016 ರಂದು ಜಮಾ ತೆಗೆದುಕೊಂಡು ದಿನಾಂಕ:19.08.2016 ರಂದು ಧನಾದೇಶ ಸಂಖ್ಯೆ:689579 ರಲ್ಲಿ ರೂ.57,485/–ಗಳನ್ನು ಡ್ರಾ ಮಾಡಿ ವೆಚ್ಚ ಭರಿಸಲಾಗಿರುತ್ತದೆ.<br><br>ಮುಂದುವರೆದು ಮೆ॥ ವೈ ಎಸ್ ಬ್ರಹ್ಮಯ್ಯ ಕಸ್ತೂರಿಬಾಯಿ ಚಾರಿಟಬಲ್ ಟ್ರಸ್ಟ್ (ರಿ) ತುಮಕೂರು ಇವರಿಂದ ಧನಾದೇಶ ಸಂಖ್ಯೆ 699943 ದಿನಾಂಕ:03.09.2016 ರಲ್ಲಿ ರೂ.10,000/–ಗಳು ಮತ್ತು ಮೆ॥ ಶ್ರೀ ರತನ್‌ಲಾಲ್ ಕಂದನ್‌ಲಾಲ್ ಪಾಟ್ನಿ ಫೌಂಡೇಶನ್ ಇವರಿಂದ ಧನಾದೇಶ ಸಂಖ್ಯೆ: 235545 ದಿನಾಂಕ:27.09.2016 ರಲ್ಲಿ ರೂ.15,725/–ಗಳನ್ನು ಶ್ರೀ ರಾಜೇಂದ್ರ ಪಾಟೀಲ್ ಸಂಶೋಧನಾ ವಿಧ್ಯಾರ್ಥಿ ಇವರಿಗೆ ಕೊಡುಗೆಯಾಗಿ ಸಂಸ್ಥೆಯ ದಾನಿಗಳು ನೀಡಿದ್ದು, ಈ ಎರಡು ಧನಾದೇಶಗಳನ್ನು ಅಧ್ಯಕ್ಷರು ರವರ ಹೆಸರಿಗೆ ನೀಡಿರುತ್ತಾರೆ. ಅದರನ್ವಯ ಈ ಎರಡು ಧನಾದೇಶಗಳನ್ನು ಖಾತೆಗೆ ಜಮಾ ತೆಗೆದುಕೊಂಡು ಶ್ರೀ ರಾಜೇಂದ್ರ ಪಾಟೀಲ್ ಸಂಶೋಧನಾ ವಿದ್ಯಾರ್ಥಿ ಇವರ ಹೆಸರಿಗೆ ಧನಾದೇಶ ಸಂಖ್ಯೆ:689580 ದಿನಾಂಕ: 21.10.2016 ರಂದು ರೂ.10,000/–ಗಳು ಮತ್ತು ಧನಾದೇಶ |

| | | |
|---|---|---|
| | | ಸಂಖ್ಯೆ:689582 ದಿನಾಂಕ:21.10.2016 ರಂದು ರೂ.15,725/–ಗಳ ಧನಾದೇಶಗಳನ್ನು ವಿತರಿಸಿ ಸ್ವೀಕೃತಿ ಪತ್ರ ಪಡೆದುಕೊಳ್ಳಲಾಗಿದೆ. ರೂ.57,485/–ಗಳ ವೆಚ್ಚದ ಡಿ.ಸಿ ಬಿಲ್ಲುಗಳ ಪ್ರತಿ ಹಾಗೂ ಸಂಶೋಧನಾ ವಿದ್ಯಾರ್ಥಿಗೆ ಧನಾದೇಶ ವಿತರಿಸಿದ ಸ್ವೀಕೃತಿ ಪ್ರತಿ ಹಾಗೂ ಬ್ಯಾಂಕ್ ಖಾತೆಯ ಜೆರಾಕ್ಸ್ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ ರೂ.83,210/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ. |

| | | |
|---|---|---|
| **173** | **ಆದಾಯ ತೆರಿಗೆ ಬಿಲ್ಲಿನಲ್ಲಿ ಕಟಾಯಿಸಿ ಲೆಕ್ಕಶೀರ್ಷಿಕೆಗೆ ಜಮಾ ಮಾಡಿರುವ ವಿವರ ಹಾಜರುಪಡಿಸದೆಇರುವುದು (ಪುರಷ ವಿದ್ಯಾರ್ಥಿನಿಲಯ ಬ್ಲಾಕ್–2)**<br>2016–17 ನೇ ಸಾಲಿನ ಪುರುಷವಿದ್ಯಾರ್ಥಿ ನಿಲಯ ಬ್ಲಾಕ್–2 ಸರಸ್ವತಿಪುರಂ.ಮೈಸೂರು, ವಿದ್ಯಾರ್ಥಿಗಳ ಮೆಸ್ ಗುತ್ತಿಗೆಪಾವತಿ ಬಿಲ್ಲುಗಳನ್ನು ಪರಿಶೀಲಿಸಿದಾಗ, ಬಿಲ್ಲುಗಳಲ್ಲಿ ಶೇ.2.24 ರಂತೆ ಆದಾಯತೆರಿಗೆ ಕಟಾಯಿಸಲಾಗಿದ್ದು ಕಟಾಯಿಸಿರುವ ಮೊಬಲಗನ್ನು ಲೆಕ್ಕಶೀರ್ಷಿಕೆಗೆ ಜಮಾ ಮಾಡಿರುವ ಬ್ಯಾಂಕ್‌ಚಲನ್ ಸ್ವೀಕೃತಿಗಳನ್ನು ತಪಾಸಣೆಗೆ ಹಾಜರುಪಡಿಸಿರುವುದಿಲ್ಲ ವಾದಕಾರಣ ಬಿಲ್ಲುಗಳಲ್ಲಿ ಕಟಾಯಿಸಲಾದ ಮೊತ್ತ ರೂ. **39,555/–** ಗಳಿಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಪಾಲನಾ ವರದಿ ನೀಡುವ ತನಕ ಮೊಬಲಗನ್ನು ಆಕ್ಷೇಪಣೆಗೆ ಇಡುತ್ತಾ ಹಾಗೂ ಹಣಕಾಸು ಅಧಿಕಾರಿಗಳಿಂದ ಆದಾಯತೆರಿಗೆ ಜಮೆಯಾಗಿರುವ ಬಗ್ಗೆ ದೃಡೀಕೃತ ಪ್ರತಿಯನ್ನು ಹಾಜರುಪಡಿಸುವ ತನಕ ಆಕ್ಷೇಪಣೆಗೆ ಇಡಲಾಗಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ 2016–17 ನೇ ಸಾಲಿನಲ್ಲಿ ಪರುಷ ವಿದ್ಯಾರ್ಥಿನಿಲಯ ಮೈಸೂರು ಇಲ್ಲಿನ ಕಾಮಗಾರಿಯ ಬಿಲ್‌ನಲ್ಲಿ ಕಟಾಯಿಸಲಾದ ಅದಾಯ ತೆರಿಗೆಯನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಲಲಿ ಕಟಾಯಿಸಿರುವುದು, ಮತ್ತು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿರುವುದಕ್ಕೆ ಸಂಬಂಧಿಸಿದ್ದಾಗಿರುತ್ತದೆ<br>ಈ ಸಂಬಂಧಿದ ವಿವರಗಳನನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗುವುದು. |

| | | |
|---|---|---|
| 174 | **<u>ಬಿ.ಆರ್ ರಿಜಿಸ್ಟರ್‌ನಲ್ಲಿ ದಾಖಲು ಇರುವ ಹಾಗೂ ಭಾಗಶಃ ಪಾವತಿಸಿರುವ ಬಿಲ್ಲುಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದು:- (ವಿದ್ಯಾರ್ಥಿ ಕ್ಷೇಮಪಾಲನಾ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಾ ಪಾಲನಾ ವಿಭಾಗದ 2016-17ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿರುವ ಬಿ.ಆರ್ ರಿಜಿಸ್ಟರ್‌ನಲ್ಲಿ ದಾಖಲು ಇರುವಂತೆ ಭಾಗಶಃ ಬಿಲ್ಲುಗಳನ್ನು ಹಾಜರುಪಡಿಸಿರುವ ವಿಚಾರದಲ್ಲಿ ವಿಚಾರಣೆ ಸಂಖ್ಯೆ:19/2018-19 ದಿ:25.10.2018 ರಂದು ನೀಡಿರುವ ವಿಚಾರಣೆಗೆ ವಿವರಣೆ ನೀಡದೆ ಹಾಗೂ ಬಿ.ಆರ್ ರಿಜಿಸ್ಟರ್ ದಾಖಲು ಇರುವ ಪಾವತಿ ಸಾದಿಲ್ವಾರು ಬಿಲ್ಲು/ ಎ.ಸಿ ಬಿಲ್ಲು ಇತರೆ ಬಿಲ್ಲುಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಪಾವತಿಸಿರುವ ಬಿಲ್ಲುಗಳ ಮೊಬಲಗು **ರೂ.9,75,623/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**<br><br><table><tr><th>ಕ್ರ.ಸಂ</th><th>ಬಿ.ಆರ್ ನಂಬರ್/ ದಿನಾಂಕ</th><th>ಚೆಕ್ ನಂಬರ್/ ದಿನಾಂಕ</th><th>ಪಾವತಿ ಮೊಬಲಗು</th></tr><tr><td>1</td><td>39/ 31.08.2016</td><td>-</td><td>41,288</td></tr><tr><td>2</td><td>59/ 08.11.2016</td><td>-</td><td>8,80,002</td></tr><tr><td>3</td><td>101/ 31.01.2017</td><td>179837/ 08.02.2017</td><td>31,363</td></tr><tr><td>4</td><td>114/ 13.03.2017</td><td>698539/ 31.03.2017</td><td>22,970</td></tr><tr><td colspan="3">**ಒಟ್ಟು**</td><td>**9,75,623**</td></tr></table><br>ವಿವರದಲ್ಲಿ ತಿಳಿಸಿರುವಂತೆ ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ವಿಚಾರಣೆ ಸಂಖ್ಯೆ:19/2018-19 ದಿ:25.10.2018 ರಂದು ನೀಡಿರುವ ಪಾಲನಾ ವರದಿ ಪರಿಶೀಲಿಸಿದಾಗ ಭಾಗಶಃ ಬಿಲ್ಲುಗಳನ್ನು ಹಾಜರುಪಡಿಸಿರುವ ದಿನಾಂಕ:27.10.2018 ನೀಡಿರುವ ಪಾಲನಾ ವರದಿಯೊಂದಿಗೆ ಬಿಲ್ಲುಗಳನ್ನು ಬಿ.ಆರ್ ಸಂಖ್ಯೆ:65, 118, 119, 112 ಗಳನ್ನು ಹಾಜರುಪಡಿಸಿ ಉಳಿದ ಬಿಲ್ಲುಗಳ ಬಿ.ಆರ್ ನಂಬರ್ 39, 59, 101 ಮತ್ತು 114 ಪಾವತಿಸಿರುವ ಹಾಗೂ ಬಿ.ಆರ್ ರಿಜಿಸ್ಟರ್‌ನಲ್ಲಿ ದಾಖಲು ಇರುವಂತೆ ವಿಚಾರಣೆ ಅವಧಿ ಹಾಗೂ ಅನುಪಾಲನೆ ಸಲ್ಲಿಸಿರುವ ಅವಧಿಯಲ್ಲಿಯೇ ಕಡತ ಹಾಜರುಪಡಿಸದೆ ಮೇಲಿನ | ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ಬಿ.ಆರ್ ರಿಜಿಸ್ಟರ್‌ನಲ್ಲಿ ಇರುವಂತೆ ದಾಖಲು ಇರು ಎಲ್ಲಾ ಮೂಲ ಬಿಲ್ಲುಗಳನ್ನೂ ಪಾವತಿಗಾಗಿ ಹಣಕಾಸು ಶಾಖೆಗೆ ಪಾವತಿಗಗಿ ಸಲ್ಲಿಸಲಾಗಿದ್ದು, ಪಾವತಿ ನಂತರ ಅವುಗಳು ಹಣಕಾಸು ಶಾಖೆಯಲ್ಲೇ ಉಳಿದಿರುತ್ತದೆ.ಕ್ಷೇಮ ಪಾಲನಾ ವಿಭಾಗದಲ್ಲಿ ಜೆರಾಕ್ಸ್ ಪ್ರತಿಗಳನ್ನು ಮಾತ್ರ ನಿರ್ವಹಿಸಲಾಗಿದೆ ಈ ಎಲ್ಲಾ ಮೂಲ ಓಚರ್‌ಗಳನ್ನೂ ಕ್ರೂಢೀಕರಿಸಿ ಪ್ರತ್ಯೇಕವಾಗಿ ಹಣಕಾಸು ಶಾಖೆಯಲ್ಲಿ ಇಟ್ಟುಕೊಳ್ಳಲಾಗಿರುತ್ತದೆ. ಮರು ಪರಿಶೀಲನಾ ಸಮಯದಲ್ಲಿ ಅವುಗಳನ್ನು ಹಾಜರು ಪಡಿಸಲಾಗುತ್ತದೆ ಜೆರಾಕ್ಸ್ ಪ್ರತಿ ಓಚರ್‌ಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ. |

| | | |
|---|---|---|
| | ವಿವರದಂತೆ ಪಾವತಿಸಿರುವ ಬಿಲ್ಲುಗಳ ಮೊಬಲಗು ಆಕ್ಷೇಪಣೆಯಲ್ಲಿಡಲಾಗಿದೆ. | |

| | | |
|---|---|---|
| **175** | **<u>ಬಿ.ಆರ್ ವಹಿಯಲ್ಲಿ ದಾಖಲಿಸಿರುವಂತೆ ಸಂಬಂಧಪಟ್ಟ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು (ಪರೀಕ್ಷಾ ವಿಭಾಗ)</u>**<br>2016–17ನೇ ಸಾಲಿನ ಪರೀಕ್ಷಾಂಗ ವಿಭಾಗದ ಲೆಕ್ಕಪರಿಶೋಧನೆಯಲ್ಲಿ ಬಿ.ಆರ್‌ವಹಿಯಲ್ಲಿ ದಾಖಲಿಸಿರುವಂತೆ ಓಚರ್ಸ್‌ಗಳನ್ನು ಪರಿಶೀಲಿಸಾಗಿ, ಓಚರ್ಸ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕತಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:35/2018–19 ದಿನಾಂಕ:06.10.2018ರಲ್ಲಿ ನೀಡಲಾಗಿ, ಯಾವುದೇ ಓಚರ್ಸ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. 2016–17ನೇ ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಪರೀಕ್ಷಾಂಗ ಕಾರ್ಯಕ್ಕೆ ವೆಚ್ಚ ಭರಿಸಲಾಗಿರುವ **ರೂ.82,65,831/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದ್ದು,** ವಿವರಗಳನ್ನು **<u>ಅನುಬಂಧ–61ರಲ್ಲಿ</u>** ವಿವರಿಸಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ ಬಿ,ಆರ್ ವಹಿಯ ರೀತಿ ಅನುಬಂಧ–61 ರಲ್ಲಿ ಸೂಚಿತವಾಗಿರುವಂತೆ ಸದರಿ ಓಚರ್ಸ್‌ಗಳು ಪರೀಕ್ಷಾಂಗ ವಿಭಾಗದಲ್ಲಿ 2016–17 ನೇ ಸಾಲಿನಲ್ಲಿ ಭರಿಸಿದ ವೆಚ್ಚದ ಓಚರ್ಸ್‌ಗಳಿದ್ದು ಈ ಓಚರ್ಸ್‌ಗಳನ್ನು ಮುಂದಿನ ಲೆಕ್ಕತನಿಖೆಗೆ ಹಾಜರುಪಡಿಸಲು ಕ್ರಮವಹಿಲಾಗುವುದು ಎಂಬ ವಿಷಯವನ್ನು ಅವಗಾಹನೆಗೆ ತರಲಾಗಿದೆ |

**176** **<u>ಪಿ.ಎಸ್.ಎಫ್.ಎಸ್ (PSFS) ಯೋಜನೆಯಡಿ ಭರಿಸಲಾಗಿರುವ ವೆಚ್ಚದ ವಿವರ ಸಲ್ಲಿಸದಿರುವ ಬಗ್ಗೆ:– (ಹಣಕಾಸು ವಿಭಾಗ)</u>**

(ಎ) ದಿನಾಂಕ:21.01.2019 ರಂದು ಪುನರ್ ಪರಿಶೀಲನೆ ವೇಳೆಯಲ್ಲಿ ಹಾಜರುಪಡಿಸಿದ ಓಚರ್‌ಗಳಂತೆ 2016–17ನೇ ಸಾಲಿಗೆ ಪಿ.ಎಸ್.ಎಫ್.ಯೋಜನೆಯಡಿ ವೆಚ್ಚ ಭರಿಸಲಾದ ಡಿ.ಡಿ ಬಿಲ್ಲುಗಳನ್ನು ಹಾಜರುಪಡಿಸದೆ ಇರುವ ಡಿ.ಡಿ ಬಿಲ್ಲುಗಳು ಹಾಗೂ ಎ.ಸಿ ಬಿಲ್ಲುಗಳನ್ನು ಅನುಬಂಧದಲ್ಲಿ ತೋರಿಸಿರುವಂತೆ ಹಾಜರುಪಡಿಸಲಾಗಿದ್ದು, ಪರಿಶೀಲಿಸಲಾಗಿದ್ದು, ಅದರಂತೆ ಪಿ.ಎಸ್.ಎಫ್.ಎಸ್ ಯೊಜನೆಯಡಿ, ರೂ.1,16,65,535/– ಆಕ್ಷೇಪಣಾ ಮೊತ್ತದಲ್ಲಿ ರೂ.72,37,470/–ರ ಡಿ.ಸಿ/ಎ.ಸಿ ಬಿಲ್ಲುಗಳನ್ನು ಹಾಜರುಪಡಿಸಿರುತ್ತಾರೆ. ಹಾಗೂ ಕಾಲೇಜು ಅಭಿವೃದ್ಧಿ ಚಟುವಟಿಕೆಯ ಮೊತ್ತ **ರೂ.29,33,588/–ಕ್ಕೆ** ದಾಖಲೆಗಳನ್ನು ಪುನರ್ ಪರಿಶೀಲನಾ ವೇಳೆಯಲ್ಲಿ ಹಾಜರುಪಡಿಸಿರುವುದರಿಂದ ಉಳಿದ ಮೊತ್ತ **ರೂ.44,28,065/–ಗಳಿಗೆ** ಹಾಗೂ ಉಳಿದ ವಿಷಯಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸುವವರೆಗೂ **ರೂ.9,01,29,152/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**<u>ಪಾವತಿ ಓಚರ್‌ಗಳನ್ನು ಹಾಜರುಪಡಿಸದ ವಿವರ ಕೆಳಕಂಡಂತಿದೆ.</u>**

| ಕ್ರ.ಸಂ | ಘೋಷ್ವಾರೆ | ವಿವರ | ಆಕ್ಷೇಪಣೆ ಮೊತ್ತ |
|---|---|---|---|
| 1 | ಶುಲ್ಕ ನಷ್ಟದ ಮರುಭರಿಕೆ | ಮಾಹಿತಿ ನೀಡದಿರುವುದರಿಂದ | 51,02,438 |
| 2 | ಆದಾಯ ಹಂಚಿಕೆ | ಮಾಹಿತಿ ನೀಡದಿರುವುದರಿಂದ | 4,74,275 |
| 3 | ಸಣ್ಣ ಕಾಮಗಾರಿ ಮತ್ತು ಕಟ್ಟಡಗ ವಾರ್ಷಿಕ ನಿರ್ವಹಣೆ ಬಗ್ಗೆ. | ಕಾಮಗಾರಿ ವಿವರ ಹಾಜರುಪಡಿಸದಿರುವ ಬಗ್ಗೆ | 5,93,58,298 |
| 3 | ರಸಾಯನಿಕ ವಸ್ತುಗಳ ಖರೀದಿ ಬಗ್ಗೆ | ಪಾರದರ್ಶಕ ನಿಯಮಗಳ ಅನುಸಾರ ಖರೀದಿಸಿದ ಬ ಮಾಹಿತಿ ನೀಡದಿರುವುದರಿಂದ | 19,60,907 |
| 4 | ಪರಿಶಿಷ್ಟ ಜಾತಿ/ ವರ್ಗಗಳ ವಿದ್ಯಾರ್ಥಿಗಳ ಉತ್ತಮೀಕರಣ | ಕಡತ ಹಾಜರುಪಡಿಸದಿರುವುದರಿಂದ | 1,57,86,951 |
| 5 | ಕ್ರೀಡಾ ಚಟುಚಟಿಕೆಗಾಗಿ | ವೆಚ್ಚದ ವಿವರ ನೀಡದಿರುವ ಬಗ್ಗೆ | 19,88,001 |
| 6 | ಲೇಖನ ಸಾಮಾಗ್ರಿ | ಪಾರದರ್ಶಕ ನಿಯಮದ ಅನುಸಾರ ಖರೀದಿ ಬಗ್ಗೆ ಕಡತ ಹಾಜರುಪಡಿಸದಿರುವ ಬಗ್ಗೆ | 10,30,217 |
| 7 | ಕಖಈಖ ಯೋಜನೆ | ಕಡತವನ್ನು ಹಾಜರುಪಡಿಸದಿರುವ ಬಗ್ಗೆ | 44,28,065 |

ಪಿ.ಎಸ್.ಎಫ್.ಎಸ್ (PSFS) ಯೋಜನೆಯಡಿ 2016–17 ನೇ ಸಾಲಿನಲ್ಲಿ ಭರಿಸಲಾಗಿರುವ ರೂ.9,01,29,152/–ಗಳ ಬಗ್ಗೆ 2016–17 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 176 ರಲ್ಲಿ ಆಕ್ಷೇಪಿಸಿ ಆಕ್ಷೇಪಣೆಯಲ್ಲಿಡಲಾಗಿದೆ ಸದರಿ ವೆಚ್ಚ ರೂ.9,01,29,152/–ಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಅಂದರೆ ಶುಲ್ಕ ನಷ್ಟದ ಮರುಭರಿಕೆ, ಆದಾಯ ಹಂಚಿಕೆ, ಸಣ್ಣಕಾಮಗಾರಿ ಮ್ತು ಕಟ್ಟಡಗಳ ವಾರ್ಷಿಕ ನಿರ್ವಹಣೆ, ರಸಾಯನಿಕ ವಸ್ತುಗಳ ಖರೀದಿ ಪರಿಶಿಷ್ಟ ಜಾತಿ ವರ್ಗಗಳ ವಿದ್ಯಾರ್ಥಿಗಳ ಉನ್ನತೀಕರಣ ಕ್ರೀಡಾ ಚಟುವಟಿಕೆ ಲೇಖನ ಸಾಮಗ್ರಿ, ಹಾಗೂ ಪಿ.ಎಸ್.ಎಫ್.ಎಸ್ ಯೋಜನೆಯಡಿ ತುಂಬಾ ಅವಶ್ಯಕವಾದುದರಿಂದ 2016–17 ನೇ ಸಾಲಿನಲ್ಲಿ ವೆಚ್ಚವನ್ನು ಭರಿಸಲಾಗಿದ್ದು, 2016–17 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 176 ರಲ್ಲಿ ಪ್ರಸ್ತಾಪಿಸಿರುವಂತೆ ಸಣ್ಣ ಕಾಮಗಾರಿ ಮತ್ತು ಕಟ್ಟಡಗಳ ವಾರ್ಷಿಕ ನಿರ್ವಹಣೆ, ಕಾಮಗಾರಿಗಳು ಹಾಗೂ ಪಿ.ಎಸ್.ಎಫ್.ಎಸ್ ಯೋಜನೆಯ ವಿವರಗಳನ್ನು ಹಾಗೂ ಮೇಲೆ ವಿವರಿಸಿದ ಎಲ್ಲಾ ಯೋಜನೆಯ ದಾಖಲಾತಿಗಳನ್ನು ಮುಂದಿನ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಹಾಜರು ಪಡಿಸಲಾಗುವುದೆಂಬ ಅಂಶವನ್ನು ನಿವೇದಿಸಲಾಗಿದೆ.

| | |
|---|---|
| ಒಟ್ಟು ರೂ. | 9,01,29,152 |

(ಬಿ) ವಾರ್ಷಿಕ ಲೆಕ್ಕಪತ್ರದಲ್ಲಿ ಪಿ.ಎಸ್.ಎಫ್ ಖಾತೆಗೆ ಜಿ.ಆರ್.ಎ ಖಾತೆಯಿಂದ ನಿಗದಿಯಾಗಿರುವ ಮೊತ್ತಕ್ಕಿಂತ ರೂ. 18,78,64,250/–ಗಳನ್ನು ಹೆಚ್ಚುವರಿಯಾಗಿ ತೆಗೆದುಕೊಂಡಿರುವುದಕ್ಕೆ ಲೆಕ್ಕ ಸಮನ್ವಯಗೊಳಿಸಿಕೊಂಡು ಹಾಗೂ ಲೆಕ್ಕಹೊಂದಾಣಿಕೆ ಮಾಡಿಕೊಂಡು ಇದೆ ಮಾದರಿಯಲ್ಲಿ ಇತರೆ ಖಾತೆಗಳಲ್ಲೂ ಸಹ ವಾರ್ಷಿಕ ಲೆಕ್ಕಪತ್ರಗಳಲ್ಲಿ ವಿವಿಧ ರೀತಿಯ ಜಮೆ ಖರ್ಚುಗಳು ತಾಳೆಯಾಗದಿರುವುದು ಕಂಡುಬಂದಿರುವುದರಿಂದ ವಾರ್ಷಿಕ ಲೆಕ್ಕಪತ್ರ ಹಾಗೂ ವಾಸ್ತವಿಕ ಸ್ವೀಕೃತಿ, ಖರ್ಚು ವೆಚ್ಚ, ಹೂಡಿಕೆ ಇತರೆ ಹೊಣೆಗಾರಿಕೆ ಮತ್ತು ಲಿಕ್ವಿಡಿಟಿಗಳನ್ನು ಹೆಚ್ಚುವರಿ ಗಳಿಕೆ (Surflace) ಇತ್ಯಾದಿಗಳನ್ನು ತಾಳೆ ಮಾಡಿ ಲೆಕ್ಕಹೊಂದಾಣಿಕೆ ಮಾಡಿಕೊಳ್ಳಲು ನಿರ್ದೇಶಿಸಿದೆ. ಹಾಗೂ ವೆಚ್ಚದ ಬಗ್ಗೆ ಖಚಿತಪಡಿಸಲು ಸಾಧ್ಯವಾಗಿರುವುದಿಲ್ಲ.

| | | |
|---|---|---|
| 177 | <u>ವಾಹನಗಳ ಲಾಗ್ ಪುಸ್ತಕಗಳನ್ನು ಒದಗಿಸದಿರುವ ಬಗ್ಗೆ :– (ಹಣಕಾಸು ವಿಭಾಗ)</u><br>2016–17ನೇ ಸಾಲಿನಲ್ಲಿ ಮೇ–2016 ರ ಮಾಹೆಯಲ್ಲಿ 16 ಸಂಖ್ಯೆ ಒಟ್ಟು ವಾಹನಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಪ್ರತಿ ಮಾಹೆ ಪೆಟ್ರೋಲ್/ಡೀಸೆಲ್ ಖರೀದಿ ಬಾಬ್ತು ಮೇ॥ ವಿಜಯ ಸರ್ವಿಸ್ ಸ್ಟೇಷನ್ ಮೈಸೂರು ರವರಿಗೆ ಹಣ ಪಾವತಿಸಲಾಗುತ್ತಿದೆ.<br>ಲೆಕ್ಕಶೀರ್ಷಿಕೆ 127 ರಡಿಯಲ್ಲಿ ವಾಹನಗಳು ನಿರ್ವಹಣೆ/ದುರಸ್ಥಿ ಮತ್ತು ಇತರೆ ವೆಚ್ಚಗಳ ಬಾಬ್ತು ಮೊಬಲಗು ರೂ.37,95,091/–ಗಳನ್ನು ವಾರ್ಷಿಕ ಲೆಕ್ಕಪತ್ರಗಳ ರೀತ್ಯಾ ಪಾವತಿಸಲಾಗಿದೆ.<br>ಸದರಿ 2016–17ನೇ ಸಾಲಿನಲ್ಲಿ ವಾಹನಗಳ ನಿರ್ವಹಣೆಗಾಗಿ ವಾರ್ಷಿಕ ನಿರ್ವಹಣಾ ಅಂದಾಜು ಪಟ್ಟಿ (ಎ.ಎಂ.ಇ) ತಯಾರಿಸಿ ಅನುಮೋದನೆ ಪಡೆದಿರುವುದಿಲ್ಲ. ಪಾವತಿ ವೋಚರ್‌ಗಳ ತಪಾಸಣೆ ವೇಳೆ ಸಂಬಂಧಪಟ್ಟ ಎಲ್ಲಾ ವಾಹನಗಳ ಲಾಗ್ ಬುಕ್‌ಗಳನ್ನು ಒದಗಿಸಲು ಕೋರಿ ಲೆಕ್ಕತಪಾಸಣಾ ವಿಚಾರಣಾ ಪತ್ರಸಂಖ್ಯೆ:129 ದಿ:30.07.2018 ಕ್ಕೆ ನೀಡಲಾಗಿತ್ತು. ಯಾವುದೇ ದಾಖಲಾತಿ/ ಲಾಗ್‌ಬುಕ್‌ಗಳನ್ನು ತಪಾಸಣಾ ವೇಳೆಯಲ್ಲಿ ಹಾಜರುಪಡಿಸದ ಕಾರಣ 2016–17ರಲ್ಲಿ ಈ ಲೆಕ್ಕಶೀರ್ಷಿಕೆ ಅಡಿ ಪಾವತಿ ಆಗಿರುವ ಒಟ್ಟು ಮೊತ್ತ **ರೂ.37,95,091/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | 2016–17ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 177 ರಲ್ಲಿ ವಾಹನಗಳ ಬಗ್ಗೆ ಪೆಸ್ತಾಪಿಸಿ ರೂ.37,95,091/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಈ ಸಂಬಂಧ ವಿಶ್ವವಿದ್ಯಾನಿಲಯದ ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ಪ್ರಸ್ತಾಪಿಸುವುದೇನೆಂದರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲಲಿ ಹಲವು ಕಛೇರಿ ವಿಭಾಗಗಳು ಕಾರ್ಯ ನಿರ್ವಹಿಸುತ್ತಿದ್ದು ಇದರ ವ್ಯಾಪ್ತಿತಲ್ಲಿ ಬರುವ ಅಧಿಕಾರಿ ವರ್ಗಗಳವರಿಗೆ ಒಂದೊಂದು ವಾಹನಗಳನನು ಅಲಾಟ್ ಮಾಡಲಾಗಿದ್ದು ಅದರಂತೆ ಕಾರ್ಯನಿರ್ವಹಿಸಿ 2016–17ನೇ ಸಾಲಿನಲ್ಲಿ ಏಪ್ರಿಲ್ 2016 ರಿಂದ 2017 ಮಾರ್ಚಿವರೆಗೆ ಆಯಾಯ ವಾಹನಗಳಿಗೆ ಸಂಬಂದಿಸಿದ ವೆಚ್ಚವನ್ನು 2016–17 ನೇ ಸಾಲಿನಲ್ಲಿ ವೆಚ್ಚಭರಿಸಲದ ವಹನದ ವಿವರಗಳನನು ಈ ಕೆಳಕಂಡಂತೆ ನೀಡಲಾಗಿದೆ<br>ಮುಂದುವರಿದು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹದಿನಾರು ವಿವಿಧ ವಾನಗಳು ಕಾರ್ಯ ನಿರ್ವಹಿಸುತ್ತಿದ್ದು ಪ್ರತಿಯೊಂದು ವಾಹನಗಳ ವಾರ್ಷಿಕ ದುರಸ್ಥಿಗಳು ಮತ್ತು ಪೆಟ್ರೋಲ್ ಡೀಸೆಲ್‌ಗಳು ಹಾಗೂ ಇನ್ನಿತರ ಬಾಬ್ತಿಗೆ ವೆಚ್ಚಭರಿಸಲಾಗಿದೆ ಈ ವೆಚ್ಚವು ಅನಿವಾರ್ಯ ಹಾಗೂ ರುಂಬಾ ಅವಶ್ಯಕವಾಗಿರುವದರಿಂದ ಸಂಬಂದ ಪಟ್ಟ ವಾಹನಗಳಿಗೆ ವೆಚ್ಚ ಭರಿಸುವುದು ಅನಿರ್ವಾಯವಾಗಿರುತ್ತದೆ, ಈ ನಿಟ್ಟಿನಲ್ಲಿ ವೆಚ್ಚ ಭರಿಸಲಾದ ಪ್ರತಿ ವಾಹನದ ವೆಚ್ಚಗಳ ವಿವರಗಳನ್ನು ಪ್ರತಿ ಮಾಹೆಯಲ್ಲಿ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ, ಹಾಗೂ ವೆಚ್ಚದ ಮಿತಿಯನ್ನು ನಿಯಂತ್ರಿಸುವ ಬಗ್ಗೆ ಎಚ್ಚರ ವಹಿಸಲಾಗುತ್ತದೆ ಈ ಬಗ್ಗೆ ಪ್ರತಿಯೊಂದು ವಾಹನದ ಲಾಗ್ ಬುಕ್ ವಿವರಗಳನ್ನು ಮಾಹಿತಿಗಾಗಿ ಒದಗಿಸಲಾಗಿದೆ ರೂ.37,95,091/–ಗಳನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. ವಿಶ್ವವಿದ್ಯಾನಿಲಯದ ವ್ಯಾಪ್ತಿಯ 16 ವಾಹನಗಳ ವಿವರ ಹಾಗೂ ಲಾಗ್ ಬುಕ್‌ಗಳ ವಿವರ ಕೆಳಕಂಡಂತಿರುತ್ತದೆ. |

| ಕ್ರ ಸಂ | ವಾಹನಗಳ ವಿವರ | ವಾಹನಗಳ ಹೆಸರು |
|---|---|---|
| 1 | KA-09 M G-2016 | ಕ್ಯಾಮ್ರಿ |
| 2 | KA-09 M A-9657 | ಪಾರ್ಚೂನರ್ |
| 3 | KA-09 M A-3592 | ಇನ್ನೋವ |
| 4 | KA-09 M B-2044 | ಡಸ್ಟರ್ |
| 5 | KA-09 M B 6957 | ಏಟಿಯಸ್ |
| 6 | KA-09 M A-6958 | ಏಟಿಯಸ್ |
| 7 | KA-09 M A-6222 | ಹೊಂಡಾಸಿಟಿ |
| 8 | KA-09 S-401 | ಕ್ವಾಲೀಸ್ |
| 9 | KA-09 M-6514 | ಬೊಲೆರೊ |
| 10 | KA-09 B-8540 | ಟಿ.ಟಿ |
| 11 | KA-09 O C-1773 | ಈಷರ್ ಬಸ್ |
| 12 | KA-09 A-8382 | ಟ್ರಾಕ್ಟರ್ |
| 13 | KA-09 B-8100 | ಮಿನಿ ಟ್ರಾಕ್ರರ್ |
| 14 | KA-09 N-770 | ಕ್ವಾಲೀಸ್ |
| 15 | KA-09 N-9424 | ಇಂಡಿಗೊ |
| 16 | KA-09 N-9269 | ಟಾ.ಟಾ ಸುಮೊ |

| | | |
|---|---|---|
| **178** | <u>**ಪ್ರಶ್ನೆಪತ್ರಿಕೆ ಮುದ್ರಣ/ಸ್ಟೇಷನರಿ ವಸ್ತುಗಳ ಬಿಲ್ಲುಗಳನ್ನು ಹಾಜರುಪಡಿಸದಿರುವ ಬಗ್ಗೆ:– (ಹಣಕಾಸು ವಿಭಾಗ)**</u><br>ಏಪ್ರಿಲ್/ಮೇ–2014 ರಿಂದ ಏಪ್ರಿಲ್/ಮೇ–2017 ರವರೆಗೆ 07 ಸೆಮಿಸ್ಟರ್‌ಗಳಿಗೆ ಪರೀಕ್ಷಾ ಕಾರ್ಯ ಚಟುವಟಿಕೆಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿ, ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಸಂಖ್ಯೆ ವಿಷಯವಾರು ಮಾಹಿತಿಗಳ ಕ್ರೋಢಿಕೃತ ವರದಿ ತಯಾರಿಸಲು ತಂತ್ರಾಂಶ ತಯಾರಿಕೆ ಹಾಗೂ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವವರೆಗೆ ಮತ್ತು ಅಂಕಪಟ್ಟಿಯನ್ನು ಮುದ್ರಿಸುವವರೆಗೆ ಕಾರ್ಯನಿರ್ವಹಿಸಲು M/S I.E.M Institute of Engineering management ಇದರೊಂದಿಗೆ ವಿ.ವಿ ಆದೇಶ ಸಂಖ್ಯೆ:ಪದಿ/ಮಾವಿ/2013–14 ದಿನಾಂಕ:20.02.2014 ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದೆ.<br>ಸಂಬಂಧಿಸಿದಂತೆ 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಪ್ರಶ್ನೆಪತ್ರಿಕೆ ಮುದ್ರಣ/ಸ್ಟೆಷನರಿ ಸಂಬಂಧಿಸಿದಂತೆ ರೂ.8,36,40,069/–ಗಳನ್ನು ವೆಚ್ಚ ಮಾಡಲಾಗಿದ್ದು ಈ ಬಗ್ಗೆ ಗುತ್ತಿಗೆದಾರರೊಂದಿಗೆ ಮಾಡಿಕೊಂಡಿರುವ ಕರಾರು ಒಪ್ಪಂದದ ಪ್ರತಿಯನ್ನು ಲೆಕ್ಕಪರಿಶೋಧನಾ ಕಾರ್ಯಕ್ಕೆ ಹಾಜರುಪಡಿಸುವಂತೆ ವಿಚಾರಣಾ ಪತ್ರಸಂಖ್ಯೆ:81 ದಿನಾಂಕ:24.07.2018 ರನ್ನು ನೀಡಲಾಗಿತ್ತು.<br>M/S I.E.Mಇವರು ಬಿಲ್ಲು ಸಂಖ್ಯೆ: IEM/16–17 ದಿನಾಂಕ:14.01.2017 ರಲ್ಲಿ Tabulation and publication results of Mysore University Nov-Dec-2016 ಎಂದು ರೂ.78,71,730/–ಗಳಿಗೆ ನೀಡಿರುತ್ತಾರೆ. ಉಳಿಕೆ ಮೊತ್ತದ ಬಗ್ಗೆ ಮಾಹಿತಿ ಇರುವುದಿಲ್ಲ.<br>ವಾರ್ಷಿಕ ಲೆಕ್ಕಪತ್ರದಲ್ಲಿ ನಮೂದಿಸಲಾದ ಮೊತ್ತ ರೂ.8,36,40,069/–ಗಳಿಗೆ ಪರಿಶೋಧನೆಗೆ ಹಾಜರುಪಡಿಸಲಾದ ಬಿಲ್ಲಿನ ಮೊತ್ತ ರೂ.78,71,730/– ಹೊರತು ಪಡಿಸಿ ಉಳಿಕೆ ಮೊತ್ತ **ರೂ.7,57,68,339**/–ಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವವರೆಗೆ ಸದರಿ ಮೊತ್ತವನ್ನು **ಆಕ್ಷೇಪಣೆಯಲ್ಲಿಡಲಾಗಿದೆ.** | ವಿಶ್ವವಿದ್ಯಾನಿಲಯದ ಆಧೇಶ ಸಂಖ್ಯೆ:ಪದಿ/ಮಾವಿ/2013–14 ದಿನಾಂಕ:20.02.2014 ರ ಅನ್ವಯದಂತೆ ಏಪ್ರಿಲ್/ಮೇ–2014 ರಿಂದ ಏಪ್ರಿಲ್/ಮೇ–2017 ರವರೆಗೆ 07 ಸೆಮಿಸ್ಟರ್‌ಗಳಿಗೆ ಪರೀಕ್ಷಾ ಕಾರ್ಯ ಚಟುವಟಿಕೆಗಳನ್ನು ಟೆಂಡರ್ ಷರತ್ತಿಗಳಿಗನುಸಾರವಾಗಿ ನಿರ್ವಹಿಸಲು Institute of management ಸಂಸ್ಥೆಗೆ ವಹಿಸಿಕೊಡಲಾಗಿತ್ತು. ಹಾಗೂ ದಿನಾಂಕ:15.2.2014 ರಂದು ಮೇಲಿನ ಸಂಸ್ಥೆಯೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ ಕರಾರು ಒಪ್ಪಂದದ ಷರತ್ತುಗಳನ್ವಯ ಹೊರಗುತ್ತಿಗೆ ಆದಾರದ ಮೇಲೆ ಕಾರ್ಯ ನಿರ್ವಹಿಸಲು ದಿನಾಂಕ:20.2.2014ರಂದು ಕಾರ್ಯಾದೇಶ ನೀಡಲಾಗಿದೆ ಕರಾರು ಒಪ್ಪಂದದ ಪ್ರತಿಯನ್ನು ಲಗತ್ತಿಸಿದೆ.<br>ಈ ಕಾರ್ಯಾದೇಶವು ಏಪ್ರಿಲ್/ಮೇ–2014 ರಿಂದ ಏಪ್ರಿಲ್/ಮೇ–2017 ರವರೆಗೆ 07 ಸೆಮಿಸ್ಟರ್‌ಗಳನ್ನು ಒಳಗೊಂಡಿರುತ್ತದೆ ಕರಾರು ಒಪ್ಪಂದದ ಪ್ರಕಾರವಾಗಿ ನಾಲ್ಕು ಹಂತಗಳಲ್ಲಿ ಬಿಲ್ಲುಗಳನ್ನು ಕ್ಲೈಮು ಮಾಡಬೇಕಾಗಿದ್ದು ಪ್ರಸುತ್ತ ಕಂಡಿಕೆಯಲ್ಲಿ ತಿಳಿಸಿರುವ ರೂ.78,71,730/–ಗಳು ನವಂಬರ್/ಡಿಸೆಂಬರ್ 2016ರ ಒಂದು ಸೆಮಿಷ್ಟರ್‌ಗೆ ಸಂಬಂಧಿಸಿದ್ದಾಗಿರುತ್ತದೆ ಟ್ಯಾಬುಲೇಶನ್ ಮತ್ತು ಫಲಿತಾಂಶ ಪ್ರಕಟಣೆಗೆ ಸಂಬಂಧಿಸಿದಂತೆ ಒಟ್ಟು 07 ಸೆಮಿಸ್ಟರ್‌ಗಳಿಗೂ ಸದರೀ ಸಂಸ್ಥೆಗೆ ಪಾವತಿಸಿರುವ ಒಟ್ಟು ಮೊತ್ತ ರೂ ಗಳಾಗಿರುತ್ತದೆ.<br>ಇದಕ್ಕೆ ಸಂಬಂಧಿಸಿದಂತೆ ಮೂಲ ಬಿಲ್ಲುಗಳನ್ನು ಆಯಾಯ ಸಾಲಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರು ಪಡಿಸಲಾಗಿತ್ತು.<br>ಆದಾಗ್ಯೂ ಅವುಗಳ ಪ್ರತಿಗಳನ್ನು ಕರಾರು ಒಪ್ಪಂದದ ಪ್ರತಿಯೊಂದಿಗೆ ಈ ಕೂಡ ಲಗತ್ತಿಸಿ ಸಲ್ಲಿಸಲಾಗಿದೆ.<br>2016–17 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರದಲ್ಲಲಿ ನಮೂಧಿಸಿರುವ ಮೊತ್ತ ರೂ.8,36,40,069/–ಗಳು ಪ್ರಸ್ತುತ ಆರ್ಥಿಕ ವರ್ಷಕ್ಕರ ಪ್ರಶ್ನೆಪತ್ರಿಕೆ ಮುದ್ರಣ ಮತ್ತು |

| | | |
|---|---|---|
| | | ಸ್ಟೇಷನರಿ ವೆಚ್ಚಗಳಿಗೆ ಸಂಬಂಧಿಸಿದಾಗಿದ್ದು ಈ ಎಲ್ಲಾ ಪಾವತಿಗಳೂ ಮೇಲಿನ ಸಂಸ್ಥೆಗೆ ಸಂಬಂಧಿಸಿದಾಗಿರುವುದಿಲ್ಲ ಎಂಬುದಾಗಿ ನಿವೇಧಿಸುತ್ತಾ ರೂ.7,57,68,339/–ಗಳ ಆಕ್ಷೆಪಣೆಯನ್ನು ಕೈ ಬಿಡಲು ಕೋರಿದೆ |

| | | |
|---|---|---|
| **179** | **<u>ವಿಶ್ವವಿದ್ಯಾನಿಲಯದ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದ ಕಡತಗಳನ್ನು ಹಾಜರುಪಡಿಸದೆ ಇರುವುದು:– (ಹಣಕಾಸು ವಿಭಾಗ)</u>**<br><br>2016–17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ರವರ ಕಛೇರಿಯಲ್ಲಿ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿದ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿದಾಗ Tran code 166 ರಲ್ಲಿ ಕ್ರೀಡಾ ಚಟುವಟಿಕೆಗಳಿಗೆ ರೂ.19,88,001/–ಗಳನ್ನು ವೆಚ್ಚ ಮಾಡಲಾಗಿರುತ್ತದೆ. ಕ್ರೀಡಾ ಸೌಲಭ್ಯಗಳ ಅಭಿವೃದ್ಧಿಗೆ Tran code 170 ರಲ್ಲಿ ರೂ.3,82,615/–ಗಳನ್ನು ವೆಚ್ಚ ಮಾಡಲಾಗಿರುತ್ತದೆ ಮತ್ತು ಕ್ರೀಡಾ ಸಲಕರಣೆಗಳು, ಪುಸ್ತಕಗಳು ಮತ್ತು ವೋಚರ್‌ಗಳನ್ನು ಖರೀದಿ ಮಾಡಲು Tran code:171 ರಲ್ಲಿ ರೂ.7,14,036/–ಗಳನ್ನು ವೆಚ್ಚ ಮಾಡಲಾಗಿರುತ್ತದೆ. ಅದರಂತೆ ಇದಕ್ಕೆ ಸಂಬಂಧಿಸಿದ ಕಡತಗಳು, ಆದೇಶದ ಪ್ರತಿಗಳು, ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣೆ ಪತ್ರಸಂಖ್ಯೆ:09 ದಿನಾಂಕ:07.07.2018 ರಲ್ಲಿ ಕೋರಲಾಗಿತ್ತು. ಆದರೆ ಹಾಜರುಪಡಿಸಿರುವುದಿಲ್ಲ. ಆದುದರಿಂದ ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವವರೆಗೆ **ರೂ.30,84,652/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಕ್ರೀಡಾ ಚಟುವಟಿಕೆಗಳ ಪರಿಕರ ಸಾಮಗ್ರಿಗಳನ್ನು ಖರೀದಿಸಲು2016–17ನೇ ಸಾಲಿನಲ್ಲಿ ರೂ.30,84,652/–ಗಳ ವೆಚ್ಚವನ್ನು ಭರಿಸಲಾಗಿದ್ದು ಕಂಡಿಕೆ 179ರಲ್ಲಿ ಆಕ್ಷೇಪಿಸಿ ರೂ.30,84,625/–ಗಳನ್ನು ಆಕ್ಷೇಪಣೆಯಲ್ಲಿಟ್ಟಿರುವ ಸಂಬಂಧ, ಈಕೆಳಕಂಡಂತೆ ಸಮಜಾಯಿಷಿ ಮತ್ತು ಅನುಪಾಲನಾ ವರದಿಯನ್ನು ನೀಡಲಾಗಿರುತ್ತದೆ,<br><br>ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಿಂದ ವಿವಿಧ ಕ್ರೀಡಾ ಚಟುವಟಿಕೆಗಳನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟಗಳಲ್ಲಿ ಪ್ರತಿ ವರ್ಷವೂ ನಡೆಸಿಕೊಂಡು ಬರುತ್ತಿದ್ದು ಅದರಂತೆ 2016–17ನೇ ಸಾಲಿನಲ್ಲಿಯೂ ಸಹ ಕ್ರೀಡಾ ಚಟುವಟಿಕೆಗಳನ್ನು ನಡೆಸುವ ಉದ್ದೇಶದಿಂದ ಈ ಕ್ರೀಡಾ ಚಟುವಟಿಕೆಗಳಿಗೆ ಅಗತ್ಯವಿರುವ ಕಾರ್ಯ ಸೂಚಿಗಳನ್ನು ತಯಾರಿಸಿ ಇವುಗಳಿಗೆ ಅಗತ್ಯವಿರುವ ಹಣಕಾಸು ವ್ಯವಸ್ಥೆಗಳಿಗೆ ಈ ಕೆಳ ನಮೂದಿಸಿರುವ ವಿಶ್ವವಿದ್ಯಾನಿಲಯದ ಆದೇಶಗಳನುಸಾರ, ಆರ್ಥಿಕ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಲಾಗಿರುತ್ತದೆ.<br><br>1. ಆದೇಶ ಸಂಖ್ಯೆ:ಜಿ,ಎಲ್3/142/2013–14 ದಿನಾಂಕ:12.07.2016<br>2. ಆದೇಶ ಸಂಖ್ಯೆ:ಜಿ,ಎಲ್3/142/2013–14 ದಿನಾಂಕ:28.07.2016<br>3. ಆದೇಶ ಸಂಖ್ಯೆ:ಜಿ,ಎಲ್3/142/2013–14 ದಿನಾಂಕ:06.08.2016<br>4. ಆದೇಶ ಸಂಖ್ಯೆ:ಜಿ,ಎಲ್3/36/2014–15 ದಿನಾಂಕ:18.07.2016<br>5. ಆದೇಶ ಸಂಖ್ಯೆ:ಜಿ,ಎಲ್3/36/2014–15 ದಿನಾಂಕ:19.12.2016<br>6. ಆದೇಶ ಸಂಖ್ಯೆ:ಜಿ,ಎಲ್3/142/2013–14 ದಿನಾಂಕ:01.09.2016<br>7. ಆದೇಶ ಸಂಖ್ಯೆ:ಜಿ,ಎಲ್3/36/2014–15 ದಿನಾಂಕ:19.09.2016<br><br>2016–17ನೇ ಸಾಲಿನ ಕ್ರೀಡಾ ಚಟುವಟಿಕೆಗಳಿಗೆ ಅವಶ್ಯವಿರುವ ಕ್ರೀಡಾ ಪರಿಕರಗಳನ್ನು ಒದಗಿಸಲು ದಿನಾಂಕ:24.09.2016ರಂದು ದಿನ ಪತ್ರಿಕೆ ಮತ್ತು |

| | | |
|---|---|---|
| | | ಟೆಂಡರ್ ಬುಲಿಟಿನ್‌ನಲ್ಲಿ ಪ್ರಕಟಣೆ ಹೊರಡಿಸಿ ಟೆಂಡರು ವಿವರಗಳನ್ನುಸಲ್ಲಿಸಲಾಯಿತು.<br>1. ಮೆ॥ ಪಿಯೋನೀಕ್ ಸ್ಪೋಟ್ಸ್, ಮೈಸೂರು<br>2. ಮೆ॥ ಜೈನ್ ಸ್ಪೋಟ್ಸ್ ಅಂಡ್ ಸೈಂಟಿಫಿಕ್, ಶಿವಮೊಗ್ಗ<br>3. ಮೆ॥ ಚಂದ್ರಶೇಖರ ಪ್ರಶಾಂತ್ ಕುಮಾರ್, ಬೆಂಗಳೂರು<br>4. ಮೆ॥ ಐಜೆರಿ ಅಂಡ್ ಬ್ರದರ್ಸ್, ವಿಜಯಪುರ<br>5. ಮೆ॥ ಲುಕಿದೇವಿ ರಾಜೇಂದ್ರ ಸ್ಪೋಟ್ಸ್, ಮೈಸೂರು<br>6. ಮೆ॥ ಮೇಘನಾ ಸ್ಪೋಟ್ಸ್ ಅಂಡ್ ಸ್ಕ್ರೀನ್ಸ್, ಮೈಸೂರು<br><br>ಸದರಿ ಟೆಂಡರ್ ವಿವರಗಳನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯದ ಕ್ರೀಡಾ ಚಟುವಟಿಕೆಗಳಿಗೆ ಅತ್ಯಾವಶ್ಯಕವಾದ ಕ್ರೀಡಾ ಸಾಮಗ್ರಿಗಳನ್ನು ಸರಬರಾಜು ಮಾಡಲು ಸಂಬಂಧ ಪಟ್ಟ ಕಂಪನಿಗಳವರಿಗೆ ಆದೇಶ ನೀಡಲಾಯಿತು ವಿಶ್ವವಿದ್ಯಾನಿಲಯದ ಆದೇಶದ ಮೇರೆಗೆ ಸದರಿ ಕಂಪನಿಗಳವರು ಸಾಮಗ್ರಿಗಳನ್ನು ಸರಬರಾಜು ಮಾಡಲಾದ ಕ್ರೀಡಾ ಸಾಮಗ್ರಿಗಳನ್ನು ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಸ್ಟಾಕ್ ರಿಜಿಸ್ಟರುಗಳಿಗೆ ತೆಗೆದುಕೊಂಡು ಹಾಗೂ ಸಾಮಗ್ರಿ ಪಡೆದ ದೃಡೀಕರಣವನ್ನು ದಾಖಲಿಸಿ, ನಂತರ ಆಯಾಯ ವಿಭಾಗಗಳ ಮುಖ್ಯಸ್ಥರ ಮುಖಾಂತರ ಸಾಮಗ್ರಿಗಳನ್ನು ವಿತರಿಸಲಾಯಿತು.<br><br>ಮುಂದುವರಿದು ಈ ಶೀರ್ಷಿಕೆಯಡಿಯಲ್ಲಿ ಪಾವತಿಸಲಾದ ಮುಂಗಡ ಹಣವನ್ನು ಹೊಂದಾಣಿಕೆ ಮಾಡಿಕೊಳ್ಳಲಾಗಿರುತ್ತದೆ, ಹಾಗೂ ಪ್ರಸ್ತಾಪಿಸಿದ ಎಲ್ಲಾ ವಿವರಗಳನುಆದ್ಯ ಗಮನಕ್ಕೆ ತರತ್ತ ಆಕ್ಷೇಪಿತ ಮೊತ್ತ ರೂ.30,84,652/–ಗಳನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

| 180 | <u>**ವಿವಿಧ ಬಗೆಯ ಸಾಮಗ್ರಿಗಳ ಖರೀದಿಗಳಿಗೆ ಸಂಬಂಧಿಸಿದಂತೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :- (ಹಣಕಾಸು ವಿಭಾಗ)**</u><br>ವಿವಿಧ ಬಗೆಯ ಸಾಮಗ್ರಿಗಳನ್ನು ಖರೀದಿಗಳಿಗೆ ಸಂಬಂಧಿಸಿದಂತೆ Tender Documents, e-procument, Quotation documents, Annual maintence contract, Rate Contracts, Agreement files & Copies, DG&SD Approved rates, Renewal copies, Registration copies, Metrial stock recipiets & Issue Register, Annual Stock Verification Reports ಮತ್ತು ಈ ವರದಿಗಳನ್ನು ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಯವರಿಗೆ ಸಲ್ಲಿಸಿರುವ ವಿವರ ಪಟ್ಟಿಗಳು, ಪ್ರಯೋಗಶಾಲಾ ರಾಸಾಯನಿಕ ಸಲಕರಣೆಗಳ ಬಗ್ಗೆ test Certificates, Computers, Laptops, UPS, Batteries, (By Back ಆಗಿದ್ದಲ್ಲಿ ದಾಖಲೆಗಳು) Aqua guards ಈ ಸಾಮಗ್ರಿಗಳ ಖರೀದಿಗಳ ಮತ್ತು ಅಳವಡಿಕೆಗಳು ಹಾಗೂ ಮೂರನೇ ವ್ಯಕ್ತಿಯ ಪರಿಶೀಲನಾ ವರದಿಗಳು (Third part Inspection report) ಹಾಗೂ ಸಂಬಂಧಿಸಿ ಇನ್ನಿತರೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:133/2018-19 ದಿನಾಂಕ:30.07.2018, 153/2018-19 (ದಿನಾಂಕ:01.08.2018, 165/2018-19 ದಿನಾಂಕ:04.08.2018, 178/2018-19 ದಿನಾಂಕ:09.08.2018 ಮತ್ತು 221/2018-19 ದಿನಾಂಕ:01.09.2018 ಹೀಗೆ ಲೆಕ್ಕಪರಿಶೋಧನಾ ಅವಧಿಯಲ್ಲಿ ಐದು ವಿಚಾರಣಾ ಪತ್ರಗಳನ್ನು ನೀಡಿದರು ಸಹ ಹಾಜರುಪಡಿಸದ ಕಾರಣ <u>**ಅನುಬಂಧ - 62ರಲ್ಲಿನ**</u> ಕಾಲಂ-7 ರಲ್ಲಿನ ಒಟ್ಟು ಮೊತ್ತ **ರೂ.51,83,627/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** | ವಿಶ್ವವಿದ್ಯಾನಿಲಯದ ವಿವಿದ ಭಾಗಗಳಿಗೆ ಅತ್ಯಾವಶ್ಯಕವಾದ ಪ್ರಯೋಗಶಾಲಾ ರಾಸಾಯನಿಕ ಸಲಕರಣೆಗಳು, ಕಂಪ್ಯೂಟರ್ಸ್,ಲಾಪ್‌ಟಾಪ್ಸ್, ಯು.ಪಿ.ಎಸ್ ಆಕ್ವಾಗಾಡ್ಸ್, ಬ್ಯಾಟರಿಗಳು ಮುಂತಾದ ಸಲಕರಣೆಗಳನ್ನು 2016-17 ನೇ ಸಾಲಿನಲ್ಲಿ ಖರೀದಿಸಿದ್ದು ಹಾಗೂ ನಿರ್ವಹಣೆ ಕಾರ್ಯ ಕೈಗೊಂಡಿದ್ದು ಈ ಬಗ್ಗೆ ರೂ.51,83,627/-ಗಳನ್ನು ವಿವಿಧ ವಿಭಾಗಗಳಲ್ಲಿ ವೆಚ್ಚ ಭರಿಸಲಾಗಿದೆ ಈ ವೆಚ್ಚಗಳಿಗೆ ಸಂಬಂಧಿಸಿದಂತೆ ಸಂಬಂಧ ಪಟ್ಟ ವಿಭಾಗದ ಮುಖ್ಯಸ್ಥರು ಅಧಿಕಾರಿಗಳು ಆಯಾಯ ಸಂಧರ್ಭದಲ್ಲಿ ನಿಯಮಾನುಸಾರ ಅನುಮತಿ ಆದೇಶಗಳನ್ನು ಸಂಬಂಧ ಪಟ್ಟ ಪ್ರಾಧಿಕಾರಿ ವಿಶ್ವವಿದ್ಯಾನಿಲಯದಿಂದ ಪಡೆದು ಯೋಲನೆ ಕಾರ್ಯಗಳು ಹಾಗೂ ಸಾಮಗ್ರಿಗಳನ್ನು ಖರೀದಿಸಿ ಆಯಾಯ ವಿಭಾಗಗಳಲ್ಲಿ ಅಳವಡಿಸಲಾಗಿರುತ್ತದೆ.<br><br>ಪ್ರಸ್ತುತ 2016-17 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 180 ರಲ್ಲಿ ಆಕ್ಷೇಪಿಸಿ ಕೇಳಲಾದ ಮಾಹಿತಿ ಮತ್ತು ದಾಖಲಾತಿಗಳನ್ನು ಮುಂದಿನ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಹಾಜರು ಪಡಿಸಲಾಗುವುದೆಂದು ಈ ಮೂಲಕ ನಿವೇದಿಸಲಾಗಿದೆ. |
|---|---|---|

| | | |
|---|---|---|
| **181** | <u>**ಬ್ಯಾಂಕ್ ಖಾತೆಯ ಸಂಖ್ಯೆ:64095498688 potencial for excellence 56 UGC projects/ schemeಮೇಲೆ ಹೂಡಿಕೆ ಬಡ್ಡಿ ವಿವರ ಹಾಗೂ ಪಾವತಿಸಿರುವ ಬಿಲ್ಲುಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದು:– (ಹಣಕಾಸು ವಿಭಾಗ)**</u><br>2016–17ನೇ ಸಾಲಿನ ಲೆಕ್ಕಪರಿಶೋಧನೆಗೆ ಬ್ಯಾಂಕ್ ಖಾತೆಯ ಸಂಖ್ಯೆ:64095498688 potencial for excellence UGC projects/ schemeಮೇಲೆ ಹೂಡಿಕೆ ಮಾಡಿರುವ ವಿವರ ಬಂದಿರುವ ಬಡ್ಡಿ ಲೆಕ್ಕ ಹಾಜರುಪಡಿಸದೆ ಕಛೇರಿಯ ಸಾದಿಲ್ವಾರು ಬಿಲ್ಲು ಪಾವತಿ ದಾಸ್ತಾನು ವಿತರಣೆ ಸಹಿ ಕೊಟೇಷನ್ ಟೆಂಡರ್ ಕಡತ ಕಾಮಗಾರಿ ಬಿಲ್ಲು, ಆಡಳಿತಾತ್ಮಕ ಮಂಜೂರಾತಿ ಹಾಗೂ earn and learn schemeಬಿಲ್ಲುಗಳನ್ನು ಪರಿಶೀಲನೆಗೆ ಹಾಜರುಪಡಿಸಬೇಕೆಂದು ವಿಚಾರಣೆ ಸಂಖ್ಯೆ:198/2018–19 ದಿನಾಂಕ:20.08.2018 ರಂದು ವಿಚಾರಣೆ ನೀಡಲಾಗಿದ್ದರೂ ವಿಚಾರಣೆಗೆ ವಿವರಣೆ ನೀಡದೆ ಬಿಲ್ಲುಗಳನ್ನು ಹಾಜರುಪಡಿಸದೆ ಇರುವುದರಿಂದ ಮೊಬಲಗು **ರೂ. 1,49,87,968/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಬ್ಯಾಂಕ್ ಖಾತೆ ಸಂಖ್ಯೆ:64095498688 potencial for excellence UGC projects/ schemeಮೇಲೆ ಹೂಡಿರುವ ಹಾಗೂ ಈ ಮೂಲಗಳಿಂದ ಬಂದಿರುವ ಬಡ್ಡಿ ಲೆಕ್ಕಗಳು ಕಛೇರಿಯ ಸಾದಿಲ್ವಾರು ಬಿಲ್ಲುಗಳು ದಾಸ್ತಾನು ವಿತರಣೆ ವಿವರಗಳು ಕಾಮಗಾರಿ ಬಿಲ್ಲುಗಳು ಆಡಳಿತಾತ್ಮಕ ಮಂಜೂರಾತಿ ವಿವರಗಳ ದಾಖಲಾತಿಗಳನ್ನು ಮುಂದಿನ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಹಾಜರು ಪಡಿಸಲಾಗುವುದೆಂದು ನಿವೇದಿಸಲಾಗಿದೆ. |

182

**<u>ಬ್ಯಾಂಕ್ ಖಾತೆ ಸಂಖ್ಯೆ:64098950735 school of planning and architecture ಬ್ಯಾಂಕ್ ಖಾತೆಯಲ್ಲಿ ವೆಚ್ಚ ಮಾಡಿರುವುದಕ್ಕೆ ಸಂಬಂಧಿಸಿದಂತೆ ಪಾವತಿ ವೋಚರ್‌ಗಳನ್ನು (ಬಿಲ್ಲುಗಳನ್ನು) ಪರಿಶೀಲನೆಗೆ ಹಾಜರುಪಡಿಸದೆ ಇರುವುದು:– (ಹಣಕಾಸು ವಿಭಾಗ)</u>**

2016–17ನೇ ಸಾಲಿನ ಲೆಕ್ಕತಪಾಸಣಾ ಕೈಗೊಂಡ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ school of planning ಜಮಾ ಖರ್ಚುಗಳ ವಾರ್ಷಿಕ ಲೆಕ್ಕಪತ್ರವನ್ನು ಹಾಗೂ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಮೇ 2016 ರಲ್ಲಿ ಖರ್ಚು ಹಾಕಿರುವಂತೆ ರೂ.71,93,577/–ಗಳಿಗೆ ಸಂಬಂಧಿಸಿದಂತೆ ವೇತನ ಬಿಲ್ಲು, ಸಾದಿಲ್ವಾರು ಬಿಲ್ಲು, ಎ.ಸಿ ಬಿಲ್ಲು, ಎನ್.ಡಿ.ಸಿ ಬಿಲ್ಲು, ಹೂಡಿಕೆ ಮಾಡಿರುವ ಎಫ್.ಡಿ.ಆರ್ ಸರ್ಟಿಫಿಕೇಟ್ ಇತರೇ ಸಂಬಂಧಿಸಿದ ಮಂಜೂರಾತಿ ಆದೇಶದ ಕಡತ, ದಾಸ್ತಾನು ವಹಿ ಟೆಂಡರ್ ಕಡತ, ಇತರೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಪರಿಶೀಲನಾ ಅವಧಿಯಲ್ಲಿ ಹಾಜರುಪಡಿಸಿರುವುದಿಲ್ಲ. ಸದರಿ ವಿಚಾರ ಕುರಿತು, ವಿಚಾರಣಾ ಸಂಖ್ಯೆ:92 ದಿನಾಂಕ:25.07.2018 ರಂದು ವಿಚಾರಣೆ ನೀಡಲಾಗಿದ್ದು, ವಿಚಾರಣೆಗೆ ಯಾವುದೇ ರೀತಿಯ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಮೊಬಲಗು **ರೂ.71,93,577/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| Sl. No | Date | Payment details | cheque no | Amount |
|---|---|---|---|---|
| 1 | 18.05.2016 | Sri Shankar B.K | 809507 | 47,040 |
| 2 | 18.05.2016 | The SBM UCB Mysore | 809508 | 960 |
| 3 | 18.05.2016 | Graduation Day Expenditure A/C | 809509 | 6,000 |
| 4 | 18.05.2016 | Vasanth kumar | 809510 | 6,000 |
| 5 | 18.05.2016 | Vyashali creation Mysore | 809511 | 5,400 |
| 6 | 18.05.2016 | M/s Pixo Press, Mysore | 809512 | 855 |
| 7 | 18.05.2016 | M/s Muk Arts, Mysore | 809513 | 11,740 |
| 8 | 18.05.2016 | Sri Kanth KS, Mysore | 809514 | 20,228 |
| 9 | 18.05.2016 | Heritage cities Exhibition EXP A/C | 809515 | 25,000 |
| 10 | 18.05.2016 | Heritage cities Exhibition EXP A/C | 809516 | 22,000 |
| 11 | 18.05.2016 | Heritage cities Exhibition | 809517 | 49,900 |

ವಿಶ್ವವಿದ್ಯಾನಿಲಯದಲ್ಲಿ ಈ ವಿಭಾಗವನ್ನು ಕೌನ್ಸಿಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ನವದೆಹಲಿ ಎವರ ಸಹಯೋಗದೊಂದಿಗೆ ಪ್ರಾರಂಭಿಸಲಾಗಿದ್ದು ಸೆಲ್ಫ್ ಫೈನಾನ್ಸಿಂಗ್ ಸ್ಕೀ ಅಡಿಯಲ್ಲಿ ವೆಚ್ಚಗಳನ್ನು ಭರಿಸಲಾಗಿದೆ ಅಂದರೆ ವಿದ್ಯಾಥಿಗಳು ಪಾವತಿಸುವ ಶುಲ್ಲಗಳ ಆದಾಯ ದಿಂದ ರೂ.71,93,577/–ಗಳ ವೆಚ್ಚ ಭರಿಸಲಾಗಿದೆ

ಈ ವೆಚ್ಚಕ್ಕೆ ಸಂಬಂಧಿಸಿದಂತೆ ವೇತನ ಬಿಲ್ಲುಗಳು ಎ.ಸಿ.ಹುಂದಿ ಎನ್ ಡಿಸಿ ಬಿಲ್ಲುಗಳ ಜೊತೆಯಲ್ಲಿ ಮಂಜೂರಾತಿ ಪತ್ರಗಳು ಕೋಟೇಶನ್ ತುಲನಾತ್ಮಕ ಪಟ್ಟಿ ಇತ್ಯಾಧಿ ದಾಖಲಾತಿಗಳನ್ನೂ ಆಯಾಯ ಓಚರ್‌ಗಳೊಂದಿಗೆ ಲಗತ್ತಿ ಲೆಕ್ಕ ಪರಿಶೋಧನಾ ಸಮಯದಲ್ಲಿ ಹಾಜರು ಪಡಿಸಲಾಗಿ ಅವುಗಳನ್ನು ಪರಿಶೀಲಿಸಿರುವ ಸಂಬಂಧ ಟಿಕ್‌ಮಾರ್ಕ್ಸ್ ಮಾಡಲಾಗಿದೆ ಮತ್ತೊಮ್ಮೆ ಅವುಗಳನ್ನು ಮಾಹಿತಿಗಾಗಿ ಸಲ್ಲಿಸಲಾಗುತ್ತಿದೆ.

ಈ ವಿಭಾಗವನ್ನು ಸೆಲ್ಫ್ ಫೈನಾನ್ಸ್ ಸ್ಕೀಂ ಅಡಿ ಸ್ಥಾಪಿಸಲಾಗಿರುವುದರಿಂದ ಮತ್ತು ವಿದ್ಯಾರ್ಥಿಗಳು ಪಾವತಿಸುವ ಶುಲ್ಕ ಮೂಲಗಳಿಂದ ವೆಚ್ಚಗಳನ್ನು ಭರಿಸಿರುವುದರಿಂದ ಹಾಗೂ ವಿಶ್ವವಿದ್ಯಾನಿಲಯದಿಂದ ಈಸಂಬಂಧ ಯಾವುದೇ ಖರ್ಚುಗಳನ್ನು ಭರಿಸಲಾಗಿಲ್ಲವಾದ್ದರಿಂದ ರೂ.71,93,577/–ಗಳ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಕೋರಿದೆ.

| | | | | | | | |
|---|---|---|---|---|---|---|---|
| | | | EXP A/C | | | | |
| | 12 | 18.05.2016 | Advance Bill A/C | 809518 | 3,00,000 | | |
| | 13 | 18.05.2016 | Director school of planning and architecture | 809519 | 9,61,829 | | |
| | 14 | 18.05.2016 | The Finance officer, UOM, Mysore | 809520 | 70,314 | | |
| | 15 | 23.05.2016 | The Manager SBM UCB Mysore | 809521 | 50,00,000 | | |
| | 16 | 23.05.2016 | Telephone charges A/C | 809522 | 1,893 | | |

| | | |
|---|---|---|
| **183** | **<u>ಧನಾದೇಶಗಳನ್ನು ವಿವಿಧ ಸಂಸ್ಥೆಗಳಿಗೆ ಪಾವತಿಸಲಾಗಿರುವ ಹುಂಡಿಗಳಿಗೆ ಪೂರಕ ಲೆಕ್ಕಪತ್ರಗಳನ್ನು ಹಾಜರುಪಡಿಸದಿರುವುದು :– (ಯುವರಾಜ ಕಾಲೇಜು)</u>**<br>2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಜಿ.ಆರ್.ಎ ಖಾತೆಯಿಂದ ವಿವಿಧ ಸಂಸ್ಥೆಗಳಿಗೆ ವಿತರಿಸಿರುವ ವಿವರಗಳನ್ನು ಪರಿಶೀಲಿಸಲಾಗಿ ರೂ.75,74,859/–ಗಳನ್ನು ಪಾವತಿಸಲಾಗಿದ್ದು, ಸದರಿ ಧನಾದೇಶಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಗೆ ಪೂರಕ ಕಡತಗಳು ಮತ್ತು ಲೆಕ್ಕಪತ್ರಗಳನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:1/2018–19 ದಿನಾಂಕ:01.09.2018, 04/2018–19 ದಿನಾಂಕ:03.09.2018 ಹಾಗೂ 41/2018–19 ದಿನಾಂಕ:26.09.2018 ರಲ್ಲಿ 3 ವಿಚಾರಣಾ ಪತ್ರಗಳನ್ನು ಕೋರಲಾಗಿದ್ದು, ಲೆಕ್ಕಪರಿಶೋಧನೆಗೆ ಅವಶ್ಯಕತೆಯಿರುವ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ವಿವಿಧ ಸಂಸ್ಥೆಗಳು/ವ್ಯಕ್ತಿಗಳಿಗೆ ಧನಾದೇಶಗಳಲ್ಲಿ ಪಾವತಿಸಿರುವ ಮೊತ್ತ **ರೂ.75,74,859/–ಗಳನ್ನು** ಕೋರಲಾಗಿರುವ ಎಲ್ಲಾ ಕಡತಗಳನ್ನು ಹಾಜರುಪಡಿಸುವವರೆಗೆ ಆಕ್ಷೇಪಣೆಗೆ ಸೂಚಿಸಿದೆ. ಕಛೇರಿ ಪ್ರಾಂಶುಪಾಲರು ಸೂಕ್ತ ಕ್ರಮ ವಹಿಸಿ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. ವಿವರಗಳನ್ನು **<u>ಅನುಬಂಧ–63ರಲ್ಲಿ</u>** ನೀಡಿದ್ದು, ವರದಿಗೆ ಲಗತ್ತಿಸಿದೆ. | ಈ ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಮೊತ್ತಗಳು ವಿವಿಧ ರೀತಿಯ ಕಾಮಗಾರಿ ಹಾಗೂ ಸರಬರಾಜು ಬಿಲ್ಲುಗಳಿಗೆ ಸಂಬಂಧಿಸಿದಾಗಿದ್ದು ಅವುಗಳನ್ನು ಕೆಲಸ ಕಾರ್ಯಗಳ ಒತ್ತಡದಿಂದಾಗಿ ಲೆಕ್ಕ ಪರಿಶೋಧನಾ ಸಮಯದಲ್ಲಿ ಹಾಜರು ಪಡಿಸಲು ಸಾಧ್ಯಬಾಗಿರುಬುದಿಲ್ಲ ಈಗ ಅವುಗಳೆಲ್ಲವನ್ನೂ ಕ್ರೂಢೀಕರಿಸಿ ಅಗತ್ಯ ದಾಖಲೆ ಪತ್ರಗಳೊಂದಿಗೆ ಕಾಲೇಜು ಕಛೇರಿಯಲ್ಲಿ ಇಟ್ಟು ಕೊಳ್ಳಲಾಗಿರುತ್ತದೆ ಈ ಕಂಡಿಕೆಯ ಆಕ್ಷೇಪಣೆಯನ್ನು ಪುನರ್ ಪರಿಶೀಲಿಸುವ ಸಂದರ್ಭದಲ್ಲಿ ಅವುಗಳನ್ನು ಹಾಜರು ಪಡಿಸಲಾಗುತ್ತದೆ. |

184

**<u>University Co-operative society ಖಾತೆಗೆ ಸಂಬಂಧಿಸಿದ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಭಾಗಶಃ ಹಾಜರುಪಡಿಸಿರುವುದು :– (ಯುವರಾಜ ಕಾಲೇಜು)</u>**

2016–17ನೇ ಸಾಲಿನ University Co-Operative Society ಖಾತೆಯಲ್ಲಿ (ಖಾತೆ ಸಂಖ್ಯೆ:20363) ಭರಿಸಿರುವ ವೆಚ್ಚಕ್ಕೆ ಸಂಬಂಧಿಸಿದ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಲಾಗಿ ಭಾಗಶಃ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು, ಈ ಸಂಬಂಧ ಹಾಜರುಪಡಿಸದಿರುವ ಓಚರ್‌ಗಳ ವಿವರಗಳು ಈ ಕೆಳಕಂಡಂತಿವೆ.

| **ಕ್ರ.ಸಂ** | **ಧನಾದೇಶ ಸಂಖ್ಯೆ** | **ಮೊತ್ತ** |
|---|---|---|
| 1 | 201766/01.04.2016 | 1,70,000 |
| 2 | 201771/14.10.2016 | 1,35,000 |
| | **ಒಟ್ಟು ರೂ.** | **3,05,000** |

ಸದರಿ ಖಾತೆಗೆ ಸಂಬಂಧಿಸಿದ ಪಾಸ್ ಪುಸ್ತಕದ ಪರಿಶೀಲನೆಯಲ್ಲಿ ಪ್ರಾಂಶುಪಾಲರು, ಯುವರಾಜ ಕಾಲೇಜು ಇವರ ಹೆಸರಿನಲ್ಲಿ ಡ್ರಾ ಮಾಡಿ Mid day Meals ಬಾಬ್ತಿಗೆ ಈ ಮೇಲೆ ತಿಳಿಸಲಾಗಿರುವ ಮೊತ್ತವು ಪಾವತಿಯಾಗಿರುವುದನ್ನು ಗಮನಿಸಲಾಗಿದ್ದು, ಸದರಿ ಮೊತ್ತಕ್ಕೆ ಸೂಕ್ತ ವಿವರಣೆಯೊಂದಿಗೆ ಪೂರಕ ದಾಖಲೆಗಳನ್ನು ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ:36/2018–19 ದಿನಾಂಕ:24.09.2018ರಲ್ಲಿ ಕೋರಲಾಗಿ ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲವಾದ್ದರಿಂದ ಒಟ್ಟು ಮೊತ್ತ **ರೂ.3,05,000/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.**

ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ ಸೂಚಿತವಾಗಿರುವ ಮೊತ್ತವು ಯುವರಾಜ ಕಾಲೇಜು ಮೈಸೂರು ಇವರಿಂದ University Co-Operative Society ಖಾತೆಯಲ್ಲಿ (ಖಾತೆ ಸಂಖ್ಯೆ:20363) ರಲ್ಲಿ ಡ್ರಾ ಮಾಡಲಾಗಿರುವ Mid day Meals ಬಾಬ್ತಿಗೆ ಸಂಬಂಧಿಸಿದ್ದಾಗಿದು ಈ ವಿವರಗಳನನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕ್ರಮವಹಿಸಲಾಗುವುದು.

| | | |
|---|---|---|
| 185 | **<u>ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಗೆ ಸಂಬಂಧಿಸಿದ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :– (ಯುವರಾಜ ಕಾಲೇಜು)</u>**<br>2016–17ನೇ ಸಾಲಿನಲ್ಲಿ ಭರಿಸಲಾದ ವೈದ್ಯಕೀಯ ವೆಚ್ಚಕ್ಕೆ ಸಂಬಂಧಪಟ್ಟ ಬಟವಾಡೆ ವಹಿಯನ್ನು ಪರಿಶೀಲಿಸಲಾಗಿ ವೈದ್ಯಕೀಯ ವೆಚ್ಚ ಮರುಭರಿಕೆ ಹುಂಡಿಗೆ ಸಂಬಂಧಿಸಿದ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:28/2018–19 ದಿನಾಂಕ:20.09.2018ರಲ್ಲಿ ಕೋರಲಾಗಿ ಭಾಗಶಃ ಮಾತ್ರ ಹಾಜರುಪಡಿಸಿದ್ದು, ಹಾಜರುಪಡಿಸುವಂತೆ ವೋಚರ್‌ಗಳ ಒಟ್ಟು ಮೊತ್ತ **ರೂ.3,05,754/–ಗಳನ್ನು ಆಕ್ಷೇಪಣೆಗೆ** ಸೂಚಿಸಲಾಗಿದೆ. ವಿವರಗಳನ್ನು **<u>ಅನುಬಂಧ–64ರಲ್ಲಿ</u>** ವಿವರಿಸಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಾಲೇಜಿನಲ್ಲಿ 2016–17 ನೇ ಸಾಲಿನಲ್ಲಿ ಸೂಚಿತವಾಗಿರುವ ಆಕ್ಷೇಪಿತ ಮೊತ್ತವು ಯುವರಾಜ ಕಾಲೇಜಿನ ವೈದ್ಯಕೀತ ಭತ್ಯೆ ಪಾವತಿಗೆ ಸಂಬಂಧಿಸಿದ್ದಾಗಿದು ಈ ವಿವರಗಳನ್ನು ಕಛೇರಿ ಆದೇಶ ಪಾವತಿ ಆದೇಶದ ವಿವರಗಳೊಂದಿಗೆ ಮುಂದಿನ ಲೆಕ್ಕ ತಪಾಸಣೆಗೆ ಹಾಜರುಪಡಿಸಲಾಗುವುದು. |

**186**

**<u>CSF ಖಾತೆಗೆ ಸಂಬಂಧಿಸಿದ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :– (ಯುವರಾಜ ಕಾಲೇಜು)</u>**

2016–17ನೇ ಸಾಲಿನಲ್ಲಿ CSF ಖಾತೆಯಲ್ಲಿ ಭರಿಸಿರುವ ವೆಚ್ಚಕ್ಕೆ ಸಂಬಂಧಿಸಿದ ವೋಚರ್‌ಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಕೋರಲಾಗಿ ಭಾಗಶಃ ವೋಚರ್‌ಗಳನ್ನು ಮಾತ್ರ ಹಾಜರುಪಡಿಸಿದ್ದು, ಈ ಸಂಬಂಧ ಹಾಜರುಪಡಿಸದೆ ಇರುವ ವೋಚರ್‌ಗಳ ವಿವರಗಳನ್ನು ಈ ಕೆಳಗೆ ನಮೂದಿಸಿದ್ದು, ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:34/2018–19 ದಿನಾಂಕ:22.04.2018ರಲ್ಲಿ ಕೋರಲಾಗಿದ್ದರೂ ಸಹ ಯಾವುದೇ ವೋಚರ್‌ಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಹಾಜರುಪಡಿಸದಿರುವ ವೋಚರ್‌ಗಳ ಒಟ್ಟು ಮೊತ್ತ **ರೂ.2,93,800/–ಗಳ** ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ ಆಕ್ಷೇಪಣೆಗೆ ಸೂಚಿಸಲಾಗಿದೆ.

| ಕ್ರ.ಸಂ | ಧನಾದೇಶ ಸಂಖ್ಯೆ ಮತ್ತು ದಿನಾಂಕ | ಮೊತ್ತ |
|---|---|---|
| 1 | 258504/24.11.2016 | 2351 |
| 2 | 258508/28.11.2016 | 92607 |
| 3 | 258505/21.12.2016 | 4089 |
| 4 | 258507/31.12.2016 | 1022 |
| 5 | 258509/31.12.2016 | 102 |
| 6 | 258506/31.12.2016 | 2044 |
| 7 | 258521/09.03.2017 | 40000 |
| 8 | 258512/07.03.2017 | 151585 |
| | **ಒಟ್ಟು** | **2,93,800** |

ಪ್ರಸ್ತಾವಿತ ಕಂಡಿಕೆಯಲ್ಲಿ ಸೂಚಿಸಿರುವ ಆಕ್ಷೇಪಣೆ ಮೊತ್ತ ರೂ.2,93,800/–ಕ್ಕೆ ಸಂಬಂಧಿಸಿದಂತೆ ಸದರಿ ಮೊತ್ತವು ಯುವರಾಜ ಕಾಲೇಜು ಮೈಸೂರಿನಲ್ಲಿ 2016–17 ನೇ ಸಾಲಿನಲ್ಲಿ CSF ನಿಧಿಯಲ್ಲಿ ಅನುಷ್ಠಾನಗೊಂಡಿರುವ

ಕಾಮಗಾರಿಯ ಬಿಲ್ಲುಗಳಲ್ಲಿ ಕಟಾಯಿಸಿರುವ ಮೊತ್ತಗಳಿಗೆ ಸಂಬಂಧಿಸಿದ್ದು ಅವುಗಳ ವಿವರ ಈ ರೀತಿ ಇದೆ.

1. ಧನಾದೇಶ ಸಂಖ್ಯೆ–258508 ದಿನಾಂಕ:21.11.2016 ರೂ.2,351/– ಆದಾಯ ತೆರಿಗೆ
2. ಧನಾದೇಶ ಸಂಖ್ಯೆ–258508 ದಿನಾಂಕ:28.11.2016 ರೂ.92,607/– ಗುತ್ತಿಗೆದಾರಾದ ಉಮೇಶ ರವರಿಗೆ ಪಾವತಿ
3. ಧನಾದೇಶ ಸಂಖ್ಯೆ–258505 ದಿನಾಂಕ:21.12.2016 ರೂ.4,089/– ಮಾರಟ ತೆರಿಗೆ
4. ಧನಾದೇಶ ಸಂಖ್ಯೆ–258507 ದಿನಾಂಕ:31.12.2016 ರೂ.1,022/– ಕಾರ್ಮಿಕರ ಕ್ಷೇಮಾನಿಧಿ ಬಾಬ್ತು
5. ಧನಾದೇಶ ಸಂಖ್ಯೆ–258509 ದಿನಾಂಕ:31.12.2016 ರೂ.102/– ಗುತ್ತಿಗೆದಾರರ ಕ್ಷೇಮಾನಿಧಿ ಬಾಬ್ತು
6. ಧನಾದೇಶ ಸಂಖ್ಯೆ–258506 ದಿನಾಂಕ:31.12.2016 ರೂ.2,044/– ಹೆಚ್ಚುವರಿ ಭದ್ರತಾ ಠೇವಣಿ
7. ಧನಾದೇಶ ಸಂಖ್ಯೆ–258521 ದಿನಾಂಕ:09.03.2017 ರೂ.40,000/– ಯುವರಾಜ ಕಾಲೇಜು ವಿಜ್ಞಾನ ಹಬ್ಬದ ಸಂಬಂಧ CSFನಿಧಿಯಿಂದ ರೂ.40,000/– ಮುಂಗಡ ಪಾವತಿಸಿದ್ದು ಸದರಿ ಮೊತ್ತ ರೂ.40,000/– ಯುರೇಖಾ ಖಾತೆಯಿಂದ CSFಖಾತೆಗೆ ಮರು ಹೊಂದಾಣಿಕೆಯಾಗಿದೆ ಈ ಸಂಬಂಧಿದ ಎಸ್,ಬಿ,ಐ ಯುರೇಖಾ ಖಾತೆಯ ಪ್ರತಿ ಲಗತ್ತಿಸಿದೆ ಎಸ್,ಬಿ,ಐ ಅಕೌಂಟ್ ನಂ:54007592102.

| | | |
|---|---|---|
| | | 8. ಧನಾದೇಶ ಸಂಖ್ಯೆ–258512 ದಿನಾಂಕ:07.03.2017 ರೂ.1,51,585/– ಕಾಮಗಾರಿಯ ಗುತ್ತಿಗೆದಾರರಾದ ಉಮೇಶ ರವರಿಂದ 2ನೇ ಅಂತಿಮ ಬಿಲ್ಲ್ ಪಾವತಿ ಬಾಬ್ತು ಆಗಿರುತ್ತದೆ.<br><br>ಈ ವಿವರಗಳನನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಲಾಗುವುದು ಅದ್ದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |

| | | |
|---|---|---|
| 187 | **<u>2016–17ನೇ ಸಾಲಿನ ವಿದ್ಯಾರ್ಥಿಗಳಿಗೆ ವಿತರಿಸಲಾದ ಅಂಕಪಟ್ಟಿ ದಾಸ್ತಾನು ಉಳಿಕೆ ವಿವರ ಹಾಜರುಪಡಿಸಿರುವುದು :– (ಯುವರಾಜ ಕಾಲೇಜು)</u>**<br><br>ಯುವರಾಜ ಕಾಲೇಜು ಮೈಸೂರು ವಿಭಾಗದ ಶೈಕ್ಷಣಿಕ ಕೋರ್ಸುಗಳ ಬಿ.ಎಸ್.ಸಿ, ಬಿ.ಸಿ.ಎ, ಬಿ.ಬಿ.ಎ ಹಾಗೂ ಸ್ನಾತಕೋತ್ತರ ಪದವಿಗಳು ಎಂ.ಎಸ್.ಸಿ, ಎಂ.ಬಿ.ಎ, ಎಂ.ಎ, ಇಂಗ್ಲೀಷ್, MolecularBiology (intergrated) ವಿಷಯಗಳಿಗೆ 2016–17ನೇ ಸಾಲಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಕಾಲೇಜು ಶೈಕ್ಷಣಿಕ ಕೋರ್ಸುಗಳಿಗೆ ನಡೆಸಲಾಗುವ ಪರೀಕ್ಷೆಗಳಾದ 2016–17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ನಡೆಸಲಾದ ಮೆ/ಜೂನ್ – 2016 ಸೆಮಿಸ್ಟರ್ ಪರೀಕ್ಷೆ, ನವೆಂಬರ್/ಡಿಸೆಂಬರ್–2016 ಸೆಮಿಸ್ಟರ್ ಪರೀಕ್ಷೆ.<br><br>ಎರಡೂ ಪರೀಕ್ಷೆಗಳಿಗೆ ಹಾಜರಾದ ವಿದ್ಯಾರ್ಥಿಗಳು ಉತ್ತೀರ್ಣವಾದ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಪಾಸಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿ (Marks card) ವಿತರಿಸಿದ ಮತ್ತು ಉಳಿಕೆ ವಿವರಗಳನ್ನು ಕೆಳಕಂಡ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ. ಹಾಗೂ 2016–17ನೇ ಸಾಲಿನ ಅಂಕಪಟ್ಟಿಗಳ ಪ್ರಾರಂಭಶಿಲ್ಕು, ಅಂಕಪಟ್ಟಿ ಮುದ್ರಣದ ಖರೀದಿ ಮತ್ತು ದಾಸ್ತಾನಿನ ಲೆಕ್ಕ ದಾಸ್ತಾನು ವಿತರಣೆ ಮತ್ತು ಉಳಿಕೆ ವಿವರಗಳನ್ನು ಹಾಜರುಪಡಿಸುವುದು ಮತ್ತು ಇದರೊಂದಿಗೆ ವಿದ್ಯಾರ್ಥಿಗಳಿಗೆ ವಿತರಿಸಲಾದ ಪದಕಗಳ (Medal) ದಾಸ್ತಾನು ಉಳಿಕೆ ಮಾಹಿತಿಯನ್ನು ರಿಜಿಸ್ಟರ್‌ನೊಂದಿಗೆ ಹಾಜರುಪಡಿಸಲು ಸೂಚಿಸಿದೆ. (ಲೆಕ್ಕ ವಿಚಾರಣೆ ಪತ್ರ ಸಂಖ್ಯೆ:40/26.09.2018)<br><br>ಇದರಿಂದ ಯಾವುದೇ ಅಂಕಪಟ್ಟಿಯ ವಿತರಣೆ, ದಾಸ್ತಾನು ಲೆಕ್ಕದ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗದ ಕಾರಣ ಹಾಗೂ ನೀಡಿರುವ ವಿಚಾರಣೆಗೆ ಪಾಲನಾ ವರದಿ ಸಲ್ಲಿಸದ ಕಾರಣ ತಪಾಸಣಾ ಅವಧಿಯಲ್ಲಿ ಪರಿಶೀಲಿಸಲು ಸಾಧ್ಯವಾಗದೆ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಯುವರಾಜ ಕಾಲೇಜು 2016–17 ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ ಶೈಕ್ಷಣಿಕ ಕೋರ್ಸಗಳ ಅಂಕಪಟ್ಟಿಗಳ ದಾಸ್ತಾನು ಮತ್ತು ವಿತರಣೆ ವಿವರ ಪ್ರಾಂಶುಪಾಲರು ಯುವರಾಜ ಕಾಲೇಜು ಮತ್ತ ಕಂಟ್ರೋಲರ್ ಪರೀಕ್ಷಾ ವಿಭಾಗ, ಯುವರಾಜ ಕಾಲೇಜು ಇವರಿಂದ ಧೃಢೀಕರಣವಾಗಿರುವ ಪತ್ರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ.<br><br>ಅದ್ದರಿಂದ ಸದರಿ ಕಂಡಿಕೆಯನ್ನು ಕೈ ಬಿಡಲು ಕೋರಿದೆ. |

| | | |
|---|---|---|
| **188** | **<u>ಪಿ.ಹೆಚ್.ಡಿ ವಿಭಾಗದಿಂದ ಅಂಕಪಟ್ಟಿ, ಪದವಿ, ಪ್ರಮಾಣಪತ್ರ, ಹಾಲೋಗ್ರಾಂ, Migrationcertificate, ಘಟಿಕೋತ್ಸವ ಪ್ರಮಾಣಪತ್ರಗಳನ್ನು ಸ್ವೀಕರಿಸಿದ್ದು, ವಿದ್ಯಾರ್ಥಿಗಳಿಗೆ ವಿತರಿಸಿರುವ ವಿವರ ಹಾಜರುಪಡಿಸದಿರುವುದು:– (ಪರೀಕ್ಷಾ ವಿಭಾಗ)</u>**<br><br>2016–17ನೇ ಸಾಲಿನಲ್ಲಿ ಪರೀಕ್ಷಾ ವಿಭಾಗದಿಂದ ಪಿ.ಹೆಚ್.ಡಿ ವಿಭಾಗದವರು ಸ್ವೀಕರಿಸಿರುವ ಅಂಕಪಟ್ಟಿ ಹಾಗೂ ಇತರೆ ಪದವಿ ಪ್ರಮಾಣ ಪತ್ರಗಳನ್ನು (Convocationವಿಭಾಗ) ಸ್ವೀಕರಿಸಿದ್ದು, ಸದರಿ ವಿಭಾಗದವರು ವಿದ್ಯಾರ್ಥಿಗಳಿಗೆ ವಿತರಣೆ ಮಾಡಿದ ವಿವರ ಅಂದರೆ ವಿಷಯವಾರು/ಕೋರ್ಸ್‌ಗಳವಾರು ಮಾಹಿತಿ ನೀಡಲು ಸೂಚಿಸಿ ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ:29/04.10.2018ಕ್ಕೆ ನೀಡಲಾಗಿ ಯಾವುದೇ ವಿವರ ದಾಖಲಾತಿ ಹಾಜರುಪಡಿಸಿಲ್ಲಾ.<br><br>ವಿಶ್ವವಿದ್ಯಾನಿಲಯದ Convocation ವಿಭಾಗದಲ್ಲಿ ದಾಸ್ತಾನು ವಿತರಣಾ ವಹಿ ನಿರ್ವಹಿಸದ ಕಾರಣ ಅಂಕಪಟ್ಟಿ/ ಇತರೆ ಪತ್ರಮಾಣಪತ್ರಗಳ ದುರುಪಯೋಗವಾಗುವ ಸಾಧ್ಯತೆಯಿದ್ದು, ಈ ಬಗ್ಗೆ ಆಡಳಿತಾತ್ಮಕ ಕ್ರಮ ಅಗತ್ಯ. | ಸದರಿ ಕಂಡಿಕೆಯಲ್ಲಿನ ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ 2016–17 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ (Convocation) ವಿತರಿಸುವ ಪ್ರಮಾಣ ಪತ್ರಗಳ ದಾಸ್ತಾನು, ವಿತರಣೆ ವಿವರವನ್ನು ಸಂಬಂಧಿಸಿದ ಸಂಯೋಜನಾಧಿಕಾರಿ ಘಟಿಕೋತ್ಸವ ವಿಭಾಗದವರು ಸಲ್ಲಿಸಿರುವ ಧೃಢೀಕರಣ ಪತ್ರ ವಿವರ ಸಲ್ಲಿಸಲಾಗಿದೆ ಮತ್ತು ಮೂಲ ದಾಸ್ತಾನು ಪುಸ್ತಕದ ವಿವರವನ್ನು ಲೆಕ್ಕತನಿಖೆಗೆ ಹಾಜರುಪಡಿಸಲಾಗುವುದು. ಆದ್ದರಿಂದ ಕಂಡಿಕೆಯನ್ನು ಕೈ ಬಿಡಲು ಕೋರಿದೆ<br><br>(Convocation) ಪ್ರಮಾಣ ಪತ್ರಗಳ ದಾಸ್ತಾನಿನ ಧೃಢೀಕೃತ ವಿವರದ ಪ್ರತಿಗಳ ಅನುಬಂಧ–1, ಅನುಬಂಧ–2, ಅನುಬಂಧ–3<br><br>**ಅನುಬಂಧ–1 :–** 2016–17ನೇ ಸಾಲಿನಲ್ಲಿನ ಸ್ನಾತಕೋತ್ತರ ಪದವಿ ಪತ್ರಗಳ ದಾಸ್ತಾನು ಮತ್ತು ವಿತರಣೆ ವಿವರ<br><br>**ಅನುಬಂಧ–2 :–** 2016–17ನೇ ಸಾಲಿನಲ್ಲಿನ ಸ್ನಾತಕ (ಬಿ,ಎ) ಪದವಿ ಪತ್ರಗಳ ದಾಸ್ತಾನು ಮತ್ತು ವಿತರಣೆ ವಿವರ<br><br>**ಅನುಬಂಧ–3 :–** 2016–17ನೇ ಸಾಲಿನಲ್ಲಿನ ಸ್ನಾತಕ ಪದವಿಗಳಾದ ಬಿಕಾಂ, ಬಿಬಿಎಂ, ಮತ್ತು ಬಿಸಿಎ ಪದವಿಗಳ ಪ್ರಮಾಣ ಪತ್ರಗಳ ದಾಸ್ತಾನು ಮತ್ತು ವಿತರಣೆ ವಿವರ. |

| | | |
|---|---|---|
| 189 | **<u>2016–17ನೇ ಸಾಲಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ವರ್ಕ್ಸ್ ರಿಜಿಸ್ಟರ್ ಎ.ಬಿ ಮತ್ತು ಸಿ ರಿಜಿಸ್ಟರ್‌ಗಳನ್ನು ಸಂಪೂರ್ಣ ನಮೂದು ಮಾಡಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸದಿರುವುದರ ಬಗ್ಗೆ:–</u> (ಇಂಜಿನಿಯರಿಂಗ್ ವಿಭಾಗ)**<br>ಕರ್ನಾಟಕ ಲೋಕೋಪಯೋಗಿ ಇಲಾಖ ಸಂಹಿತೆ ನಿಯಮಾನುಸಾರ ಇದುವರೆವಿಗೆ ನಿರ್ವಹಿಸಿರುವ ಕಾಮಗಾರಿಗಳ ಪೂರ್ಣ ವಿವರವನ್ನು ಎ, ಬಿ ಮತ್ತು ಸಿ ವರ್ಕ್ಸ್ ರಿಜಿಸ್ಟರ್‌ನಲ್ಲಿ ನಮೂದಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿ ಆಡಿಟ್ ವಿಚಾರಣ ಪತ್ರ ಸಂಖ್ಯೆ:2/04.09.2018 ರಲ್ಲಿ ನೀಡಲಾಗಿ, 2016–17ನೇ ಸಾಲಿನಲ್ಲಿ ನಿರ್ವಹಿಸಿರುವ ಕಾಮಗಾರಿಗಳ ವಿವರಗಳನ್ನು ಪರಿಶೀಲಿಸುವ ಬಗ್ಗೆ ಹಾಜರುಪಡಿಸಿರುವ ವರ್ಕ್ಸ್ ರಿಜಿಸ್ಟರ್ ಅನ್ನು ಪರಿಶೀಲಿಸಲಾಗಿ 2016–17ನೇ ಸಾಲಿನ ಕಾಮಗಾರಿ ವಿವರ ನಮೂದಾಗಿರುವುದಿಲ್ಲ. ಆದ್ದರಿಂದ ಲೋಕೋಪಯೋಗಿ ಇಲಾಖಾ ಸಂಹಿತೆ ನಿಯಮಾನುಸಾರ ಸಂಪೂರ್ಣ ನಮೂದುಗೊಳಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವುದು. | 2016–17 ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 189ರಲ್ಲಿ ಸೂಚಿಸಿರುವ ಮೇರೆಗೆ ಕಾಮಗಾರಿಗಳ ರಿಜಿಸ್ಟರ್‌ಗಳು ಎ, ಬಿ, ಮತ್ತು ಸಿ ರಿಜಿಸ್ಟರ್‌ಗಳನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಿ 2016–17 ನೇ ಸಾಲಿಗೆ ಸಂಬಂಧಿಸಿದ ಮಾಹಿತಿಯನ್ನು ವಹಿಯಲ್ಲಿ ನಿರ್ವಹಿಸಲು ಕ್ರಮ ವಹಿಸಲಾಗಿರುತ್ತದೆ, ಹಾಗೂ ಸದರಿ ವಹಿನ್ನು ಮುಂದಿನ ಲೆಕ್ಕ ಪರಿಶೋಧನಾ ತಂಡಕ್ಕೆ ಹಾಜರು ಪಡಿಸಲಾಗುವುದೆಂದು ನಿವೇದಿಸಲಾಗಿದೆ. |

| | | |
|---|---|---|
| 190 | **ಶತಮಾನೋತ್ಸವ ಲೆಕ್ಕಶೀರ್ಷಿಕೆಗಳ ಅಡಿ ವೆಚ್ಚದ ಮೊಬಲಗುಗಳಿಗೆ ದಾಖಲಾತಿ/ವೋಚರ್ಸ್ ಹಾಜರುಪಡಿಸದಿರುವುದು:– (ಹಣಕಾಸು ವಿಭಾಗ)**<br>2016–17ನೇ ಸಾಲಿನಲ್ಲಿ "ಲೆಕ್ಕಶೀರ್ಷಿಕೆ 291" ರಡಿ ಅನುಮೋದಿತ ವಾರ್ಷಿಕ ಲೆಕ್ಕಪತ್ರಗಳ ರೀತ್ಯಾ ಒಟ್ಟು ರೂ.14,11,90,243/–ಗಳನ್ನು ವಿವಿಧ ಬಾಬ್ತುಗಳಿಗೆ ವೆಚ್ಚ ಮಾಡಲಾಗಿದೆ.<br>ಕಟ್ಟಡಗಳ ನಿರ್ಮಾಣಕ್ಕಾಗಿ ರೂ.11,01,17,679 +2,84,50,899 = 13,85,68,578<br>ಹಾಗೂ ಇತರೆ ವೆಚ್ಚಗಳಾಗಿ 14,11,90,243 – 13,85,68,578 = 26,21,665<br>ಮತ್ತು ಇನ್ನಿತರ ವೆಚ್ಚಗಳಿಗೆ ರೂ.26,21,665/–ಗಳನ್ನು ಖರ್ಚು ಮಾಡಿರುವುದಾಗಿ ದಾಖಲಿಸಲಾಗಿದೆ. ದಾಖಲಿಸಿರುವುದನ್ನು ಇಂಜಿನಿಯರಿಂಗ್ ವಿಭಾಗದಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ರೂ.20,21,44,882/– ಗಳನ್ನು ವ್ಯಯ ಮಾಡಿರುವುದಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಆದರೆ ವಾರ್ಷಿಕ ಲೆಕ್ಕಪತ್ರದಲ್ಲಿ ಕೇವಲ ರೂ.13,85,68,578/–ಗಳನ್ನು ಮಾತ್ರ ನಮೂದಿಸಿರುತ್ತಾರೆ. ವ್ಯತ್ಯಾಸದ ಮೊತ್ತ ರೂ.6,35,76,304/–ಗಳಿಗೆ ಯಾವುದೇ ಸ್ಪಷ್ಟನೆಯು ವಾರ್ಷಿಕ ಲೆಕ್ಕಪತ್ರದಲ್ಲಿ ನಮೂದಾಗಿಲ್ಲದಿರುವುದರಿಂದ ಈ ಬಗ್ಗೆ ಸೂಕ್ತ ರೀತಿಯಲ್ಲಿ ಲೆಕ್ಕಸಮನ್ವಯ, ಲೆಕ್ಕ ಹೊಂದಾಣಿಕೆ, ಟ್ರಯಲ್ ಬ್ಯಾಲೆನ್ಸ್ ಇತ್ಯಾದಿಗಳನ್ನು ಸರಿದೂಗಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ. ಮುಂದುವರೆದು ರೂ.26,21,665/–ಗಳಿಗೆ ವಾರ್ಷಿಕ ಲೆಕ್ಕಪತ್ರದಲ್ಲಿ ತೋರಿಸಿರುವ ರೀತ್ಯ ಸಂಬಂಧಪಟ್ಟ ವಿವರವಾರು ದಾಖಲೆಗಳನ್ನು ಹಾಜರುಪಡಿಸುವವರೆಗೂ **ರೂ.26,21,665/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | 2016–17ನಾ ಸಾಲಿನ ಲೆಕ್ಕ ಪರಿಶೋಧನಾ ವರದಿ ಕಂಡಿಕೆ 190 ರಲ್ಲಿ ಪ್ರಸ್ತಾಪಿಸಿ 2016–17 ನೇ ಸಾಲಿನ ವಾರ್ಷಿಕ ವರದಿಯ ವಹಿವಾಟು ಸಂಖ್ಯೆ ಭಾಗ–1 ರ 111,115,129,135,148,155,166,185,195 ಹಾಗೂ 198 ರ ಸಂಖ್ಯೆಗಳಲ್ಲಿ 2016–17 ನೇ ಸಾಲಿಗೆ ರೂ.14,11,90,243ಗಳ ವೆಚ್ಚ ಭರಿಸಲಾಗಿದ್ದು ಈ ಪಾವತಿ ಮೊತ್ತದಲ್ಲಿ ರೂ.13,85,68,578/–ಗಳ ವೆಚ್ಚ ಪಾವತಿಯಾಗಿದ್ದು ಸದರಿ ವೆಚ್ಚಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಲಾಗಿದ್ದು ಉಳಿಕೆ ಪಾವತಿ ಮೊತ್ತ ರೂ.26,21,665/– ರೂ ಗಳಿಗೆ ಸಂಬಂಧಿಸಿದ ದಾಖಲಾತಿಗಳನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲವೆಂಬುದಾಗಿ ಪ್ರಸ್ತಾಪಿಸಿ ರೂ.26,21,665/–/–ಗಳ ಪಾವತಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ ಇದಕ್ಕೆ ಸಂಬಂಧಿಸಿದಂತೆ ಈ ವೆಚ್ಚವನ್ನು 2016–17ನೇ ಸಾಲಿನಲ್ಲಿ ವಿವಿಧ ಶೀರ್ಷಿಕೆಗಳಿಗೆ ಬಾಬ್ತಿನ ಯೋಜನೆಗಳಿಗೆ ವೆಚ್ಚ ಭರಿಸಲಾಗಿದ್ದು ಇದರ ವಿವರ ಈ ಕೆಳಕಂಡಂತಿರುತ್ತದೆ. |

| ಕ್ರ.ಸಂ | ವಹಿವಾಟು ಸಂಖ್ಯೆ | ವಹಿವಾಟು ಶೀರ್ಷಿಕೆ | ರೂ | ಪುಟ ಸಂಖ್ಯೆ |
|---|---|---|---|---|
| 1 | 111 | ಪ್ರಯಾಣಭತ್ಯೆ | 24,685/– | 26 |
| 2 | 115 | ಕಛೇರಿ ಸಾದಿಲ್ವಾರು | 8,33,661/– | 26 |
| 3 | 129 | ಸಾಂಸ್ಕೃತಿಕ ಕಾರ್ಯಕ್ರಮ | 1,66,000/– | 26 |
| 4 | 148 | ಸಮ್ಮೇಳನ | 11,65,137/– | 26 |
| 5 | 166 | ಕ್ರೀಡೆ ಮತ್ತು ಇತರೆ ಸಾಂಸ್ಕೃತಿಕ ಕಾರ್ಯಕ್ರಮ | 2,89,976/– | 26 |
| 6 | 185 | ಆಫೀಸು ಆಡಿಟ್ | 87,306/– | 26 |

| | | | | |
|---|---|---|---|---|
| | | ಮೇಷನ್ | | |
| 7 | 195 | ವಿಶೇಷ ಉಪನ್ಯಾಸ | 50,000/– | 26 |
| 8 | 198 | ಸಂಭಾವನೆ | 5,000/– | 26 |
| | | ಒಟ್ಟು | **26,21,665/–** | |

ಮೇಲೆ ಪ್ರಸ್ತಾಪಿಸಿರುವ ವಹಿವಾಟು ಸಂಖ್ಯೆ ವಹಿವಾಟು ಶೀರ್ಷಿಕೆಯಡಿಯಲ್ಲಿನ ವೆಚ್ಚವನ್ನು ವಿಶ್ವವಿದ್ಯಾನಿಲಯದ ನಿತಮದನುಸಾರ ಸಂಬಂಧ ಪಟ್ಟ ಪ್ರಾಧಿಕಾರದಿಂದ ಪೂರ್ವಾನುಮತಿ ಮತ್ತು ಆದೇಶಗಳನ್ನು ಪಡೆದು ಅವಶ್ಯಕೆಗನುಸಾರ ಯೋಜನೆಗಳನ್ನು ನಿರ್ವಹಿಸಿ ವೆಚ್ಚಗಳನ್ನು ಪಾವತಿಸಲಾಗಿರುತ್ತದೆ ಮೇಲಿನ ಶೀರ್ಷಿಕೆಗಳಲ್ಲಿ ಯೋಜನೆಗಳನನು ಕೈಗೊಳ್ಳುವ ಮೊದಲು ಟೆಂಡರ್ ಕೊಟೇಷನ್ ಮುಂತಾದ ದಾಖಲಾತಿಗಳನ್ನು ಪಡೆದು ಆಯಾಯ ಶೀರ್ಷಿಕೆಗಳಡಿಯಲ್ಲಿ ಕಾರ್ಯ ನಿರ್ವಹಿಸಲಾಗಿದೆ ಹಾಗೂ ಇವುಗಳಿಗೆ ಸಂಬಂಧಿಸಿದ ಪೂರಕ ದಾಖಲಾತಿಗಳನ್ನು ಹಾಜರು ಪಡಿಸುತ್ತ ಸದರಿ ಕಂಡಿಕೆ 190ರ ಆಕ್ಷೇಪಣೆ ಮೊತ್ತ ರೂ.26,21,665/– ಗಳನನು ಕೈ ಬಿಡುವಂತೆ ವಿನಂತಿಸಲಾಗಿದೆ.

| | | |
|---|---|---|
| | **ಸಾಮಾನ್ಯ ಅಭಿಪ್ರಾಯ**<br>ಮೈಸೂರು ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ಆಡಿಟ್ ವರದಿಯನ್ನು ದಿನಾಂಕ:21.01.2019ರಂದು ಪುನರ್ ಪರಿಶೀಲನೆ ಮಾಡಲಾಯಿತು. ವಿಶ್ವವಿದ್ಯಾನಿಲಯದಲ್ಲಿ 1988–89 ಸಾಲಿನಿಂದ 2015–2016ನೇ ಸಾಲಿನವರೆಗೆ ಆಕ್ಷೇಪಣಾ ಮೊತ್ತ ರೂ.340,28,21,208.85/–ಗಳು ಹಾಗೂ ವಸೂಲಾತಿ ಮೊತ್ತ ರೂ.46,50,72,471.48/–ಗಳಾಗಿರುತ್ತದೆ. ವಸೂಲಾತಿ ಕಂಡಿಕೆಗಳು ಬಾಕಿ ಉಳಿದಿದ್ದು, ಈ ಕಂಡಿಕೆಗಳ ತ್ವರಿತ ಇತ್ಯರ್ಥಕ್ಕೆ ಕ್ರಮಕೈಗೊಂಡು ಸಮಂಜಸವಾದ ಅನುಪಾಲನಾ ವರದಿಯನ್ನು ಮೂಲದಾಖಲೆಗಳೊಂದಿಗೆ ಸಲ್ಲಿಸಲು ಸೂಚಿಸಿದೆ.<br>2016–17ನೇ ವರ್ಷದ ಅಯ–ವ್ಯಯವನ್ನು ಪರಿಶೀಲಿಸಿದಾಗ 2015–16ನೇ ಸಾಲಿನ ಅಂತಿಮ ಶಿಲ್ಕು ರೂ.45,62,54,342 ಆಗಿದ್ದು, 2016–17ನೇ ಸಾಲಿಗೆ ಪ್ರಾರಂಭ ಶಿಲ್ಕಿಗೆ ರೂ.21,79,66,342/–ಗಳನ್ನು ತೆಗೆದುಕೊಳ್ಳಲಾಗಿದೆ. ವ್ಯತ್ಯಾಸ ರೂ.23,82,88,000/–ಗಳನ್ನು ಯಾವ ಕಾರಣಕ್ಕಾಗಿ ಆರಂಭ ಶಿಲ್ಕಿನಲ್ಲಿ ತೋರಿಸಲಾಗಿರುವುದಿಲ್ಲ. ಹಾಗೂ ಈ ಋಣಾತ್ಮಾಕ ಶಿಲ್ಕುಗಳನ್ನು ಯಾವ ಅಂಶದ ಮೇಲೆ ತೆಗೆದುಕೊಳ್ಳಲಾಗಿದೆ ಎಂಬ ಬಗೆಗಿನ ವಿವರಣೆ ನೀಡಲು ತಿಳಿಸಲಾಗಿದೆ. ಇದು ಆರ್ಥಿಕ ಅಶಿಸ್ತಿನ ಪರಿಣಾಮ ಎಂಬುದು ಗಮನಾರ್ಹವಾಗುತ್ತದೆ. ವಿವರಣೆ ನೀಡದೆ ಮಾಡಿರುವ ಋಣಾತ್ಮಕ ಮೊತ್ತದ ವೆಚ್ಚವು ಅನಧಿಕೃತ ವೆಚ್ಚವೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಿಸಿದೆ. ಇದರಿಂದಾಗಿ ವಾರ್ಷಿಕ ಲೆಕ್ಕವನ್ನು ಪರಿಶೀಲಿಸಿ ದೃಢೀಕರಿಸುವುದು ಸಾಧ್ಯವಾಗಿರುವುದಿಲ್ಲ.<br>ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವಾಗ ಹಾಲಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರು, ಪ್ರವಾಚಕರು, ಉಪನ್ಯಾಸಕರು, ಇವರಿಂದ ಲಭ್ಯವಿರುವ ಬೋಧನಾ ಅವಧಿ ಹಾಗೂ ವಾರ್ಷಿಕ ವರ್ಷದಲ್ಲಿ ಎಷ್ಟು ಬೋಧನ ಅವಧಿ ಬೇಕಿದೆ ಮತ್ತು ಬೋಧನ ಅವಧಿಯ ಪ್ರಸ್ತುತ ಅವಧಿ ಸಿಬ್ಬಂದಿಯವರಿಗೆ ಎಷ್ಟು ಲಭ್ಯವಿದೆ ಮತ್ತು ಕೊರತೆಯಾಗುವ ಬೋಧನ ಅವಧಿ ಎಷ್ಟು ಲೆಕ್ಕಹಾಕಿ ನಿಯಮಾನುಸಾರ ಕೊರತೆಯನ್ನು ಅವಧಿಗೆ ಮಾತ್ರ ಅತಿಥಿ ಉಪನ್ಯಾಸಕರನ್ನು ನೇಮಕಮಾಡಿಕೊಂಡ ಬಗ್ಗೆ ವಿವರ ನೀಡಿರುವುದಿಲ್ಲ. ಇದರಿಂದಾಗಿ ವಿಶ್ವವಿದ್ಯಾನಿಲಯವು ವಾಸ್ತವಿಕವಾಗಿ ಮಾಡಬೇಕಾದ ವೆಚ್ಚಕ್ಕಿಂತ ಅಧಿಕವಾಗಿ | 2016–17 ನೇ ಸಾಲಿನ ಆಯವ್ಯಯದಲ್ಲಿನ ರೂ.23,82,88,000/–ಗಳ ಬಗ್ಗೆ ಪ್ರಸ್ತಾಪಿಸಿ ಕೇಳಲಾದ ಮಾಹಿತಿಯ ಬಗ್ಗೆ ಕ್ರಮವಹಿಸಿ ರೂ.23,82,88,000/–ಗಳ ವ್ಯತ್ಯಾಸಗಳ ವಿವರಣೆಯನ್ನು ಹಾಗೂ ಮಾಹಿತಿಯನ್ನು ಹಾಜರು ಪಡಿಸಲು ಕ್ರಮವಹಿಸಲಾಗುವುದು<br>ಅತಿಥಿ ಉಪನ್ಯಾಸಕರನ್ನು ಕೊರತೆಯಾಗಿರುವ ಹಾಗೂ ಅತೀ ಅವಶ್ಯಕತೆಯ ಮೇರೆಗೆ ನೇಮಕ ಮಾಡಿಕೊಂಡು ವಿದ್ಯಾರ್ಥಿಗಳಿಗೆ ತೊಂದರೆಯಾಗ ಬಾರದೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಬೊಧನ ಅವಧಿಗೆ ಬೋಧನಾ ಸಿಬ್ಬಂಧಿಯನ್ನು ನೇಮಕ ಮಾಡಿಕೊಳ್ಳಲಾಗಿರುವ ಅಂಶವನ್ನು ಗಮನಕ್ಕೆ ತರಲಾಗಿದೆ<br>ಮುಂದುವರಿದು 2016–17 ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ನೀಡಿರುವ ಸಲಹೆ ಸೂಚನೆಗಳನ್ನು ಗಮನದಲ್ಲಿರಿಸಿಕೊಂಡು ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸಿಲಾಗುವುದು ಹಾಗೂ ಲೆಕ್ಕ ಪತ್ರಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುವುದು. |

| | | |
|---|---|---|
| | ವೆಚ್ಚ ಮಾಡಬೇಕಾಗಿರುತ್ತದೆ. ಇದು ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ತಿತಿ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದಾಗಿದೆ.<br>ವಿಶ್ವವಿದ್ಯಾನಿಲಯಕ್ಕೆ ವಿಶ್ವವಿದ್ಯಾನಿಲಯದ ಕಾಯ್ದೆ 46ರನ್ವಯ ವಿಶ್ವವಿದ್ಯಾನಿಲಯದ ಸ್ವಂತ ಆದಾಯ (ಫೀಗಳ ರೂಪದಲ್ಲಿ) ಸರ್ಕಾರದ ಅನುದಾನಗಳು, ಯು.ಜಿ.ಸಿ ಆಯೋಗದಿಂದ ಯೋಜನೆಗಳು ಹಾಗೂ ಪೀಠಗಳಿಗೆ ಹಾಗೂ ಇತರೆ ಬಾಬ್ತಿಗಾಗಿ ಬರುವ ಮೊಬಲಗನ್ನು ವಿಶ್ವವಿದ್ಯಾನಿಲಯದ ನಿಧಿ ಲೆಕ್ಕಕ್ಕೆ ತೆಗೆದುಕೊಂಡು ಆಯ–ವ್ಯಯ ಸಿದ್ದಪಡಿಸುತ್ತಿಲ್ಲ ಈ ಅನುದಾನಗಳ (ಮೊಬಲಗಿನ) ಸ್ವೀಕೃತಿ ಮತ್ತು ವೆಚ್ಚಗಳಿಗೆ ಅವಕಾಶ ಮಾಡಿಕೊಂಡು ನಂತರ ಉಳಿದ ವೆಚ್ಚ ಭರಿಸಬೇಕಾಗಿರುತ್ತದೆ.<br>ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ತಾತ್ಕಾಲಿಕ ಆಧಾರ/ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡು ಅವರನ್ನೇ ನಿಯಮಬಾಹಿರವಾಗಿ ಮುಂದುವರೆಸಿರುವುದು ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ–2000ರ ನಿಯಮ 55, 56 & 57ರನ್ವಯ ನೇಮಕಾತಿ ಮಾಡಿಕೊಳ್ಳದೆ ಇರುವುದು ಈ ನಿಯಮ ಉಲ್ಲಂಘಿಸಿದಂತಾಗಿರುತ್ತದೆ. ತಾತ್ಕಾಲಿಕ ಉಪನ್ಯಾಸಕರನ್ನು/ತಾತ್ಕಾಲಿಕ/ಸಂಚಿತವೇತನ ನೌಕರರನ್ನು ನಿಯಮ 55(4)ರನ್ವಯ ಒಂದು ವರ್ಷಕ್ಕೆ ಮೀರದಂತೆ ನೇಮಕ ಮಾಡಿಕೊಳ್ಳಲು ಅವಕಾಶವಿರುತ್ತದೆ. ಆದರೆ ತಾತ್ಕಾಲಿಕ ಸಿಬ್ಬಂದಿಯ/ಉಪನ್ಯಾಸಕರನ್ನೇ ಮುಂದುವರೆಸಿ ಅವರನ್ನೇ ಖಾಯಂ ಮಾಡುತ್ತಿರುವುದರಿಂದ ಹಿಂಬಾಗಿಲ ಪ್ರವೇಶಕ್ಕೆ ಆಸ್ಪದ ಮಾಡಿಕೊಂಟ್ಟಂತಾಗಿದೆ. ಈ ಬಗ್ಗೆ ಕ್ರಮವಹಿಸಿ ನಿಯಮದಂತೆ ಬೋಧಕ/ಬೋಧಕೇತರ ವರ್ಗದವರನ್ನು ನೇಮಿಸಿಕೊಳ್ಳಬೇಕಾಗಿರುತ್ತದೆ.<br>ವಿಶ್ವವಿದ್ಯಾನಿಲಯದ ಚರ ಮತ್ತು ಸ್ಥಿರಾಸ್ತಿಗಳ ವಿವರವನ್ನು ನಿರ್ವಹಿಸಿ ವಹಿಯಲ್ಲಿ ದಾಖಲಿಸದೆ ಇರುವುದು ಕಂಡುಬಂದಿರುತ್ತದೆ. ಇದರಿಂದಾಗಿ ವಿಶ್ವವಿದ್ಯಾನಿಲಯದ ಚರ/ಸ್ಥಿರಾಸ್ತಿಗಳು ಎಷ್ಟಿವೆ, ಎಲ್ಲೆಲ್ಲಿ ಇವೇ ಎಂಬುದನ್ನು ಸ್ಪಷ್ಟವಾಗಿ ತಿಳಿಯಲು ಸಾಧ್ಯವಾಗಿಲ್ಲ. ಈ ಬಗ್ಗೆ ಕ್ರಮ ಅಗತ್ಯ. ವಾರ್ಷಿಕ ಲೆಕ್ಕದಲ್ಲಿ ಲೆಕ್ಕಪತ್ರಗಳ ಸಂಕಲನ ಮತ್ತು ಸಮನ್ವಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾಗಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿ ಲೆಕ್ಕಗಳ ಸಂಕಲನ ಮತ್ತು ಸಮನ್ವಯಗಳನ್ನು ಆದ್ಯತೆಯ ಮೇರೆಗೆ ಮಾಡಲು ಸೂಚಿಸಿದೆ. | |